ಶ್ರೀಮದಾಚಾರ್ಯವಿರಚಿತ

ಶ್ರೀಮದಣುಭಾಷ್ಯ

ಭಾವಸಂಗ್ರಹ

ಗೀತಾಭಾಷ್ಯಂ ವಿಧಾಯಾದೌ ಪ್ರಥಮಂ ತುಷ್ಟಿದಂ ಹರೇಃ |
ಭಾಷ್ಯಾಣುಭಾಷ್ಯೇ ಚಕ್ರೇಽಥಹ್ಯನುವ್ಯಾಖ್ಯಾನಮುತ್ತಮಮ್ ||

ಲೇಖಕರು

ಪಿ. ವಿಷ್ಣುತೀರ್ಥ, ನವವೃಂದಾವನ

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಪರಿಷ್ಕರಿಸಲ್ಪಟ್ಟಿದೆ

ಶ್ರೀಮದಾಚಾರ್ಯವಿರಚಿತ

ಶ್ರೀಮದಣುಭಾಷ್ಯ

ಭಾವಸಂಗ್ರಹ

ಲೇಖಕರು

ಪಿ. ವಿಷ್ಣುತೀರ್ಥ, ನವವೃಂದಾವನ

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಪರಿಷ್ಕರಿಸಲ್ಪಟ್ಟಿದೆ

ಪ್ರಕಾಶಕರು

ಪೊನ್ನಾಥಪುರ ಪ್ರಹ್ಲಾದರಾವ್ ಕುಟುಂಬ

ರಾಜಾಜಿನಗರ, ಬೆಂಗಳೂರು ೫೬೦ ೦೧೦

ŚRĪMADĀCĀRYAVIRACITA ŚRĪMADANUBHAṢYA BHĀVA SAN-GRAHA—a commentary in Kannada written by P Vishnutirtha of Nava Vrindavana on the original work of Sri Madhwacharya; with a foreword by Dr. Vyasanakere Prabhanjanacharya; Published by the family of Ponnathpur Prahlada Rao; First Edition : April 2012; 96 pages.

© Publishers

Copies available at :
931, I Floor, II Main, 4th Block
Rajajinagar, Bangalore 560 010

Released on 1 April 2012 at Bangalore
at the Centenary Celebration of
Sri P Vishnutirtha

Rs.75

Printed at
Sri Shakti Electrie Press, Jayanagar, Mysore 570 014

ಮುನ್ನುಡಿ

ಬ್ರಹ್ಮಸೂತ್ರಗಳು ಜಗತ್ತು ಕಂಡ ವಾಙ್ಮಯವಿಸ್ಮಯ. ಗದ್ಯ ಪದ್ಯ ಚಂಪೂ ಮೊದಲಾದ ಎಲ್ಲ ಬಗೆಯ ಸಾಹಿತ್ಯಕ್ಕಿಂತ ವಿಭಿನ್ನವಾದ ಪ್ರಾಕಾರ. ಕಡಿಮೆ ಅಕ್ಷರಗಳಲ್ಲಿ ಗಂಭೀರವಾಗಿ ಅಡಕವಾದ ಶೈಲಿಯಲ್ಲಿ ಸಕಲಬಗೆಯ ಮೂಲ ಆಕರಗ್ರಂಥಗಳ ಅರ್ಥನಿರ್ಣಯವನ್ನು ಮಾಡಿಕೊಡುವ ಹಿರಿಮೆ ಅದರದು. ಅನಂತರದ ದೈವೀಮೀಮಾಂಸೆ, ಕರ್ಮಮೀಮಾಂಸೆ ಗಳಿಗೂ ಸ್ಫೂರ್ತಿನೀಡಿದ ಕೃತಿ ಎಂಬುದು ಇದರ ಹಿರಿಮೆ. ಪಾಣಿನಿಯ ವ್ಯಾಕರಣಸೂತ್ರ, ಗೌತಮರ ನ್ಯಾಯಸೂತ್ರ ಮೊದಲಾದ ಎಲ್ಲ ಸೂತ್ರಸಾಹಿತ್ಯಗಳಿಗೂ ಪ್ರೇರಕ ಕೃತಿ ಇದೇ ಆಗಿದೆ. ಅನಂತವೇದರಾಶಿಗಳನ್ನೊಳಗೊಂಡಂತೆ ಸಕಲಶಾಸ್ತ್ರಪ್ರಪಂಚಕ್ಕೂ ನಿರ್ಣಾಯಕ ವೆನ್ನಿಸಿದ ಹಿರಿಮೆ ಈ ಬ್ರಹ್ಮಸೂತ್ರಗಳದ್ದು. ಇದನ್ನು ಬರೆದ ವೇದವ್ಯಾಸರಂತೂ ಸಾಕ್ಷಾತ್ ಭಗವಂತನೇ ಆದ ಶ್ರೀಹರಿ. ವೇದಗಳ ಆವಿಷ್ಕಾರದೊಂದಿಗೆ ಭಾರತಾದಿ ಇತಿಹಾಸಗಳನ್ನೂ ಶ್ರೀಮದ್ಭಾಗವತಾದಿ ಪುರಾಣಗಳನ್ನೂ ಒಳಗೊಂಡಂತೆ ಸಕಲ ಮೂಲಶಾಸ್ತ್ರಗಳನ್ನು ಜಗತ್ತಿಗೆ ನೀಡಿದ ಹಿರಿಮೆ ಶ್ರೀವ್ಯಾಸರೂಪದ್ದು. ವ್ಯಾಸರು ಸಾಕ್ಷಾತ್ ನಾರಾಯಣ ಎಂಬುದನ್ನು ನಿಖರ ವಾಗಿ ತಿಳಿಸಿದ ಹಿರಿಮೆ ಶ್ರೀಮಧ್ವಾಚಾರ್ಯ(ಕ್ರಿ. ಶ. ೧೨೦೦-೧೨೮೦)ರದ್ದು. ಇತರ ಮತಾಚಾರ್ಯರು ವ್ಯಾಸರನ್ನು ಒಬ್ಬ ಸಾಮಾನ್ಯ ಋಷಿ ಎಂದು ತಪ್ಪಾಗಿ ತಿಳಿದು ಅವರ ಸೂತ್ರಗಳಿಗೂ ತಪ್ಪಾದ ಅರ್ಥವನ್ನೇ ತಿಳಿಸಿ ಮಹತ್ತರವಾದ ತಾತ್ತ್ವಿಕ ಗೊಂದಲಕ್ಕೆ ಕಾರಣ ರಾಗಿದ್ದರು. ಅದನ್ನು ತಾತ್ತ್ವಿಕಹಂದರದಲ್ಲಿ ಆವಿಷ್ಕರಿಸಿದ ಹಿರಿಮೆ ಅವರದು.

ವ್ಯಾಖ್ಯಾನದಮಟ್ಟಿಗೆ ದಾಖಲೆಯ ವಾಙ್ಮಯವನ್ನು ಪಡೆದ ಕೀರ್ತಿಯೂ ಈ ಬ್ರಹ್ಮ ಸೂತ್ರಗಳದು ಮಾತ್ರ. ಆಚಾರ್ಯಮಧ್ವರಿಗಿಂತ ಮುಂಚಿತವಾಗಿ ಇದ್ದ ಬ್ರಹ್ಮಸೂತ್ರಭಾಷ್ಯ ಗಳು ೨೧. ಶ್ರೀಮದಾಚಾರ್ಯರದು ೨೨ನೆಯದು. ಅನಂತರವೂ ನಾಲ್ಕಾರೂ ಭಾಷ್ಯಗಳು ರಚಿತವಾಗಿವೆ. ಭಾಷ್ಯಗಳಿಗೆ ಟೀಕೆಗಳು ಟಿಪ್ಪಣಿಗಳು, ಅನಂತರ ಕಾಲದಲ್ಲಿ ಅನುವಾದಗಳು. ಹೀಗೆ ಸೂತ್ರವಾಙ್ಮಯದ ವ್ಯಾಖ್ಯಾನಪರಂಪರೆಯೂ ವಿಸ್ಮಯ ಹುಟ್ಟಿಸುವಂತಹುದು.

ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ, ನ್ಯಾಯವಿವರಣ, ಹಾಗೂ ಅಣುಭಾಷ್ಯ—ಈ ನಾಲ್ಕೂ ಶ್ರೀಮದಾಚಾರ್ಯರು ಬ್ರಹ್ಮಸೂತ್ರಗಳ ಬಗ್ಗೆ ರಚಿಸಿರುವ ಕೃತಿಗಳು. ಇವುಗಳಲ್ಲಿ ಅಣುಭಾಷ್ಯದ ಹೊರತು ಇತರ ಮೂರು ಕೃತಿಗಳಿಗೂ ಸರ್ವಜ್ಞಕಲ್ಪರೆಂದೇ ಖ್ಯಾತರಾದ ಶ್ರೀಜಯತೀರ್ಥರು ಟೀಕೆಗಳನ್ನು ರಚಿಸಿರುವರು. ಅಣುಭಾಷ್ಯಕ್ಕೆ ರಚಿತವಾಗಿರುವ ಟೀಕೆಗಳಲ್ಲಿ ಶ್ರೀರಾಘವೇಂದ್ರಸ್ವಾಮಿಗಳಿಂದ ರಚಿತವಾಗಿರುವ ತತ್ತ್ವಮಂಜರೀ ಅತ್ಯಂತ ಮಹತ್ತ್ವಪೂರ್ಣ ವಾದ ಕೃತಿ; ಅಣುಭಾಷ್ಯದ ವಿಶ್ವರೂಪವನ್ನು ತೆರೆದಿಡುವ ಅದ್ಭುತ ಕೃತಿ.

ಪ್ರಸ್ತುತ 'ಶ್ರೀಮದಣುಭಾಷ್ಯಭಾವಸಂಗ್ರಹ'ವು ಶ್ರೀಮದಾಚಾರ್ಯರ ಅಣುಭಾಷ್ಯದ ಬಗ್ಗೆ ರಚಿತವಾಗಿರುವ ಕೃತಿ. ಇದರ ಪೀಠಿಕೆಯು ಬ್ರಹ್ಮಸೂತ್ರಗಳ ಒಂದು ಸ್ಥೂಲ ಪರಿಚಯ ವನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಒದಗಿಸುತ್ತದೆ. ಅಣುಭಾಷ್ಯಕ್ಕೆ ವಿವರವಾದ ವಿವರಣೆಗಳನ್ನು ಶ್ರೀರಾಘವೇಂದ್ರಸ್ವಾಮಿಗಳ ತತ್ತ್ವಮಂಜರೀ ಕೃತಿಯ ಆಧಾರದಲ್ಲಿ ನೀಡುವ

ಈ ಕೃತಿ ಪೀಠಿಕೆಯಲ್ಲಿ ಬ್ರಹ್ಮಸೂತ್ರಗಳಿಗೆ ಸಂಬಂಧಿಸಿದ ಅನೇಕ ವಿವರಗಳನ್ನು ಸುಲಭ ಶೈಲಿಯಲ್ಲಿ ವಿಶಿಷ್ಟರೀತಿಯಲ್ಲಿ ಒದಗಿಸುತ್ತದೆ. ಸೂತ್ರಸಾಹಿತ್ಯದ ಅಧ್ಯಯನವನ್ನು ಬಯಸುವವರಿಗೆ ಒಂದು ಕೈಪಿಡಿಯಾಗಿ ಈ ಪೀಠಿಕೆ ಗಮನಾರ್ಹವೆನ್ನಿಸುತ್ತದೆ.

ಇದನ್ನು ಬರೆದ ಶ್ರೀ ವಿಷ್ಣುತೀರ್ಥರು ಈ ಕಾಲದ ವಿಶಿಷ್ಟವ್ಯಕ್ತಿತ್ವದ ಮಹನೀಯರಲ್ಲೊಬ್ಬರು. ಜೀವನಪೂರ್ತಿ ನೈಷ್ಠಿಕಬ್ರಹ್ಮಚರ್ಯವನ್ನು ಪಾಲಿಸಿದ ಕೀರ್ತಿ ಇವರದು. ನವಬೃಂದಾವನದಂತಹ ಪುಣ್ಯಕ್ಷೇತ್ರದಲ್ಲಿ ಅನೇಕ ದಶಕಗಳ ಕಾಲ ನೆಲೆಸಿ ಪ್ರತಿನಿತ್ಯ ಅಲ್ಲಿಯ ಯತಿವೃಂದದ ಆರಾಧನೆಯನ್ನು ಏಕಾಂಗಿಯಾಗಿ ನಿರ್ವಹಿಸಿದ ಮಹಾಸಾಹಸಿ ಇವರು. ಒಂದು ದಿನ ನೆಲೆಸುವುದೂ ಸಹ ದುಸ್ಸಾಧ್ಯವೆನ್ನಿಸುವ ಅಂತಹ ದುರ್ಗಮಸ್ಥಳದಲ್ಲಿ ದಶಕಗಳ ಕಾಲದ ನಿರಂತರ ಸಾಧನೆ ಮಹಾತಪಸ್ಸೇ ಸರಿ. ಅವರ ಹೆಚ್ಚಿನ ಜ್ಞಾನಸಿದ್ಧಿಯು ಮುಖ್ಯವಾಗಿ ಅಂತಹ ತಪಸ್ಸಿನ ಫಲ. ಅದರ ಫಲಶ್ರುತಿ ಎಂಬಂತೆ ಶ್ರೀಹರಿವಾಯುಸ್ತುತಿಗೆ ಕನ್ನಡದಲ್ಲಿ ಅತ್ಯಂತ ವಿಸ್ತೃತವಾದ ವಿವರಣೆ, ದೇವಪೂಜೆಯ ಬಗ್ಗೆ ವಿಶ್ವಕೋಶಸ್ವರೂಪದ ವಿಸ್ತಾರವಾದ ಕೃತಿ ಮೊದಲಾದವುಗಳು ಇವರಿಂದ ರಚಿತವಾಗಿವೆ. ಸರಳ ಶೈಲಿ, ಪ್ರಾಮಾಣಿಕ ಧೋರಣೆ ಹಾಗೂ ಸ್ಪಷ್ಟ ನಿರೂಪಣೆಗಳಿಂದಾಗಿ ಇವರ ಕೃತಿಗಳು ಜಿಜ್ಞಾಸುವೃಂದದಲ್ಲಿ ತುಂಬ ಜನಪ್ರಿಯವಾಗಿವೆ. ಅವರನ್ನು ಅನೇಕಬಾರಿ ವಿವಿಧ ಸಂದರ್ಭಗಳಲ್ಲಿ ನಾನು ಭೇಟಿಮಾಡಿದ್ದೇನೆ. ಅವರು ಶ್ರೀ ವಿಜಯೀಂದ್ರತೀರ್ಥರ ವ್ಯಾಸರಾಜಸ್ತೋತ್ರ ಕೃತಿಯ ತಮ್ಮ ಅನುವಾದಕಾರ್ಯ ಮೊದಲಾದ ಅನೇಕ ಸಂದರ್ಭಗಳಲ್ಲಿ ನನ್ನನ್ನು ಸಂಪರ್ಕಿಸಿದ್ದುಂಟು. ಅವರ ಸರಳತೆ ಸಹೃದಯತೆಗಳು ವಿಶೇಷವಾಗಿ ನನ್ನ ಮನಸ್ಸಿನಲ್ಲಿ ನಿಂತಿವೆ.

ಪ್ರಸ್ತುತ 'ಶ್ರೀಮದಣುಭಾಷ್ಯಭಾವಸಂಗ್ರಹ'ವು ಒಂದು ಅಸಮಗ್ರ ಕೃತಿ. ಸಮನ್ವಯಾಧಿಕರಣದೊಂದಿಗೆ ಮುಕ್ತಾಯಗೊಂಡಿದೆ. ಅವರು ರಚಿಸಿದ್ದು ಇಷ್ಟುಮಾತ್ರವೋ ಅಥವಾ ದೊರೆತಿರುವುದೇ ಇಷ್ಟುಮಾತ್ರವೋ ತಿಳಿಯದು. ಏನೇ ಇದ್ದರೂ ದೊರೆತಿರುವಷ್ಟು ಭಾಗ ಅಭ್ಯಾಸಿಗಳಿಗೆ ಅತ್ಯಂತ ಉಪಯುಕ್ತವಾದುದು ಎಂಬುದು ಮಾತ್ರ ನಿರ್ವಿವಾದ. ಈ ಮೊದಲೇ ಹೇಳಿರುವಂತೆ ಪೀಠಿಕೆಯ ಭಾಗ ಅತ್ಯಂತ ಮಹತ್ತ್ವಪೂರ್ಣವಾದುದು. ಇದನ್ನು ಪ್ರಕಾಶಪಡಿಸುವ ಮೂಲಕ ಅವರ ತಮ್ಮ ಶ್ರೀ ಪಿ. ಪ್ರಹ್ಲಾದರಾಯರ ಕುಟುಂಬವರ್ಗದವರು ಅವರಿಗೆ ಸಲ್ಲಿಸಿರುವ ಶ್ರೇಷ್ಠಕಾಣಿಕೆಯಾಗಿದೆ. ಅವರ ಶತಮಾನೋತ್ಸವದ ಈ ಸುಸಂದರ್ಭವನ್ನು ಹೀಗೆ ಸಾರ್ಥಕವಾಗಿ ಬಳಸಿಕೊಂಡಿರುವ ಇವರ ಕಾರ್ಯ ಅನುಕರಣೀಯವಾದುದು. ಇದಕ್ಕಾಗಿ ಇವರನ್ನು ಬಹಳವಾಗಿ ಅಭಿನಂದಿಸುತ್ತೇನೆ.

ದಿನಾಂಕ ೨೩.೦೩.೨೦೧೨
ಯುಗಾದಿ, ಶ್ರೀನಂದನ ಸಂವತ್ಸರ

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ

|| ಶ್ರೀ ಲಕ್ಷ್ಮೀವೆಂಕಟೇಶ್ವರ ಪ್ರಸೀದತು ||

ಪ್ರಹ್ಲಾದಾಹ್ಲಾದಕಂ ಲಕ್ಷ್ಮೀನೃಸಿಂಹಂ ಭಕ್ತವತ್ಸಲಮ್ |
ದೈತ್ಯಮತ್ತೇಭದಮನಂ ಶ್ರೀನಿವಾಸಂ ಭಜೇನಿಶಮ್ ||

ಪ್ರಹ್ಲಾದನಿಗೆ ಆಹ್ಲಾದವನ್ನುಂಟುಮಾಡಿ ಲೋಕವನ್ನು ರಕ್ಷಿಸಿ, ಹಿರಣ್ಯಕಶಿಪು ಎಂಬ ಮದ್ದಾನೆಯನ್ನು ದಮನ ಮಾಡಿದ ಭಕ್ತವತ್ಸಲನಾದ ಲಕ್ಷ್ಮೀನೃಸಿಂಹರೂಪ ಧರಿಸಿದ ಶ್ರೀನಿವಾಸನನ್ನು ಸರ್ವದಾ ಸೇವಿಸುವೆನು.

|| ಶ್ರೀ ವೇದವ್ಯಾಸಾಯ ನಮಃ ||



ಓಂ ಪೂರ್ಣಜ್ಞಾನಾಯ ವಿದ್ಮಹೆ ಪೂರ್ಣಾನಂದಾಯ ಧೀಮಹಿ |
ತನ್ನೋ ವ್ಯಾಸ ಪ್ರಚೋದಯಾತ್ ||

ನವವೃಂದಾವನದ

ಅವತಾರತ್ರಯ ಮುಖ್ಯಪ್ರಾಣದೇವರು

ಶ್ರೀ ಜಯತೀರ್ಥರು



ಚಿತ್ರೈಃ ಪದ್ಯೈಶ್ಚ ಗಂಭೀರೈರ್ವಾಕ್ಯೈರ್ಮಾನೈರಖಂಡಿತೈಃ |
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ||

ನವವೃಂದಾವನದ ಶ್ರೀ ವ್ಯಾಸರಾಜರ ವೃಂದಾವನ

ಅರ್ಥಿಕಲ್ಪಿತಕಲ್ಪೋಽಯಂ ಪ್ರತ್ಯರ್ಥಿಗಜಕೇಸರೀ |
ವ್ಯಾಸತೀರ್ಥ ಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ||



ನವವೃಂದಾವನದ ಶ್ರೀ ವಿಷ್ಣುತೀರ್ಥರು

ವ್ಯಾಸರಾಜ ಪದಾಸಕ್ತಂ ನವವೃಂದಾವನೇಸ್ಥಿತಮ್ |
ಸಜ್ಜನೋದ್ಧಾರಕಂ ವಂದೇ ವಿಷ್ಣುತೀರ್ಥಮಹರ್ನಿಶಮ್ ||

ನದಿಯ ದಡದಲ್ಲಿ ಶ್ರೀ ವಿಷ್ಣುತೀರ್ಥರು

(ಚಿತ್ರಕಾರರು : ಶ್ರೀ ರಘೂತ್ತಮ ಪುಟ್ಟಿ—ಫೋಟೋ ನೋಡಿ ಬರೆದ ಜಲವರ್ಣ ಚಿತ್ರ)

|| ಹರೇ ಶ್ರೀನಿವಾಸ ||

ಪ್ರಸ್ತಾವನೆ

ನಮ್ಮ ಹಿರಿಯರಾದ ಶ್ರೀ ವಿಷ್ಣುತೀರ್ಥರು (೧೯೧೨-೧೯೯೮) ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ಒಬ್ಬಂಟಿಗರಾಗಿ ನವವೃಂದಾವನದಲ್ಲಿ ಇದ್ದುಕೊಂಡು ನವಯತಿಗಳ ಸೇವೆ ಮಾಡುತ್ತಿದ್ದರು. ಸದ್ಗುಣಗಳ ಗಣಿಯಾಗಿದ್ದ ಅವರು ಅಪಾರವಾದ ಅಭಿಮಾನಿಗಳು ಹಾಗೂ ಶಿಷ್ಯ ವರ್ಗವನ್ನು ಹೊಂದಿದ್ದರು. ಸಂಸ್ಕೃತವನ್ನೊಳಗೊಂಡು ಹಲವಾರು ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದ ಅವರು ದ್ವೈತ ಅದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳ ಪ್ರಕಾರ ಅನೇಕ ಜ್ಞಾನಿಗಳು ಬರೆದ ಪುರುಷಸೂಕ್ತದ ಮೇಲಿನ ವ್ಯಾಖ್ಯಾನಗಳನ್ನು ತುಲನೆ ಮಾಡಿ ಹೋಲಿಕೆ-ವ್ಯತ್ಯಾಸಗಳನ್ನು ಗುರುತಿಸಿ ತಮ್ಮ ಸ್ವಂತ ಅಭಿಪ್ರಾಯವನ್ನೂ ತಿಳಿಸಿ ಮೂರು ಸಂಪುಟಗಳಲ್ಲಿ ಪುರುಷಸೂಕ್ತವನ್ನು ರಚಿಸಿದರು. ಇದಲ್ಲದೆ ಇನ್ನೂ ಹಲವಾರು ಗ್ರಂಥಗಳನ್ನೂ ರಚಿಸಿರುತ್ತಾರೆ. ಅತ್ಯಂತ ಸರಳವಾದ ಭಾಷೆಯಲ್ಲಿ ಜನಸಾಮಾನ್ಯರೂ ಅರ್ಥಮಾಡಿಕೊಳ್ಳುವಂತೆ ಅವರು ೧೯೮೭ರಲ್ಲೇ ಬರೆದು ಮುಗಿಸಿದ್ದ ಶ್ರೀಮದಣುಭಾಷ್ಯಭಾವಸಂಗ್ರಹ ಪುಸ್ತಕರೂಪದಲ್ಲಿ ಹೊರಬರಲು ಇಷ್ಟು ತಡವಾಯಿತೆಂಬುದು ಕೊಂಚ ಬೇಸರದ ಸಂಗತಿಯಾದರೂ ಶ್ರೀ ವಿಷ್ಣುತೀರ್ಥರ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಈ ಪುಸ್ತಕ ಲೋಕಾರ್ಪಣೆಯಾಗುತ್ತಿರುವುದು ನಮ್ಮೆಲ್ಲರಿಗೂ ಅತ್ಯಂತ ಹರ್ಷವನ್ನುಂಟುಮಾಡಿದೆ.

ಹಿರಿಯರಾದ ಶ್ರೀ ಹೆಚ್. ಪಿ. ಶ್ರೀಶಮೂರ್ತಿಯವರು ತಮ್ಮ ಇಳಿವಯಸ್ಸಿನಲ್ಲಿಯೂ ಸಹ ತಮ್ಮ ಆಪ್ತಮಿತ್ರರೂ, ಗುರುಭಾವದವರಾಗಿದ್ದ ಶ್ರೀ ವಿಷ್ಣುತೀರ್ಥರ ಮೇಲಿನ ಸ್ನೇಹ, ಗೌರವಭಾವದಿಂದ ತಮ್ಮ ಬಳಿ ಇದ್ದ ಮೂಲ ಹಸ್ತಪ್ರತಿಯನ್ನು ಮುಂಬೈನ ಠಾಣೆಯಲ್ಲಿರುವ ಶ್ರೀ ಪ್ರಭಂಜನ ಕುಲಕರ್ಣಿ ಅವರಿಂದ ತಿದ್ದಿಸಿರುತ್ತಾರೆ, ಹಾಗೂ ಪುಸ್ತಕದ ಕರಡುಗಳನ್ನು ಬಹಳ ಮುತುವರ್ಜಿಯಿಂದ ತಿದ್ದಿರುತ್ತಾರೆ. ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಶ್ರೀ ವಿಷ್ಣುತೀರ್ಥರ ಮೇಲಿನ ಗೌರವದಿಂದ ಈ ಗ್ರಂಥವನ್ನು ಆಮೂಲಾಗ್ರವಾಗಿ ಪರಿಷ್ಕರಿಸಿ ಕೊಟ್ಟು ಮುನ್ನುಡಿಯನ್ನೂ ಬರೆದುಕೊಟ್ಟಿರುತ್ತಾರೆ. ನಮ್ಮ ಬಂಧುಗಳಾದ ಮೈಸೂರಿನ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್‌ನ ಶ್ರೀ ಆರ್. ಎಸ್. ಮೋಹನಮೂರ್ತಿ ಅವರು ಮುದ್ರಣಕಾರ್ಯವನ್ನು ಮಾಡಿಕೊಟ್ಟಿರುತ್ತಾರೆ. ಈ ಎಲ್ಲ ಮಹನೀಯರುಗಳಿಗೂ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸೂಚಿಸುತ್ತಾ ಶ್ರೀ ಹರಿವಾಯು ಗುರುಗಳು ಅವರುಗಳಿಗೆ ಸಕಲ ಸೌಭಾಗ್ಯಗಳನ್ನು ಕರುಣಿಸಲಿ ಎಂದು ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಈ ಗ್ರಂಥವನ್ನು ಕೊಂಡು, ಓದಿ, ಸಕಲ ಸಜ್ಜನರೂ ಈ ಸದ್ಗ್ರಂಥದ ಸದುಪಯೋಗ ಪಡೆದಲ್ಲಿ ನಾವು ಸಂತೃಪ್ತರಾಗುತ್ತೇವೆ.

ಪ್ರಕಾಶಕರು

ವಿಷಯಸೂಚಿ

ಮುನ್ನುಡಿ	...	೩
ಪ್ರಸ್ತಾವನೆ	...	೫
ಗ್ರಂಥಮಾಲಿಕಾಸ್ತೋತ್ರಮ್	...	೭
ಶ್ರೀ ಆನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಮ್ ಬ್ರಹ್ಮಸೂತ್ರಾಣುಭಾಷ್ಯಮ್	...	೯
ಅರಿಕೆ	...	೧೩
ಅಣುಭಾಷ್ಯಕ್ಕೆ ಭೂಮಿಕೆ	...	೧೫
ಅಣುಭಾಷ್ಯೇ ಪ್ರಥಮೋಧ್ಯಾಯಃ	...	೬೩
ಶ್ರೀಮದ್ವಾದಿರಾಜಪೂಜ್ಯಚರಣವಿರಚಿತ ಅಧ್ಯಾಯ ಪಾದ ಅಧಿಕರಣ ನಾಮಾವಳಿಃ	...	೯೦

ಗ್ರಂಥಮಾಲಿಕಾಸ್ತೋತ್ರಮ್

ಕೃಷ್ಣಂ ವಿದ್ಯಾಪತಿಂ ನತ್ವಾ ಪೂರ್ಣಬೋಧಾದಿಸದ್ಗುರೂನ್ |
ಜಯತೀರ್ಥಮುನೀನ್ ನತ್ವಾ ವಕ್ಷ್ಯೇಽಹಂ ಗ್ರಂಥಮಾಲಿಕಾಮ್ || ೧ ||

ನಾರಾಯಣೇನ ವ್ಯಾಸೇನ ಪ್ರೇರಿತಸ್ತತ್ತ್ವಸಂವಿದೇ |
ಗ್ರಂಥಾನ್ ಮಧ್ವಶ್ಚಕಾರಾಸೌ ಸಪ್ತತ್ರಿಂಶದಮಂದಧೀಃ || ೨ ||

ಗೀತಾಭಾಷ್ಯಂ ವಿಧಾಯಾದೌ ಪ್ರಥಮಂ ತುಷ್ಟಿದಂ ಹರೇಃ |
ಭಾಷ್ಯಾಣುಭಾಷ್ಯೇ ಚಕ್ರೇಽಥ ಹ್ಯನುವ್ಯಾಖ್ಯಾನಮುತ್ತಮಮ್ || ೩ ||

ಪ್ರಮಾಣಲಕ್ಷಣಂ ನಾಮ ಕಥಾಲಕ್ಷಣಸಂಜ್ಞಿಕಮ್ |
ಉಪಾಧಿಖಂಡನಂ ಚಕ್ರೇ ಮಾಯಾವಾದಸ್ಯ ಖಂಡನಮ್ || ೪ ||

ಚಕ್ರೇ ಪ್ರಪಂಚಮಿಥ್ಯಾತ್ವಮಾನಖಂಡನಮುಚ್ಚಧೀಃ |
ಚಕಾರ ತತ್ತ್ವಸಂಖ್ಯಾನಂ ಸಾಧನಂ ವಿಷ್ಣುದರ್ಶನೇ || ೫ ||

ಗ್ರಂಥಂ ತತ್ತ್ವವಿವೇಕಾಖ್ಯಂ ತತ್ತ್ವೋದ್ಯೋತಂ ಹರೇಃ ಪ್ರಿಯಮ್ |
ಕರ್ಮನಿರ್ಣಯನಾಮಾನಂ ಗ್ರಂಥಂ ನ್ಯಾಯಾರ್ಥಬೃಂಹಿತಮ್ || ೬ ||

ಸುಖತೀರ್ಥಯತಿಶ್ಚಕ್ರೇ ವಿಷ್ಣುತತ್ತ್ವವಿನಿರ್ಣಯಮ್ |
ಋಗ್ಭಾಷ್ಯಂ ಚ ಚಕಾರಾಸೌ ಸರ್ವವೇದಾರ್ಥನಿರ್ಣಯಮ್ || ೭ ||

ಐತರೇಯಂ ತೈತ್ತಿರೀಯಂ ಬೃಹದಾರಣ್ಯಮೇವ ಚ |
ಈಶಾವಾಸ್ಯಂ ಕಾಠಕಂ ಚ ಛಾಂದೋಗ್ಯಾಥರ್ವಣೇ ತಥಾ || ೮ ||

ಮಾಂಡೂಕ್ಯಂ ನಾಮ ಷಟ್ಪ್ರಶ್ನಂ ತಥಾ ತಲವಕಾರಕಮ್ |
ಚಕ್ರೇ ಭಾಷ್ಯಾಣಿ ದಿವ್ಯಾನಿ ದಶೋಪನಿಷದಾಂ ಗುರುಃ || ೯ ||

ನಿರ್ಣಯಂ ಸರ್ವಶಾಸ್ತ್ರಾಣಾಂ ಗೀತಾತಾತ್ಪರ್ಯಸಂಜ್ಞಿಕಮ್ |
ಸನ್ನ್ಯಾಯವಿವೃತಿಂ ನಾಮ ನ್ಯಾಯಶಾಸ್ತ್ರನಿಕೃಂತನಮ್ || ೧೦ ||

ನರಸಿಂಹನಖಸ್ತೋತ್ರಂ ಚಕ್ರೇ ಯಮಕಭಾರತಮ್ |
ದ್ವಾದಶಸ್ತೋತ್ರಮಕರೋತ್ ಕೃಷ್ಣಾಮೃತಮಹಾರ್ಣವಮ್ || ೧೧ ||

ತಂತ್ರಸಾರಂ ಚಕಾರಾಸೌ ಸದಾಚಾರಸ್ಮೃತಿಂ ಸುಧೀಃ |
ಶ್ರೀಮದ್ಭಾಗವತಸ್ಯಾಪಿ ತಾತ್ಪರ್ಯಂ ಜ್ಞಾನಸಾಧನಮ್ || ೧೨ ||

ಮಹಾಭಾರತತಾತ್ಪರ್ಯನಿರ್ಣಯಂ ಸಂಶಯಚ್ಛಿದಮ್ |
ಯತಿಪ್ರಣವಕಲ್ಪಂ ಚ ಪ್ರಣವಾರ್ಥಪ್ರಕಾಶಕಮ್ || ೧೩ ||

ಜಯಂತೀನಿರ್ಣಯಂ ಚಕ್ರೇ ದೇವಕೀಗರ್ಭಜನ್ಮನಃ |
ಕೃಷ್ಣಸ್ಯ ಕೃಷ್ಣಭಕ್ತೋಽಯಂ ದ್ವೈಪಾಯನಕರಾಬ್ಜಭೂಃ || ೧೪ ||

ತ್ರಿಂಶತ್ಸಹಸ್ರಸಂಖ್ಯಾಕಂ ದ್ವ್ಯಧಿಕಂ ತುಷ್ಟಿದಂ ಹರೇಃ |
ಏತೇಷಾಂ ಪಾಠಮಾತ್ರೇಣ ಮಧ್ವೇಶಃ ಪ್ರೀಯತೇ ಹರಿಃ || ೧೫ ||

ವ್ಯಾಸತೀರ್ಥಯತಿರ್ನಾಮ ಮಧ್ವಗ್ರಂಥಾನುಕೀರ್ತನಮ್ |
ಕೃತವಾನ್ ತಜ್ಜ್ಞಾನಮಾತ್ರೇಣ ಪ್ರೀಯತೇ ಕಮಲಾಪತಿಃ || ೧೬ ||

|| ಇತಿ ಶ್ರೀ ವ್ಯಾಸರಾಜಕೃತ ಗ್ರಂಥಮಾಲಿಕಾಸ್ತೋತ್ರಮ್ ||

ಶ್ರೀ ಬಾದರಾಯಣೋ ವಿಜಯತೆ

ಶ್ರೀ ಆನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತಮ್

ಬ್ರಹ್ಮಸೂತ್ರಾಣುಭಾಷ್ಯಮ್

ಹರಿಃ ಓಂ ನಾರಾಯಣಂ ಗುಣೈಃ ಸರ್ವೈರುದೀರ್ಣಂ ದೋಷವರ್ಜಿತಮ್ |
ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ ||೧||

ವಿಷ್ಣುರೇವ ವಿಜಿಜ್ಞಾಸ್ಯಃ ಸರ್ವಕರ್ತಾಽಽಗಮೋದಿತಃ |
ಸಮನ್ವಯಾದೀಕ್ಷತೇಶ್ಚ ಪೂರ್ಣಾನಂದೋಽಂತರಃ ಖವತ್ ||೨||

ಪ್ರಣೇತಾ ಜ್ಯೋತಿರಿತ್ಯಾದ್ಯೈಃ ಪ್ರಸಿದ್ಧೈರನ್ಯವಸ್ತುಷು |
ಉಚ್ಯತೇ ವಿಷ್ಣುರೇವೈಕಃ ಸರ್ವೈಃ ಸರ್ವಗುಣತ್ವತಃ ||೩||

ಸರ್ವಗೋಽತ್ತಾ ನಿಯಂತಾ ಚ ದೃಶ್ಯತ್ವಾದ್ಯುಜ್ಝಿತಃ ಸದಾ |
ವಿಶ್ವಜೀವಾಂತರತ್ವಾದ್ಯೈಃ ಲಿಂಗೈಃ ಸರ್ವೈಃ ಯುತಃ ಸ ಹಿ ||೪||

ಸರ್ವಾಶ್ರಯಃ ಪೂರ್ಣಗುಣಃ ಸೋಽಕ್ಷರಃ ಸನ್ ಹೃದಬ್ಜಗಃ |
ಸೂರ್ಯಾದಿಭಾಸಕಃ ಪ್ರಾಣಪ್ರೇರಕೋ ದೈವತೈರಪಿ ||೫||

ಜ್ಞೇಯೋ ನ ವೇದ್ಯಃ ಶೂದ್ರಾದ್ಯೈಃ ಕಂಪಕೋಽನ್ಯಶ್ಚ ಜೀವತಃ |
ಪತಿತ್ವಾದಿಗುಣೈರ್ಯುಕ್ತಃ ತದನ್ಯತ್ರ ಚ ವಾಚಕೈಃ ||೬||

ಮುಖ್ಯತಃ ಸರ್ವಶಬ್ದೈಶ್ಚ ವಾಚ್ಯ ಏಕೋ ಜನಾರ್ದನಃ |
ಅವ್ಯಕ್ತಃ ಕರ್ಮವಾಚ್ಯೈ(ಕ್ಯೈ)ಶ್ಯ ವಾಚ್ಚ ಏಕೋಽಮಿತಾತ್ಮಕಃ ||೭||

ಅವಾಂತರಂ ಕಾರಣ ಚ ಪ್ರಕೃತಿಃ ಶೂನ್ಯಮೇವ ಚ |
ಇತ್ಯಾದ್ಯನ್ಯತ್ರನಿಯತೈರಪಿ ಮುಖ್ಯತಯೋದಿತಃ |
ಶಬ್ದೈರತೋಽನಂತಗುಣೋ ಯಚ್ಛಬ್ದಾ ಯೋಗವೃತ್ತಯಃ ||೮||

ಇತಿ ಶ್ರೀಮತ್ ಕೃಷ್ಣದ್ವೈಪಾಯನಕೃತ ಬ್ರಹ್ಮಸೂತ್ರಾಣುಭಾಷ್ಯೇ
ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ
ಪ್ರಥಮೋಧ್ಯಾಯಃ |

ಶ್ರೌತಸ್ಮೃತಿವಿರುದ್ಧತ್ವಾತ್ ಸ್ಮೃತಯೋ ನ ಗುಣಾನ್ ಹರೇಃ |
ನಿಷೇದ್ಧುಂ ಶಕ್ನುಯುರ್ವೇದಾ ನಿತ್ಯತ್ವಾನ್ಮಾನಮುತ್ತಮಮ್ ||೧||

ದೇವತಾವಚನಾದಾಪೋ ವದಂತೀತ್ಯಾದಿಕಂ ವಚಃ |
ನಾಯುಕ್ತವಾದ್ಯ ಕ್ವಸನ್ನೈವ ಕಾರಣಂ ದೃಶ್ಯತೇ ಕ್ವಚಿತ್ || ೨ ||

ಅಸಜ್ಜೀವಪ್ರಧಾನಾದಿಶಬ್ದಾ ಬ್ರಹ್ಮೈವ ನಾಪರಮ್ |
ವದಂತಿ ಕಾಣತ್ವೇನ ಕ್ವಾಪಿ ಪೂಣ ಗುಣೋ ಹರಿಃ || ೩ ||

ಸ್ವಾತಂತ್ರ್ಯಾತ್ಸರ್ವಕರ್ತೃತ್ವಾನ್ನಾಯುಕ್ತಂ ತದ್ವದೇಚ್ಛ್ರುತಿಃ |
ಭ್ರಾಂತಮೂಲತಯಾ ಸರ್ವಸಮಯಾನಾಮಯುಕ್ತಿತಃ || ೪ ||

ನ ತದ್ವಿರೋಧಾದ್ವ ವಚನಂ ವೈದಿಕಂ ಶಂಕ್ಯತಾಂ ವ್ರಜೇತ್ |
ಆಕಾಶಾದಿಸಮಸ್ತಂ ಚ ತಜ್ಜಂ ತೇನೈವ ಲೀಯತೇ || ೫ ||

ಸೋಽನುತ್ಪತ್ತಿಲಯ ಕರ್ತಾ ಜೀವ ಸ್ತದ್ವಶಗಃ ಸದಾ |
ತದಾಭಾಸೋ ಹರಿಃ ಸರ್ವರೂಪೇಷ್ವಪಿ ಸಮಃ ಸದಾ || ೬ ||

ಮುಖ್ಯಪ್ರಾಣಶ್ಚೇಂದ್ರಿಯಾಣಿ ದೇಹಶ್ಚೈವ ತದುದ್ಭವಃ |
ಮುಖ್ಯಪ್ರಾಣವಶೇಃ ಸರ್ವಂ ಸವಿಷ್ಣೋಃ ವಶಗಃ ಸದಾ || ೭ ||

ಸರ್ವದೋಷೋಜ್ಝಿತಃ ತಸ್ಮಾತ್ ಭಗವಾನ್ ಪುರುಷೋತ್ತಮಃ |
ಉಕ್ತಾ ಗುಣಾಶ್ಚಾ ವಿರುದ್ಧಾ ಸ್ತಸ್ಯ ವೇದೇನ ಸರ್ವಶಃ || ೮ ||

ಇತಿ ಶ್ರೀಮತ್ ಕೃಷ್ಣದ್ವೈಪಾಯನಕೃತ ಬ್ರಹ್ಮಸೂತ್ರಾಣುಭಾಷ್ಯೇ
ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ
ದ್ವಿತೀಯೋಧ್ಯಾಯಃ |

ಶುಭೇನ ಕರ್ಮಣಾ ಸ್ವರ್ಗಂ ನಿರಯಂ ಚ ವಿಕರ್ಮಣಾಃ |
ಮಿಥ್ಯಾಜ್ಞಾನೇನ ಚ ತಮೋ ಜ್ಞಾನೇನೈವ ಪರಂ ಪದಮ್ || ೧ ||

ಯತಿ ತಸ್ಮಾದ್ ವಿರಕ್ತಃ ಸನ್ ಜ್ಞಾನಮೇವ ಸಮಾಶ್ರಯೇತ್ |
ಸರ್ವಾವಸ್ಥಾಪ್ರೇರಕಶ್ಚ ಸರ್ವರೂಪೇಷ್ವಭೇದವಾನ್ || ೨ ||

ಸರ್ವದೇಶೇಷು ಕಾಲೇಷು ಸ ಏಕಃ ಪರಮೇಶ್ವರಃ |
ತದ್ಭಕ್ತಿತಾರತಮ್ಯೇನ ತಾರತಮ್ಯಂ ವಿಮುಕ್ತಿಗಮ್ || ೩ ||

ಸಚ್ಚಿದಾನಂದ ಆತ್ಮೇತಿ ಮಾನುಷೈಶ್ಚ ಸುರೇಶ್ವರೈಃ |
ಯಥಾಕ್ರಮಂ ಬಹುಗುಣೈಃ ಬ್ರಹ್ಮಣಾ ಹ್ಯಖಿಲೈಃ ಗುಣೈಃ || ೪ ||

ಉಪಾಸ್ಯಃ ಸರ್ವವೇದೈಶ್ಚ ಸರ್ವೈರಪಿ ಯಥಾಬಲಮ್ |
ಜ್ಞೇಯೋ ವಿಷ್ಣುರ್ವಿಶೇಷಸ್ತು ಜ್ಞಾನೇ ಸ್ಯಾದುತ್ತರೋತ್ತಮ್ || ೫ ||

ಸರ್ವೇಽಪಿ ಪುರುಷಾರ್ಥಾಃ ಸ್ಯುಃ ಜ್ಞಾನಾದೇವ ನ ಸಂಶಯಃ |
ನ ಲಿಪ್ಯತೇ ಜ್ಞಾನವಾಂಶ್ಚ ಸರ್ವದೋಷೈರಪಿ ಕ್ವಚಿತ್ || ೬ ||

ಗುಣದೋಷೌ ಸುಖಸ್ಯಾಪಿ ವೃದ್ಧಿಹ್ರಾಸೌ ವಿಮುಕ್ತಿಗೌ |
ನೃಣಾಂ ಸುರಾಣಾಂ ಮುಕ್ತೌ ತು ಸುಖಂ ಕ್ಲೃಪ್ತಂ ಯಥಾಕ್ರಮಮ್ || ೭ ||

ಇತಿ ಶ್ರೀಮತ್ ಕೃಷ್ಣದ್ವೈಪಾಯನಕೃತ ಬ್ರಹ್ಮಸೂತ್ರಾಣುಭಾಷ್ಯೇ
ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ
ತೃತೀಯೋಧ್ಯಾಯಃ |

ವಿಷ್ಣುರ್ಬ್ರಹ್ಮ ತಥಾ ದಾತೇತ್ಯೇವಂ ನಿತ್ಯಮುಪಾಸನಮ್ |
ಕಾರ್ಯಮಾಪದ್ಯಪಿ ಬ್ರಹ್ಮ ತೇನ ಯಾತ್ಯಪರೋಕ್ಷತಾಮ್ || ೧ ||

ಪ್ರಾರಬ್ಧ ಕರ್ಮಣೋಽನ್ಯಸ್ಯ ಜ್ಞಾನಾದೇವ ಪರಿಕ್ಷಯಃ |
ಅನಿಷ್ಟಶ್ಯೋಭಯಸ್ಯಾಪಿ ಸರ್ವಸ್ಯಾನ್ಯಸ್ಯ ಭೋಗತಃ || ೨ ||

ಉತ್ತರೇಷೂತ್ತರೇಷ್ವೇವಂ ಯಾವದ್ವಾಯುಂ ವಿಮುಕ್ತಿಗಾಃ |
ಪ್ರವಿಶ್ಯ ಭುಂಜತೇ ಭೋಗಾಂಸ್ತದಂತರ್ಬಹಿರೇವ ವಾ || ೩ ||

ವಾಯುಃರ್ವಿಷ್ಣುಂ ಪ್ರವಿಶ್ಯೈವ ಭೋಗಸ್ತ್ವೇವೋತ್ತರೋತ್ತರಮ್ |
ಉತ್ಕ್ರಮ್ಯ ಮಾನುಷಾ ಮುಕ್ತಿಂ ಯಾಂತಿ ದೇಹಕ್ಷಯಾತ್ಸು ಗುರಾಃ || ೪ ||

ಅರ್ಚಿರಾದಿಪಥಾ ವಾಯುಂ ಪ್ರಾಪ್ಯ ತೇನ ಜನಾರ್ದನೂರ್ |
ಯಾಂತ್ಯುತ್ತಮಾ ನರೋಚ್ಚಾದ್ಯಾ ಬ್ರಹ್ಮಲೋಕಾತ್ ಸಹಾಮುನಾ || ೫ ||

ಯಥಾಸಂಕಲ್ಪಭೋಗಾಶ್ಚ ಚಿದಾನಂದಶರೀರಿಣಃ |
ಜಗತ್‌ಸೃಷ್ಟ್ಯಾದಿವಿಷಯಂ ಮಹಾಸಾಮರ್ಥ್ಯಮಪ್ಯೃತೇ || ೬ ||

ಯಥೇಷ್ಟ ಶಕ್ತಿಮಂತಶ್ಚ ವಿನಾ ಸ್ವಾಭಾವಿಕೋತ್ತಮಾನ್ |
ಅನನ್ಯವಶಗಾಶ್ಚೈವ ವೃದ್ಧಿಹ್ರಾಸವಿವಜಿತಾಃ |
ದುಃಖಾದಿರಹಿತಾ ನಿತ್ಯಂ ಮೋದಂತೇ ಅವಿರತಂ ಸುಖಮ್ || ೭ ||

ಪೂರ್ಣಪ್ರಜ್ಞೇನ ಮುನಿನಾ ಸರ್ವಶಾಸ್ತ್ರಾರ್ಥಸಂಗ್ರಹಃ |
ಕೃತೋಽಯಂ ಪ್ರೀಯತಾಂ ತೇನ ಪರಮಾತ್ಮಾ ರಮಾಪತಿಃ || ೮ ||

ನಮೋ ನಮೋಽಶೇಷದೋಷದೋರಪೂರ್ಣಗುಣಾತ್ಮನೇ |
ವಿರಿಂಚಶರ್ವಪೂರ್ವೇಡ್ಯವಂದ್ಯಾಯ ಶ್ರೀವರಾಯ ತೇ || ೯ ||

ಇತಿ ಶ್ರೀಮತ್ ಕೃಷ್ಣದ್ವೈಪಾಯನಕೃತ ಬ್ರಹ್ಮಸೂತ್ರಾಣುಭಾಷ್ಯೇ
ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯವಿರಚಿತೇ
ಚತುರ್ಥೋಽಧ್ಯಾಯಃ ಸಮಾಪ್ತಃ

ಅರಿಕೆ

ಶ್ರೀಮದಾಚಾರ್ಯರ ಗ್ರಂಥಗಳಲ್ಲಿ ನಖಸ್ತುತಿ, ದ್ವಾದಶಸ್ತೋತ್ರಗಳಂತೆ "ಅಣುಭಾಷ್ಯ"ವೂ ಪ್ರತಿ ನಿತ್ಯ ಭೋಜನಕ್ಕೆ ಮೊದಲು ಅವಶ್ಯ ಪಠಣ ಮಾಡಬೇಕಾದ ಗ್ರಂಥ. ಏನೋ ಕುರುಡು ಪಾಠದಂತೆ ಹೇಳಿಕೊಳ್ಳುವದಕ್ಕಿಂತ ಕಿಂಚಿತ್ ಅರ್ಥಾನುಸಂಧಾನಪೂರ್ವಕ ಹೇಳಿಕೊಂಡರಂತೂ ಮಹಾಫಲಪ್ರದ. ಇದರಲ್ಲಿ ನಾಲ್ಕು ಅಧ್ಯಾಯಗಳಿದ್ದರೂ ಎಲ್ಲಾ ಒಟ್ಟು ಸೇರಿ ಕೇವಲ ಮೂವತ್ತೆರಡು ಶ್ಲೋಕಗಳಿವೆ. ಆದರೆ ಈ ಮೂವತ್ತೆರಡು ಶ್ಲೋಕಗಳಲ್ಲೇ ಸೂತ್ರಪ್ರಸ್ಥಾನಕ್ಕೆ ಸಂಬಂಧಿಸಿದ ಸೂತ್ರಭಾಷ್ಯ, ಅನುವ್ಯಾಖ್ಯಾನ, ನ್ಯಾಯವಿವರಣ ಹಾಗೂ ಅವುಗಳ ಟೀಕಾ ಟಿಪ್ಪಣಿಗಳೆಲ್ಲದರ ಸಾರವೂ ಅಡಗಿದೆಯೆಂಬುದನ್ನು ಶ್ರೀ ಮಂತ್ರಾಲಯದ ಪ್ರಭುವರ್ಯರು ತಮ್ಮ "ತತ್ತ್ವಮಂಜರಿ" ಎಂಬ ಅಣುಭಾಷ್ಯದ ವಿವರಣೆಯಲ್ಲಿ ತೋರಿಸಿದ್ದಾರೆ. ಈ "ತತ್ತ್ವ ಮಂಜರಿ"ಯು ಕನ್ನಡಾರ್ಥವಿವರಣೆಗಳೊಡನೆ ಪ್ರೊ. ಕೆ. ಟಿ. ಪಾಂಡುರಂಗಿಯವರಿಂದ ಬರೆಯಲ್ಪಟ್ಟು ನರಸಿಂಹರಾಜಾ ಕಾಲೋನಿಯ ಶ್ರೀ ಗುರುರಾಜಾ ಅಸೋಸಿಯೇಷನ್ನಿನಿಂದ ಪ್ರಕಟಿಸಲ್ಪಟ್ಟಿದೆಯಾದರೂ ಅದರ ಪ್ರತಿಗಳು ಈಗ ದೊರಕುವಂತಿಲ್ಲ. ಅಷ್ಟೇ ಅಲ್ಲದೆ ಆ ತತ್ತ್ವಮಂಜರಿಯಲ್ಲಿ ಹೇಳಿದ ಪ್ರಮೇಯಗಳನ್ನು ಮಾನ್ಯ ಶ್ರೀ ಪಾಂಡುರಂಗಿಯವರು ಎಷ್ಟೇ ಸರಳವಾಗಿ ವಿಶದವಾಗಿ ಸ್ಪಷ್ಟಪಡಿಸಿದ್ದರೂ ಸೂತ್ರಭಾಷ್ಯವನ್ನೂ ತತ್ವಪ್ರಕಾಶಾದಿ ಟೀಕಾಗ್ರಂಥ ಗಳನ್ನು ಒಂದು ಸಾರಿಯಾದರೂ ಶ್ರವಣಮಾಡದೇ ಇರುವ ಸಾಮಾನ್ಯ ಜನಗಳು ಈ ತತ್ತ್ವ ಮಂಜರಿಯ ಅನುವಾದದಲ್ಲಿ ಹೇಳಿದ ಪ್ರಮೇಯಗಳನ್ನು ಕನ್ನಡ ಭಾಷೆಯಲ್ಲೇ ತಿಳಿಸಿದ್ದರೂ ಸುಲಭವಾಗಿ ಗ್ರಹಿಸಲಾರರು. ಒಂದೊಂದು ವಿಚಾರವನ್ನೂ ಕ್ವಚಿತ್ ಬಿಡಿಬಿಡಿಯಾಗಿ ಗ್ರಹಿಸಿ ದರೂ ಸಮಗ್ರವಾಗಿ ಗ್ರಹಿಸುವದು ಕಷ್ಟ—ಬಹಳಷ್ಟು ಕಷ್ಟ; ಅಥವಾ ಅಸಾಧ್ಯವೆಂದರೂ ತಪ್ಪಾಗಲಾರದು.

ಇದನ್ನು ಲಕ್ಷಿಸಿ, ಭಾಷ್ಯಾದಿಗ್ರಂಥಗಳ ಪರಿಚಯವಿಲ್ಲದ, ಆದರೂ ಮಧ್ವಸಿದ್ಧಾಂತದ ಮುಖ್ಯ ಪ್ರಮೇಯಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವುಳ್ಳ, ಅಲ್ಲದೇ ಸಂಸ್ಕೃತ ಭಾಷೆ ಯಲ್ಲಿ ಹೆಚ್ಚು ಪರಿಶ್ರಮವಿಲ್ಲದ, ಸಾಮಾನ್ಯ ತಿಳಿವಳಿಕೆಯ ಮಾಧ್ವರಿಗೆ ಬೋಧವಾಗುವಂತೆ ಅಣುಭಾಷ್ಯದಲ್ಲಿ ಹೇಳಿದ ಅತಿಮುಖ್ಯವಾದ ಭಾಗಗಳ ಸಾರಾಂಶವನ್ನು ತಿಳಿಸಿಕೊಡುವದಕ್ಕಾಗಿ ಈ ಹೊಸ ಭಾವಸಂಗ್ರಹವೆಂಬ ವಿವರಣೆಯನ್ನು ಶ್ರೀಹರಿವಾಯುಗುರುಗಳ ಪ್ರೇರಣಾನುಸಾರ ಬರೆಯಲು ಆರಂಭಿಸಿದ್ದೇನೆ. ಇದರಲ್ಲಿ ನನಗೆ ಉದ್ದಕ್ಕೂ ಶ್ರೀ ಮಂತ್ರಾಲಯಪ್ರಭುಗಳೇ ಮಾರ್ಗದರ್ಶಕರು—ಅವರ ತತ್ತ್ವಮಂಜರಿಯೇ ನನಗೆ ದಾರಿದೀಪ. ಜೊತೆಗೆ ಶ್ರೀ ಪಾಂಡು ರಂಗಿಯವರ ಕನ್ನಡ ಗ್ರಂಥವೂ ನನಗೆ ಹೇರಳವಾಗಿ ನೆರವು ಕೊಟ್ಟಿದೆ; ಇದಕ್ಕಾಗಿ ನಾನು ಅವರಿಗೆ ಸಾದರ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈ ಭಾವಸಂಗ್ರಹದಲ್ಲಿ ಹೆಸರಿಗೆ ತಕ್ಕಂತೆ ಬ್ರಹ್ಮಸೂತ್ರಗಳಲ್ಲಿ ಪ್ರತಿಪಾದಿತವಾದ ಅಣುಭಾಷ್ಯ ನಿರೂಪಿತವಾದ ಮುಖ್ಯ ಮುಖ್ಯ ಭಾವ(ಪ್ರಮೇಯ)ಗಳನ್ನು ಮಾತ್ರ ಸಂಗ್ರಹಿಸಿ ಹೇಳಿದ್ದೇನೇ ಹೊರತು ಸೂತ್ರಗಳ, ಅಧಿಕರಣಗಳ ಅಥವಾ ಪೂರ್ವಪಕ್ಷ-ಸಿದ್ಧಾಂತಾದಿ

ಭಾಷ್ಯಕ್ರಮವನ್ನು ಅನುಸರಿಸಿಲ್ಲ. ಆದರೂ ದಿಗ್ದರ್ಶನಾರ್ಥ ಮೊದಲನೆಯ ಒಂದು ಸೂತ್ರಕ್ಕೆ ಮಾತ್ರ ಹೆಚ್ಚು ಪ್ರಮೇಯಗಳನ್ನು ತಿಳಿಸಿದ್ದೇನೆ. ಇಷ್ಟಾದರೂ ಸೂತ್ರ ಎಂದರೇನು? ಅಧಿಕರಣ ಎಂದರೇನು? ಅವಕ್ಕೂ ಪಾದ-ಅಧ್ಯಾಯಗಳಿಗೂ ಏನು ಸಂಬಂಧ? ಎಂಬುವೇ ಮೊದಲಾದ ಮೂಲಭೂತ ವಿಚಾರಗಳೇ ಗೊತ್ತಿಲ್ಲದವರಿಗೆ ಇಡೀ ಪ್ರತಿಪಾದನೆಯೇ ಅರಣ್ಯರೋದನದಂತೆ ಕಂಡರೆ ಆಶ್ಚರ್ಯವೇನೂ ಅಲ್ಲ. ಆದಕಾರಣ ಪೀಠಿಕಾರೂಪವಾದ ಅಂತಹ ಮುಖ್ಯವಿಷಯ ಗಳನ್ನು ಭೂಮಿಕೆಯಲ್ಲಿ ತಿಳಿಸಿದೆ. ಇದರಲ್ಲಿ ಅಣುಭಾಷ್ಯದಲ್ಲೇ ನೇರವಾಗಿ ಹೇಳದಿದ್ದರೂ ಈ ಗ್ರಂಥ ಅರ್ಥವಾಗಲು ಅವಶ್ಯ ತಿಳಿದಿರಬೇಕಾದ ಮುಖ್ಯವಿಚಾರಗಳನ್ನು ತಿಳಿಸುವುದರ ಜೊತೆಗೆ ಮೊದಲಲ್ಲೇ ಸ್ಥೂಲವಾಗಿ ಇಡೀ ಅಣುಭಾಷ್ಯದ ಪ್ರಮೇಯಗಳ ವಿಹಂಗಾವಲೋಕನ ವನ್ನೂ ಮಾಡಿಸಿದ್ದೇನೆ. ಇದರಿಂದ ಅಣುಭಾಷ್ಯವನ್ನು ಅಧ್ಯಾಯ ಅಧ್ಯಾಯವಾಗಿ ಓದಿ ಮುಗಿಸಿದಂತೆಲ್ಲ ಹಿಂದಿನ ಭಾಗಕ್ಕೂ ಮುಂದಿನ ಭಾಗಕ್ಕೂ ಇರುವ ಸಂಬಂಧ ಮನಸ್ಸಿನಲ್ಲಿ ಚೆನ್ನಾಗಿ ರೂಢವಾಗುವುದರಿಂದ ಇಡೀ ಗ್ರಂಥದಲ್ಲಿ ಏನು ವಿಷಯ ಪ್ರತಿಪಾದಿತವಾಗಿದೆ ಎಂಬ ಒಟ್ಟು ಭಾವನೆ (ಇದನ್ನು ಇಂಗ್ಲೀಷಿನಲ್ಲಿ total perspective ಎನ್ನುತ್ತಾರೆ) ಒಡಮೂಡಲು ಸಹಾಯವಾಗುತ್ತದೆ.

ಏನೇ ಆದರೂ ಇಡೀ ಪುಸ್ತಕವನ್ನು ಎರಡು ಮೂರು ಸಲವಾದರೂ ಓದುವವರೆಗೆ ಎಲ್ಲ ಪ್ರಮೇಯಗಳೂ ಹೃದ್ಗತವಾಗಲಾರವು. ಓದುತ್ತಾ ಓದುತ್ತಾ ಸ್ಪಷ್ಟವಾಗುವುದೆಂದು ಆಶಿಸ ಲಾಗಿದೆ. ಈ ಪುಸ್ತಕವು ಇನ್ನೂ ಹೆಚ್ಚು ಉಪಯೋಗವಾಗಲು ಸೂಕ್ತಸಲಹೆಗಳೇನಿದ್ದರೂ ಆದರದಿಂದ ಸ್ವಾಗತಿಸುತ್ತೇನೆ.

ಇರಲಿ, ಈ ಚಿಕ್ಕ ವಿವರಣೆಯಿಂದ ಬ್ರಹ್ಮಸೂತ್ರಗಳಲ್ಲಿ ನಿರೂಪಿತವಾದ ಮುಖ್ಯಪ್ರಮೇಯ ಗಳು ಸ್ಥೂಲವಾಗಿಯಾದರೂ ಅರ್ಥವಾಗಿ ಅದರಿಂದ ಪಾಠಕರಿಗೆ ಇನ್ನೂ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬೇಕು, ಭಾಷ್ಯಾದಿ ಗ್ರಂಥಗಳನ್ನು ಓದಬೇಕು ಎಂಬ ಕಿಂಚಿದಾಸಕ್ತಿ ಹುಟ್ಟಿದರೂ ನನ್ನ ಸಕಲ ಶ್ರಮವೂ ಸಾರ್ಥಕ, ಶ್ರೀ ಹರಿವಾಯುಗುರುಗಳು ಸುಪ್ರೀತರಾದರೆಂದೇ ಭಾವಿಸು ತ್ತೇನೆ.

ಬೆಂಗಳೂರು
ದಿನಾಂಕ 29.4.1986

ವಿಷ್ಣುತೀರ್ಥ, ನವವೃಂದಾವನ
ಲೇಖಕ

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾಯ ನಮಃ ||

ಅಣುಭಾಷ್ಯಕ್ಕೆ ಭೂಮಿಕೆ

1. ಷಡ್‌ದರ್ಶನಗಳು : ಬಹು ಪುರಾತನಕಾಲದಿಂದಲೂ ನಮ್ಮ ಪೂರ್ವಿಕರಲ್ಲಿ ವೇದಗಳೆಂದರೆ ಬಹಳ ಗೌರವದ ಭಾವನೆಯಿರುವದು ಮಾತ್ರವಲ್ಲದೇ ಅವು ಅಪೌರುಷೇಯ, ಸ್ವತಃ ಪ್ರಮಾಣ, ಅವು ಹೇಳಿದ್ದೇ ಸರಿ, ಅದೇ ನಿಜ, ಮರುಮಾತಾಡದೇ ಒಪ್ಪಬೇಕಾದ್ದು ಎಂಬ ನಂಬಿಕೆಯೂ ನೆಲೆಸಿದೆ. ಕಾಲಕ್ರಮದಲ್ಲಿ ವೇದಪ್ರಾಮಾಣ್ಯವನ್ನು ಒಪ್ಪದ ಚಾರ್ವಾಕ, ಜೈನ, ಬೌದ್ಧಾದಿ ಅನೇಕ ಅವೈದಿಕ ಮತಗಳು ಹುಟ್ಟಿಕೊಂಡವು. ಬರಬರುತ್ತ ಅವುಗಳ ಪ್ರಾಬಲ್ಯದಿಂದ ವೈದಿಕ ವಿದ್ಯೆಯಲ್ಲಿ ಶ್ರದ್ಧಾಸಕ್ತಿಗಳು ಶಿಥಿಲವಾಗಿ ಅಶ್ರದ್ಧೆಯೇ ಹೆಚ್ಚಾಯಿತು. ಇದನ್ನು ಕಂಡು ವೇದಗಳ ಬಗ್ಗೆ ಬಹಳ ಶ್ರದ್ಧಾದರವುಳ್ಳ ಅನೇಕ ವಿದ್ವಾಂಸರು ವೇದೋಕ್ತ ಕರ್ಮಾನುಷ್ಠಾನಗಳ ಮಹಿಮೆಯನ್ನೇ ಎತ್ತಿಹಿಡಿದು ತಮ್ಮತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ವೇದಗಳಿಗೆ ಅರ್ಥಸಂಧಾನ ಮಾಡಿದರು. ಭಾಟ್ಟ, ಪ್ರಭಾಕರ, ವೈಶೇಷ, ಭೂಮಿಕ, ಬೌದ್ಧ ಮತ್ತು ಚಾರ್ವಾಕ—ಈ ವಿದ್ವಾಂಸರು ತೋರಿಸಿದ (ದರ್ಶನ–ತೋರಿಸು) ಮಾರ್ಗಗಳಿಗೇ ದರ್ಶನ ಗಳೆಂದು ಹೆಸರಾಯಿತಲ್ಲದೇ ಅದನ್ನು ನಿರೂಪಣೆ ಮಾಡಿದ ವಿದ್ವಾಂಸರಿಗೆ ದರ್ಶನಕಾರರೆಂಬ ಹೆಸರೂ ರೂಢಿಗೆ ಬಂತು. ಹಾಗೆ ಅನೇಕ ದರ್ಶನಗಳು ಹುಟ್ಟಿಕೊಂಡರೂ ಅವುಗಳಲ್ಲಿ ಆರು ಮಾತ್ರ ಚಿರಸ್ಥಾಯಿಯಾಗಿ ಉಳಿದುಕೊಂಡುವು. ಇವುಗಳನ್ನೇ ಷಡ್ದರ್ಶನಗಳೆನ್ನುತ್ತಾರೆ. ಅವು ಯಾವುವೆಂದರೆ—

೧. ಕಪಿಲರು ಬೋಧಿಸಿದ — ಸಾಂಖ್ಯ
೨. ಪತಂಜಲಿ ನೀಡಿದ — ಯೋಗ
೩. ಗೌತಮರು ತಿಳಿಸಿದ — ನ್ಯಾಯ
೪. ಕಾಣಾದರು ರೂಢಿಸಿದ — ವೈಶೇಷಿಕ
೫. ಜೈಮಿನಿಗಳು ರೂಪಿಸಿದ — ಪೂರ್ವಮೀಮಾಂಸಾ
೬. ಕೃಷ್ಣದ್ವೈಪಾಯನರು ಅಥವಾ ಬಾದರಾಯಣರು ನಿರೂಪಣೆ ಮಾಡಿದ — ಉತ್ತರ ಮೀಮಾಂಸಾ

ಈಗ ಈ ಆರೂ ದರ್ಶನಗಳು ಬೋಧಿಸುವ ಮುಖ್ಯ ವಿಚಾರಗಳನ್ನೂ ತಿಳಿಸುತ್ತಾ ಅವುಗಳಿಗಿರುವ ಸಾಮ್ಯ-ವೈಷಮ್ಯಗಳನ್ನು ಕಿಂಚಿತ್ತಾದರೂ ತಿಳಿಸಿಕೊಡುವೆವು. ವೇದಾಂತದಲ್ಲಿ ಈ ಸಕಲ ದರ್ಶನಗಳ ವಿಚಾರವೂ ಅಲ್ಲಲ್ಲೇ ಬರುತ್ತಿರುತ್ತದೆ. ಆದ್ದರಿಂದ ವೇದಾಂತ ಅರ್ಥವಾಗಲು ಇವುಗಳ ಸ್ಥೂಲ ಪರಿಚಯವಾದರೂ ಬೇಕೇಬೇಕಾಗುತ್ತದೆ.

2. ಸಾಂಖ್ಯದರ್ಶನ : ಕಪಿಲರು (ಭಗವದ್ರೂಪ ಕಪಿಲ ಬೇರೆ, ಸಾಂಖ್ಯಮತ ಕಪಿಲ ಬೇರೆ. ಹಾಗೆಯೇ ವೈದಿಕ ಸಾಂಖ್ಯ ಬೇರೆ; ಅವೈದಿಕ ಸಾಂಖ್ಯ ಬೇರೆ.) ನಿರೂಪಣೆ ಮಾಡುತ್ತಾ (ಸಂ-ಚೆನ್ನಾಗಿ, ಖ್ಯಾ-ಹೇಳು) ಹೋದುದರಿಂದ ಅವರ ದರ್ಶನಕ್ಕೆ ಸಾಂಖ್ಯವೆಂಬ ಹೆಸರಾಯಿತು.

ಅವರ ಸಿದ್ಧಾಂತದಂತೆ ಪ್ರಕೃತಿಯೇ ಪ್ರಧಾನ, ಸರ್ವಸಮರ್ಥ, ಜಗತ್‌ಸೃಷ್ಟಿಗೂ ಅದೇ ಕಾರಣ, ಇಪ್ಪತ್ತೈದನೇ ತತ್ತ್ವವಾದ ಪುರುಷನೂ ಅದರ ಅಧೀನ. ಆ ಪುರುಷನು ಸಂಸಾರಬಂಧನದಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಬೋಧಿಸುವುದೇ ಈ ಶಾಸ್ತ್ರದ ಪರಮ ಧ್ಯೇಯ.

3. ಯೋಗಶಾಸ್ತ್ರ : ಯೋಗ ಎಂದರೆ ವಸ್ತುತಃ 'ಸೇರುವಿಕೆ' 'ಸಂಯೋಗ' ಎಂದರ್ಥ. ಈ ಸಿದ್ಧಾಂತವು ಮುಕ್ತಿಯಾಗಲು ಮನೋನಿಗ್ರಹವೇ ಮುಖ್ಯವೆಂದು ತಿಳಿದು ಆ ಮನೋನಿಗ್ರಹಕ್ಕೆ ಸಹಕಾರಿಯಾದ (ಸೇರಬೇಕಾದ) ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗ(ಎಂಟು ಅಂಗ)ಗಳುಳ್ಳ ಯೋಗ ಎಂಬ ಉಪಾಯವನ್ನು ವಿಧಿಸುತ್ತದೆ. ಈ ಯೋಗಸೂತ್ರಗಳನ್ನು ರಚಿಸಿದವರು ಪತಂಜಲಿ. (ಇದು ಭಗವದವತಾರ ದತ್ತಾತ್ರೇಯ ಉಪದೇಶಿಸಿದ ಯೋಗಶಾಸ್ತ್ರದಿಂದ ಭಿನ್ನ.)

4. ನ್ಯಾಯ ಅಥವಾ ನೈಯಾಯಿಕ ಸಿದ್ಧಾಂತ : ಈ ಸಿದ್ಧಾಂತವನ್ನು ರೂಪಿಸಿದ ಗೌತಮರು ಜಗತ್ತು ಷೋಡಶ (ಹದಿನಾರು) ತತ್ತ್ವಾತ್ಮಕವಾಗಿದೆಯೆಂದು ನಿರೂಪಿಸುತ್ತಾ ಎಂಟು ಗುಣಗಳಿಂದ ಕೂಡಿದ ಪರಮಾತ್ಮನನ್ನು ಹೊಂದಲು ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಾಬ್ದಗಳೆಂಬ ಪ್ರಮಾಣಗಳು ಸಹಕಾರಿಗಳಾಗಿವೆಯೆಂದು ಹೇಳುತ್ತಾರೆ. ಆದರೆ ಬರಬರುತ್ತಾ ಇವರಲ್ಲಿ ಪ್ರಮೇಯಕ್ಕಿಂತ ಪ್ರಮಾಣಪ್ರಕ್ರಿಯೆಯೇ ದುರೂಹವಾಗುವಷ್ಟು ಗಹನವಾಗಿ ಬೆಳೆಯಿತಲ್ಲದೇ ಈ ಶಾಸ್ತ್ರವು ಗದಾಧರರ ಕಾಲದಲ್ಲಿ ಶಬ್ದಾಡಂಬರವೇ ಪ್ರಧಾನವಾಗಿರುವ ಬಹು ಜಟಿಲವಾದ ಒಂದು ಹೊಸ ರೂಪವನ್ನೇ ತಾಳಿತು. ಜೊತೆಗೆ ವೈಶೇಷಿಕ ಸಿದ್ಧಾಂತದ ಅನೇಕ ಸಿದ್ಧಾಂತಗಳನ್ನು ಅಳವಡಿಸಿಕೊಂಡುಬಿಟ್ಟಿತು. ಹೀಗೆ ಪ್ರಾಚೀನ ತರ್ಕ, ನವೀನ ತರ್ಕ ಎಂದು ಈ ಶಾಸ್ತ್ರ ಎರಡು ಬಗೆಯಾಗಿದೆ. ಪ್ರಾಚೀನ ತರ್ಕದವರನ್ನು ಜರನ್ನೈಯಾಯಿಕರೆಂದು ಕರೆಯುವುದುಂಟು.

5. ವೈಶೇಷಿಕ ಮತ : ವೈಶೇಷಿಕರು ನ್ಯಾಯಸಿದ್ಧಾಂತಕ್ಕೆ ಭಿನ್ನವಾಗಿ ಪದಾರ್ಥಗಳು (ತತ್ತ್ವಗಳು) ಏಳೇ ಏಳು ಎಂದು ನಿರೂಪಿಸುತ್ತಾರಲ್ಲದೇ ಎಲ್ಲಕ್ಕೂ ಮುಖ್ಯವಾಗಿ 'ವಿಶೇಷ'ವೆಂಬ ಒಂದು ಶಕ್ತಿಯಿದೆಯೆಂದೂ ವಾದಿಸುತ್ತಾರೆ. ಇದರಿಂದಲೇ ಇವರಿಗೆ 'ವೈಶೇಷಿಕ'ರೆಂಬ ಹೆಸರು ಬಂತು. ಸಕಲ ಜಗತ್ತಿಗೂ ಮೂಲಭೂತವಾದ ಪರಮಾಣುವಾದವನ್ನು ಈ ಮತ ಸ್ಥಾಪಕರಾದ ಕಣಾದರೇ ಮೊಟ್ಟಮೊದಲು ಮಂಡಿಸಿದರು. ಇದರಿಂದಲೇ ಅವರನ್ನು (ಕಣ-ಕಣಗಳನ್ನು, ಪರಮಾಣುಗಳನ್ನು, ಅದ-ತಿನ್ನುವವರು) ಕಣಾದ, ಕಣಭಕ್ಷ, ಕಣಭಕ್ಷಕ ಎಂದು ವ್ಯಂಗ್ಯವಾಗಿ ಕರೆದಂತೆ ಕಾಣುತ್ತದೆ. ಮೇಲೆ ತಿಳಿಸಿದಂತೆ ಬರಬರುತ್ತಾ ನ್ಯಾಯ-ವೈಶೇಷಿಕಗಳೆರಡೂ ಹೆಣೆದುಕೊಂಡುಬಿಟ್ಟುವು. ಅಲ್ಲದೆ ವ್ಯಾಕರಣಶಾಸ್ತ್ರದಂತೆ ನ್ಯಾಯಶಾಸ್ತ್ರದ ಅನೇಕ ಪ್ರಕ್ರಿಯೆಗಳು ಬೇರೆ ಎಲ್ಲ ಶಾಸ್ತ್ರಗಳಲ್ಲೂ ಕ್ರಮಕ್ರಮವಾಗಿ ಹೆಣೆದುಕೊಂಡುಬಿಟ್ಟವು. ಇದನ್ನೇ ನಮ್ಮ ಪೂರ್ವಿಕರು "ಕಾಣಾದಂ ಪಾಣಿನೀಯಂ ಚ ಸರ್ವಶಾಸ್ತ್ರೋಪಕಾರಕಮ್" ಎಂದರೆ ನ್ಯಾಯಶಾಸ್ತ್ರದ ಪ್ರಕ್ರಿಯೆಗಳೂ ವ್ಯಾಕರಣ ಶಾಸ್ತ್ರದ ನಿಯಮಗಳೂ ಎಲ್ಲ ಶಾಸ್ತ್ರಗಳಿಗೂ ಬಹಳ ಪ್ರಯೋಜನಕಾರಿಯಾಗಿವೆಯೆಂದು ಹೇಳುತ್ತಾರೆ.

6. ಮೀಮಾಂಸಾಶಾಸ್ತ್ರ : ಪೂರ್ವಮೀಮಾಂಸಕ್ಕೂ ಉತ್ತರ ಮೀಮಾಂಸಕ್ಕೂ ಅನೇಕ

ವಿಚಾರಗಳು ಸಾಮಾನ್ಯವಾಗಿರುವುದರಿಂದಲೂ ಬ್ರಹ್ಮಸೂತ್ರಗಳ ಸಾರಾಂಶವನ್ನು ಅರಿತುಕೊಳ್ಳಲು ಈ ಸಾಧಾರಣ ವಿಚಾರಗಳು ಅತ್ಯವಶ್ಯವಾಗಿ ತಿಳಿದಿರಬೇಕಾದ್ದರಿಂದಲೂ ಮೊದಲು ಅವನ್ನು ಸಂಕ್ಷೇಪವಾಗಿ ತಿಳಿಸುತ್ತೇವೆ. ಮೊಟ್ಟಮೊದಲು ಮೀಮಾಂಸಾ ಎಂಬ ಹೆಸರಿನಲ್ಲೇ ಮಹತ್ವವಿದೆಯೆಂಬುದನ್ನು ನಾವು ಅರಿತುಕೊಳ್ಳಬೇಕು. 'ಮಾನ ಪೂಜಾಯಾಂ' ಎಂಬ ಪೂಜಾರ್ಥಕ (ಭ್ವಾದಿ, ಆತ್ಮ) ಧಾತುವಿನ ಮೇಲೆ 'ಮಾನ್‌ಬಧ-' (ಪಾ. ೩/೧/೬) ಎಂಬ ಸೂತ್ರದಂತೆ ಸನ್ ಪ್ರತ್ಯಯ ಸೇರಿದಾಗ ದ್ವಿತ್ವ ಬರಲು 'ಸನ್ಯತಃ' (ಪಾ.೭/೪/೭೯) ಎಂಬಂತೆ ಅಭ್ಯಾಸಕ್ಕೆ ಬಂದ ಇಕಾರಕ್ಕೆ ದೀರ್ಘಾದೇಶ ಬಂದು ಮೇಲೆ ಟಾಪ್ ಪ್ರತ್ಯಯ ಬರಲು ಮೀಮಾಂಸಾ ಎಂಬ ರೂಪವು ಸಿದ್ಧವಾಗುತ್ತದೆ. ಮತ್ತು 'ಮಾನೇರ್ಜಿಜ್ಞಾಸಾಯಾಮ್' ಎಂಬ ವಾರ್ತಿಕದಂತೆ ಸನ್ ಪ್ರತ್ಯಯವು ಜಿಜ್ಞಾಸಾರ್ಥದಲ್ಲಿಯೇ ಬರುತ್ತದೆ. ಜಿಜ್ಞಾಸಾ ಎಂದರೆ 'ಜಿಜ್ಞಾಸಾಪ್ರಯೋಜ್ಯೋವಿಚಾರೋಲಕ್ಷ್ಯತೇ' ಎಂದು ಬಾಲಮನೋರಮಾಕಾರರು ಹೇಳುವಂತೆ, ಪೂರ್ವಾಪರ ವಿಶ್ಲೇಷಣರೂಪವಾದ ವಿಚಾರವೆಂದೇ ಅರ್ಥ. ಹೀಗೆ ಮೀಮಾಂಸಾ ಶಾಸ್ತ್ರ ಯಾವ ವಿಷಯವನ್ನೇ ತೆಗೆದುಕೊಂಡರೂ ಆ ವಿಷಯದ ಮಹತ್ವವೇನು? ಪೂರ್ವ ಪಕ್ಷವೇನು? ಅದರ ಸಾಧಕಬಾಧಕಗಳೇನು? ಈ ವಿಚಾರ ಇಲ್ಲೇಕೆ ಬಂತು? ಇತ್ಯಾದಿ ಸಕಲ ವಿಚಾರಗಳನ್ನೂ ಕೂಲಂಕಷವಾಗಿ ಚರ್ಚೆ ಮಾಡಿ ಕೊನೆಗೆ ಇದು ಹೀಗೆಯೇ ಸರಿ ಎಂಬ ಒಂದು ಸಿದ್ಧಾಂತಕ್ಕೆ ಬರುತ್ತದೆ; ಅಷ್ಟೇ ಹೊರತು, ಏನೋ ಹೇಳಿ ಆ ವಿಚಾರವನ್ನು ಮುಗಿಸಿ ಬಿಡುವುದಿಲ್ಲ. ಆದಕಾರಣ ಈ ಶಾಸ್ತ್ರದಲ್ಲಿ ಅಧ್ಯಾಯದಿಂದ ಆರಂಭಿಸಿ ಸೂತ್ರದವರೆಗೆ ಪ್ರತಿಯೊಂದು ವಿಭಾಗಕ್ಕೂ ಒಂದು ವಿಶೇಷ ಮಹತ್ವವಿದೆ, ಒಂದೊಂದಕ್ಕೂ ಆಯಾ ಸ್ಥಾನದಲ್ಲೇ ಬರುವುದಕ್ಕೆ ಕಾರಣ ವಿಶೇಷವೂ ಇರುತ್ತದೆ. ಆ ಭಾಗಗಳಾವುವು? ಅವುಗಳ ಸ್ಥಾನವೇನು ಎಂಬ ವಿಚಾರಕ್ಕೆ ಹೋಗೋಣ.

7. ಅಧ್ಯಾಯಾದಿ ವಿಭಾಗಗಳು : ಈ ಶಾಸ್ತ್ರವು ವಿಚಾರಣೆಗಾಗಿ ಯಾವ ಯಾವ ಮುಖ್ಯ ವಿಚಾರಗಳನ್ನು ಆರಿಸಿಕೊಳ್ಳುವದೋ ಅವುಗಳೇ ಅಧ್ಯಾಯದ ವಿಷಯಗಳಾಗುತ್ತವೆ. ಅಲ್ಲದೆ ಒಂದು ಅಧ್ಯಾಯದಲ್ಲಿ ಮತ್ತೊಂದು ಅಧ್ಯಾಯದ ವಿಚಾರವನ್ನು ಬೆರೆಸುವುದೇ ಇಲ್ಲ. ಹೀಗೆ ಪ್ರತಿಯೊಂದು ಅಧ್ಯಾಯವೂ ಬಿಗಿಯಾಗಿಯೂ ಹೊಂದಿಕೆಯಾಗಿಯೂ ಇರುತ್ತದೆ. ಪೂರ್ವ ಮೀಮಾಂಸೆಯು ಹನ್ನೆರಡು ವಿಚಾರಗಳನ್ನು ನಿರೂಪಿಸುವುದರಿಂದ ಅದು 'ದ್ವಾದಶಾಧ್ಯಾಯ' ಗಳುಳ್ಳದ್ದಾಗಿದೆ. ಉತ್ತರ ಮೀಮಾಂಸೆಯು ನಾಲ್ಕೇ ವಿಚಾರಗಳನ್ನು ಗ್ರಹಣ ಮಾಡಿದ್ದರಿಂದ ಅದು ಅಧ್ಯಾಯ ಚತುಷ್ಟಾತ್ಮಕವಾಗಿದೆ. ಅಲ್ಲಿಂದ ಮುಂದೆ ವಿಚಾರಣೆಗಾಗಿ ಆರಿಸಿಕೊಂಡ ಆಯಾ ಪ್ರಧಾನ ವಿಷಯಗಳನ್ನೇ ಪುನಃ ನಾಲ್ಕು ಸಣ್ಣ-ಸಣ್ಣ ವಿಭಾಗಗಳಾಗಿ ಹಂಚಿಕೊಂಡು ನಿರೂಪಣೆ ಮಾಡುತ್ತದೆ. ಇಂಥಾ ಒಂದೊಂದು ಸಣ್ಣ ವಿಭಾಗಕ್ಕೂ ಪಾದ(ಕಾಲುಭಾಗ)ವೆಂದು ಹೆಸರು. ಕೆಲವು ವೇಳೆ ವಿಷಯವು ಬಹಳ ಮಹತ್ವದ್ದಾಗಿದ್ದು ನಾಲ್ಕು ಪಾದಗಳಲ್ಲೇ ಮುಗಿಯದೇ ಹೋಗುವಹಾಗಿದ್ದರೆ ಒಂದು ಅಧ್ಯಾಯವನ್ನು ಎಂಟು ಪಾದಗಳಾಗಿಯೂ ವಿಭಾಗಿಸಿಕೊಳ್ಳುವುದುಂಟು. ಆಗ ಅಂಥಾ ಅಧ್ಯಾಯಗಳನ್ನು ಶರಭಾಧ್ಯಾಯಗಳೆನ್ನುತ್ತಾರೆ. ಏಕೆಂದರೆ ಶರಭಕ್ಕೆ ಎಂಟು ಕಾಲುಗಳಿವೆಯಂತೆ. (ಉದಾ: 'ಅಷ್ಟಪಾದಃ ಶರಭಃ ಸಿಂಹಘಾತೀ' ಶರಭಕ್ಕೆ

ಎಂಟು ಕಾಲುಗಳುಂಟು, ಅದು ಸಿಂಹವನ್ನೇ ಕೊಲ್ಲುತ್ತದೆ ಎಂದು ಮಹಾಭಾರತದಲ್ಲಿ ಹೇಳಿದೆ.) ಪೂರ್ವಮೀಮಾಂಸಾ ಸೂತ್ರಗಳಲ್ಲಿ ಮೂರನೇ, ಆರನೇ ಮತ್ತು ಹತ್ತನೇ ಅಧ್ಯಾಯ ಗಳು ಎಂಟೆಂಟು ಪಾದಗಳುಳ್ಳವಾದ್ದರಿಂದ ಅವು ಶರಭಾಧ್ಯಾಯಗಳು.

ಇನ್ನೂ ಮುಂದೆ ಹೋದರೆ ಪ್ರತಿಯೊಂದು ಪಾದದಲ್ಲೂ ಆಯಾ ಪಾದದ ಪ್ರಧಾನ ವಿಚಾರಕ್ಕೆ ಹೊಂದಿಕೆಯಾದ ಅನೇಕ ಬಿಡಿಬಿಡಿಯಾದ ವಿಚಾರಗಳನ್ನು ವಿಮರ್ಶಿಸಲಾಗುವುದು. ವಿಚಾರ ಮಾಡಲ್ಪಟ್ಟ ಇಂಥಾ ಒಂದೊಂದು ವಿಚಾರದ ಬಿಡಿಬಿಡಿ ವಿಚಾರಕ್ಕೂ ಅಧಿಕರಣವೆಂದು ಹೆಸರು. ಒಂದೊಂದು ವಿಚಾರದ (ಅಧಿಕರಣದ) ಹಿಂದೆಯೂ ಒಂದೊಂದು ಯುಕ್ತಿಸಂಗತ ವಾದ ವಿಚಾರಸರಣಿಯಿರುತ್ತದೆ; ಅದನ್ನೇ ನಯ ಅಥವಾ ನ್ಯಾಯಗಳೆನ್ನುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಧಿಕರಣಗಳನ್ನೇ ನಯ ಅಥವಾ ನ್ಯಾಯಗಳೆಂದು ಕರೆಯುವದೂ ಉಂಟು.

8. ಅಧಿಕರಣಗಳು : ಅಧಿಕರಣವೆಂದರೆ ಸ್ಥೂಲವಾಗಿ 'ನೆಲೆ, ಆಸರೆ ಅಥವಾ ಆಶ್ರಯ' ಎಂದರ್ಥ. ಅಧಿಕರಣವೆಂಬ ಈ ಶಾಸ್ತ್ರವಿಭಾಗವು ಆಯಾ ಅಧ್ಯಾಯಕ್ಕೂ ಪಾದಕ್ಕೂ ಸಂಬಂಧಪಟ್ಟ ಒಂದೊಂದು ಮುಖ್ಯ ವಿಚಾರಕ್ಕೆ ಮಾತ್ರವಲ್ಲದೆ, ಅದನ್ನು ಸ್ಥಾಪಿಸುವ ಯುಕ್ತಿಗೂ (ನ್ಯಾಯಕ್ಕೂ) ಆಸರೆಯಾಗಿರುವದರಿಂದಲೇ ಅದಕ್ಕೆ ಈ ಹೆಸರು ಅನ್ವರ್ಥವಾಗಿ ಬಂದಿದೆ. ಒಟ್ಟಿನಲ್ಲಿ ಪ್ರತಿಯೊಂದು ಅಧಿಕರಣವೂ ಅದರ ಲಕ್ಷಣವನ್ನು ತಿಳಿಸುವ ಈ ಕಾರಿಕೆಯು (ಶ್ಲೋಕವು) ಹೇಳುವಂತೆ ಐದು (೫) ವಿಚಾರಗಳನ್ನು ಒಳಗೊಂಡಿರಬೇಕು:

ವಿಷಯೋ ವಿಶಯಶ್ಚೈವ ಪೂರ್ವಪಕ್ಷಸ್ತಥೋತ್ತರಃ |
ಪ್ರಯೋಜನಂ ಸಂಗತಿಶ್ಚ ಶಾಸ್ತ್ರೇಽಧಿಕರಣಂ ಸ್ಮೃತಮ್ ||

೧. ವಿಷಯ : ವಿಚಾರಣೀಯವಾದ ಮುಖ್ಯಪ್ರಮೇಯ. ೨. ವಿಶಯ : ಸಂಶಯಃ ಅದರ ಬಗ್ಗೆ ಈ ರೀತಿ ಸಂಶಯ ಏಕೆ ಬಂದಿತೆಂಬ ವಿಚಾರ. ೩. ಪೂರ್ವಪಕ್ಷ ಮುಖ್ಯ ವಿಷಯವನ್ನೇ ನಿರಾಕರಿಸುವ, ಸಂಶಯವನ್ನೇ ಸಮರ್ಥಿಸುವ, ಪರಪಕ್ಷೀಯ ಯುಕ್ತಿಗರ್ಭಿತ ವಾದ ವಿಚಾರಗಳು. ೪. ಉತ್ತರ– ಪೂರ್ವಪಕ್ಷಕ್ಕೆ ಎದುರಾಗಿ ಹೇಳಿದ ನಮ್ಮ (ಸಿದ್ಧಾಂತದ) ಯುಕ್ತಿಗಳು. ೫. ಸಂಗತಿ—ಈ ಅಧಿಕರಣವು ಈ ಅಧ್ಯಾಯದಲ್ಲೇ ಏಕೆ ಬಂತು? ಈ ಪಾದ ದಲ್ಲೇ ಏಕೆ ಬಂತು? ಹಿಂದಿನ ಅಧಿಕರಣಕ್ಕೂ ಈ ಅಧಿಕರಣಕ್ಕೂ ಏನು ಸಂಬಂಧ? ಇತ್ಯಾದಿ ವಿಚಾರಗಳು; ಇವಿಷ್ಟೂ ಅಧಿಕರಣದಲ್ಲಿರಬೇಕು. ಕೆಲವು ಅಧಿಕರಣಗಳಲ್ಲಿ ಒಂದೊಂದೇ ಸೂತ್ರವಿರುವುದೂ ಉಂಟು. ಕೆಲವುಗಳಲ್ಲಿ ಎರಡು ಮೂರು ಅಥವಾ ಇನ್ನೂ ಹೆಚ್ಚು ಸೂತ್ರಗಳಿರಬಹುದು.

9. ಸೂತ್ರಗಳ ಲಕ್ಷಣ : ಪೂರ್ವಮೀಮಾಂಸಾ ಶಾಸ್ತ್ರಕ್ಕೆ ಜೈಮಿನಿಯ ಸೂತ್ರಗಳು ಮೂಲವಾದರೆ ಉತ್ತರ ಮೀಮಾಂಸಾಶಾಸ್ತ್ರಕ್ಕೆ ಬಾದರಾಯಣರ ಬ್ರಹ್ಮಸೂತ್ರಗಳೇ ಮೂಲ. ಆದಕಾರಣ ಸೂತ್ರಗಳ ಲಕ್ಷಣಗಳನ್ನು ತಿಳಿದುಕೊಳ್ಳಬೇಕು. ಶ್ರೀಮದಾಚಾರ್ಯರೇ ತಮ್ಮ ಸೂತ್ರಭಾಷ್ಯದಲ್ಲಿ ಸೂತ್ರದ ಲಕ್ಷಣ ಹೇಳಿದ್ದಾರೆ; ಇದು ಸ್ಕಾಂದಪುರಾಣದ ವಚನ :

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್ |
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ||

ಹೇಳಬೇಕಾದ ವಿಷಯವನ್ನು ಅತಿ ಕನಿಷ್ಠ ಶಬ್ದಗಳಲ್ಲಿ ಹೇಳುವ, ಆದರೂ ಸಂಶಯಕ್ಕೆ ಅವಕಾಶವಿಲ್ಲದಂತೆ ಹೇಳಿರುವ, ಸಾರವತ್ತಾದ, ಎಲ್ಲ ವಿಚಾರಗಳಿಗೂ (ಅನೇಕ ವಿಚಾರಗಳಿಗೆ) ಅನ್ವಯಿಸುವಂತಿರುವ, ವ್ಯರ್ಥವಾದ (ಸ್ತೋಭ) ಅಕ್ಷರಗಳಿಲ್ಲದಂಥಾ, ನಿರ್ದುಷ್ಟವಾದ ಹೇಳಿಕೆಗೆ ಸೂತ್ರವೆಂದು ಜ್ಞಾನಿಗಳು ಹೇಳುತ್ತಾರೆ ಎಂಬುದು ಈ ಲಕ್ಷಣದ ಸಾಮಾನ್ಯಾರ್ಥ. ಹೀಗೆ ಸೂತ್ರಗಳು ಎಣಿಸುವಷ್ಟು ಅತ್ಯಲ್ಪ ಅಕ್ಷರಗಳಿಂದ ಕೂಡಿದ್ದರೂ ಅವುಗಳು ತಿಳಿಸುವ ವಿಚಾರ ಮಹತ್ತರವಾಗಿರುತ್ತವೆ. ಒಟ್ಟಿನಲ್ಲಿ ಮೀಮಾಂಸಾಶಾಸ್ತ್ರದಲ್ಲಿ ಸೂತ್ರಗಳು, ಅಧಿಕರಣ ಗಳು, ಪಾದಗಳು ಮತ್ತು ಅಧ್ಯಾಯಗಳು ಒಂದಕ್ಕಿಂತ ಮತ್ತೊಂದು ದೊಡ್ಡ ದೊಡ್ಡ ವಿಭಾಗ ಗಳು. ಹೀಗೆ ಎರಡಕ್ಕೂ ಸಾಮಾನ್ಯವಾದ ವಿಚಾರಗಳನ್ನು ತಿಳಿಸಿದ ಬಳಿಕ ಈಗ ಎರಡರಲ್ಲೂ ನಿರೂಪಣೆ ಮಾಡಿರುವ ವಿಷಯಗಳಿಗೆ ಹೋಗುವೆವು.

10. ಪೂರ್ವಮೀಮಾಂಸಾ : ಮೇಲೆ ಹೇಳಿದಂತೆ (ಖಂಡ 9) ಜೈಮಿನಿಯ ಸೂತ್ರಗಳೇ ಪೂರ್ವಮೀಮಾಂಸಾ ಶಾಸ್ತ್ರಕ್ಕೆ ಮೂಲಾಧಾರ. ಈ ಸೂತ್ರಗಳು 'ಅಥಾತೋ ಧರ್ಮಜಿಜ್ಞಾಸಾ' ಎಂದು ಆರಂಭವಾಗುವುದರಿಂದ ಈ ಶಾಸ್ತ್ರವನ್ನು ಕ್ವಚಿತ್ ಧರ್ಮಮೀಮಾಂಸಾ ಎಂದು ಕರೆಯುತ್ತಾರೆ ಮತ್ತು ಇದರಲ್ಲಿ ಮುಖ್ಯವಾಗಿ ವೇದವಾಕ್ಯಗಳಿಗೆ ಹೇಗೆ ಅರ್ಥಮಾಡಬೇಕೆಂದು ವಿಚಾರಮಾಡಿ ಯಜ್ಞಯಾಗಾದಿ ವೈದಿಕ ಕರ್ಮಾನುಷ್ಠಾನಕ್ಕೆ ಈ ಸೂತ್ರಗಳು ಮಾರ್ಗದರ್ಶನ ಮಾಡುವುದರಿಂದ ಇದನ್ನು ಕರ್ಮಮೀಮಾಂಸಾ ಎಂದೂ ಅಥವಾ ಸುಮ್ಮನೆ ಮೀಮಾಂಸಾ ಶಾಸ್ತ್ರವೆಂದೂ ಹೇಳುವುದುಂಟು. ಜೈಮಿನಿಯ ಸೂತ್ರಗಳ ಒಟ್ಟು ಸಂಖ್ಯೆ ಎರಡು ಸಾವಿರದ ಆರುನೂರ ನಲವತ್ತನಾಲ್ಕು (2644) ಇದರಲ್ಲಿರುವ ಹನ್ನೆರಡು ಅಧ್ಯಾಯಗಳಿಗೆ ಕ್ರಮವಾಗಿ 1. ಪ್ರಮಾಣ, 2. ಕರ್ಮಭೇದ, 3. ಶೇಷ, 4. ಅರ್ಥಚಿಂತಾ, 5. ಕ್ರಮ, 6. ಅಧಿಕಾರ, 7. ಅತಿದೇಶ ಅಥವಾ ಸಾಮಾನ್ಯ, 8. ವಿಶೇಷ, 9. ಊಹ, 10. ಬಾಧ, 11. ತಂತ್ರ, 12. ಪ್ರಸಂಗ—ಎಂಬುವೇ ವಿಷಯಗಳು. ಈ ಪೈಕಿ 3,6,10ನೆಯ ಅಧ್ಯಾಯಗಳು ಶರಭಾಧ್ಯಾಯ ಗಳು. ಎಂದರೆ ಎಂಟೆಂಟು ಪಾದಗಳುಳ್ಳವು. ಮಿಕ್ಕವೆಲ್ಲ ನಾಲ್ಕು ನಾಲ್ಕು ಪಾದಗಳುಳ್ಳವು. ಹೀಗೆ ಹನ್ನೆರಡು ಅಧ್ಯಾಯಗಳಿಂದ ಒಟ್ಟು ಅರವತ್ತು ಪಾದಗಳಿವೆ. ಸೂತ್ರಗಳು ಅಲ್ಪಾ ಕ್ಷರಗಳುಳ್ಳವಾದ್ದರಿಂದ ಅವುಗಳ ವಿವರಣರೂಪವಾಗಿ ದೊಡ್ಡ ಸಾಹಿತ್ಯವೇ ಬೆಳೆದಿದೆ. ಅದರ ಬಹು ಸಂಕ್ಷಿಪ್ತ ವಿವರಣೆಯೇ ಹೀಗಿದೆ—

11. ಮೀಮಾಂಸಾ ಸಾಹಿತ್ಯ : ಸೂತ್ರಗಳ ಅರ್ಥವನ್ನು ಮಿತವಾಗಿ ಗದ್ಯರೂಪದಲ್ಲಿ ಹೇಳುವ ಗ್ರಂಥಗಳಿಗೆ ವೃತ್ತಿಗಳೆಂದು ಹೆಸರು. ಈಗ ಉಪವರ್ಷರ ವೃತ್ತಿಯೊಂದು ಮಾತ್ರ ಉಳಿದಿದೆ. ಸೂತ್ರದ ಅರ್ಥವನ್ನು ಮಾತ್ರವಲ್ಲದೇ ಪೂರ್ವಪಕ್ಷ ಸಿದ್ಧಾಂತಗಳನ್ನೂ ತಿಳಿಸುವ ಸಂಗ್ರಹವಾದ ವಿವರಣೆಗೆ ಭಾಷ್ಯವೆಂದು ಹೆಸರು. ಭಾಷ್ಯದ ಲಕ್ಷಣವನ್ನು ಪ್ರಸಿದ್ಧವಾದ ಈ ಕಾರಿಕೆ ತಿಳಿಸುತ್ತದೆ—

ಸೂತ್ರಾರ್ಥೋ ವರ್ಣ್ಯತೇ ಯತ್ರ ಪದೈಃ ಸೂತ್ರಾನುಕಾರಿಭಿಃ |
ಸ್ವಪದಾನಿ ಚ ವರ್ಣ್ಯಂತೇ ಭಾಷ್ಯಂ ಭಾಷ್ಯ ವಿದೋ ವಿದುಃ ||

(ಅರ್ಥ) ಯಾವ ಗ್ರಂಥದಲ್ಲಿ ಸೂತ್ರಗಳ ಅರ್ಥವು ಸೂತ್ರಗಳಂತೆಯೇ ಬಹು ಮಿತವಾದ

ಶಬ್ದಗಳಿಂದ ವರ್ಣಿಸಲ್ಪಡುತ್ತದೋ ಮತ್ತು ಸೂತ್ರದಲ್ಲಿ ಸೂಚಿತವಾದ ಪೂರ್ವಪಕ್ಷ-ಸಿದ್ಧಾಂತಗಳನ್ನು ತಮ್ಮ ಸ್ವಂತ ಮಾತುಗಳಿಂದ ಎಲ್ಲಿ ಹೇಳಿದೆಯೋ ಅದನ್ನೇ ಭಾಷ್ಯವೆಂದು ಭಾಷ್ಯವಿಚಾರ ತಿಳಿದ ಅಭಿಜ್ಞರು ಹೇಳುತ್ತಾರೆ. ಈಗ ಜೈಮಿನಿ ಸೂತ್ರಗಳಿಗೆ ಉಳಿದಿರುವುದು ಶಾಬರಭಾಷ್ಯವೊಂದೇ. ಶಾಬರಭಾಷ್ಯಕ್ಕೆ ವಿವರಣೆಯಾಗಿ ಕುಮಾರಿಲಭಟ್ಟರು ವಾರ್ತಿಕವನ್ನೂ ಪ್ರಭಾಕರರು ವ್ಯಾಖ್ಯಾನವನ್ನೂ ಬರೆದಿದ್ದಾರೆ. (ನಮ್ಮ ವೇದಾಂತ ಗ್ರಂಥಗಳಲ್ಲಿ ಕುಮಾರಿಲ ಭಟ್ಟರೂ ಅವರ ಅನುಯಾಯಿಗಳೂ ಹೇಳುವ ವಿಚಾರಗಳನ್ನು ಭಾಟ್ಟಾಃ ಎಂದೂ, ಪ್ರಭಾ ಕರರೂ ಅವರ ಅನುಯಾಯಿಗಳೂ ಹೇಳುವ ವಿಚಾರಗಳನ್ನು ಪ್ರಭಾಕರಾಃ ಎಂದೂ ನಿರ್ದೇಶಿಸು ತ್ತಾರೆ.) ಇವರಿಬ್ಬರ ಗ್ರಂಥಗಳ ಮೇಲೆ ಪುನಃ ವ್ಯಾಖ್ಯಾನರೂಪವಾಗಿ ಅನೇಕ ಟೀಕೆಗಳೂ ಬರೆಯಲ್ಪಟ್ಟಿವೆಯಲ್ಲದೆ ಸ್ವತಂತ್ರವಾಗಿಯೂ ಬೇರೆ ಗ್ರಂಥಗಳೂ ರಚಿಸಲ್ಪಟ್ಟಿವೆ. ಹೀಗೆ ಪೂರ್ವ ಮೀಮಾಂಸಾಶಾಸ್ತ್ರವು ಶಾಖೋಪಶಾಖೆಯಾಗಿ ಬೆಳೆದು ಹಬ್ಬಿಕೊಂಡಿದೆ.*

ಬ್ರಹ್ಮಸೂತ್ರಗಳ ಅರ್ಥನಿರ್ಣಯ ಮಾಡುವಾಗ, ತತ್ತ್ವಪ್ರಕಾಶಿಕಾ, ಸುಧಾದಿ ಟೀಕಾ ಗ್ರಂಥ ಗಳಲ್ಲಿ, ಚಂದ್ರಿಕಾದಿ ಗ್ರಂಥಗಳಲ್ಲಿ ಈ ಮೀಮಾಂಸಾ ಪ್ರಕ್ರಿಯೆಗಳನ್ನು ಯಥೇಷ್ಟವಾಗಿ ಬಳಸ ಲಾಗಿದೆ. ಇದು ತಿಳಿಯದಿದ್ದರೆ ಅವು 'ಕಬ್ಬಿಣದ ಕಡಲೆ'ಯಾಗುವುದರಲ್ಲಿ ಸಂದೇಹವಿಲ್ಲ.

12. ಉತ್ತರ ಮೀಮಾಂಸಾ : ಜೈಮಿನಿಗಳು ಧರ್ಮದ ಬಗ್ಗೆಯೂ ಕರ್ಮದ ಬಗ್ಗೆಯೂ ಬೇಕಾದಷ್ಟು ವಿಚಾರಗಳನ್ನು ತಿಳಿಸಿದರೂ ಅವರು ಆ ಧರ್ಮಕ್ಕೂ ಆ ಕರ್ಮಗಳಿಗೂ ನಿಯಾ ಮಕನಾದ, ಪ್ರಧಾನನಾದ ಭಗವಂತನ ಅಥವಾ ಪರಬ್ರಹ್ಮನ ವಿಚಾರವನ್ನು ಮಾತ್ರ ಸ್ವಲ್ಪವೂ ಸಹ ಮಾಡಲಿಲ್ಲ. ಹೀಗೆ ಜೈಮಿನಿಗಳು ವಿಚಾರಮಾಡದೇ ಬಿಟ್ಟ ಪರಬ್ರಹ್ಮನ ವಿಚಾರವನ್ನೇ ಬಾದರಾಯಣರು ತಮ್ಮ ಸೂತ್ರಗಳಲ್ಲಿ ಮಾಡಿರುವುದರಿಂದ ಈ ಶಾಸ್ತ್ರಕ್ಕೆ ಉತ್ತರ ಮೀಮಾಂಸಾಶಾಸ್ತ್ರವೆಂಬ ಹೆಸರು ಬಂತು ಮತ್ತು ಇದರ ಪ್ರಥಮ ಸೂತ್ರವು 'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಬ್ರಹ್ಮಶಬ್ದದಿಂದ ಆರಂಭವಾಗುವುದರಿಂದ ಇದನ್ನು ಬ್ರಹ್ಮ ಮೀಮಾಂಸಾಶಾಸ್ತ್ರವೆಂದೂ ಕರೆಯುತ್ತಾರೆ. ಅಲ್ಲದೆ ಈ ಸೂತ್ರಗಳಿಗೂ ಬ್ರಹ್ಮಸೂತ್ರಗಳೆಂಬ ಹೆಸರು ಪ್ರಸಿದ್ಧಿಗೆ ಬಂತು.

ಆದರೆ ನಮ್ಮ ದ್ವೈತಸಿದ್ಧಾಂತ ರೀತ್ಯಾ ಇದಕ್ಕೆ ಹೇಗೆ ಅರ್ಥಮಾಡಬೇಕೆಂಬುದನ್ನು ಶ್ರೀಮಟ್ಟೀಕಾರಾಯರು ನ್ಯಾಯಸುಧಾದಲ್ಲಿ (ಜಿಜ್ಞಾಸಾಧಿಕರಣದಲ್ಲಿ) ತೋರಿಸಿಕೊಟ್ಟಿದ್ದಾರೆ.

"ಬ್ರಹ್ಮವೇದಸ್ತದರ್ಥಃ ಪರಬ್ರಹ್ಮವಾ | ತಸ್ಯ ಸೂತ್ರಾಣಿ ಸಕಲವೇದಾರ್ಥಭೂತಸ್ಯ ಪರಬ್ರಹ್ಮಣೋ ವಿಷ್ಣೋಃ ಸ್ವರೂಪನಿರ್ಣಯಾರ್ಥಾನಿ ಸೂತ್ರಾಣೀತಿ ಯಾವತ್ ||" ಬ್ರಹ್ಮ ಎಂದರೆ ವೇದ ಎಂದರ್ಥ. ಪರಂಪರಯಾ ಆ ವೇದಗಳ ಮುಖ್ಯಾರ್ಥನಾದ ವಿಷ್ಣುವಿಗೂ ಬ್ರಹ್ಮನೆಂದೇ ಹೆಸರು. ಇದನ್ನೇ ಭಾಷ್ಯದಲ್ಲಿ 'ಬ್ರಹ್ಮ-ಶಬ್ದಶ್ಚ ವಿಷ್ಣಾವೇವ' ಎಂದು ಹೇಳಿ ದ್ದಾರೆ. ಅದಕ್ಕೆ 'ಬ್ರಹ್ಮ'ಶಬ್ದವು ಮುಖ್ಯವಾಗಿ ವಿಷ್ಣುಪ್ರತಿಪಾದಕವೇ ಆಗಿದೆ" ಎಂದರ್ಥ. ಅಂಥಾ ಬ್ರಹ್ಮವೆಂಬ ವೇದದಿಂದ ತಿಳಿಯಬೇಕಾದ ಬ್ರಹ್ಮನೆಂಬ ವಿಷ್ಣುವಿನ ಅನಂತ ಗುಣ

* ಮೀಮಾಂಸಾಸಂಬಂಧಿ ಈ ಅನೇಕ ವಿಚಾರಗಳನ್ನು ನಾವು ಸ್ವರ್ಗೀಯ ದೇವುಡು ರಚಿತ 'ಮೀಮಾಂಸಾ ದರ್ಪಣ'ದಿಂದ (೧೯೩೮) ಸಂಗ್ರಹಿಸಿಕೊಂಡಿದ್ದೇವೆ.

ಗಳನ್ನು ಪ್ರತಿಪಾದಿಸುತ್ತ ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸುವ ಸೂತ್ರಗಳಾದ್ದರಿಂದ ಈ ಸೂತ್ರಗಳಿಗೆ ಬ್ರಹ್ಮಸೂತ್ರ ಗಳೆಂಬ ಹೆಸರು ಎಂದು ತಿಳಿಯಬೇಕು.

13. ಸೂತ್ರಕಾರರು ಯಾರು ?: ಬ್ರಹ್ಮಸೂತ್ರಗಳನ್ನು ರಚಿಸಿದವರು ಬಾದರಾಯಣರೆಂದು ಪ್ರಸಿದ್ಧಿಯಿದ್ದರೂ ಆ ಬಾದರಾಯಣರೇ ಯಾರು ಎಂಬ ಬಗ್ಗೆ ಇತರರಲ್ಲಿ ಭಿನ್ನಾಭಿಪ್ರಾಯ ಗಳಿವೆ. ಕೆಲವರು ಈ ಬಾದರಾಯಣರನ್ನು ಕೇವಲ ಒಬ್ಬ ಸಾಮಾನ್ಯ ಋಷಿಗಳೆಂದು ಹೇಳು ತ್ತಾರೆ. ಆದರೆ ನಮ್ಮ ಶ್ರೀಮದಾಚಾರ್ಯರು ಮಾತ್ರ ಸಾಕ್ಷಾನ್ನಾರಾಯಣನ ಅವತಾರವೇ ಆದ ವೇದವ್ಯಾಸರೇ ಬಾದರಾಯಣರೆಂದೂ ಸರ್ವಜ್ಞರಾದ ಅವರೇ ಬ್ರಹ್ಮಸೂತ್ರಗಳನ್ನು ವೇದಾರ್ಥನಿರ್ಣಯಕ್ಕಾಗಿ ರಚಿಸಿದರೆಂದೂ ಸೂತ್ರಭಾಷ್ಯದಲ್ಲಿ ಹೇಳಿ ತಮ್ಮ ಹೇಳಿಕೆಯನ್ನು ಸ್ಕಾಂದಪುರಾಣದ ಪ್ರಮಾಣದಿಂದ ಸಮರ್ಥಿಸಿಯೂ ಇದ್ದಾರೆ. ಜೊತೆಗೆ ಬ್ರಹ್ಮಸೂತ್ರಗಳನ್ನು ರಚಿಸಿದವರು ನಾರಾಯಣಾವತಾರರಾದ ವೇದವ್ಯಾಸರಾದ್ದರಿಂದಲೇ ಅವುಗಳಿಗೆ ಆಪ್ತಿಮೂಲತ್ವ ಸಿದ್ಧಿಸುವುದೆಂದೂ ಆದರಿಂದ ಅವುಗಳ ಪ್ರಾಮಾಣ್ಯವು ಹೆಚ್ಚಾಗುವದೆಂದೂ ಅನುವ್ಯಾಖ್ಯಾನ ದಲ್ಲಿ (ಅಧ್ಯಾ ೧, ಪಾ. ೧, ಜಿಜ್ಞಾಸಾಧಿಕರಣ, ಶ್ಲೋಕ ೫೭) ಪ್ರತಿಪಾದಿಸಿ ತೋರಿಸಿದ್ದಾರೆ. (ಮುಂದೆ ಖಂಡ 33-34 ನೋಡಿ.)

14. ಸೂತ್ರಭಾಷ್ಯಗಳು : ಶ್ರೀಮದಾಚಾರ್ಯರು ಬ್ರಹ್ಮಸೂತ್ರ ಭಾಷ್ಯವನ್ನು ರಚಿಸುವುದಕ್ಕೆ ಪೂರ್ವದಲ್ಲಿಯೇ ಇಪ್ಪತ್ತೊಂದು ಬೇರೆ ಬೇರೆ ಭಾಷ್ಯಗಳು ರಚಿತವಾಗಿದ್ದುವೆಂದು ಸುಮಧ್ವ ವಿಜಯ(೯ ಸರ್ಗ, ೧೨ ಶ್ಲೋ.)ದಿಂದ ಗೊತ್ತಾಗುತ್ತದೆ. ಹೀಗೆ ಇಪ್ಪತ್ತೊಂದು ಭಾಷ್ಯಗಳಿದ್ದರೂ ಮೂಲ ಸೂತ್ರಕಾರರ ಅಭಿಪ್ರಾಯವನ್ನು ಬೇರೆ ಯಾವ ಭಾಷ್ಯವೂ ಪ್ರಕಟಿಸುತ್ತಿರಲಿಲ್ಲ ವೆಂಬುದು "ಅನ್ಯೈರನ್ಯಥಾವ್ಯಾಖ್ಯಾತಾನಿ"–'ಇತರರಿಂದ ಬೇರೆ ರೀತಿಯಲ್ಲೇ ವ್ಯಾಖ್ಯಾನ ಮಾಡಲ್ಪಟ್ಟದ್ದರಿಂದ' ಎಂಬ ತತ್ವಪ್ರಕಾಶಿಕಾ ವಾಕ್ಯದಿಂದಲೂ "ಅಸಾಧು ನಿಬಂಧಾಂಧತಮಸಾ ವಗುಂಠಿತತ್ವೇನ ಅಪ್ರಣೀತಮಿವ ಮನ್ಯಮಾನಃ" 'ಅಯೋಗ್ಯ ವ್ಯಾಖ್ಯಾನಗಳೆಂಬ ಕಗ್ಗತ್ತಲಿ ನಿಂದ ಮುಚ್ಚಲ್ಪಟ್ಟಿತ್ತಾದ್ದರಿಂದ (ವ್ಯಾಖ್ಯಾನಗಳಿದ್ದರೂ) ವ್ಯಾಖ್ಯಾನ ಬರೆಯದೇ ಇದ್ದಂತೆ ಎಂದು ತಿಳಿದು' ಎಂಬ ಸುಧಾ ವಾಕ್ಯದಿಂದಲೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಂಥಾ ಇಪ್ಪ ತ್ತೊಂದು ಭಾಷ್ಯಗಳು ಯಾವುವೆಂದರೆ : 1. ಭಾರತೀ ವಿಜಯ, 2. ಸಂವಿದಾನಂದ, 3. ಬ್ರಹ್ಮಘೋಷ, 4. ಶತಾನಂದ, 5. ಉದ್ವರ್ತ, 6. ವಿಜಯ 7. ರುದ್ರಭಟ್ಟ, 8. ವಾಮನ, 9. ಯಾದವ ಪ್ರಕಾಶ 10. ರಾಮಾನುಜ, 11. ಭರ್ತೃಪ್ರಪಂಚ, 12. ದ್ರವಿಡ, 13. ಬ್ರಹ್ಮ ದತ್ತ, 14. ಭಾಸ್ಕರ, 15. ಪಿಶಾಚ, 16. ವೃತ್ತಿಕಾರ, 17. ವಿಜಯಭಟ್ಟ, 18. ವಿಷ್ಣುಕ್ರಾಂತ, 19. ವಾದೀಂದ್ರ, 20. ಮಾಧವದಾಸ, 21. ಸಂಕರ—ಹೀಗೆ ಇಪ್ಪತ್ತೊಂದು ಭಾಷ್ಯಗಳ ಹೆಸರು ದೊರಕುತ್ತದೆಯಾದರೂ ಶಂಕರರ ಅದ್ವೈತ ಸಿದ್ಧಾಂತದ ಶಾರೀರಿಕ ಭಾಷ್ಯ ಮತ್ತು ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತದ ಶ್ರೀಭಾಷ್ಯ ಈ ಎರಡನ್ನು ಬಿಟ್ಟರೆ ಬೇರೆ ಯಾವ ಭಾಷ್ಯದ ಯಾವ ಭಾಗವೂ ಈಗ ಉಪಲಭ್ಯವಾಗಿಲ್ಲ. ಮೇಲೆ ಹೇಳಿದಂತೆ ಈ ಇಪ್ಪತ್ತೊಂದು ಭಾಷ್ಯಗಳೂ ಬಾದರಾಯಣರ ಅಭಿಪ್ರಾಯವನ್ನು ತಿಳಿಸುತ್ತಿರಲಿಲ್ಲವಾದ್ದರಿಂದ ಆ ವೇದವ್ಯಾಸದೇವರ ಮತ್ತು ಬದರೀನಾರಾಯಣದೇವರ ಅಪ್ಪಣೆಯಾದ್ದರಿಂದಲೇ

ಶ್ರೀಮದಾಚಾರ್ಯರು ಇಪ್ಪತ್ತೆರಡನೆಯ ಭಾಷ್ಯವನ್ನು ರಚಿಸಿದರೆಂದು ಮಧ್ವವಿಜಯದಿಂದ ತಿಳಿದುಬರುತ್ತದೆ. (ಸರ್ಗ ೮, ಶ್ಲೋ. ೪೫-೪೭) ಈ ವಿಚಾರವನ್ನೇ ಜಗನ್ನಾಥದಾಸರಾಯರು ಹರಿಕಥಾಮೃತಸಾರದಲ್ಲಿ (ಸಂಧಿ ೧, ಪದ್ಯ ೮) ಕ್ಷಿತಿಯೊಳಗೆ ಮಣಿಮಂತ ಮೊದಲಾದತಿ ದುರಾತ್ಮರು ಒಂದಧಿಕ ವಿಂ- | ಶತಿ ಕುಭಾಷ್ಯವ ರಚಿಸೆ' (ಒಂದಧಿಕ ವಿಂಶತಿ—ಇಪ್ಪತ್ತೊಂದು) ಎಂಬ ಪದ್ಯದಿಂದ ಹೇಳಿದ್ದಾರೆ. ಹಾಗಾದರೆ ಈ ಮಧ್ವಾಚಾರ್ಯರು ಯಾರು? ಅವರು ಇಪ್ಪತ್ತೆರಡನೆಯ ಭಾಷ್ಯವನ್ನು ರಚಿಸಲು ಹಿನ್ನೆಲೆಯೇನು? ಎಂಬ ಪ್ರಶ್ನೆ ಬರುವದು ಸಹಜವಾಗಿದೆ. ಈಗ ಆ ವಿಚಾರಕ್ಕೆ ಹೋಗೋಣ.

15. ಮಧ್ವಾಚಾರ್ಯರು ಯಾರು ?: ಮಧ್ವವಿಜಯದ ಒಂದನೇ ಎರಡನೇ ಸರ್ಗಗಳಿಂದ ಈ ವಿಚಾರ ತಿಳಿಯುತ್ತದೆ. ಕಲಿಯುಗದಲ್ಲಿ ಅನೇಕ ಕುಮತಗಳು ಪ್ರಬಲಿಸಿ ಅನಾದಿ ಪರಂಪರಾ ಪ್ರಾಪ್ತವಾದ ವೈಷ್ಣವಸಿದ್ಧಾಂತವು ಮರೆಯಾಯಿತು. ಅದನ್ನು ಕಂಡು ಖಿನ್ನರಾದ ಬ್ರಹ್ಮ ರುದ್ರಾದಿ ದೇವತೆಗಳು ನಾರಾಯಣದೇವರನ್ನು ಸಜ್ಜನೋದ್ಧಾರಕ್ಕಾಗಿ ಪ್ರಾರ್ಥಿಸಿದರೆಂದೂ ಆಗ ನಾರಾಯಣನು ತಾನು ಕಲಿಯುಗದಲ್ಲಿ ಅವತಾರ ಮಾಡುವಂತಿರಲಿಲ್ಲವಾದ್ದರಿಂದಲೂ ಬ್ರಹ್ಮದೇವರಿಗೆ ಅವತಾರ ಮಾಡಲು ಅವಕಾಶವೇ ಇರಲಿಲ್ಲವಾದ್ದರಿಂದಲೂ, ವಾಯು ದೇವರಿಗೆ ಭೂಮಿಯಲ್ಲಿ ಅವತಾರ ಮಾಡಿ ಸಜ್ಜನರಿಗೆ ಸನ್ಮಾರ್ಗವನ್ನು ತೋರಿಸಿ ಅವರನ್ನು ಉದ್ಧಾರ ಮಾಡಲು ಅಪ್ಪಣೆ ಮಾಡಿದನು. ಅದರಂತೆ ವಾಯುದೇವರು ಭೂಮಿಯಲ್ಲಿ 'ಮಧ್ವಾಚಾರ್ಯ'ರಾಗಿ ಅವತಾರ ಮಾಡಿ ವೈಷ್ಣವಸಿದ್ಧಾಂತವನ್ನು ಎತ್ತಿಹಿಡಿದು ಧರ್ಮೋದ್ಧಾರ ಮಾಡಿದರು. ಇದು ಮಧ್ವವಿಜಯದಲ್ಲಿ ಹೇಳಿರುವ ವಿಚಾರ. ಮಧ್ವವಿಜಯದಲ್ಲಿ ಹೇಳಿರುವುದು ಮಾತ್ರವಲ್ಲ, ಸ್ವಯಂ ಶ್ರೀಮದಾಚಾರ್ಯರೇ ತಮ್ಮ ಗ್ರಂಥಗಳಲ್ಲಿ ಅನೇಕ ಕಡೆ "ಯಸ್ಯ ತ್ರೀಣ್ಯುದಿತಾನಿ ವೇದವಚನೇ–" (ಎಂದರೆ ಯಾರಿಗೆ ವೇದವಾಕ್ಯಗಳಲ್ಲೇ ಹನುಮ ಭೀಮ ಮಧ್ವ ಎಂಬ ಮೂರು ಅವತಾರಗಳಿವೆಯೆಂದು ಹೇಳಿದೆಯೋ) ಎಂಬ ಶ್ಲೋಕದಲ್ಲಿ ತಮ್ಮ ಮೂಲಸ್ವರೂಪವನ್ನು ಹೇಳಿಕೊಂಡಿದ್ದಾರಲ್ಲದೆ ತಮ್ಮ ಹೇಳಿಕೆಗೆ ಆಧಾರಭೂತವಾದ ಅನೇಕ ಶ್ರುತಿಸ್ಮೃತಿಗಳನ್ನು ಉದಾಹರಿಸಿದ್ದಾರೆ. ಇದರಿಂದ ವಾಯುದೇವರಿಗೆ ಹನುಮ ಭೀಮ ಮಧ್ವ ಎಂಬ ಮೂರು ಅವತಾರಗಳಿವೆಯೆಂದೂ, ತ್ರೇತಾಯುಗದಲ್ಲಿ ರಾಮದೇವರ ಸೇವೆಗಾಗಿ ಹನುಮಂತನಾಗಿ ಅವತರಿಸಿದನೆಂದೂ, ದ್ವಾಪರದಲ್ಲಿ ಕೃಷ್ಣನ ಸೇವೆಗಾಗಿ ಭೀಮಸೇನನಾಗಿ ಅವತರಿಸಿದನೆಂದೂ, ಕಲಿಯುಗದಲ್ಲಿ ದುರ್ಮತಗಳನ್ನು ಖಂಡಿಸಿ ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸುವುದಕ್ಕಾಗಿ ಮಧ್ವರಾಗಿ ಅವತರಿಸಿದರೆಂದೂ ತಿಳಿದು ಬರುತ್ತದೆ. ಈ ವಿಷಯದಲ್ಲಿ

ಪ್ರಥಮೋ ಹನು(ನೂ)ಮನ್ನಾಮ ದ್ವಿತೀಯೋ ಭೀಮ ಏವ ಚ |
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ || (ಭವಿಷ್ಯತ್ಪರ್ವ ವಚನ)

ಎಂಬ ಸ್ಮೃತಿಯು ಪ್ರಮಾಣವಾಗಿದೆ. ಈ ಅವತಾರತ್ರಯ ವರ್ಣನೆಯು ಆಚಾರ್ಯರ ಸಮಕಾಲೀನರಾದ ಪಂಡಿತಾಚಾರ್ಯರ ವಾಯುಸ್ತುತಿಯಲ್ಲೂ ಹರಿದಾಸಸಾಹಿತ್ಯದಲ್ಲೂ ಹೇರಳವಾಗಿ ಬಂದಿದೆ. ಲೌಕಿಕ ಸಾಹಿತ್ಯದಲ್ಲಿ ಮಾತ್ರವಲ್ಲದೇ ಋಗ್ವೇದದ ಬಳಿತ್ಥಾ ಸೂಕ್ತದಲ್ಲೂ (೧ನೇ ಮಂಡಲ ೧೪೧ನೇ ಸೂಕ್ತ) ವಾಯುದೇವರ ಈ ಅವತಾರತ್ರಯದ

ವರ್ಣನೆಯಿದೆ. ಎರಡನೇ ಮಂತ್ರದಲ್ಲಿ "ತೃತೀಯಮಸ್ಯ. . . ಜನಯಂತ ಯೋಷಣಃ" ಎಂದು ಸ್ಪಷ್ಟವಾಗಿ ಹೇಳಿದೆ. ಇದಕ್ಕೆ ಮೂರನೇ ಅವತಾರವಾದ ಪೂರ್ಣಪ್ರಜ್ಞರನ್ನು ಸ್ತ್ರೀಯರು ಪ್ರಸವಿಸಿದರು ಎಂದರ್ಥ. ಮುಂದೆ ಮೂರನೇ ಮಂತ್ರವು 'ಮಧ್ವಃ . . . ಮಾತರಿಶ್ವಾ ಮಥಾಯತಿ' ಎಂದು ಹೇಳಿ ವಾಯುದೇವರ ಅವತಾರರಾದ ಮಧ್ವಾಚಾರ್ಯರು ವೇದಗಳನ್ನು ಮಥನ ಮಾಡಿ ಎಲ್ಲೋ ಅಡಗಿದ್ದ (ಅಪವ್ಯಾಖ್ಯಾನಗಳಿಂದ ಮುಚ್ಚಿಹೋಗಿದ್ದ ಎಂದರ್ಥ) ವಿಷ್ಣುವಿನ ಅನಂತ ಗುಣಗಳನ್ನು ಉದ್ಧಾರ ಮಾಡುತ್ತಾರೆ ಎಂದು ತಿಳಿಸುತ್ತದೆ. ಹೀಗೆ ವೇದ ಗಳಲ್ಲೇ ಶ್ರೀಮದಾಚಾರ್ಯರ ಮಹಿಮೆ ಹೇಳಿರುವದರಿಂದಲೂ ಆಚಾರ್ಯರು ತಾವೂ ಸಹ ಭಾಷ್ಯಗಳಲ್ಲೂ, ತಾತ್ಪರ್ಯನಿರ್ಣಯ(ಅಧ್ಯಾಯ ೩೨, ಶ್ಲೋ. ೧೬೨-೧೭೬)ದಲ್ಲೂ ಹೇಳಿ ಕೊಂಡಿರುವುದರಿಂದಲೂ ವಾಯುದೇವರೇ ಮಧ್ವಾಚಾರ್ಯರಾಗಿ ಅವತಾರ ಮಾಡಿ ಈ ಇಪ್ಪತ್ತೆರಡನೇ ಭಾಷ್ಯವನ್ನು ಬರೆದರೆಂಬುದು ವಿಶ್ವಾಸಾರ್ಹವಾದ ಸಂಗತಿಯಾಗಿದೆ.

16. ಮಧ್ವಾಚಾರ್ಯರ ನಾಮಾಂತರಗಳು : ಬಳಿತ್ಥಾ ಸೂಕ್ತದಲ್ಲಿ 'ದಶಪ್ರಮತಿಂ' ಎಂದು ಹೇಳಿದೆಯೇ ಹೊರತು ಮಧ್ವಾಚಾರ್ಯರೆಂದು ಹೇಳಿಲ್ಲವಲ್ಲ! ಎಂಬ ಸಂದೇಹ ನಿವಾರಣೆ ಗಾಗಿಯೇ ಶ್ರೀಮದಾಚಾರ್ಯರು ತಮ್ಮ ಭಾಷ್ಯಗಳಲ್ಲಿ ಇವಕ್ಕೆಲ್ಲಾ ವಿವರಣೆ ಕೊಟ್ಟಿದ್ದಾರೆ. ದಶ ಎಂದರೆ ಸರ್ವ ಎಂದೂ, ಸರ್ವ ಎಂದರೆ ಪೂರ್ಣ ಎಂದೂ ಅರ್ಥ. ಪ್ರಮತಿ ಎಂದರೆ ಪ್ರಜ್ಞಾ ಅಥವಾ 'ಬುದ್ಧಿ, ಜ್ಞಾನ' ಎಂದರ್ಥ. ಹೀಗಾಗಿ ದಶಪ್ರಮತಿ ಎಂದರೆ ಪೂರ್ಣಪ್ರಜ್ಞ ಎಂದೇ ಅರ್ಥ. ಈ ಪೂರ್ಣಪ್ರಜ್ಞ ಎಂಬುದೇ ಆಚಾರ್ಯರ ಆಶ್ರಮನಾಮ. ಪೂರ್ಣಪ್ರಜ್ಞ ಎಂಬುದರ ರೂಪಾಂತರಗಳೇ ಪೂರ್ಣಬೋಧ, ಪೂರ್ಣಪ್ರಮತಿ, ಅಲವಬೋಧ, ಸರ್ವಜ್ಞರು, ಸರ್ವಜ್ಞಾಚಾರ್ಯರು ಮೊದಲಾದವು. ಮಧ್ವವಿಜಯದಿಂದ ಈ ಪೂರ್ಣಬೋಧರಿಗೆ ವೇದಾಂತ ಪೀಠದಲ್ಲಿ ಪಟ್ಟಾಭಿಷೇಕ ಮಾಡುವಾಗ ಅವರ ಗುರುಗಳು "ಆನಂದತೀರ್ಥ" ಎಂಬ ಮತ್ತೊಂದು ಹೆಸರನ್ನು ಇಟ್ಟರೆಂದು (ಮಧ್ವ ವಿ. ೫ ಸರ್ಗ ೧-೨ ಶ್ಲೋಕ) ಗೊತ್ತಾಗುತ್ತದೆ. ಈ ಆನಂದತೀರ್ಥವೆಂಬ ಹೆಸರಿನ ರೂಪಾಂತರವೇ ಮಧ್ವ ಅಥವಾ ಮಧ್ವಾಚಾರ್ಯ ಎಂಬುದು ಸದ್ಭಾವವೆಂಬ ಸ್ಮೃತಿವಾಕ್ಯದಿಂದ ಗೊತ್ತಾಗುತ್ತದೆ. (ಛಾಂದೋಗ್ಯಭಾಷ್ಯ ೮/೧೫) 'ಮಧ್ವಿತ್ಯಾನಂದ ಉದ್ದಿಷ್ಟೋ ವೇತಿ ತೀರ್ಥಮುದಾಹೃತಮ್ | ಮಧ್ವ ಆನಂದ ತೀರ್ಥಃ ಸ್ಯಾತ್ ತೃತೀಯಾ ಮಾರುತೀ ತನುಃ || (ಅರ್ಥ) ಮಧು ಎಂದರೆ ಆನಂದ | ವ ಎಂದರೆ ತೀರ್ಥ ಅಥವಾ ಶಾಸ್ತ್ರ. ಹೀಗೆ ಮಧ್ವ ಎಂಬುದು ಆನಂದತೀರ್ಥ ಎಂಬುದರ ರೂಪಾಂತರ. ಇವರು ಆನಂದರೂಪಿಯಾದ ವಿಷ್ಣುವಿಗೆ ಪರಮಪ್ರಿಯರಾದ್ದರಿಂದಲೂ ಮೋಕ್ಷದಲ್ಲಿ ಆನಂದ ಕೊಡುವ ಶಾಸ್ತ್ರ(ತೀರ್ಥ)ಗಳನ್ನು ಬರೆದುದರಿಂದಲೂ ಇವರಿಗೆ ಆನಂದತೀರ್ಥರೆಂಬ ಹೆಸರು ಅನ್ವರ್ಥವಾಗಿದೆಯೆಂದು ಮಧ್ವವಿಜಯಕಾರರು ಹೇಳುತ್ತಾರೆ (೫ ಸರ್ಗ, ೨ ಶ್ಲೋ.)*

ಇದೇ ರೀತಿ ಆನಂದ ಶಬ್ದವೂ, ಮೋದ ಶಬ್ದವೂ, ಸುಖ ಶಬ್ದವೂ ಕಕಾರವೂ ಪರ್ಯಾಯ ಶಬ್ದಗಳಾದ್ದರಿಂದ ಆಚಾರ್ಯರನ್ನು ಮೋದತೀರ್ಥ, ಸುಖತೀರ್ಥ, ಕತೀರ್ಥ ಇತ್ಯಾದಿ ನಾಮ

* ಆನಂದರೂಪಸ್ಯ ಪರಸ್ಯ ಪಾತ್ರಧೀ- | ರಾನಂದಸಂದಾಯಿ ಸುಶಾಸ್ತ್ರಕೃತ್ ಸ ಯತ್ |
ಆನಂದತೀರ್ಥೇತಿ ಪದಂ ಗುರೂದಿತಂ | ಬಭೂವ ತಸ್ಯಾತ್ಯನುರೂಪರೂಪಕಮ್ ||

ಗಳಿಂದ ಕರೆಯುವುದೂ ಉಂಟು. ಶ್ರೀಮದಾಚಾರ್ಯರೇ ತಮ್ಮ ದ್ವಾದಶಸ್ತೋತ್ರಾದಿ ಗ್ರಂಥ ಗಳಲ್ಲಿ ತಮ್ಮ ಹೆಸರನ್ನು 'ಸುಖತೀರ್ಥ'ರೆಂದೂ 'ಆನಂದತೀರ್ಥಸನ್ನಾಮ್ನಾ ಪೂರ್ಣಪ್ರಜ್ಞಾಭಿಧಾಯುಜಾ' 'ನಂದತೀರ್ಥ'ರೆಂದೂ 'ಸರ್ವಜ್ಞಮುನಿನಾ' ಇತ್ಯಾದಿ ರೀತಿಯಾಗಿ ಹೇಳಿಕೊಂಡಿದ್ದಾರೆ. ಶ್ರೀಮಧ್ವರು ಅನಾದಿಸಂಪ್ರದಾಯ ಪರಂಪರಾಪ್ರಾಪ್ತವಾದ ವೈಷ್ಣವಧರ್ಮವನ್ನೇ ಅನುಷ್ಠಾನ ಮಾಡತಕ್ಕವರಾಗಿರುವರಲ್ಲದೇ ಆ ಮಾರ್ಗವನ್ನೇ ಸಕಲ ಸಜ್ಜನರಿಗೂ ತೋರಿಸಿ ಕೊಟ್ಟರಾದ ಕಾರಣ ಅವರು 'ಆಚಾರ್ಯ'ರಾದರು. ಗೌರವದಿಂದಲೂ ಭಕ್ತ್ಯತಿಶಯದಿಂದಲೂ ಅವರನ್ನು ಶ್ರೀಮಟ್ಟೀಕಾ ಕೃತ್ಪಾದರೇ ಮೊದಲಾದವರು 'ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ'ರೆಂದು ಕರೆಯುತ್ತಾರೆ. ಗುರುಗಳ ಹೆಸರನ್ನು ಅಸಡ್ಡೆಯಿಂದ ಹೇಳಬಾರದೆಂದು ಹೆಚ್ಚು ಜನ ವಿದ್ವಾಂಸರು ಅವರನ್ನು 'ಶ್ರೀಮದಾಚಾರ್ಯರು' ಎಂದೇ ಕರೆಯುತ್ತಾರೆ. ಟೀಕಾರಾಯರಂತೂ 'ಭಗವಾನಾಚಾರ್ಯಃ' ಎಂದು ಹೆಚ್ಚೆಹೆಚ್ಚಿಗೂ ಹೇಳುತ್ತಾರೆ, ಇಲ್ಲಿ ಭಗವತ್ ಎಂಬ ವಿಶೇಷಣ ಆಚಾರ್ಯರಲ್ಲಿರುವ ವಿಷ್ಣುಭಕ್ತಿ, ನಿರ್ದುಷ್ಟ ಜ್ಞಾನಾದಿ ಗುಣಗಳಿಗೆ ದ್ಯೋತಕ ವಾಗಿದೆ.

17. ಸೂತ್ರಪ್ರಸ್ಥಾನದ ನಾಲ್ಕು ಮೂಲಗ್ರಂಥಗಳು : ವೇದಾಂತವು ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಎಂದು ಮೂರು ಪ್ರಕಾರವಾಗಿ ಪ್ರಸಿದ್ಧಿಗೆ ಬಂದಿದೆ. ಶ್ರೀಮದಾಚಾರ್ಯರು ಬೋಧಿಸಿದ ಸಿದ್ಧಾಂತವೇ ದ್ವೈತ; ಶಂಕರಾಚಾರ್ಯರದ್ದು ಅದ್ವೈತವೆಂದೂ ರಾಮಾನುಜಾಚಾರ್ಯರು ಬೋಧಿಸಿದ ತತ್ವಕ್ಕೆ ವಿಶಿಷ್ಟಾದ್ವೈತವೆಂದೂ ಹೆಸರು. ಈ ಮೂವರು ಆಚಾರ್ಯರೂ ತಮ್ಮ ವೇದಾಂತಕ್ಕೆ ಭಗವದ್ಗೀತೆ, ಬ್ರಹ್ಮಸೂತ್ರ ಮತ್ತು ಉಪನಿಷತ್ತುಗಳನ್ನೇ ಆಧಾರ ಮಾಡಿಕೊಂಡಿದ್ದಾರೆ. ಆದಕಾರಣ ವೇದಾಂತಕ್ಕೆ ಈ ಮೂರೂ ಆಶ್ರಯವಾದ್ದರಿಂದ ಈ ಮೂರನ್ನೂ ಪ್ರಸ್ಥಾನತ್ರಯ ಎನ್ನುತ್ತಾರೆ. ಇಲ್ಲಿ ನಮಗೆ ಸೂತ್ರ ಪ್ರಸ್ಥಾನ ಮಾತ್ರ ಸಂಬಂಧಿಸಿದೆ. ಮಾಧ್ವರಲ್ಲಿ ಶ್ರೀಮದಾಚಾರ್ಯರು ಬರೆದ ಗ್ರಂಥಗಳಿಗೆ ಮಾತ್ರವೇ ಸರ್ವಮೂಲಗ್ರಂಥ ಗಳೆಂಬ ಹೆಸರಿದೆ. (ಸರ್ವಮೂಲ ಎಂದರೆ ಅವರು ಬರೆದ ಮೂವತ್ತೇಳೂ ಗ್ರಂಥಗಳೆಂದು ಅರ್ಥ.) ಪ್ರಸ್ತುತ ಶ್ರೀಮದಾಚಾರ್ಯರೇ ಬ್ರಹ್ಮಸೂತ್ರಗಳ ಮೇಲೆ ನಾಲ್ಕು ಗ್ರಂಥಗಳನ್ನು ಬರೆದಿದ್ದಾರೆ. (ಬೇರೆ ಯಾವ ಭಾಷ್ಯಕಾರರೂ ಸೂತ್ರಗಳ ಮೇಲೆ ಈ ರೀತಿ ನಾಲ್ಕು ಗ್ರಂಥಗಳನ್ನು ಬರೆದಂತೆ ಕಂಡುಬರುವುದಿಲ್ಲ.) ಮಾಧ್ವರ ಸೂತ್ರಪ್ರಸ್ಥಾನದಲ್ಲಿ ಹೀಗೆ ನಾಲ್ಕು ಮೂಲ ಗ್ರಂಥಗಳಿವೆ. ಅವು ಯಾವುವೆಂದರೆ—1. ಬ್ರಹ್ಮಸೂತ್ರ ಭಾಷ್ಯ (ಇದನ್ನೇ ಸೂತ್ರಭಾಷ್ಯ ಎಂದೂ ನಿರ್ದೇಶಿಸುವರು), 2. ಅನುವ್ಯಾಖ್ಯಾನ, 3. ನ್ಯಾಯವಿವರಣ ಮತ್ತು 4. ಅಣುಭಾಷ್ಯ. ಆಚಾರ್ಯರು ಹೀಗೇಕೆ ನಾಲ್ಕು ಗ್ರಂಥಗಳನ್ನು ರಚಿಸಿದರು? ಅವುಗಳ ಆವಶ್ಯಕತೆ ಯೇನು? ಅವುಗಳಿಗಿರುವ ಪರಸ್ಪರ ವ್ಯತ್ಯಾಸವೇನು? ಎಂಬ ವಿಚಾರಕ್ಕೆ ಈಗ ಹೋಗೋಣ.

18. ಸೂತ್ರಭಾಷ್ಯ : ಯಾವ ವಿಶೇಷಣವನ್ನೂ ಸೇರಿಸದೆ ಸುಮ್ಮನೇ ಸೂತ್ರ ಎಂದು ಹೇಳಿದರೆ ಬ್ರಹ್ಮಸೂತ್ರಗಳೆಂದೇ ಅರ್ಥವಾಗುವುದೆಂದು ಶ್ರೀಮದಾಚಾರ್ಯರೇ ತಮ್ಮ ಭಾಷ್ಯದಲ್ಲಿ ಹೇಳಿದ್ದಾರೆ. ಆ ಪ್ರಕಾರ ಬ್ರಹ್ಮಸೂತ್ರಭಾಷ್ಯವನ್ನು ಸೂತ್ರಭಾಷ್ಯವೆಂದು ಕರೆಯುವದೇ ವಿದ್ವದ್ರೂಢಿ. ಹಿಂದೆ 11ನೇ ಖಂಡದಲ್ಲಿ ವಿವರಿಸಿದಂತೆ ಸೂತ್ರದಷ್ಟೇ ಸಂಕ್ಷೇಪ

ವಾಗಿ ವಿವರಣೆಯನ್ನು ಹೇಳುವ ಗ್ರಂಥಕ್ಕೆ ಭಾಷ್ಯವೆಂದು ಹೆಸರಷ್ಟೆ. ಅದಕ್ಕೆ ಅನುಗುಣವಾಗಿ ಶ್ರೀಮದಾಚಾರ್ಯರು ಐನೂರ ಅರವತ್ತುನಾಲ್ಕು ಸೂತ್ರಗಳ ಅರ್ಥವನ್ನು ಸೂತ್ರಕ್ರಮದಲ್ಲೇ ಸೂತ್ರಪಾಠ ಸಹಿತ ಹೇಳಿರುವ ಗ್ರಂಥಕ್ಕೇ ಬ್ರಹ್ಮಸೂತ್ರಭಾಷ್ಯವೆಂದು ಹೆಸರು. ಇದು ವಿಸ್ತಾರದಲ್ಲಿ ಎರಡು ಸಾವಿರ ಗ್ರಂಥವಿದೆ (ಮೂವತ್ತೆರಡು ಅಕ್ಷರಗಳಿಗೆ ಒಂದು ಗ್ರಂಥವೆಂದು ಸಂಕೇತ). ಈ ಗ್ರಂಥದ ಗಾಂಭೀರ್ಯ(ಆಳ)ವನ್ನು ಕುರಿತು ತ್ರಿವಿಕ್ರಮ ಪಂಡಿತಾಚಾರ್ಯರು "ಭಾಷ್ಯವೆಂಬ ಈ ಸಮುದ್ರದ ಆಳವು ಬಹಳ ಅದ್ಭುತವಾಗಿದೆ. ಈ ಸಮುದ್ರದಲ್ಲಿ ಮುಳುಗಿ ಮುಳುಗಿ ಎಷ್ಟು ನ್ಯಾಯರತ್ನಗಳನ್ನು ತೆಗೆದರೂ ಮತ್ತೆ ಮತ್ತೆ ಸಿಗುತ್ತಲೇ ಇರುತ್ತವೆ, ಮುಗಿಯುವಂತೆಯೇ ಇಲ್ಲ" ಎಂದು ಹೇಳುತ್ತಾರೆ.

ಕವೀಂದ್ರೈರ್ನ ಸಮಾಪ್ತ್ಯಂತೇ ಸಂಗೃಹ್ಯಾಪಿ ಯತೋಽನಿಶಮ್ |
ನ್ಯಾಯರತ್ನಾನಿ ಭಾಷ್ಯಾಬ್ಧೇರಸ್ಯ ಗಾಂಭೀರ್ಯಮದ್ಭುತಮ್ ||

(ಮಧ್ವವಿಜಯ ೧೫ಸ. ೭೩ ಶ್ಲೋ)

ಟೀಕಾರಾಯರು ಭಾಷ್ಯಕ್ಕೆ ಟೀಕೆ (ತತ್ವಪ್ರಕಾಶಿಕಾ) ಬರೆಯುತ್ತಾ "ಈ ಭಾಷ್ಯವು ಹೃದಯದ ಒಳಗಡೆಯಿರುವ ಕಗ್ಗತ್ತಲನ್ನು ಹೋಗಲಾಡಿಸಬಲ್ಲದ್ದಾದ್ದರಿಂದ ಸೂರ್ಯನ ಕಿರಣಗಳನ್ನು ಸೋಲಿಸುತ್ತದೆ. ತಾಪತ್ರಯಗಳನ್ನು ನಿರ್ಮೂಲ ಮಾಡುವುದರಿಂದಲೂ ನಿಷ್ಕಳಂಕವಾಗಿರುವುದ ರಿಂದಲೂ ಚಂದ್ರನ ಕಿರಣಗಳನ್ನು (ಅದು ಬಹಿಸ್ತಾಪವನ್ನು ಮಾತ್ರ ನಿವಾರಿಸಬಲ್ಲದು. ಕಳಂಕ ವುಳ್ಳದ್ದೂ ಆಗಿದೆ) ಗೆಲ್ಲುತ್ತದೆ. ಅಗಾಧವಾದ ಆಳವುಳ್ಳದ್ದಾಗಿರುವುದರಿಂದಲೂ ಅಳತೆ (ಸೀಮೆ ಅಥವಾ ಎಲ್ಲೆ) ಇಲ್ಲದ್ದಾದ್ದರಿಂದಲೂ ಸಮುದ್ರವನ್ನು ಮೀರಿಸಿದೆ" ಎಂದು ವರ್ಣಿಸುತ್ತಾರೆ. ಶಾಂಕರ ರಾಮಾನುಜೀಯ ಭಾಷ್ಯಗಳನ್ನು ಹೋಲಿಸಿದರೆ ಮಧ್ವಸೂತ್ರಭಾಷ್ಯ ಎಂಟರಲ್ಲಿ ಒಂದು ಭಾಗದಷ್ಟೂ ಆಗುವುದಿಲ್ಲ. ಈ ಭಾಷ್ಯವನ್ನು ಆಚಾರ್ಯರು ವೇದವ್ಯಾಸರ ಅಪ್ಪಣೆ ಯಿಂದಲೇ ಬರೆದರೆಂದು ಮಧ್ವವಿಜಯವೂ ಹೇಳುತ್ತದೆ. (ಖಂಡ 14 ನೋಡಿ); ಸ್ವಯಂ ಆಚಾರ್ಯರೂ ಹೇಳಿದ್ದಾರೆ—'ವ್ಯಾಸಾಜ್ಞಯಾ ಭಾಷ್ಯವರಂ ವಿಧಾಯ'(ತಾತ್ಪರ್ಯನಿರ್ಣಯ ೩೨ ಅಧ್ಯಾ. ೧೩೫ ಶ್ಲೋ.)—ವೇದವ್ಯಾಸರ ಆಜ್ಞೆಯಿಂದಲೇ ಶ್ರೇಷ್ಠವಾದ ಸೂತ್ರಭಾಷ್ಯವನ್ನು ಮಾಡಿ . . . ಇತ್ಯಾದಿ.

19. ಅನುವ್ಯಾಖ್ಯಾನ : ತ್ರಿವಿಕ್ರಮ ಪಂಡಿತಾಚಾರ್ಯರಿಗೂ ಶ್ರೀಮದಾಚಾರ್ಯರಿಗೂ ವಾಗ್ವಾದ ನಡೆದಾಗ (ಮ.ವಿ. 15 ಸ. 65-70 ಶ್ಲೋ) ಆಚಾರ್ಯರು ಭಾಷ್ಯಗಳಲ್ಲಿ ಸೂಚಿತ ವಾಗಿದ್ದ ಗಹನವಾದ ನ್ಯಾಯರತ್ನಗಳನ್ನು ತೋರಿಸಲು ಅವಾಕ್ಕಾದರು. ಅವರ ಆ ವಾದ ಮುಗಿದ ನಂತರ ಆ ಯುಕ್ತಿರತ್ನಗಳನ್ನೇ ಎಲ್ಲರಿಗೂ ತಿಳಿಯುವಂತೆ ವಿವರಿಸಿ ಮತ್ತೊಂದು ಗ್ರಂಥವನ್ನೇ ರಚಿಸಬೇಕೆಂದು ಪಂಡಿತಾಚಾರ್ಯರು ಆಚಾರ್ಯರನ್ನು ಪ್ರಾರ್ಥಿಸಿಕೊಂಡರು— 'ಅಪರೋಽಪೀಷ್ಯತೇಽಸ್ಮಾಭಿಃ' (ಮ.ವಿ.೧೫/೮೬) 'ನಮಗೆ ಮತ್ತೊಂದು ಗ್ರಂಥವೂ ಬೇಕಾ ಗಿದೆ', 'ಗ್ರಂಥಂ ವ್ಯಕ್ತ ತರ್ಕತತಿಂ ಕುರು' (ಅಲ್ಲೆ ೧೫/೮೭) 'ತರ್ಕದ ಸರಣಿಯು ಸ್ಪಷ್ಟವಾಗಿ ರುವ ಇನ್ನೊಂದು ಗ್ರಂಥವನ್ನು ರಚಿಸಿರಿ' ಎಂದು ಕೇಳಿಕೊಂಡರು. ಆ ಪ್ರಕಾರ ವಿಶೇಷತಃ ತರ್ಕಸರಣಿಯನ್ನೇ ಒಳಗೊಂಡ ಈ ಗ್ರಂಥವನ್ನು ರಚಿಸಿದರು. ಭಾಷ್ಯದ ವಿವರಣೆ 'ಪದ್ಯೈಃ',

'ಸೂತ್ರಾನುಕಾರಿಭಿಃ' (ಖಂಡ 11 ನೋಡಿ) ಎಂಬಂತೆ ಸೂತ್ರದಷ್ಟೇ ಮಿತವಾಗಿರಬೇಕು, ಇಲ್ಲದಿದ್ದರೆ 'ಭಾಷ್ಯತ್ವ'ಕ್ಕೆ ಲೋಪ ಬರುತ್ತದೆ. ಈ ಗ್ರಂಥವು ಭಾಷ್ಯದಲ್ಲಿ ಸ್ಫುಟವಾಗಿ ಹೇಳದೇ ಇರುವ ಹೆಚ್ಚಿನ ವಿಚಾರಗಳನ್ನು ತಿಳಿಸುವುದರಿಂದ ಇದಕ್ಕೆ ಅನು = ಭಾಷ್ಯವನುಸರಿಸಿ ವಿ = ವಿಶೇಷವಾಗಿ, ಸ್ಪಷ್ಟವಾಗಿ, ಆ = ಸಮಂತಾತ್—ಎಲ್ಲರಿಗೂ ತಿಳಿಯುವಂತೆ, ಖ್ಯಾನ = ತರ್ಕದ ಸರಣಿಯನ್ನು ಹೇಳುವುದರಿಂದ (ಖ್ಯಾ = ಹೇಳು) ಅನುವ್ಯಾಖ್ಯಾನವೆಂಬ ಹೆಸರು ಕೊಟ್ಟರು. ಉದಾಹರಣೆಗೆ ಭಾಷ್ಯದಲ್ಲಿ ಅತಃ ಶಬ್ದಾರ್ಥವನ್ನು ಒಂದೇ ವಾಕ್ಯದಲ್ಲಿ ಹೇಳಿದ್ದರು. ಅದನ್ನೇ ಅನುವ್ಯಾಖ್ಯಾನದಲ್ಲಿ ಸರಿಯಾಗಿ ಎಪ್ಪತ್ತು ಶ್ಲೋಕಗಳಲ್ಲಿ (೧೧-೮೦ಶ್ಲೋ.) ವಿಸ್ತರಿಸಿದರು. ಭಾಷ್ಯದಲ್ಲಿ ಕೆಲವು ಕಡೆ ಹೆಚ್ಚು ವಿಸ್ತರಿಸಿದ್ದು ಬುದ್ಧಿಗೆ ಹತ್ತುವುದಕ್ಕಾಗಿ ಸಂಗ್ರಹಿಸಿಯೂ ಇದ್ದಾರೆ. ಉದಾಹರಣೆಗೆ ಭಾಷ್ಯದಲ್ಲಿ ಎರಡನೇ ಅಧ್ಯಾಯದ ನಾಲ್ಕನೇ ಪಾದದಲ್ಲಿ ಹದಿಮೂರು ಅಧಿಕರಣಗಳೂ ಇಪ್ಪತ್ತಮೂರು ಸೂತ್ರಗಳೂ ಹೇಳುವ (ಸುಮಾರು 150 ಗ್ರಂಥಗಳ) ಪ್ರಮೇಯವನ್ನು ಅನುವ್ಯಾಖ್ಯಾನದಲ್ಲಿ ನಾಲ್ಕೇ ಶ್ಲೋಕ (ನಾಲ್ಕು ಗ್ರಂಥ) ಗಳಲ್ಲೂ, ಇಪ್ಪತ್ತು ಅಧಿಕರಣ ಇಪ್ಪತ್ತೊಂಬತ್ತು ಸೂತ್ರಗಳಿರುವ ಮೂರನೇ ಅಧ್ಯಾಯ ಒಂದನೇ ಪಾದದ (150 ಗ್ರಂಥಗಳ) ವಿಚಾರವನ್ನು ಅನುವ್ಯಾಖ್ಯಾನದಲ್ಲಿ ಕೇವಲ ಐದೇ ಶ್ಲೋಕದಲ್ಲೂ ಹೇಳಿದ್ದಾರೆ. ಅನುವ್ಯಾಖ್ಯಾನ ಬರೆಯುವ ಉದ್ದೇಶವನ್ನು ಆಚಾರ್ಯರೇ ಹೀಗೆ ಸ್ಪಷ್ಟಪಡಿಸಿ ಹೇಳಿದ್ದಾರೆ (೧ ಅಧ್ಯಾ. ೧ ಪಾ. ೧ ಸೂ. ೭ನೇ ಶ್ಲೋ.)

ಸ್ವಯಂಕೃತಾಽಪಿ ತದ್ವ್ಯಾಖ್ಯಾ ಕ್ರಿಯತೇ ಸ್ಪಷ್ಟಾರ್ಥತಃ

(ಅರ್ಥ) ಸೂತ್ರಗಳ ಅರ್ಥವನ್ನು ನಾನೇ ಭಾಷ್ಯದಲ್ಲಿ ಹೇಳಿದ್ದರೂ ಸ್ಪಷ್ಟೀಕರಿಸುವ ಉದ್ದೇಶದಿಂದ, ಈ ಕೆಲಸ ಇತರರಿಂದ ಸಾಧ್ಯವಿಲ್ಲವಾದ್ದರಿಂದ ಪುನಃ ನಾನೇ ಈ ವ್ಯಾಖ್ಯಾನ ವನ್ನು (ವಿವರಣೆಯನ್ನು) ಮಾಡುತ್ತೇನೆ. (ಇಲ್ಲಿ ಹೇಳಿದ 'ಸ್ಪಷ್ಟತಾ' ಅನೇಕ ವಿಧವಾಗಿದೆ ಯೆಂದು ಟೀಕಾರಾಯರು 'ನ್ಯಾಯಸುಧಾ'ದಲ್ಲಿ ತೋರಿಸಿಕೊಡುತ್ತಾರೆ.)

ಈ ಗ್ರಂಥದ ನಾಲ್ಕು ಅಧ್ಯಾಯಗಳನ್ನು ಆಚಾರ್ಯರು ಒಂದೇ ಸಾರಿ ರಚನೆ ಮಾಡುತ್ತ ನಾಲ್ಕು ಶಿಷ್ಯರಿಂದ ಏಕಕಾಲದಲ್ಲಿ ಬರೆಯಿಸಿದರೆಂದು ಮಧ್ವವಿಜಯ ತಿಳಿಸುತ್ತದೆ. (೧೫ ಸರ್ಗ, ೮೯ ಶ್ಲೋ.) ಈ ಗ್ರಂಥವು ಬಹಳ ಗಂಭೀರವಾದುದೆಂಬುದಕ್ಕೆ "ಗ್ರಂಥೋಽಯಮಪಿ ಬಹ್ವರ್ಥಃ" (ಅನುವ್ಯಾ.೧ ಅಧ್ಯಾ. ೧ ಪಾದ, ೨೫೭ನೇ ಶ್ಲೋ.) 'ಈ ಗ್ರಂಥವು ಬಹಳ ಅರ್ಥಗರ್ಭಿತವಾಗಿದೆ' ಎಂಬ ಆಚಾರ್ಯರ ವಾಕ್ಯವೂ "ದುರ್ವಾದಿ-ಗರ್ವಾದ್ರಿಪವಿಂ ಮಾಯಿಧ್ವಾಂತ-ರವಿದ್ಯುತಿಂ"—ದುರ್ವಾದಿಗಳ ಗರ್ವವೆಂಬ ಆ ಬೆಟ್ಟವನ್ನು ಚೂರುಚೂರು ಮಾಡುವ ವಜ್ರಾಯುಧದಂತೆಯೂ ಅಪಸಿದ್ಧಾಂತಗಳೆಂಬ ಅಂಧಕಾರವನ್ನು ನಿರ್ಮೂಲ ಗೊಳಿಸುವ ಸೂರ್ಯನ ಬೆಳಕಿನಂತೆಯೂ ಇದೆ ಎಂಬ ಮಧ್ವವಿಜಯದ (೧೫ ಸರ್ಗ, ೮೮ ಶ್ಲೋ.) ಪ್ರಶಂಸೆಯೂ ಸಾಕ್ಷಿಗಳಾಗಿವೆ. ಒಟ್ಟಿನಲ್ಲಿ ಸೂತ್ರಭಾಷ್ಯದ ತರ್ಕಪ್ರಮೇಯಗಳ ಸ್ಪಷ್ಟೀಕರಣಕ್ಕಾಗಿ ಅನುವ್ಯಾಖ್ಯಾನ ರಚಿತವಾಯಿತೆಂದು ಹೇಳಿದಂತಾಯಿತು. ಇದರಲ್ಲಿ 1985 ಗ್ರಂಥಗಳಿವೆ. ಹಾಗಾದರೆ 'ನ್ಯಾಯವಿವರಣ' ರಚಿಸಲು ಕಾರಣವೇನು? ಎಂದರೆ ಅದನ್ನು ಶ್ರೀಮದಾಚಾರ್ಯರೇ ತೋರಿಸಿಕೊಡುತ್ತಾರೆ.

20. ನ್ಯಾಯವಿವರಣ : ಭಾಷ್ಯ ಅನುವ್ಯಾಖ್ಯಾನಗಳೆಂಬ ಎರಡು ಗ್ರಂಥಗಳನ್ನು ರಚಿಸಿದ ಮೇಲೆ ಮೂರನೆಯ ಗ್ರಂಥಕ್ಕೆ ಏನು ಅವಶ್ಯಕತೆಯಿತ್ತು ಎಂಬ ಪ್ರಶ್ನೆ ಬರುವದರಿಂದ ಆಚಾರ್ಯರು ಅದನ್ನೇ ಸ್ಪಷ್ಟಪಡಿಸುತ್ತಾ ನ್ಯಾಯವಿವರಣದ ಪ್ರಾರಂಭದಲ್ಲಿಯೇ ಹೀಗೆ ಪ್ರತಿಜ್ಞೆ ಮಾಡುತ್ತಾರೆ.

ಕೃತ್ವಾ ಭಾಷ್ಯಾನುಭಾಷ್ಯೇಽಹಮಪಿ ವೇದಾರ್ಥಸತ್ಪತೀಃ |
ಕೃಷ್ಣಸ್ಯ ಸೂತ್ರಾನುವ್ಯಾಖ್ಯಾಸನ್ಯಾಯ ವಿವೃತಿಂ ಸ್ಫುಟಮ್ |
ಕರೋಮಿ ಮಂದಬುದ್ಧೀನಾಂ ಬುಧಾನಾಂ ಚೋಪಕಾರಿಕಾಮ್ ||

(ಇದರ ಅರ್ಥ) ವೇದಾರ್ಥಗಳಿಗೆ ಮುಖ್ಯ ಒಡೆಯರಾದ ಬಾದರಾಯಣರ ಸೂತ್ರಗಳಿಗೆ ನಾನೇ ಭಾಷ್ಯವನ್ನೂ (ಅದರಲ್ಲಿ ಗೂಢವಾಗಿ ಹೇಳಿದ್ದರೂ ದುರೂಹವಾದ ತರ್ಕಯುಕ್ತಿಗಳನ್ನು ಸ್ಪಷ್ಟವಾಗಿ ತಿಳಿಸುವ) ಅನುವ್ಯಾಖ್ಯಾನವನ್ನು ರಚಿಸಿದ್ದರೂ ಕೂಡ ಪುನಃ ಆ ಗ್ರಂಥಗಳಲ್ಲಿ ಹೇಳಿದ ಎಲ್ಲಾ ನ್ಯಾಯಗಳನ್ನು ಗ್ರಹಿಸಲು ಅಸಮರ್ಥರಾದ ಮಂದಬುದ್ಧಿಗಳಿಗೆ ಅನುಕೂಲ ವಾಗಲೆಂದೂ ಚೆನ್ನಾಗಿ ತಿಳಿದವರಿಗೂ ಆ ನ್ಯಾಯಗಳನ್ನು ಪುನರಾವೃತ್ತಿ ಮಾಡಿಕೊಳ್ಳಲು ಅನುಕೂಲವಾಗುವಂತೆಯೂ ವ್ಯಕ್ತಂ ಚಕ್ರೇ ವಿವರಣಂ ಕವೀಂದ್ರೈರೇಷ ದುಷ್ಕರಮ್ ಎಂಬ ಮಧ್ವವಿಜಯದ ಮಾತನ್ನು ಉಲ್ಲೇಖಿಸಬೇಕು.

(ಸಂಕ್ಷೇಪಾತ್ ಪ್ರಮಿತಾಕ್ಷರೈಃ—ನ್ಯಾಯವಿವರಣದ ಕಡೆಯಲ್ಲಿ ಹೇಳಿದ ಮಾತು) ಸಂಕ್ಷೇಪವಾಗಿ ಮಿತವಾದ ಅಕ್ಷರಗಳಿಂದ ಈ ನ್ಯಾಯವಿವರಣವೆಂಬ ಗ್ರಂಥವನ್ನು ರಚಿಸುತ್ತೇನೆ ಎಂದು ಅವರ ಮಾತಿನ ಅರ್ಥ. ಅಷ್ಟೇ ಅಲ್ಲದೆ ಈ ಗ್ರಂಥದ ಹೆಸರೇ ಹೇಳುವಂತೆ ಈ ಗ್ರಂಥವು ಪೂರ್ವಪಕ್ಷದ ವಿಸ್ತಾರಕ್ಕೆ ಹೆಚ್ಚು ಗಮನಕೊಡದೇ ಸೂತ್ರಗಳಲ್ಲಿ ಅಡಗಿರುವ 'ನ್ಯಾಯ'(ಯುಕ್ತಿ)ಗಳನ್ನೇ 'ವಿವರಣ' ಮಾಡುತ್ತದೆ, ಎತ್ತಿ ತೋರಿಸುತ್ತದೆ. ಆದ್ದರಿಂದಲೇ ಮಂದರಿಗೂ ಇದು ಉಪಕಾರಿಯಾಗಿದೆ. ಚುಟುಕಿ-ಚುಟುಕಿಯಷ್ಟರಲ್ಲೇ ನ್ಯಾಯವನ್ನು ತಿಳಿಸಿ ಕೊಡುವುದರಿಂದ ಬ್ರಹ್ಮಸೂತ್ರಗಳಲ್ಲಿ ಅಡಗಿರುವ ಅನಂತಾರ್ಥಗಳಲ್ಲಿ ಮುಖ್ಯವಾದುವನ್ನು ಪ್ರತಿಯೊಬ್ಬರೂ (ದಡ್ಡನಾಗಲೀ ಪಂಡಿತನಾಗಲೀ) ಗ್ರಹಿಸಲು ಬಹಳ ಸಹಾಯವಾಗಿದೆ. ಈ ವಿಚಾರವನ್ನು ಆಚಾರ್ಯರೇ ಗ್ರಂಥದ ಕಡೆಯಲ್ಲಿ 'ನ್ಯಾಯಪ್ಲವೋ ಮಯಾಽಕಾರಿ ಸಂಕ್ಷೇಪಾತ್ ಪ್ರಮಿತಾಕ್ಷರೈಃ' ಎಂದರೆ ಬ್ರಹ್ಮಮೀಮಾಂಸಾ ಶಾಸ್ತ್ರವೆಂಬ ಅಗಾಧವಾದ ಸಾಗರವನ್ನು ದಾಟುವುದಕ್ಕೆ ಅನುಕೂಲವಾದ ಈ ನ್ಯಾಯವೆಂಬ ದೋಣಿಯು ನನ್ನಿಂದ ರಚಿಸ ಲ್ಪಟ್ಟಿದೆ ಎಂದು ಹೇಳುತ್ತಾರೆ. ಹಾಗಾದರೆ ಇದರಿಂದ ಪಂಡಿತರಿಗೆ ಏನೂ ಲಾಭವಿಲ್ಲವೇ? ಎಂದರೆ 'ವಿಸ್ತಾರೋಽಪ್ಯಯಮೇವ ಸ್ಯಾತ್ ತದ್ವಿಶೇಷಾತಿವೇದಿನಾಮ್' ಈ ಚಿಕ್ಕ ದೋಣಿಯೇ ನ್ಯಾಯಗಳಲ್ಲಿ ಪ್ರವೀಣರಾದ ಬಹುಜ್ಞರಿಗೂ ಮೆಲುಕು ಹಾಕಲು ವಿಸ್ತಾರವೂ ಆಗಿದೆ ಎಂದು ಹೇಳುತ್ತಾರೆ. ಈ ಸಂಗತಿಯನ್ನೇ ಮೆಲುಕು ಹಾಕಲು ವಿಸ್ತಾರವೂ ಆಗಿದೆ ಎಂದು ಹೇಳುತ್ತಾರೆ. ಈ ಸಂಗತಿಯನ್ನೇ ಸೂಚಿಸುತ್ತಾ ಶ್ರೀಮದ್ವ್ಯಾಸರಾಯರು 'ಗ್ರಂಥಮಾಲಿಕಾ' ಸ್ತೋತ್ರದಲ್ಲಿ ಈ ಗ್ರಂಥದ ಮಹಿಮೆಯನ್ನು ತಿಳಿಸುತ್ತಾ 'ನ್ಯಾಯಶಾಸ್ತ್ರನಿಕೃಂತನಮ್' ಎಂದರೆ ಇದು ನ್ಯಾಯ (ತರ್ಕ) ಶಾಸ್ತ್ರದ ದುಷ್ಟ ಸಿದ್ಧಾಂತಗಳನ್ನು ಕತ್ತರಿಸಿ (ಖಂಡಿಸಿ) ಹಾಕುತ್ತದೆ ಎಂದು

ಹೇಳಿದ್ದಾರೆ. ಹೀಗೆ ಈ ಗ್ರಂಥ ಬಹಳ ಗೂಢಾರ್ಥವುಳ್ಳದ್ದಾದರಿಂದ ಬಹಳ ಸಂಕ್ಷಿಪ್ತವಾಗಿದೆ; ಇದರಲ್ಲಿ ಕೇವಲ ನಾಲ್ಕು ನೂರ ಇಪ್ಪತ್ತು ಗ್ರಂಥಗಳಿವೆ. ಈ ಗ್ರಂಥ ಎಷ್ಟು ಚಿಕ್ಕದು, ಎಷ್ಟು ಸುಲಭಗ್ರಾಹ್ಯ ಎಂಬುದನ್ನು ತಿಳಿಸಲು ಒಂದು ಉದಾಹರಣೆ ಕೊಡಬಹುದು. ಭಾಷ್ಯದಲ್ಲಿ ಜಿಜ್ಞಾಸಾಧಿಕರಣ ಸುಮಾರು ಎಂಬತ್ತು ಗ್ರಂಥದಷ್ಟಿದ್ದರೆ ಅನುವ್ಯಾಖ್ಯಾನದಲ್ಲಿ ಸುಮಾರು ತೊಂಬತ್ತು ಗ್ರಂಥವಿದೆ; ಆದರೆ ನ್ಯಾಯವಿವರಣದಲ್ಲಿ ಜಿಜ್ಞಾಸಾಧಿಕರಣ ಕೇವಲ ಮೂರೇ ಗ್ರಂಥದಲ್ಲಿ (ಸುಮಾರು ನೂರು ಅಕ್ಷರಗಳಲ್ಲಿ) ಮುಗಿದಿದೆ. ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ಮುಖ್ಯವಿಚಾರಗಳು (ಪಾಯಿಂಟ್ಸ್–points) ಹೇಗೆ ಸಹಾಯವಾಗುತ್ತವೋ ಹಾಗೆ ನ್ಯಾಯವಿವರಣದಲ್ಲಿ ಹೇಳಿದ ನ್ಯಾಯಗಳು ಅತ್ಯಂತ ದಡ್ಡರಿಗೂ ಅತ್ಯಂತ ಪಂಡಿತ ಪ್ರಕಾಂಡರಿಗೂ ಒಂದೇ ರೀತಿ ಅನುಕೂಲವಾಗಿವೆ. ಟೀಕಾರಾಯರು ತತ್ವಪ್ರಕಾಶಿಕಾದಲ್ಲೂ ನ್ಯಾಯಸುಧಾದಲ್ಲೂ ಇಲ್ಲಿ ಹೇಳಿದ ಎಲ್ಲ ನ್ಯಾಯಗಳನ್ನು ಸಮಯೋಚಿತವಾಗಿ ಬಳಸಿಕೊಂಡಿದ್ದಾರೆ, ಅದನ್ನು ಅವರೇ ಹೇಳಿಕೊಂಡಿದ್ದಾರೆ.

21. ಅಣುಭಾಷ್ಯದ ರಚನೆ : ಈ ಗ್ರಂಥ ಏಕೆ ರಚಿತವಾಯಿತೆಂಬ ಬಗ್ಗೆ ಒಂದು ಐತಿಹ್ಯವುಂಟು. ಆಚಾರ್ಯರ ಶಿಷ್ಯರಲ್ಲಿ ಕೆಲವರು* ಪ್ರತಿನಿತ್ಯ ಇಡೀ ಸೂತ್ರ ಭಾಷ್ಯವನ್ನು ಸಮಗ್ರವಾಗಿ ಪಾರಾಯಣ ಮಾಡದೇ ಭಿಕ್ಷೆ ಸ್ವೀಕರಿಸುತ್ತಲೇ ಇರಲಿಲ್ಲವಂತೆ.

ಎಷ್ಟು ಬೇಗ ಓದಿದರೂ ಒಂದು ಸರಿ ಭಾಷ್ಯ ಪಾರಾಯಣ ಮಾಡಲು ಕನಿಷ್ಠ ಎರಡು ಗಂಟೆ(ತಾಸು)ಗಳಾದರೂ ಬೇಕು. ಒಂದು ದಿನ ಸಾಧನದ್ವಾದಶಿ ಇತ್ತು. ಆ ದಿನ ಸಮಗ್ರ ಭಾಷ್ಯ ಪಾರಾಯಣ ಹೇಗಾಗಬೇಕು? ಪಾರಾಯಣ ಮುಗಿಯಲೆಂದರೆ ದ್ವಾದಶೀವ್ರತ ಹೋಗುತ್ತದೆ. ಅದಕ್ಕೆ ಗಮನಕೊಟ್ಟರೆ ನಿತ್ಯದ ಪಾರಾಯಣಕ್ಕೆ ಭಂಗ ಬರುತ್ತದೆ. ಇದನ್ನು ಕಂಡ ಶ್ರೀಮದಾಚಾರ್ಯರು ಆ ಕ್ಷಣ ಅಣುಭಾಷ್ಯವನ್ನು ರಚಿಸಿ ಅವರಿಗೆ ಉಪದೇಶಿಸಿದರಂತೆ. ಅದರಲ್ಲಿ ಕೇವಲ ಮೂವತ್ತೆರಡು ಶ್ಲೋಕಗಳಿರುವುದರಿಂದ ಮೂರೇ ನಿಮಿಷಗಳಲ್ಲಿ ಇದನ್ನು ಪಠಿಸಬಹುದು. ಹೀಗಾಗಿ ಶಿಷ್ಯರಿಗೆ (ಅಥವಾ ಗುರುಗಳಿಗೆ) ಪಾರಾಯಣವೂ ಆಯಿತು, ದ್ವಾದಶೀವ್ರತವೂ ಸಾಧಿಸಿತು. ಅಂದಿನಿಂದ ಈ ಚಿಕ್ಕ ಗ್ರಂಥವು ಸಮಸ್ತ ಸದಾಚಾರಸಂಪನ್ನ ಮಾಧ್ವರಿಗೂ ಪ್ರತಿನಿತ್ಯ ಪಾರಾಯಣ ಮಾಡಿಕೊಳ್ಳುವ ಗ್ರಂಥವಾಗಿದೆ. ಪ್ರಕೃತ ಈ ಗ್ರಂಥಕ್ಕೆ ನಾವು ಅರ್ಥವಿವರಣೆ ಮಾಡಲು ಹೊರಟಿರುವದರಿಂದ ಈ ಗ್ರಂಥದ ಮಹಿಮೆಯನ್ನು ಕಿಂಚಿತ್ ವರ್ಣಿಸುವದು ಸೂಕ್ತವಾಗಿರುವುದಲ್ಲದೆ ಪ್ರಸಕ್ತವೂ ಆಗಿದೆ.

22. ಅಣುಭಾಷ್ಯದ ಮಹತ್ವ : ಅಣುಭಾಷ್ಯವು ಹೆಸರಿಗೆ ತಕ್ಕಂತೆ ಆಕಾರದಲ್ಲಿ ಮಾತ್ರ ಚಿಕ್ಕದಾಗಿದ್ದರೂ, ಪರಮಾಣುಗಳಲ್ಲಿ ಕಲ್ಪನೆಗೂ ಎಟುಕದ ಅಪರಿಮಿತ ಶಕ್ತಿ ಅಡಗಿರುವಂತೆಯೇ, ಈ ಅಣುಭಾಷ್ಯದಲ್ಲಿ ಅನಂತಾರ್ಥಗಳು ಗರ್ಭಿತವಾಗಿ ಅಡಗಿಕೊಂಡಿವೆ. ಮೇಲೆ ಹೇಳಿದಂತೆ ಅಣುಭಾಷ್ಯದಲ್ಲಿ ಕೇವಲ ಮೂವತ್ತೆರಡೇ ಶ್ಲೋಕಗಳಿದ್ದರೂ ಶ್ರೀಮದಾಚಾರ್ಯರು ಅಷ್ಟರಲ್ಲೇ ಭಾಷ್ಯ ಅನುವ್ಯಾಖ್ಯಾನ ನ್ಯಾಯವಿವರಣಗಳಲ್ಲಿ ಹೇಳಿದ ಸಮಸ್ತ ಪ್ರಮೇಯಗಳನ್ನು ಅಡಕಮಾಡಿಟ್ಟಿದ್ದಾರೆ. ಇದನ್ನು ತಿಳಿದ ಮಹಾನುಭಾವರಾದ್ದರಿಂದಲೇ

* ಗುರುಗಳಾದ ಅಚ್ಯುತ ಪ್ರೇಕ್ಷರೇ ಎಂದು ಕೆಲವರು ಹೇಳುವರು.

ತ್ರಿವಿಕ್ರಮ ಪಂಡಿತಾಚಾರ್ಯರು ಈ ಗ್ರಂಥದ ಮಹಿಮೆಯನ್ನು ಶ್ರೀಮದಾಚಾರ್ಯರ ಸಮ್ಮುಖದಲ್ಲಿ ಪ್ರಶಂಸಿಸುತ್ತಾ

ಅನಂತೋಽರ್ಥಃ ಪ್ರಕಟಿತಸ್ತ್ವಯಾಽಣೌ ಭಾಷ್ಯಸಂಗ್ರಹೇ

ಎಂದರೆ "ತಾವು (ಮಧ್ವಾಚಾರ್ಯರು) ಈ ಚಿಕ್ಕ ಅಣುಭಾಷ್ಯದಲ್ಲೇ ಅಸಂಖ್ಯಾರ್ಥಗಳನ್ನು ಪ್ರಕಟಿಸಿದ್ದೀರಿ" ಎಂದು ಹೇಳಿದರಂತೆ (ಮ.ವಿ. ೧೫/೮೨). ಈ ಗ್ರಂಥಕ್ಕೆ ವ್ಯಾಖ್ಯಾನ ಬರೆಯುತ್ತ ತತ್ವಮಂಜರಿಯ ಪೀಠಿಕೆಯಲ್ಲಿ ಶ್ರೀರಾಘವೇಂದ್ರಸ್ವಾಮಿಗಳು ಈ ವಾಕ್ಯವನ್ನು ಉದಾಹರಿಸಿದ್ದಾರೆ. ಪಂಡಿತಾಚಾರ್ಯರು ಮಾತ್ರವಲ್ಲ, ಸ್ವಯಂ ಆಚಾರ್ಯರೇ ಈ ಗ್ರಂಥವು ಗಂಭೀರಾರ್ಥವುಳ್ಳದ್ದೆಂದು ಸೂಚಿಸಿದ್ದಾರೆಂಬುದನ್ನು ಮಂತ್ರಾಲಯ ಪ್ರಭುಗಳು ತತ್ವಮಂಜರಿಯ ಪೀಠಿಕೆಯಲ್ಲಿ ತೋರಿಸಿಕೊಡುತ್ತಾರೆ.

ಗ್ರಂಥೋಽಯಮಪಿ ಬಹ್ವರ್ಥೋ ಭಾಷ್ಯಂ ಚಾತ್ಯರ್ಥವಿಸ್ತರಮ್ |

ಇತ್ಯುಕ್ತಿಸಾಮ್ಯಾತ್ ಸಂಕ್ಷೇಪ ಭಾಷ್ಯಂ ಚಾತ್ಯರ್ಥವಿಸ್ತರಮ್ ||

(ಅರ್ಥ) ಅನುವ್ಯಾಖ್ಯಾನದಲ್ಲಿ (೧ನೇ ಅ. ೧ನೇ ಪಾದದ ಕಡೆಯಲ್ಲಿ ೨೫೬ನೇ ಶ್ಲೋ) ಶ್ರೀಮದಾಚಾರ್ಯರು ತಮ್ಮ ಅನುವ್ಯಾಖ್ಯಾನದ ಬಗ್ಗೆ "ಈ ಗ್ರಂಥವೂ ಕೂಡ ಬಹು ಅರ್ಥಗಳುಳ್ಳದ್ದು. ಅದೇ ರೀತಿ ಸೂತ್ರಭಾಷ್ಯವೂ ನೋಡಲು ಚಿಕ್ಕದಾಗಿದ್ದರೂ ವಿಸ್ತಾರಾರ್ಥವುಳ್ಳದ್ದು" ಎಂದು ಹೇಳಿಕೊಂಡ ಮಾತು ಈ ಅಣುಭಾಷ್ಯಕ್ಕೆ ಅನ್ವಯಿಸುವುದರಿಂದ ಇದೂ (ಅಣುಭಾಷ್ಯವೂ) ಅನೇಕ ಅರ್ಥಗಳಿಂದ ಗರ್ಭಿತವಾಗಿದೆಯೆಂದು ಶ್ರೀರಾಘವೇಂದ್ರಸ್ವಾಮಿಗಳು ಹೇಳುತ್ತಾರೆ. ಹೀಗೆ ಅನೇಕಾರ್ಥಗಳಿಂದ ಆಕೂತವಾದ (ತುಂಬಿರುವ) ಅಣುಭಾಷ್ಯದಲ್ಲಿ ಭಾಷ್ಯಾನುವ್ಯಾಖ್ಯಾನಗಳಲ್ಲೂ ಟೀಕಾಗ್ರಂಥಗಳಲ್ಲೂ ಚಂದ್ರಿಕಾದಿ ಉದ್ಗ್ರಂಥಗಳಲ್ಲಿ ಹೇಳಿದ ಪ್ರಮೇಯಸಾರವೇ ಭಟ್ಟಿರೂಪವಾಗಿ ಇಳಿದಿದೆಯೆಂಬುದನ್ನು ರಾಯರ ಟಿಪ್ಪಣಿ (ಅಥವಾ ವ್ಯಾಖ್ಯಾನ) 'ತತ್ವಮಂಜರಿ'ಯು ತೋರಿಸಿಕೊಡುತ್ತದೆ. ಇಲ್ಲಿಗೆ ಸೂತ್ರಪ್ರಸ್ಥಾನಕ್ಕೆ ಸಂಬಂಧಿಸಿದ ನಾಲ್ಕು ಮೂಲ ಗ್ರಂಥಗಳ ವಿಚಾರವು ಮುಗಿಯಿತು. ಇನ್ನು ಇದಕ್ಕೆ ಸಂಬಂಧಿಸಿದ ಟೀಕಾ ಟಿಪ್ಪಣಿಗಳ ವಿಚಾರವನ್ನು ಸ್ವಲ್ಪ ಮಟ್ಟಿಗಾದರೂ ತಿಳಿಸುವುದು ಅಪೇಕ್ಷಿತವಾಗಿದೆ.

23. ಟೀಕಾ ಗ್ರಂಥಗಳು : ಶ್ರೀಮನ್ಮಧ್ವಾಚಾರ್ಯರ ಮೂಲಗ್ರಂಥಗಳಿಗೆ ಟೀಕೆ ಬರೆದವರಲ್ಲಿ ಪದ್ಮನಾಭತೀರ್ಥರೇ ಮೊದಲಿಗರೆಂಬುದನ್ನು ಅವರ ಚರಮ ಶ್ಲೋಕವೇ ತಿಳಿಸುತ್ತದೆ.*

ಈ ಪದ್ಮನಾಭತೀರ್ಥರು (ಇವರ ವೃಂದಾವನ ಕೊಪ್ಪಳ ಜಿಲ್ಲಾ ಆನೆಗೊಂದಿಯಲ್ಲಿರುವ ನವವೃಂದಾವನದಲ್ಲಿದೆ. ಅವರು ವೃಂದಾವನಸ್ಥರಾದುದು ಶಾ.ಶ. ೧೨೪೬ನೇ ರಕ್ತಾಕ್ಷಿ ಸಂ|| ಅಥವಾ ಕ್ರಿ.ಶ. 1324). ಸೂತ್ರಭಾಷ್ಯಕ್ಕೆ ಸತ್ತರ್ಕದೀಪಾವಳಿ ಎಂಬ ಟೀಕೆಯನ್ನೂ ಅನುವ್ಯಾಖ್ಯಾನಕ್ಕೆ ಸನ್ನ್ಯಾಯರತ್ನಾವಳಿ ಎಂಬ ಟೀಕೆಯನ್ನೂ ಬರೆದಿದ್ದಾರೆ. ತ್ರಿವಿಕ್ರಮ

---

* ಪೂರ್ಣಪ್ರಜ್ಞಕೃತಂ ಭಾಷ್ಯಂ ಆದೌ ತದ್ಭಾವಪೂರ್ವಕಮ್ |
ಯೋ ವ್ಯಾಕರೋನ್ನಮಸ್ತಸ್ಮೈ ಪದ್ಮನಾಭಾಖ್ಯಯೋಗಿನೇ ||

(ಅರ್ಥ) ಶ್ರೀಮದಾಚಾರ್ಯರ ಭಾಷ್ಯಗಳಿಗೆ ಅವರ ಅಭಿಪ್ರಾಯಕ್ಕೆ ಅನುಗುಣವಾಗಿ ಯಾರು ಮೊಟ್ಟಮೊದಲು ಟೀಕೆಗಳನ್ನು ಬರೆದರೋ ಅಂಥಾ ಪದ್ಮನಾಭತೀರ್ಥರಿಗೆ ನಮಸ್ಕಾರ.

ಪಂಡಿತಾಚಾರ್ಯರು ಭಾಷ್ಯಕ್ಕೆ ತತ್ವಪ್ರದೀಪ ಎಂಬ ಟೀಕೆಯನ್ನು ಬರೆದಿದ್ದಾರೆ, ಅದು ಮುದ್ರಿತವಾಗಿದೆ. ಅವರ ಮಕ್ಕಳಾದ ನಾರಾಯಣ ಪಂಡಿತಾಚಾರ್ಯರು ಅನುವ್ಯಾಖ್ಯಾನಕ್ಕೆ ನಯಚಂದ್ರಿಕಾ ಎಂಬ ಟೀಕೆಯನ್ನು ಬರೆದಿದ್ದಾರೆ. ಇವುಗಳಿಗೆಲ್ಲ ಸಾಮಾನ್ಯವಾಗಿ ಪ್ರಾಚೀನ ಟೀಕೆಗಳೆಂದು ಹೆಸರು. ಶ್ರೀಮಟ್ಟೀಕಾಚಾರ್ಯರೆಂದು ಪ್ರಸಿದ್ಧರಾದ ಶ್ರೀಮಜ್ಜಯತೀರ್ಥರು ಸೂತ್ರಭಾಷ್ಯದ ಮೇಲೆ ತತ್ವಪ್ರಕಾಶಿಕಾ ಎಂಬ ಟೀಕೆಯನ್ನೂ ಅನುವ್ಯಾಖ್ಯಾನದ ಮೇಲೆ ಶ್ರೀಮನ್ನ್ಯಾಯಸುಧಾ ಎಂಬ ಬಹು ಪ್ರೌಢವಾದ ಮತ್ತು ವಿಸ್ತಾರವಾದ ಟೀಕೆಯನ್ನೂ ನ್ಯಾಯವಿವರಣದ ಪ್ರಥಮಾಧ್ಯಾಯದ ಕೇವಲ ಮೂರು ಪಾದಗಳಿಗೆ ಮಾತ್ರ ಟೀಕೆಯನ್ನು ಬರೆದಿದ್ದಾರೆ.*

ಹೀಗೆ ಇವರು ಸೂತ್ರಪ್ರಸ್ಥಾನದ ಮೇಲೆ ಮೂರು ಟೀಕಾಗ್ರಂಥಗಳನ್ನು ರಚಿಸಿದ್ದಾರೆ. ಟೀಕಾಚಾರ್ಯರ ಗ್ರಂಥಗಳಿಗೇ ಅತ್ಯಂತ ಮಹತ್ವದ ಸ್ಥಾನವಿದೆ. ಕೇವಲ ಭಾಷ್ಯದ ಅರ್ಥವನ್ನು ವಿವರಿಸುತ್ತ ಜಗನ್ನಾಥಯತಿಗಳೆಂಬುವರು 'ಭಾಷ್ಯದೀಪಿಕಾ' ಎಂಬ ವ್ಯಾಖ್ಯಾನವನ್ನೂ ಭಗವಂತರಾಯ ಎಂಬುವರು ಮತ್ತೊಂದು ವ್ಯಾಖ್ಯಾನವನ್ನೂ ರಚಿಸಿದ್ದಾರೆ. ಇತ್ತೀಚೆಗೆ ಮಹಾಮಹೋಪಾಧ್ಯಾಯ ಶ್ರೀಮುಷ್ಣಂ ಸುಬ್ಬರಾಯಾಚಾರ್ಯರೆಂಬುವರು 'ಸೂತ್ರಾರ್ಥಮಣಿಮಂಜರಿ' ಎಂಬ ವಿವರಣಾತ್ಮಕ ಸಂಸ್ಕೃತ ಗ್ರಂಥವನ್ನೂ ಬರೆದು ಪ್ರಕಟಿಸಿದ್ದಾರೆ.

24. ಟಿಪ್ಪಣಿ ಗ್ರಂಥಗಳು : ಶ್ರೀಮಟ್ಟೀಕಾಕೃತ್ಪಾದರ ಟೀಕಾಗ್ರಂಥಗಳು ಬೆಳಕಿಗೆ ಬಂದ ನಂತರ ಪ್ರಾಯಶಃ ಬೇರೆ ಯಾರೂ ಆ ಗ್ರಂಥಗಳ ಮೇಲೆ ಸ್ವತಂತ್ರಿಸಿ 'ಟೀಕೆ'ಗಳನ್ನು ಬರೆಯಲು ಹೊರಟಿಲ್ಲ; ಅವರ ಟೀಕೆಗಳು ಅಷ್ಟು ವ್ಯಾಪಕವಾಗಿ ಅಷ್ಟು ಅರ್ಥಗರ್ಭಿತವಾಗಿವೆ. ಈ ಟೀಕೆಗಳ ಅರ್ಥವನ್ನು ವಿವರಿಸುವ ಗ್ರಂಥಗಳಿಗೆ ಟಿಪ್ಪಣಿಗಳೆಂದು ಹೆಸರು. ಟೀಕಾರಾಯರ ಒಂದೊಂದು ಗ್ರಂಥಕ್ಕೂ ಅನೇಕರು ಅನೇಕ ಟಿಪ್ಪಣಿಗಳನ್ನು ಬರೆದಿದ್ದಾರೆ. ಹಾಗೆ ಟಿಪ್ಪಣಿ ಬರೆಯುವದೇ ಒಂದು ಮಹತ್ಕಾರ್ಯ, ಒಂದು ಭಗವತ್ಸೇವೆ, ಎಂಬ ಭಾವನೆ ಈ ಟಿಪ್ಪಣಿಕಾರರಲ್ಲಿ ಇದ್ದದ್ದು ಎದ್ದು ಕಂಡುಬರುತ್ತದೆ. ಅವುಗಳಲ್ಲಿ ಬಹಳ ಪ್ರಚಾರದಲ್ಲಿರುವ ಪ್ರಮುಖ ಟಿಪ್ಪಣಿಗಳ ಹೆಸರುಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ. ತತ್ವಪ್ರಕಾಶಿಕೆಯ ಮೇಲೆ ಸುಮಾರು ಹನ್ನೊಂದು ಟಿಪ್ಪಣಿಗಳು ಮುಖ್ಯವಾಗಿವೆ. ಅವುಗಳಲ್ಲಿ (1) ಶ್ರೀವಾದಿರಾಜರ ಟಿಪ್ಪಣಿ (ಗುರ್ವರ್ಥದೀಪಿಕಾ), (2) ರಾಘವೇಂದ್ರಸ್ವಾಮಿಗಳ ಭಾವದೀಪ, (3) ಶ್ರೀನಿವಾಸತೀರ್ಥರ ಶರ್ಕರಾ ಹೆಚ್ಚು ಪ್ರಸಿದ್ಧವಾಗಿವೆ. ಅಲ್ಲದೆ ರಘೂತ್ತಮ ಸ್ವಾಮಿಗಳ ಭಾವಬೋಧವೂ ಪ್ರಸಿದ್ಧವಾಗಿದೆ. ಇನ್ನು ನ್ಯಾಯಸುಧಾ ಮೇಲೆ ಸುಮಾರು ಹದಿನೈದು ಟಿಪ್ಪಣಿಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಮಂತ್ರಾಲಯದ ಸ್ವಾಮಿಗಳ ಪರಿಮಳ, ವಾದಿರಾಜರ ಗುರ್ವರ್ಥದೀಪಿಕೆಯೂ ವಿದ್ಯಾಧೀಶರ ವಾಕ್ಯಾರ್ಥಚಂದ್ರಿಕೆಯೂ ಶ್ರೀಪಾದರಾಜರ ವಾಗ್ವಜ್ರವೂ ಯಾದುಪತ್ಯಾದಿ ಟಿಪ್ಪಣಿಗಳೂ ಮುಖ್ಯವಾದುವು. ವಾಕ್ಯಾರ್ಥಚಂದ್ರಿಕೆ ಕೇವಲ ಪಂಚಾಧಿಕರಣಿಗೆ ಮಾತ್ರ ಇದೆ. ಮಿಕ್ಕ ಭಾಗಕ್ಕೆ ಅವರ ಶಿಷ್ಯರಾದ ಕೇಶವಾಚಾರ್ಯರು 'ಶೇಷವಾಕ್ಯಾರ್ಥಚಂದ್ರಿಕಾ' ಎಂಬ

* ಇದರಲ್ಲಿ ತತ್ತ್ವಪ್ರಕಾಶಿಕೆ ಎಂಟು ಸಾವಿರ ಗ್ರಂಥವುಳ್ಳದ್ದೂ, ನ್ಯಾಯಸುಧಾ ಇಪ್ಪತ್ತನಾಲ್ಕು ಸಾವಿರ ಗ್ರಂಥವುಳ್ಳದ್ದೂ ನ್ಯಾಯ·ವಿವರಣ ಗ್ರಂಥ ಮುನ್ನೂರು ಗ್ರಂಥಗಳಿವೆ.

ಹೆಸರಿನಿಂದ ಬರೆದಿದ್ದಾರೆ.

25. ಸೂತ್ರಸಂಬಂಧಿ ಗ್ರಂಥಗಳು : ಬ್ರಹ್ಮಸೂತ್ರಗಳ ಭಾವವನ್ನೇ ತಿಳಿಸುವುದಕ್ಕಾಗಿಯೇ ಕೆಲವು ಸ್ವತಂತ್ರ ಗ್ರಂಥಗಳು ರಚಿತವಾಗಿವೆ. ಜಗನ್ನಾಥತೀರ್ಥರ ಸೂತ್ರದೀಪಿಕಾ, ಇವುಗಳಲ್ಲಿ ರಾಘವೇಂದ್ರ ಸ್ವಾಮಿಗಳ 'ತಂತ್ರ ದೀಪಿಕಾ' ಸೂತ್ರಗಳ ಅರ್ಥವನ್ನು ವಿವರಿಸಿದರೆ, ಅವರ 'ನ್ಯಾಯಮುಕ್ತಾವಳಿ' ಅಧಿಕರಣಗಳ ಪ್ರಮೇಯವನ್ನು ತಿಳಿಸುತ್ತದೆ. ಶ್ರೀ ವಿಜಯೀಂದ್ರಸ್ವಾಮಿಗಳಂತೂ ಬ್ರಹ್ಮಸೂತ್ರಗಳನ್ನು ಕುರಿತು (1) ತತ್ತ್ವಮಾಣಿಕ್ಯಪೇಟಿಕಾ (ತತ್ತ್ವಪ್ರಕಾಶಿಕಾ ಟಿಪ್ಪಣಿ) (2) ನ್ಯಾಯ ಸಂಗ್ರಹ (3) ನಯಮುಕುರ, (4) ನಯಮಂಜರಿ, (5) ಅಧಿಕರಣನ್ಯಾಯ ಮಾಲಾ, (6) ಅಧಿಕರಣರತ್ನಮಾಲಾ ಮೊದಲಾದ ಗ್ರಂಥಗಳನ್ನು ರಚಿಸಿದ್ದಾರಾದರೂ—ನ್ಯಾಯಸಂಗ್ರಹ ಒಂದನ್ನು ಬಿಟ್ಟು ಮಿಕ್ಕ ಯಾವವೂ ಮುದ್ರಿತವಾಗಿಲ್ಲ. ಈಚೆಗೆ ಧಾರವಾಡದಲ್ಲಿ ಸವಣೂರು ಗೋವಿಂದರಾಯರು 'ಸೂತ್ರಾರ್ಥರತ್ನಾವಳಿ' ಎಂಬ ಗ್ರಂಥವನ್ನು ರಚಿಸಿ ಪ್ರಕಟಿಸಿದರು. ಹೀಗೆ ಬ್ರಹ್ಮಸೂತ್ರಗಳ ಬಗ್ಗೆಯೇ ಬಹುವಿಸ್ತಾರವಾದ ಸಾಹಿತ್ಯ ಬೆಳೆದಿದೆ.

26. ತಾತ್ಪರ್ಯಚಂದ್ರಿಕಾ : ಶ್ರೀಪಾದರಾಜರ ಕಾಲದ ಹೊತ್ತಿಗೆ 'ತತ್ತ್ವ ಪ್ರಕಾಶಿಕಾ' ಮತ್ತು 'ನ್ಯಾಯಸುಧಾ'ಗಳ ಮೇಲೆಯೇ ಅನೇಕ ಪ್ರತಿವಾದಿಗಳು ನಾನಾ ಬಗೆಯಾಗಿ ವಾದ ಮಾಡುತ್ತಾ ವಿವಿಧ ಆಕ್ಷೇಪಗಳನ್ನು ಎತ್ತಿ ದೂಷಿಸಲಾರಂಭಿಸಿದ್ದರು. ಅವರು ನೇರವಾಗಿ ಒಂದೊಂದು ಗ್ರಂಥದ ಮೇಲೆಯೇ ಆಕ್ಷೇಪ ಮಾಡದೇ ಒಂದು ಟೀಕಾವಾಕ್ಯಕ್ಕೂ ಬೇರೊಂದು ಗ್ರಂಥದ ಟೀಕಾವಾಕ್ಯಕ್ಕೂ ಮೂಲಗ್ರಂಥಕ್ಕೂ ಟೀಕಾವಾಕ್ಯಗಳಿಗೂ ಪರಸ್ಪರ ವಿರೋಧವನ್ನು ತೋರಿಸಿ ಮಧ್ವಸಿದ್ಧಾಂತವನ್ನೇ ಅಲ್ಲಗಳೆಯಹತ್ತಿದರು. ಅಂಥಾ ಪ್ರತಿವಾದಿಗಳ ಬಾಯಿ ಕಟ್ಟಿಸುವುದು ಸಾಮಾನ್ಯ ಪಂಡಿತರಿಂದ ದುಸ್ಸಾಧ್ಯವಾದ ಕಾರ್ಯವಾಗಿತ್ತು. ಈ ಕಾರ್ಯದಲ್ಲಿ ಮೊದಲು ಪ್ರವೃತ್ತರಾದವರು ಈಗ ಮುಳಬಾಗಿಲಲ್ಲಿ ವೃಂದಾವನಸ್ಥರಾಗಿರುವ ಶ್ರೀಪಾದರಾಜ ಸ್ವಾಮಿಗಳು. ಅವರು (ವ್ಯಾಸರಾಯರು ಹೇಳುವಂತೆ) ವ್ಯಾಕರಣ, ಮೀಮಾಂಸಾ ಮತ್ತು ತರ್ಕ(ನ್ಯಾಯ)ಗಳೆಂಬ ಮೂರು ಮಹಾಸಮುದ್ರಗಳಲ್ಲೂ ಲೀಲಾಜಾಲವಾಗಿ ಈಜಬಲ್ಲ ಮಹಾನಿಪುಣರಾಗಿದ್ದುದರಿಂದ ಅಂಥಾ ಸಕಲ ದುರ್ವಾದಿಗಳನ್ನೂ ನಿಗ್ರಹ ಮಾಡಿದರು. ಅವರ ವಿದ್ಯಾಶಿಷ್ಯರಾದ ಶ್ರೀಮದ್‌ವ್ಯಾಸರಾಯರು ಆ ಗುರುಗಳಿಂದ ಕಲಿತ ಪ್ರಮೇಯಗಳನ್ನು ನಿರೂಪಣೆ ಮಾಡುತ್ತ ತತ್ತ್ವಪ್ರಕಾಶಿಕಾ ಟೀಕೆಗೆ ವ್ಯಾಖ್ಯಾನ ಮಾಡುವ ನೆಪದಿಂದ ಇಡೀ ಸೂತ್ರ ಪ್ರಸ್ಥಾನದ ಮೇಲೆ ಯಾರು ಯಾರು ಏನೇನು ಆಕ್ಷೇಪಗಳನ್ನು ಅದುವರೆಗೆ ಹೇಳಿದ್ದರೋ ಅವೆಲ್ಲಕ್ಕೂ ಪರಿಹಾರವನ್ನು ಹೇಳಿ ಮಧ್ವಸಿದ್ಧಾಂತವನ್ನು ಎತ್ತಿ ಹಿಡಿದರು. ವ್ಯಾಸರಾಯರು ತತ್ತ್ವಪ್ರಕಾಶಿಕೆಯ ಮೇಲೆ ಬರೆದ ಈ ವಿಸ್ತಾರವಾದ ಪರಪಕ್ಷ ಖಂಡನ ಸ್ವಪಕ್ಷಮಂಡನಾತ್ಮಕವಾದ ವಿವರಣ ಗ್ರಂಥಕ್ಕೇ ತಾತ್ಪರ್ಯಚಂದ್ರಿಕಾ ಎಂದು ಹೆಸರು. ಇದಕ್ಕೆ ಮಂತ್ರಾಲಯದ ರಾಯರು 'ಚಂದ್ರಿಕಾಪ್ರಕಾಶ' ಎಂಬ ಟಿಪ್ಪಣಿಯನ್ನೂ ಬರೆದಿದ್ದಾರೆ. ವ್ಯಾಸರಾಯರು ತಮ್ಮ ಚಂದ್ರಿಕಾ ಗ್ರಂಥದ ಆರಂಭದಲ್ಲಿ 'ಸೂತ್ರದಲ್ಲಾಗಲೀ ಭಾಷ್ಯದಲ್ಲಾಗಲೀ, ಅನುವ್ಯಾಖ್ಯಾನದಲ್ಲಾಗಲೀ, ನ್ಯಾಯವಿವರಣದಲ್ಲಾಗಲೀ ಅಥವಾ (ಸತ್ತರ್ಕರತ್ನಾವಳಿ, ತತ್ತ್ವಪ್ರದೀಪ, ತತ್ತ್ವಪ್ರಕಾಶಿಕಾ, ಸುಧಾದಿ) ಅವುಗಳ ಯಾವ ಟೀಕಾ ಗ್ರಂಥಗಳಲ್ಲೇ ಆಗಲಿ ಯಾವುದು ಅಸ್ಪಷ್ಟವಾಗಿದೆಯೋ

ಅದೆಲ್ಲವನ್ನೂ ಸ್ಪಷ್ಟಪಡಿಸುತ್ತೇನೆ'* ಎಂದು ಹೇಳಿಕೊಂಡಿದ್ದಾರೆ. ಅಷ್ಟೇ ಅಲ್ಲದೆ 'ಪರಪಕ್ಷದ ವಾದಪ್ರಮೇಯಗಳೆಲ್ಲವನ್ನೂ ಸ್ಪಷ್ಟವಾಗಿ ತಿಳಿಸುವುದಲ್ಲದೆ ಅದರ ಖಂಡನೆಯನ್ನು ಅಷ್ಟೇ ಖಚಿತವಾಗಿ, ವಿಸ್ತಾರವಾಗಿ ಮಾಡುತ್ತೇನೆ. ಇದನ್ನು ಘನವಿದ್ವಾಂಸರು ಅರಿತುಕೊಳ್ಳಲಿ'† ಎಂದೂ ಪ್ರತಿಜ್ಞೆ ಮಾಡಿದ್ದಾರೆ. ಹೀಗೆ ಚಂದ್ರಿಕಾ ಗ್ರಂಥವು ತತ್ವಪ್ರಕಾಶಿಕಾ ಸುಧಾದಿ ಗ್ರಂಥಗಳನ್ನು ಓದಿದ ಬಳಿಕ ಆ ಗ್ರಂಥಗಳಲ್ಲಿ ತೋರಿಬರುವ ಜಟಿಲವಾದ, ಸಕಲ ವಿಧವಾದ ಆಕ್ಷೇಪಗಳಿಗೂ ಸಮಾಧಾನ ಹೇಳಬಲ್ಲ ಉದ್ಗ್ರಂಥವಾಗಿದೆ; ಸಾಮಾನ್ಯರಿಗೆ ಇದು ಅರ್ಥವಾಗುವುದಿಲ್ಲ. ವ್ಯಾಸರಾಯರು ಚಂದ್ರಿಕಾವನ್ನು ಮೊದಲ ಎರಡು ಅಧ್ಯಾಯಗಳಿಗೆ ಮಾತ್ರ ಬರೆದಿದ್ದಾರೆ. ಅದರಲ್ಲಿ ಮೊದಲನೆಯ ಅಧ್ಯಾಯಕ್ಕೆ ಹೋಲಿಸಿದರೆ ಎರಡನೇ ಅಧ್ಯಾಯ ಸುಮಾರು ಕಾಲುಭಾಗದಷ್ಟಾಗುತ್ತದೆ. ಮೊದಲು ವಿಸ್ತರಿಸಿದ್ದರಿಂದ ಮುಂದೆ ಅಷ್ಟು ವಿಸ್ತಾರ ಬೇಕಾಗುವದಿಲ್ಲ. ಮೂರನೇ ನಾಲ್ಕನೇ ಅಧ್ಯಾಯಗಳ ವಿವರಣೆಯನ್ನು ವ್ಯಾಸರಾಯರ ಶಿಷ್ಯ ಪರಂಪರೆಯಲ್ಲಿ ಬಂದ ಹತ್ತನೆಯವರಾದ ರಘುನಾಥತೀರ್ಥರು 'ಶೇಷಚಂದ್ರಿಕಾ' ಎಂಬ ಹೆಸರಿನಿಂದ ಬರೆದು ಮುಗಿಸಿದರು.

27. ಅಣುಭಾಷ್ಯದ ಟಿಪ್ಪಣಿಗಳು : ಅಣುಭಾಷ್ಯದ ಮೇಲೆ ಸದ್ಯಃ ಹತ್ತು ಟಿಪ್ಪಣಿಗಳು ಉಪಲಭ್ಯವಾಗಿವೆಯೆಂದೂ, ತತ್ವಮಂಜರಿ, ಆನಂದಮಾಲಾ, ನಾರಾಯಣ ಪಂಡಿತಾಚಾರ್ಯರು, ಬಿದರಹಳ್ಳಿ ಶ್ರೀನಿವಾಸತೀರ್ಥರು ಮತ್ತು ಛಲಾರೀ ಶೇಷಾಚಾರ್ಯರ ಟೀಕೆಗಳನ್ನು ಬಿಟ್ಟರೆ ಮಿಕ್ಕವೆಲ್ಲ ಮುದ್ರಣವಾಗಿಲ್ಲವೆಂದೂ ವಿದ್ಯಾಧೀಶ ಹಸ್ತಲಿಖಿತ ಗ್ರಂಥಾಲಯದಲ್ಲೂ 'ಮೈಸೂರು ಪ್ರಾಚ್ಯ ಸಂಶೋಧನಾಲಯ'ದಲ್ಲೂ ಲಿಖಿತ ಪ್ರತಿಗಳು ಉಪಲಭ್ಯವಾಗಿವೆಯೆಂದೂ ಪ್ರೊ. ಕೆ. ಟಿ. ಪಾಂಡುರಂಗಿಯವರು ಕನ್ನಡಾರ್ಥ ಸಹಿತ ಪ್ರಕಟಿಸಿರುವ 'ತತ್ವಮಂಜರಿ'ಯ ಭೂಮಿಕೆಯಲ್ಲಿ (ಪುಟ viii) ತಿಳಿಸಿದ್ದಾರೆ. ತತ್ವಮಂಜರಿಯು ಮೊಟ್ಟಮೊದಲು ಕುಂಭಕೋಣದಲ್ಲಿ ಶ್ರೀ ಟಿ. ಆರ್. ಕೃಷ್ಣಾಚಾರ್ಯರಿಂದ ಪ್ರಕಟಿಸಲ್ಪಟ್ಟಿತ್ತು. ಈಚೆಗೆ 1975ರಲ್ಲಿ ಕನ್ನಡಾರ್ಥ ಸಹಿತ ಬೆಂಗಳೂರಿನಲ್ಲಿ ನರಸಿಂಹರಾಜಾ ಕಾಲೋನಿಯ ಗುರುರಾಜ ಅಸೋಸಿಯೇಷನ್ನಿನವರಿಂದ ಪ್ರಕಟಿಸಲ್ಪಟ್ಟಿತ್ತು; ಈಗ ಆ ಪ್ರತಿಗಳೂ ದೊರಕುವುದಿಲ್ಲವೆಂದು ತಿಳಿದುಬಂದಿದೆ. ಮುದ್ರಣವಾಗದ ಟಿಪ್ಪಣಿಗಳ ಹೆಸರು ಹೀಗಿದೆ— 1. ಶ್ರೀವಿದ್ಯಾಧೀಶರ ಶಿಷ್ಯರಾದ ನರಸಿಂಹಯತಿಗಳ ಟಿಪ್ಪಣಿ, 2. ಸತ್ಯಸಂತುಷ್ಟರ ಶಿಷ್ಯರ ರಾಮಶಬ್ದಾರ್ಥಗರ್ಭಿತ ಅಣುಭಾಷ್ಯವಿವರಣ, 3. ಅಣುಭಾಷ್ಯಪ್ರಕಾಶಿಕಾ, 4. ಕಾಗಲೂರು ಆನಂದತೀರ್ಥಸುತರ ಅಣುಭಾಷ್ಯವಿವೃತಿ, 5. ಅಣುಭಾಷ್ಯಪ್ರದೀಪ ಮತ್ತು 6. ಅಣುಭಾಷ್ಯಾರ್ಥ. ಇನ್ನು 7. ತ್ರೈವಿಕ್ರಮಾರ್ಯ ದಾಸರೆಂಬುವರು ಬರೆದಿರುವ 'ಆನಂದಮಾಲಾ' ಟಿಪ್ಪಣಿಯೂ (1970) 8. ರಾಘವೇಂದ್ರಸ್ವಾಮಿಗಳ 'ತತ್ವಮಂಜರಿ'ಯೂ ಮುದ್ರಿತವಾಗಿದೆ. (ನನಗೆ ತತ್ವ

* ಸೂತ್ರೇ ಭಾಷ್ಯೇऽನುಭಾಷ್ಯೇ ಚ ಸನ್ನ್ಯಾಯವಿವೃತೌ ತಥಾ |
ಟೀಕಾಸು ಚ ಯದಸ್ಪಷ್ಟಂ ತಚ್ಚ ಸ್ಪಷ್ಟೀಕರಿಷ್ಯತೇ ||

† ಪ್ರತಿಸೂತ್ರಂ ಪ್ರಕಾಶ್ಯೇತೇ ಘಟನಾಘಟನೇ ಮಯಾ |
ಸ್ವೀಯಾನ್ಯಪಕ್ಷಯೋಃ ಸಮ್ಯಕ್ ವಿದಾಂಕುರ್ವಂತು ಸೂರಯಃ ||

ಮಂಜರಿಯೊಂದನ್ನು ಬಿಟ್ಟು ಬೇರೆ ಯಾವುದೂ ದೊರಕಿಲ್ಲ, ಆದಕಾರಣ ಮುಖ್ಯವಾಗಿ ತತ್ವಮಂಜರಿಯೇ ನನಗೆ ದಾರಿದೀಪವಾಗಿದೆ.)

ಹೀಗೆ ಸೂತ್ರಪ್ರಸ್ಥಾನಕ್ಕೆ ಸಂಬಂಧಪಟ್ಟ ಮೂಲಗ್ರಂಥ ಮತ್ತು ಟೀಕಾಟಿಪ್ಪಣಿ ಗ್ರಂಥಗಳ ವಿಚಾರವನ್ನು ತಿಳಿಸಿದ ಬಳಿಕ ಈಗ ನೇರವಾಗಿ ಅಣುಭಾಷ್ಯಕ್ಕೆ ಸಂಬಂಧಿಸಿದ ಬ್ರಹ್ಮಸೂತ್ರಗಳ ವಿಚಾರಕ್ಕೆ ಹೋಗುವೆನು.

28. **ನಾಲ್ಕು ಅಧ್ಯಾಯಗಳು :** ಬ್ರಹ್ಮಸೂತ್ರಗಳು ಹಿಂದೆ (ಖಂಡ 7) ಹೇಳಿದಂತೆ ನಾಲ್ಕೇ ಅಧ್ಯಾಯಗಳುಳ್ಳದ್ದಾಗಿ ನಾಲ್ಕು ಪ್ರಧಾನ ವಿಚಾರಗಳನ್ನು ನಿರೂಪಣೆ ಮಾಡುತ್ತದೆ. ಈ ನಾಲ್ಕು ಅಧ್ಯಾಯಗಳ ಪೈಕಿ ಮೊದಲನೆಯ ಅಧ್ಯಾಯವು ಬ್ರಹ್ಮನಲ್ಲಿ (ಬ್ರಹ್ಮ ಎಂದರೆ ವಿಷ್ಣು ಎಂದೇ ಅರ್ಥವೆಂದು ಶ್ರೀಮದಾಚಾರ್ಯರು ಹೇಳುತ್ತಾರೆ.) ಸಕಲ ಶಬ್ದಗಳನ್ನೂ ಅನ್ವಯಿಸುವುದರಿಂದ ಅದಕ್ಕೆ ಸಮನ್ವಯಾಧ್ಯಾಯ*ವೆಂದು ಹೆಸರು. 2ನೇ ಅಧ್ಯಾಯದಲ್ಲಿ ಈ ರೀತಿ ಸಮನ್ವಯ ಮಾಡುವುದಕ್ಕೆ ಅಡಚಣೆಯಾಗಿ ಬರುವ ಸಕಲ ವಿರೋಧಗಳನ್ನು ಪರಿಹರಿಸಿ ಯಾವ ವಿರೋಧವೂ ಇಲ್ಲವೆಂಬುದನ್ನು ಸಮರ್ಥಿಸುತ್ತದೆ; ಆದ್ದರಿಂದ 2ನೇ ಅಧ್ಯಾಯಕ್ಕೆ ಅವಿರೋಧಾಧ್ಯಾಯವೆಂದು ಹೆಸರು. ಮುಂದೆ 3ನೇ ಅಧ್ಯಾಯ ಆ ಪರಬ್ರಹ್ಮನನ್ನು ಪಡೆಯಲು ಆಚರಿಸಬೇಕಾದ ಸಾಧನಗಳನ್ನು ತಿಳಿಸುತ್ತದೆ. ಆದಕಾರಣ ಇದಕ್ಕೆ ಸಾಧನಾಧ್ಯಾಯವೆಂದು ಹೆಸರು. ಕಟ್ಟಕಡೆಗೆ ಈ ಸಾಧನಾನುಷ್ಠಾನದಿಂದ ಏನು ಲಾಭ? ಯಾವ ಫಲ ಸಿಗುತ್ತದೆಯೆಂಬ ವಿಚಾರವನ್ನು 4ನೇ ಅಧ್ಯಾಯ ತಿಳಿಸುವುದರಿಂದ ಅದಕ್ಕೆ ಫಲಾಧ್ಯಾಯವೆಂದು ಹೆಸರು. ಏವಂಚ ಬ್ರಹ್ಮಸೂತ್ರಗಳು 4 ಅಧ್ಯಾಯಗಳಲ್ಲಿ ಮುಖ್ಯವಾಗಿ 1. ಸಮನ್ವಯ, 2. ಅವಿರೋಧ, 3. ಸಾಧನ, 4. ಫಲಗಳೆಂಬ ನಾಲ್ಕು ಪ್ರಮೇಯಗಳನ್ನು ನಿರೂಪಿಸುವುವೆಂದು ಹೇಳಿದಂತಾಯಿತು. ಅದಕ್ಕೆ ತಕ್ಕಂತೆ ಆ ಅಧ್ಯಾಯಗಳಿಗೆ ಕ್ರಮವಾಗಿ ಸಮನ್ವಯಾಧ್ಯಾಯ, ಅವಿರೋಧಾಧ್ಯಾಯ, ಸಾಧನಾದ್ಯಾಯ ಮತ್ತು ಫಲಾಧ್ಯಾಯಗಳೆಂದೇ ಹೆಸರು.

29. **ಹದಿನಾರು ಪಾದಗಳು :** ಹಿಂದೆ 7ನೇ ಖಂಡದಲ್ಲಿ ತಿಳಿಸಿದಂತೆ ಪ್ರತಿಯೊಂದು ಅಧ್ಯಾಯವೂ ನಾಲ್ಕು ನಾಲ್ಕು ಪಾದಗಳಾಗಿ ವಿಭಾಗವಾಗಿದೆ. ಹೀಗೆ ನಾಲ್ಕು ಅಧ್ಯಾಯದಿಂದ ಒಟ್ಟು ಹದಿನಾರು ಪಾದಗಳಾಗುತ್ತವೆಯಾದರೂ ಒಂದೊಂದು ಅಧ್ಯಾಯದ ಪಾದಗಳ ವಿಭಜನಾಕ್ರಮವೇ ಬೇರೆಬೇರೆಯಾಗಿರುವುದರಿಂದ ಅವನ್ನು ಆಯಾ ಅಧ್ಯಾಯಕ್ಕೆ ಅನುಗುಣ

---

* ಸಮನ್ವಯ ಎಂಬುದರಲ್ಲಿ ಸಂ, ಅನು, ಅಯ ಎಂದು ಮೂರು ಅವಯವಗಳಿವೆ. ಸಂ ಎಂದರೆ ಸಮ್ಯಕ್=ಒಟ್ಟಾಗಿ ಅರ್ಥಾತ್ ಎದ್ದು ಕಾಣುವ ವಿರೋಧ ಪರಿಹಾರವಾಗುವಂತೆ ಎಂದರ್ಥ. ಅಯ ಎಂಬುದು ಇ (ಇಣ್‌ಗತೌ, ಅದಾದಿ, ಪರ)=ಹೋಗು ಎಂಬ ಧಾತುವಿನ (ಭಾವೇ ಅಚ್ ಪ್ರತ್ಯಯ ಸೇರಿದ) ರೂಪವಾದ್ದರಿಂದ ಅದಕ್ಕೆ 'ಹೊಂದಾಣಿಕೆ, ಸಂಬಂಧ' ಎಂದು ಅರ್ಥ. ಹೀಗೆ ಸಮನ್ವಯ ಎಂದರೆ ಆಪಾತತಃ ತೋರುವ ವಿರೋಧವನ್ನು ಪರಿಹಾರ ಮಾಡಿ ವಿಷ್ಣುವಿನಲ್ಲಿ ಹೊಂದಿಸಿ ಅರ್ಥ ಹೇಳುವುದು ಎಂದರ್ಥ. ಈ ರೀತಿ ಹೊಂದಿಸಲು ಉಪಕ್ರಮಾದಿಲಿಂಗ(ಯುಕ್ತಾ)ಗಳು ಸಹಾಯಕವಾಗುವುದೆಂಬುದನ್ನು ಬ್ರಹ್ಮಸೂತ್ರದಲ್ಲಿ 'ಓಂ ತತ್ತುಸಮನ್ವಯಾತ್ ಓಂ' (I-i-4) ಎಂಬ ಸೂತ್ರದಲ್ಲಿ ತೋರಿಸಿದ್ದಾರೆ. ಇದರ ವಿಚಾರ ಅಣುಭಾಷ್ಯದ 'ಸಮನ್ವಯಾತ್'(೩ನೇ ಶ್ಲೋ.) ಎಂಬುದರ ವಿವರಣೆಯಲ್ಲಿ ಬಂದಿದೆ. ಅಲ್ಲಿ ನೋಡಿ. ಗತಿ-ಗುರಿ-'ಮಹಾತಾತ್ಪರ್ಯ'.

ವಾಗಿಯೇ ಮಾಡಬೇಕಾಗುತ್ತದೆ. ಆದಕಾರಣ ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸಿ ಈಗ ಅಧಿಕರಣ ಮತ್ತು ಸೂತ್ರಗಳ ವಿಚಾರಕ್ಕೆ ಹೋಗೋಣ.

30. ಅಧಿಕರಣಗಳು ಮತ್ತು ಸೂತ್ರಗಳು : ಪ್ರತಿಯೊಂದು ಅಧ್ಯಾಯವೂ ಹೇಗೆ ಪ್ರತಿಯೊಂದು ಪಾದದಲ್ಲೂ ಅನೇಕ ಅಧಿಕರಣಗಳೆಂಬ (ನ್ಯಾಯವನ್ನು ಪ್ರತಿಪಾದಿಸುವ) ಬಿಡಿಬಿಡಿ ಸಣ್ಣ ಭಾಗಗಳು ಇರುವುವೆಂದೂ, ಪ್ರತಿಯೊಂದು ಅಧಿಕರಣದಲ್ಲೂ ಪ್ರತಿಪಾದನೀಯ ವಿಷಯಕ್ಕೆ ತಕ್ಕಂತೆ ಒಂದು ಎರಡು ಅಥವಾ ಇನ್ನೂ ಹೆಚ್ಚು ಸೂತ್ರಗಳಿರುವುವೆಂದೂ ಈ ಮೊದಲೇ (ಖಂಡ 8-9) ನಿರೂಪಣೆ ಮಾಡಿದ್ದೇವೆ. ಅಧ್ಯಾಯ ಸಂಖ್ಯೆಯೂ ಪಾದಸಂಖ್ಯೆಯೂ ನಿಯತವಾದ್ದರಿಂದ ಅದರ ಸಂಖ್ಯೆಯಲ್ಲಿ ವ್ಯತ್ಯಾಸಗಳು ಬರಲು ಸಾಧ್ಯವಿರಲಿಲ್ಲ. ಇನ್ನು ಅಧಿಕರಣಗಳಾಗಿ ವಿಭಾಗಿಸುವಾಗಲೂ ಸೂತ್ರಗಳನ್ನು ಪಠಿಸುವಾಗಲೂ ಒಬ್ಬೊಬ್ಬರು ಭಾಷ್ಯಕಾರರೂ ಒಂದೊಂದು ಮಾರ್ಗವನ್ನು ಅನುಸರಿಸುವುದರಿಂದ ಒಟ್ಟು ಅಧಿಕರಣಗಳು ಎಷ್ಟು ಎಂಬ ವಿಚಾರದಲ್ಲೂ ಒಟ್ಟು ಸೂತ್ರಗಳೆಷ್ಟು ಎಂಬ ವಿಷಯದಲ್ಲೂ ಮೂವರು ಭಾಷ್ಯಕಾರರೂ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಒಬ್ಬ ಭಾಷ್ಯಕಾರರು ಒಂದು ಸೂತ್ರವೆಂದು ಪಠಿಸುವ ಸೂತ್ರವನ್ನೇ ಇನ್ನೊಬ್ಬರು ಎರಡು ಸೂತ್ರಗಳಾಗಿ ಪಠಿಸುವರು. ಹೀಗೆಯೇ ಒಬ್ಬರು ಸಿದ್ಧಾಂತಸೂತ್ರವೆಂದು ತಿಳಿಯುವ ಸೂತ್ರವನ್ನು ಮತ್ತೊಬ್ಬರು ಪೂರ್ವಪಕ್ಷಸೂತ್ರವೆಂದು ತೋರಿಸಿಕೊಡುವರು. ಈ ರೀತಿ ಭಿನ್ನಭಿನ್ನ ವಿಧವಾಗಿ ಸೂತ್ರಗಳಿಗೆ ಅರ್ಥಮಾಡುವ ಪರಿಪಾಟಿಯು ಪೂರ್ವಮೀಮಾಂಸಾಶಾಸ್ತ್ರದಲ್ಲೇ ಆರಂಭವಾಗಿ ಉತ್ತರ ಮೀಮಾಂಸಾಶಾಸ್ತ್ರಕ್ಕೂ ಮುಂದುವರಿಸಿ ಬಂದಿತು. ಆಯಾಯ ಭಾಷ್ಯಕಾರರು ತಮ್ಮ ತಮ್ಮ ಕ್ರಮವೆ ಸರಿಯಾದುದೆಂದು ಸಮರ್ಥಿಸಿಕೊಳ್ಳುವುದೂ ಸಹಜವಾಗಿದೆ. ಪ್ರಸ್ತುತ ನಮಗೆ ಈಗ ಸಿಕ್ಕಿರುವುದು ಶಾಂಕರ, ರಾಮಾನುಜೀಯ ಮತ್ತು ಮಾಧ್ವ ಮೂರೇ ಮುಖ್ಯ ಭಾಷ್ಯಗಳಾದ್ದರಿಂದ ಈ ಮೂರರಲ್ಲೂ ಅಧಿಕರಣ ಮತ್ತು ಸೂತ್ರಸಂಖ್ಯೆಗಳಲ್ಲಿ ಏನೇನು ವ್ಯತ್ಯಾಸವಿದೆಯೆಂಬುದನ್ನು ಅಧ್ಯಾಯ ಮತ್ತು ಪಾದಕ್ರಮದಿಂದ ಮೊದಲು ತಿಳಿಸಿಕೊಟ್ಟು ಕಡೆಗೆ ಇಡೀ ಶಾಸ್ತ್ರದಲ್ಲಿ ಏನೇನು ವ್ಯತ್ಯಾಸವಿದೆಯೆಂಬುದನ್ನು ತೋರಿಸುವೆವು. ಇದರಿಂದ ಬ್ರಹ್ಮಸೂತ್ರಗಳನ್ನು ಯಾರು ಯಾರು ಹೇಗೆ ಹೇಗೆ (ವಿಹಂಗ) ಅವಲೋಕನ ಮಾಡಿದ್ದಾರೆ ಎಂಬ ಸ್ಥೂಲ ಕಲ್ಪನೆ ಬರಲು ಅನುಕೂಲವಾಗುತ್ತದೆ.

31. ಭಾಷ್ಯತ್ರಯದಲ್ಲಿ ಅಧಿಕರಣಗಳ ಮತ್ತು ಸೂತ್ರಗಳ ಸಂಖ್ಯೆ

	ಶಂಕರ ಭಾಷ್ಯದಲ್ಲಿ		ರಾಮಾನುಜೀಯ ಭಾಷ್ಯದಲ್ಲಿ		ಮಾಧ್ವ ಭಾಷ್ಯದಲ್ಲಿ	
ಪಾದ	ಅಧಿಕರಣ	ಸೂತ್ರ	ಅಧಿಕರಣ	ಸೂತ್ರ	ಅಧಿಕರಣ	ಸೂತ್ರ
ಪ್ರಥಮಾಧ್ಯಾಯದಲ್ಲಿ						
ಪ್ರಥಮ	11	31	11	32	12	31
ದ್ವಿತೀಯ	7	32	6	33	7	32
ತೃತೀಯ	14	43	10	44	14	43
ಚತುರ್ಥ	8	28	8	29	7	29

ಪಾದ	ಶಂಕರ ಭಾಷ್ಯದಲ್ಲಿ ಅಧಿಕರಣ	ಸೂತ್ರ	ರಾಮಾನುಜೀಯ ಭಾಷ್ಯದಲ್ಲಿ ಅಧಿಕರಣ	ಸೂತ್ರ	ಮಾಧ್ವ ಭಾಷ್ಯದಲ್ಲಿ ಅಧಿಕರಣ	ಸೂತ್ರ
ಒಟ್ಟು	**40**	**134**	**35**	**138**	**40**	**135**
ದ್ವಿತೀಯಾಧ್ಯಾಯದಲ್ಲಿ						
ಪ್ರಥಮ	13	37	10	36	11	38
ದ್ವಿತೀಯ	8	45	8	42	12	45
ತೃತೀಯ	17	57	7	52	19	53
ಚತುರ್ಥ	9	22	8	19	13	23
ಒಟ್ಟು	**47**	**161**	**33**	**149**	**55**	**159**
ತೃತೀಯಾಧ್ಯಾಯದಲ್ಲಿ						
ಪ್ರಥಮ	6	27	6	27	20	29
ದ್ವಿತೀಯ	8	41	8	40	20	42
ತೃತೀಯ	36	66	26	64	42	68
ಚತುರ್ಥ	17	52	15	51	11	51
ಒಟ್ಟು	**67**	**186**	**55**	**182**	**93**	**190**
ಚತುರ್ಥಾಧ್ಯಾಯದಲ್ಲಿ						
ಪ್ರಥಮ	14	19	11	19	8	19
ದ್ವಿತೀಯ	11	21	11	20	10	22
ತೃತೀಯ	6	16	5	15	6	16
ಚತುರ್ಥ	7	22	6	22	11	23
ಒಟ್ಟು	**38**	**78**	**33**	**76**	**35**	**80**

ನಾಲ್ಕು ಅಧ್ಯಾಯಗಳಿಂದ ಒಟ್ಟು ಸಂಖ್ಯೆ

ಪ್ರಥಮಾಧ್ಯಾಯದಲ್ಲಿ	40	134	35	138	40	135
ದ್ವಿತೀಯಾಧ್ಯಾಯದಲ್ಲಿ	47	161	33	149	55	159
ತೃತೀಯಾಧ್ಯಾಯದಲ್ಲಿ	67	186	55	182	93	190
ತುರೀಯಾಧ್ಯಾಯದಲ್ಲಿ	38	78	33	76	35	80
ಎಲ್ಲಾ ಒಟ್ಟು	**192**	**559**	**156**	**545**	**223**	**564**

ಈ ಪ್ರಕಾರ ಶಾಂಕರ ಭಾಷ್ಯರೀತ್ಯಾ ಅಧಿಕರಣಗಳ ಒಟ್ಟು ಸಂಖ್ಯೆ 192, ರಾಮಾನುಜೀಯ ಭಾಷ್ಯ ರೀತ್ಯಾ 156 ಮತ್ತು ಮಾಧ್ವಭಾಷ್ಯ ರೀತ್ಯಾ 223 ಆಗುವುದು ಮತ್ತು ಸೂತ್ರಗಳ ಸಂಖ್ಯೆ ಶಾಂಕರಭಾಷ್ಯ ಪಾಠದಂತೆ 559, ರಾಮಾನುಜೀಯ ಪಾಠದಂತೆ 545 ಮತ್ತು ಮಾಧ್ವ

ಭಾಷ್ಯದಂತೆ 564 ಆಗುವುದು.

32. ಮಾಧ್ವಭಾಷ್ಯರೀತ್ಯಾ ಸೂತ್ರಸಂಖ್ಯಾ ನಿರ್ಣಯ : ಮಾಧ್ವಭಾಷ್ಯದ ಟಿಪ್ಪಣಿಕಾರರು ಶ್ರೀಮದಾಚಾರ್ಯರು ಬ್ರಹ್ಮಶಬ್ದಕ್ಕೆ ಅರ್ಥ ಹೇಳುತ್ತಾ " 'ಬ್ರಹ್ಮಶಬ್ದಶ್ಚ ವಿಷ್ಣಾವೇವ' ಎಂದರೆ 'ಬ್ರಹ್ಮ' ಶಬ್ದವು 'ವಿಷ್ಣು' ಎಂಬ ಅರ್ಥದಲ್ಲೇ ಪ್ರಯೋಗಿಸಲ್ಪಟ್ಟಿದೆ," ಎಂದು ಹೇಳುವುದನ್ನು ಗಮನಿಸಿ ವಿಷ್ಣು ಶಬ್ದದಿಂದಲೇ ಸೂತ್ರಸಂಖ್ಯೆಯನ್ನು ನಿರ್ದೇಶ ಮಾಡಿದ್ದಾರೆ ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಭಾಷ್ಯದ ಕೊಟ್ಟ ಕೊನೆಯಲ್ಲೂ 'ಗುಣ್ಯೈಃ ಪೂರ್ಣಾಯ ವಿಷ್ಣವೇ'—ಗುಣಗಳಿಂದ ಪರಿಪೂರ್ಣನಾದ ವಿಷ್ಣುವಿಗೆ—ಎಂದು ಪುನಃ ವಿಷ್ಣು ಶಬ್ದವನ್ನೇ ಗ್ರಹಣ ಮಾಡಿರುವುದರಿಂದಲೂ ಈ ಅರ್ಥ ಸೂಚಿತವಾಗುತ್ತದೆ ಎಂದು ಪ್ರತಿಪಾದನೆ ಮಾಡುತ್ತಾರೆ.

ಅದೇನೆಂದರೆ—ವಿಷ್ಣು ಶಬ್ದದಲ್ಲಿ ವಕಾರ ಷಕಾರ ಣಕಾರಗಳೆಂಬ ಮೂರು ವ್ಯಂಜನಗಳಿರುವುವಷ್ಟೆ. ಈ ಪೈಕಿ ವಕಾರವು ಅವರ್ಗೀಯಾಕ್ಷರಗಳಲ್ಲಿ ನಾಲ್ಕನೇ ಅಕ್ಷರವೂ ಷಕಾರವು ಆರನೇ ಅಕ್ಷರವೂ ಆಗಿರುವುದರಿಂದ ಕ್ರಮವಾಗಿ ನಾಲ್ಕನ್ನೂ ಆರನ್ನೂ ಸೂಚಿಸುತ್ತದೆ. ಇನ್ನು ಣಕಾರವು ಟ ವರ್ಗದಲ್ಲಿ ಐದನೇ ಅಕ್ಷರವಾದ್ದರಿಂದ ಅದು ಐದನ್ನು ಸೂಚಿಸುತ್ತದೆ. ಹೀಗೆ ವಕಾರ ಷಕಾರ ಣಕಾರಗಳು 4-6-5 ಸಂಖ್ಯೆಗಳನ್ನು ಸೂಚಿಸುತ್ತವೆ. ಸಂಸ್ಕೃತದಲ್ಲಿ ಸಂಖ್ಯೆಯನ್ನು ಹೇಳಬೇಕಾದರೆ (ಮಿಕ್ಕ ಭಾಷೆಗಳಂತೆ ಎಡದಿಂದ ಬಲಕ್ಕೆ ಹೋಗದೆ) ಬಲದಿಂದ ಎಡಕ್ಕೆ ಹೋಗುತ್ತಾರೆ. ಇದನ್ನೇ 'ಅಂಕಾನಾಂ ವಾಮತೋ ಗತಿಃ' ಎಂಬ ಉಕ್ತಿಯು ಸಮರ್ಥಿಸುತ್ತದೆ. ಅದರಂತೆ 4-6-5ನ್ನು ಹಿಂದು ಮುಂದಾಗಿ (ಬಲದಿಂದ ಎಡಕ್ಕೆ) ಓದಿದರೆ 564 ಆಗುತ್ತದೆ. ಇದೇ ಬ್ರಹ್ಮಸೂತ್ರಗಳ ಸಂಖ್ಯೆ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಶ್ರೀ ವಿಜಯೀಂದ್ರ ಸ್ವಾಮಿಗಳ "ಬ್ರಹ್ಮಸೂತ್ರಾಣಿ ಭೂ(4)ಷ(6)ಣ(5)ಮ್ ಎಂಬ 'ನ್ಯಾಯ ಸಂಗ್ರಹ'ದ ಮಾತೂ ಗಮನಾರ್ಹ. ಶಂಕರಾಚಾರ್ಯರಾಗಲಿ ರಾಮಾನುಜಾಚಾರ್ಯರಾಗಲಿ ಸೂತ್ರ ಸಂಖ್ಯೆಯ ನಿರ್ಧಾರಕ್ಕೆ ಯಾವ ರೀತಿಯ ಗಮಕವನ್ನೂ (ಸುಳಿವನ್ನೂ) ಕೊಟ್ಟಿಲ್ಲ.

ಇನ್ನು ಚಂದ್ರಿಕಾ ಗ್ರಂಥದಲ್ಲಿ ಶ್ರೀಮದ್ವ್ಯಾಸರಾಯರು ಪ್ರಥಮಾಧ್ಯಾಯದಲ್ಲಿ ವಿಶೇಷವಾಗಿ ಇಷ್ಟೇ ಅಧಿಕರಣಗಳು ಹೇಗಾದುವು, ಈ ಸೂತ್ರ ಒಂದೇ ಏಕಾಯಿತು? ಬೇರೆ ರೀತಿ ಸೂತ್ರಪಾಠ ಮಾಡಿದರೆ ಏನು ಅನುಪಪತ್ತಿಯುಂಟಾಗುತ್ತದೆ ಇತ್ಯಾದಿ ವಿಷಯಗಳನ್ನೆಲ್ಲ ಚರ್ಚಿಸಿ ಶ್ರೀಮದಾಚಾರ್ಯರು ಗ್ರಹಣ ಮಾಡಿದ ಸೂತ್ರಗಳ ಕ್ರಮವೇ ಸರಿಯೆಂದೂ ಟೀಕಾರಾಯರು ತೋರಿಸಿರುವ ಅಧಿಕರಣ ಸಂಖ್ಯೆಯೇ ಪ್ರಾಮಾಣಿಕವೆಂದೂ ವಿಸ್ತಾರವಾಗಿ ಉಪಪಾದಿಸಿದ್ದಾರೆ. ಆದರೆ ಅವೆಲ್ಲ ಸಾಮಾನ್ಯ ಜನರ ತಿಳಿವಳಿಕೆಗೆ ಹೆಚ್ಚಿನ ಮಟ್ಟದ ವಾದಸರಣಿಯೆಂದು ಹೇಳಬೇಕಾಗಿಯೇ ಇಲ್ಲ. ಅಥವಾ ಅದರಲ್ಲೇ ನುರಿತು ಪಳಗಿದ ಪ್ರೌಢವಿದ್ವಾಂಸರಾದರೂ ತಿಳಿಸಿ ಕೊಟ್ಟು ವಿವರಿಸಿದರೆ ಅರ್ಥವಾಗಬಹುದು. ಇಲ್ಲಿಗೆ ಅಧಿಕರಣಗಳ ಮತ್ತು ಸೂತ್ರಗಳ ಸಂಖ್ಯೆಯ ವಿಚಾರವನ್ನು ಮುಗಿಸಬಹುದು.

ಶ್ರೀಮದಾಚಾರ್ಯರು ಅನುವ್ಯಾಖ್ಯಾನದ ಪ್ರಾರಂಭದಲ್ಲೇ ಈ ಬ್ರಹ್ಮಸೂತ್ರಗಳ ಮಹತ್ವವೇನು? ಇದಕ್ಕೆ ಪ್ರಾಮಾಣ್ಯ ಹೇಗೆ ಸಿದ್ಧಿಸುತ್ತದೆ? ಎಂಬ ವಿಚಾರ ಮಾಡಿದ್ದಾರೆ. ಅದನ್ನೇ

ಶ್ರೀಮಟ್ಟೀಕಾಕೃತ್ಪಾದರು ಶ್ರೀಮನ್ನ್ಯಾಯಸುಧಾದಲ್ಲಿ ವಿಸ್ತಾರವಾಗಿ ನಿರೂಪಣೆ ಮಾಡಿದ್ದಾರೆ. ಈ ವಿಚಾರ ಬಹಳ ಗಹನವೂ ಆಗಿರುವುದಲ್ಲದೆ 'ಅಣುಭಾಷ್ಯ'ದ ಅಧ್ಯಯನಕ್ಕೆ ಬಹು ಮುಖ್ಯವೂ ಆಗಿದೆ. ಆದರೂ ಕೂಡ ಅಣುಭಾಷ್ಯದಲ್ಲೇ ಇದಕ್ಕೆ ಎಲ್ಲೂ ಪ್ರಸಕ್ತಿ ಬರುವದಿಲ್ಲ. ಆದಕಾರಣ ಈ ವಿಷಯವನ್ನು ಈಗ ಬಹು ಸಂಕ್ಷೇಪವಾಗಿ ತಿಳಿಸಲು ಪ್ರಯತ್ನಿಸುವೆನು.

33. ಗ್ರಂಥಕ್ಕೆ ಪ್ರಾಮಾಣ್ಯ ಹೇಗೆ ಬರುತ್ತದೆ : ಯಾವ ಗ್ರಂಥವೇ ಆಗಲಿ, ಅದಕ್ಕೆ ಪ್ರಾಮಾಣ್ಯವು ಸಿದ್ಧವಾಗಬೇಕಾದರೆ ಅದಕ್ಕೆ ಮೂರು ಮುಖ್ಯ ಲಕ್ಷಣಗಳಿರಬೇಕಾಗುವುದೆಂದು (ಯಾವುದಾದರೂ ಒಂದು ಇರಲೇಬೇಕೆಂದು) ಶ್ರೀಮದಾಚಾರ್ಯರು ತೋರಿಸಿಕೊಡುತ್ತಾರೆ. ಅವು ಯಾವುವೆಂದರೆ (1) ಆಪ್ತಿಮೂಲತ್ವ (2) ಶ್ರುತಿಮೂಲತ್ವ ಮತ್ತು (3) ಯುಕ್ತಿ ಮೂಲತ್ವ. ಆಪ್ತಿಮೂಲತ್ವ ಸಿದ್ಧವಾಗಬೇಕಾದರೆ ಪುನಃ ಮೂರು ಆನುಕೂಲ್ಯಗಳು (ಅನು ಕೂಲತೆಗಳು) ಇರಬೇಕೆನ್ನುವರು. ಆ ಅನುಕೂಲಗಳಾವುವೆಂದರೆ 'ವಕ್ತೃ ಶ್ರೋತೃ ಪ್ರಸಕ್ತೀನಾಂ ಯದಾಪ್ತಿರನುಕೂಲತಾ' ಎನ್ನುತ್ತಾರೆ. ಯತ್=ಯಾವ ವಾಕ್ಯದಲ್ಲಿ, ವಕ್ತೃ-ಶ್ರೋತೃ-ಪ್ರಸಕ್ತೀನಾಂ ಅನುಕೂಲತಾ ವಕ್ತ್ರಾನುಕೂಲ್ಯವೂ, ಶ್ರೋತ್ರಾನುಕೂಲ್ಯವೂ ಪ್ರಸಂಗಾನು ಕೂಲ್ಯವೂ ಇರುತ್ತದೋ ಅಲ್ಲಿ ಆಪ್ತಿಃ-ಆಪ್ತ ವಾಕ್ಯತ್ವವಿರುತ್ತದೆಯೆಂಬುದು ಸಾಮಾನ್ಯಾರ್ಥ. ಇದರ ಅರ್ಥವನ್ನೇ ಸುಧಾದಲ್ಲಿ ಯಥೇಷ್ಟವಾಗಿ ಚರ್ಚಿಸಿ ಹೀಗೆ ನಿರ್ಧಾರ ಮಾಡಿದ್ದಾರೆ : (i) 'ವಿವಕ್ಷಿತಾರ್ಥ ತತ್ವಜ್ಞಾನಂ ಕರಣಪಾಟವಂ ವಿವಕ್ಷಾ ಚೇತಿತ್ರಯಂ ವಕ್ತುರಾನುಕೂಲ್ಯಂ ನಾಮ'—ಹೇಳಬೇಕಾಗಿರುವ (ತಿಳಿಸಬೇಕಾಗಿರುವ) ವಿಚಾರಗಳ ಸರಿಯಾದ (ವಾಸ್ತವಿಕವಾದ) ಜ್ಞಾನವಿರುವಿಕೆ, ಕರಣಪಾಟವ (ಎಂದರೆ ಸಕಲೇಂದ್ರಿಯಗಳೂ ಉತ್ತಮ ಸ್ಥಿತಿಯಲ್ಲಿರುವುದು) ಮತ್ತು ತಿಳಿದ ವಿಚಾರವನ್ನು ತಿಳಿಸಬೇಕೆಂಬ ಇಚ್ಛೆಗೆ ವಿವಕ್ಷಾ ಎಂದು ಹೆಸರು. ಈ ಮೂರೂ ಅನುಕೂಲವಾಗಿದ್ದರೆ ವಕ್ತ್ರಾನುಕೂಲ್ಯ ಸಿದ್ಧಿಸುತ್ತದೆ ಎಂದರ್ಥ.

(ii) ತತ್ವಜ್ಞಾನಯೋಗ್ಯತಾ ವಕ್ತೃಪ್ರೀತಿ ವಿಷಯತಾ ಚೇತಿ ದ್ವಯಂ ಶ್ರೋತುಃ || ಗುರುಗಳು ನಿರೂಪಣೆ ಮಾಡಿದ ತತ್ವಗಳನ್ನು ತಿಳಿದುಕೊಳ್ಳುವ (ಗ್ರಹಿಸುವ) ಶಕ್ತಿ (ಅಥವಾ ಯೋಗ್ಯತೆ) ಮತ್ತು ಗುರುಗಳಿಗೆ ಪ್ರೀತಿಪಾತ್ರನಾಗಿರುವುದು ಇವೆರಡೂ ಶ್ರೋತ್ರಾನುಕೂಲ್ಯಗಳು.

(iii) ಶ್ರೋತೃಪ್ರಯೋಜನೋದ್ದೇಶಃ ಪ್ರಸಂಗಸ್ಯ || ಕೇಳುವವನಿಗೆ (ಶಿಷ್ಯನಿಗೆ) ಉಪ ಯೋಗವಾಗುವಿಕೆಯೇ ಪ್ರಸಂಗಾನುಕೂಲ್ಯ. ಈ ಮೂರೂ ಎಲ್ಲಿ ಸಿದ್ಧವಾಗಿವೆಯೋ ಅಲ್ಲಿ ವಕ್ತ್ರಾನುಕೂಲ್ಯವಿದೆಯೆಂದರ್ಥ.

ಸೂತ್ರಗಳು ಹೇಳುವ ವಿಚಾರಗಳು ಶ್ರುತಿಸಮ್ಮತವಾಗಿರಬೇಕು. ಇದಕ್ಕೇ ಶ್ರುತಿಮೂಲತಾ ಎಂದು ಹೆಸರು. ಮತ್ತು ಕಡೆಯದಾಗಿ ಯಾವ ವಿಷಯ ಪ್ರತಿಪಾದನೆ ಮಾಡಿದರೂ ಅವು ಯುಕ್ತಿಸಂಗತವಾಗಿರಬೇಕು, ನ್ಯಾಯ ಸಮ್ಮತವಾಗಿರಬೇಕು. ಇದಕ್ಕೆ ಯುಕ್ತಿಮೂಲತಾ ಎಂದು ಹೆಸರು. ಈ ಪ್ರಕಾರ ಒಂದು ಗ್ರಂಥಕ್ಕೆ ಪ್ರಾಮಾಣ್ಯವು ಸಿದ್ಧವಾಗಲು ಆ ಗ್ರಂಥದಲ್ಲಿ ಆಪ್ತಿ ಮೂಲತ್ವವೂ—ಶ್ರುತಿ ಮೂಲತ್ವವೂ—ಯುಕ್ತಿ ಮೂಲತ್ವವೂ ಸಿದ್ಧವಾಗಬೇಕೆಂದು ಹೇಳಿ ದಂತಾಯಿತು. ಆಪ್ತಿಮೂಲತ್ವವು ಸಿದ್ಧಿಸಬೇಕಾದರೆ ವಕ್ತ್ರಾನುಕೂಲ್ಯವೂ ಶೋತ್ರಾನುಕೂಲ್ಯವೂ ಪ್ರಸಂಗಾನುಕೂಲ್ಯವೂ ಇರಬೇಕು. ಅವು ಸಿದ್ಧವಾಗಲು ಹಿಂದೆ ಹೇಳಿದ ವಿವಕ್ಷಿತಾರ್ಥ

ತತ್ವಜ್ಞಾನಾದಿ ಸಾಧನಗಳಿರಬೇಕು. (ಹೀಗೆ ಇವು ಒಂದನ್ನೊಂದು ಆಶ್ರಯಿಸಿಕೊಂಡಿವೆ.)

34. ಬ್ರಹ್ಮಸೂತ್ರಗಳಲ್ಲಿ ಈ ಮೂರೂ ಇವೆ : ಪ್ರಕೃತ ಬ್ರಹ್ಮಸೂತ್ರಗಳಲ್ಲಿ ಈ ಮೂರೂ ಅನುಕೂಲ್ಯಗಳು ಇವೆಯಾದ್ದರಿಂದ ಅವು ಅತ್ಯುತ್ತಮ ಪ್ರಮಾಣಗಳು. ಹೇಗೆಂದರೆ ಬ್ರಹ್ಮ ಸೂತ್ರಗಳನ್ನು ರಚಿಸಿದ ವೇದವ್ಯಾಸರು ಸರ್ವಜ್ಞನಾದ ನಾರಾಯಣನ ಅವತಾರವೇ ಆದ್ದರಿಂದ ಅವರಲ್ಲಿ ವಿವಕ್ಷಿತಾರ್ಥತತ್ವಜ್ಞಾನವೂ ಕರಣಪಾಟವವೂ ಸ್ವಯಂಸಿದ್ಧವಾಗುತ್ತದೆ. ಭಾಷ್ಯದಲ್ಲಿ ಉದಾಹರಿಸಿದ ಸ್ಕಾಂದಪುರಾಣದ ಪ್ರಮಾಣವು ಹೇಳುವಂತೆ ಬ್ರಹ್ಮರುದ್ರಾದಿಗಳಿಂದ ಪ್ರಾರ್ಥಿತ ನಾದ ಭಗವಂತನೇ ವ್ಯಾಸತ್ವೇನ ಅವತರಿಸಿ ವೇದಾರ್ಥನಿರ್ಣಯಕ್ಕಾಗಿ ಈ ಸೂತ್ರಗಳನ್ನು ರಚಿಸಿದನೆಂದು ಹೇಳಿರುವುದರಿಂದ ವಿವಕ್ಷೆಯ (ಹೇಳಬೇಕೆಂಬ) ಇಚ್ಛೆಯೂ ಸಿದ್ಧಿಸುತ್ತದೆ. ಅಂತೂ ಒಟ್ಟಿನಲ್ಲಿ ವಕ್ತ್ರಾನುಕೂಲವಿದೆಯೆಂದು ಸಿದ್ಧವಾಯಿತು.

ಹೀಗೆಯೇ ದ್ವಾಪರಾಂತ್ಯ ಬಂದದ್ದರಿಂದಲೂ ಗೌತಮರ ಶಾಪದಿಂದಲೂ ಜ್ಞಾನವು ಕೆಟ್ಟುಹೋಗಲು ಬ್ರಹ್ಮಾದಿ ದೇವತೆಗಳಿಗೂ ಹಾಗೂ ಸಜ್ಜನರಿಗೂ ವೇದಾರ್ಥನಿರ್ಣಯಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿದರಾದ್ದರಿಂದ ಶ್ರೋತ್ರಾನುಕೂಲ್ಯವೂ ಪ್ರಸಂಗಾನುಕೂಲ್ಯವೂ ಸಿದ್ಧವಾಯಿತು.

ಏವಂಚ ಆಪ್ತಿಮೂಲತ್ವವೂ ಸಿದ್ಧವಾಯಿತು. ಈ ಸೂತ್ರಗಳು ವೇದಾರ್ಥನಿರ್ಣಯ ಕ್ಕಾಗಿಯೇ ಹೊರಟಿರುವುದರಿಂದಲೂ ಅನಂತ ಶ್ರುತಿಗಳಿಗೆ ನಿರ್ಣಾಯಕವಾದ್ದರಿಂದಲೂ ಇದಕ್ಕೆ ಶ್ರುತಿಮೂಲತ್ವವೂ ಒದಗಿದಂತಾಯಿತು. ಸೂತ್ರಸೂತ್ರವೂ ಯುಕ್ತ್ಯಾತ್ಮಕವಾಗಿರುವುದರಿಂದ ಬ್ರಹ್ಮಸೂತ್ರಗಳು ಅತ್ಯುತ್ತಮ ಪ್ರಮಾಣಗಳೆಂದೂ ಇದಕ್ಕಿಂತ ಉತ್ತಮ ಪ್ರಮಾಣವು ಬೇರೆ ಯಾವುದೂ ಇಲ್ಲವೆಂದೂ ಶ್ರೀಮದಾಚಾರ್ಯರು ಸಾರಿ ಹೇಳುತ್ತಾರೆ. (ಅನುವ್ಯಾಖ್ಯಾನ ಜಿಜ್ಞಾಸಾಧಿಕರಣ, ಶ್ಲೋ. ೫-೭)

ವಕ್ತೃಶ್ರೋತೃಪ್ರಸಕ್ತೀನಾಂ ಯದಾಪ್ತಿರನುಕೂಲತಾ |
ಆಪ್ತವಾಕ್ಯತಯಾ ತೇನ ಶ್ರುತಿಮೂಲತಯಾ ತಥಾ ||
ಯುಕ್ತಿಮೂಲತಯಾ ಚೈವ ಪ್ರಾಮಾಣ್ಯಂ ತ್ರಿವಿಧಂ ಮಹತ್ |
ದೃಶ್ಯತೇ ಬ್ರಹ್ಮಸೂತ್ರಾಣಾಂ ಏಕಧಾಽನ್ಯತ್ರ ಸರ್ವಶಃ ||
ಅತೋ ನೈತಾದೃಶಂ ಕಿಂಚಿತ್ ಪ್ರಮಾಣತಮಮಿಷ್ಯತೇ ||

35. ಬ್ರಹ್ಮಸೂತ್ರಗಳು ಏಕೆ ರಚಿತವಾದುವು : ಈ ಮುಖ್ಯ ವಿಚಾರವನ್ನು ಆಚಾರ್ಯರು ಭಾಷ್ಯದಲ್ಲಿ ಮೊಟ್ಟ ಮೊದಲಿಗೇ ಹೇಳಿದ್ದಾರಲ್ಲದೆ ಇದು ಬ್ರಹ್ಮಸೂತ್ರಗಳನ್ನು ಅರ್ಥಮಾಡಿ ಕೊಳ್ಳಲು ಅಡಿಗಲ್ಲಿನಂತಿದೆ. ಆದರೂ ಅಣುಭಾಷ್ಯದಲ್ಲಿ ಇದರ ಪ್ರಸಕ್ತಿಯೂ ಬರುವದಿಲ್ಲ ವಾದ್ದರಿಂದಲೂ ಇದರ ತಿಳಿವಳಿಕೆ ಅತ್ಯಗತ್ಯವಾದ್ದರಿಂದಲೂ ಇದನ್ನೂ ಇಲ್ಲಿ ಹೇಳುವೆವು.

ನಾರಾಯಣನು ಬ್ರಹ್ಮಾದಿಗಳಿಗೆ ಉಪದೇಶಿಸಿದ ಜ್ಞಾನವು ಕೃತಯುಗದಲ್ಲಿ ಸ್ವಲ್ಪವೂ ಮಾಸದೇ ಹಾಗೆಯೇ ಇತ್ತು. ತ್ರೇತಾಯುಗದಲ್ಲಿ ಕಾಲಧರ್ಮದಿಂದ ಕಾಲುಭಾಗದಷ್ಟು ಮಲಿನವಾಯಿತು. ದ್ವಾಪರದಲ್ಲಿ ಮತ್ತಷ್ಟು ಮಲಿನವಾಯಿತಲ್ಲದೆ ಗೌತಮರ ಶಾಪದಿಂದ ಸಂಪೂರ್ಣವಾಗಿ ಹಾಳಾಯಿತು. ಈಗ ಗೌತಮರೇಕೆ ಶಾಪಕೊಟ್ಟರು ಎಂಬ ಶಂಕೆ ಉದ್ಭವಿಸು

ವುದರಿಂದ ಅದನ್ನೇ ಹೇಳಬೇಕಾಗಿದೆ.

36. ಗೌತಮರ ಶಾಪಕ್ಕೆ ಕಾರಣ : ಕೃತಯುಗ ಕಳೆಯುವವರೆಗೂ ತತ್ತ್ವಜ್ಞಾನಸೂರ್ಯ ತನ್ನ ಪ್ರಖರತೇಜಸ್ಸಿನಿಂದ ಕಂಗೊಳಿಸುತ್ತಲೇ ಇದ್ದ. ಲೌಕಿಕ ವಿದ್ಯೆ ಕೈಚೆಲ್ಲಿದಲ್ಲಿ ಅಧ್ಯಾತ್ಮ ವಿದ್ಯೆ ವಿಜೃಂಭಿಸತೊಡಗುತ್ತದೆ. ಅದು ಆಹಾರವಿದ್ದಂತೆ. ಮನುಷ್ಯನ ಅಸ್ತಿತ್ವದ ಮೂಲಭೂತ ಸಾಧನಗಳಾಗಿ ಯಾವುದೇ ಬಾಹ್ಯವಸ್ತುವು ಇರಲು ಸಾಧ್ಯವಿಲ್ಲ. ಅನಂತರ ತ್ರೇತಾಯುಗ ಕಾಲಿರಿಸಿತು. ದಿನಗಳು ಉರುಳತೊಡಗಿದವು. ಒಂದು ಹಂತದಲ್ಲಿ ತತ್ತ್ವಜ್ಞಾನಕ್ಕೆ ಮಾಲಿನ್ಯ ಒದಗತೊಡಗಿತು. ಅಲ್ಲಲ್ಲಿ ತಲೆ ಎತ್ತಿದ ರಾವಣನಂತಹವರ ದೈತ್ಯವೃತ್ತಿ ಸ್ವಾರ್ಥಲಾಲಸೆ ಯಿಂದಾಗಿ ಜನರನ್ನು ವಿಷಯಪರರನ್ನಾಗಿಸುವ ಪ್ರಯತ್ನ ನಡೆಸಿತು. ಆದರೆ ಅದೇ ಯುಗ ಕಂಡ ತ್ರೇತಾಯುಗದಲ್ಲಿ ರಾಮರಾಜ್ಯ ಆಸುರೀಪ್ರವೃತ್ತಿಯನ್ನು ನಿರ್ಮೂಲಮಾಡಿ ದೈವೀ ಸಂಪತ್ತು ಪೂರ್ಣಪ್ರಮಾಣದಲ್ಲಿ ವ್ಯಕ್ತವಾಗುವಂತೆ ಮಾಡಿ ತತ್ತ್ವವಿಪ್ಲವದ ಆ ಪ್ರಯತ್ನವನ್ನು ವಿಫಲವಾಗಿಸಿ, ಮತ್ತೊಮ್ಮೆ ಕೃತಯುಗದ ತತ್ತ್ವಜ್ಞಾನಸಮೃದ್ಧಿ ಕಾಣಿಸಿಕೊಂಡು ಜಿಜ್ಞಾಸುಗಳು ನೆಮ್ಮದಿ ಕಾಣುವಂತಾಯಿತು.

ದ್ವಾಪರಯುಗದಲ್ಲಿ ತತ್ತ್ವಜ್ಞಾನಸೂರ್ಯ ಆಗಲೇ ಪಶ್ಚಿಮದತ್ತ ಪಯಣಿಸತೊಡಗಿದ್ದ. ಶ್ರೀರಾಮನ ರಕ್ಷಣೆಯಲ್ಲಿ ಮೈತುಂಬಿಕೊಂಡಿದ್ದ ಅಧ್ಯಾತ್ಮ ಈ ಯುಗದಲ್ಲಿ ಮತ್ತೆ ನಿಧಾನ ವಾಗಿ ಕೃಶವಾಗತೊಡಗಿತು. ರಾಜಮಹಾರಾಜರುಗಳಲ್ಲಿ ಸ್ವಾರ್ಥಲಾಲಸೆ ಇಣುಕತೊಡಗಿತು. ಋಷಿಮುನಿಗಳ ಸೋಗಿನಲ್ಲಿ ಆಸುರೀಸಂಪತ್ತಿನ ಜನ ಅವೈದಿಕ ವಿಚಾರಗಳನ್ನು ಸಾಮಾನ್ಯರ ತಲೆಯಲ್ಲಿ ತುಂಬತೊಡಗಿದರು. ಸಂಜೆಯಾಗುತ್ತಿದ್ದಂತೆ ಕಳ್ಳಕಾಕರ ಚಟುವಟಿಕೆ ಹೆಚ್ಚುವಂತೆ ಅಂದಿನ ಪರಿಸ್ಥಿತಿ ಆಯಿತು. ಅದು ಕ್ರಮೇಣ ಹೆಚ್ಚುತ್ತಲೇ ಹೋಯಿತು. ಜನಗಳಲ್ಲೂ ವಿಚಾರಶಕ್ತಿ ಕುಸಿಯತೊಡಗಿತು.

ಅಂತಹ ದ್ವಾಪರಯುಗದಲ್ಲಿ ಒಮ್ಮೆ ಹನ್ನೆರಡು ವರ್ಷಗಳಷ್ಟು ದೀರ್ಘಕಾಲದ ಒಂದು ಭೀಕರ ಬರಗಾಲ ಭೂಲೋಕದಲ್ಲಿ ಕಾಲಿಟ್ಟಿತು. ಜನ ಹೊಟ್ಟೆಗಿಲ್ಲದೆ ಪರಿತಪಿಸತೊಡಗಿದರು. ಕ್ರಮೇಣ ಜಲವೂ ಮರೆಯಾಗತೊಡಗಿತು. ಬದುಕೇ ದುರ್ಭರವಾಗಿ ಚಿಂತೆ ಕವಿದಾಗ ಶಾಸ್ತ್ರ ಚಿಂತನೆಗೆ ಅವಕಾಶವಿಲ್ಲದಂತಾಯಿತು. ಆದರೂ ಜ್ಞಾನಕಾರ್ಯವನ್ನು ಬಿಡಲಾಗದ ಋಷಿ ಮುನಿಗಳು ಅನ್ನ ನೀರುಗಳ ನೆಲೆಗಾಗಿ ಅನ್ವೇಷಣೆ ನಡೆಸಿದರು. ಆಗ ಅವರಿಗೆ ಅಂತಹ ನೆಲೆ ಯೊಂದು ಗೋಚರಿಸಿತು. ಅದೇ ತ್ರ್ಯಂಬಕಪರ್ವತದ ಬಳಿ ಒಂದು ಸುಂದರ ತಪೋವನ. ಮಹರ್ಷಿ ಗೌತಮರಿಗೆ ಸೇರಿದ್ದು. ತಪೋನಿಧಿಯಾಗಿದ್ದಂತೆ ಜ್ಞಾನನಿಧಿಯೂ ಆಗಿದ್ದ ಹಿರಿಮೆ ಅವರದು. ಅವರ ತಪಃಸಿದ್ಧಿಯಿಂದಾಗಿ ಯಾವ ಕೊರತೆಯೂ ಅಲ್ಲಿ ಕಾಲಿಟ್ಟಿರಲಿಲ್ಲ. ವಿದ್ಯೆ, ತಪಸ್ಸುಗಳ ಮಹಿಮೆಯೆಂದರೆ ಇದೇ. ಗೌತಮರ ಆಶ್ರಮದಲ್ಲಿ ಅವರ ಅಮೋಘ ತಪಃ ಸಿದ್ಧಿಯ ಫಲ ಸಸ್ಯಸಮೃದ್ಧಿಯ ರೂಪದಲ್ಲಿ ಕಂಗೋಳಿಸುತ್ತಿತ್ತು. ಅಂತಹ ತಪೋವನ ದೊರೆತದ್ದು ತಮ್ಮ ಪುಣ್ಯ ಎಂದು ಋಷಿಗಳು ಭಾವಿಸಿದರೆ, ಅಂತಹ ಮುನಿವೃಂದಕ್ಕೆ ಆತಿಥ್ಯ ನೀಡುವ ಯೋಗ ತಮ್ಮ ಪುಣ್ಯ ಎಂದು ಗೌತಮರು ಭಾವಿಸಿದರು. ಇಂತಹ ಪರಸ್ಪರ ಸಂಭಾವನೆಯನ್ನೇ ಅಧ್ಯಾತ್ಮ ಎನ್ನುವುದು.

ಹನ್ನೆರಡು ವರ್ಷ ಕಳೆದಂತೆ ಜಗತ್ತನ್ನು ಕಾಡಿದ್ದ ಬರಗಾಲ ಕಳೆಯಿತು. ಎಲ್ಲೆಡೆಯೂ ಮತ್ತೊಮ್ಮೆ ಸಸ್ಯಸಂಪತ್ತು ಕಾಣಿಸಿಕೊಂಡಿತು. ಮುನಿವೃಂದಕ್ಕೆ ಇನ್ನು ತಮ್ಮ ತಮ್ಮ ಆಶ್ರಮಗಳಿಗೆ ಮರಳುವ ಯೋಚನೆ ಮೂಡಿತು. ಅದು ಅವರ ಕರ್ತವ್ಯವೂ ಆಗಿತ್ತು. ಅವರೆಲ್ಲ ಗೌತಮರನ್ನು ಬೀಳ್ಕೊಳ್ಳಲು ಸಿದ್ಧರಾದರು. ಆದರೆ ಅವರನ್ನು ಕಳಿಸಿಕೊಡಲು ಗೌತಮರು ಸಿದ್ಧರಾಗಲಿಲ್ಲ. ಮತ್ತೆ ಕೆಲವು ಕಾಲ ಅವರ ಸಹವಾಸ ಮುಂದುವರೆಸಬೇಕೆಂದು ಕೇಳಿ ಕೊಂಡರು. ಅಷ್ಟು ದೀರ್ಘಕಾಲ ರಕ್ಷಣೆ ಒದಗಿಸಿದ್ದ ಗೌತಮರಿಂದ ನಿಷ್ಠುರವಾಗಿ ಬೀಳ್ಕೊಳ್ಳಲು ಮುನಿಗಳ ಮನಸ್ಸಿಗೂ ಬಾರದಾಯಿತು. ಅಲ್ಲೇ ಮತ್ತಷ್ಟು ಕಾಲ ನೆಲೆಸುವುದು ಅನಿವಾರ್ಯವಾಯಿತು.

ವಿನಾಯಕನ ಪ್ರಸಂಗ : ಹೀಗಿದ್ದಾಗಲೇ ಕೈಲಾಸದಲ್ಲಿ ಒಂದು ವಿಚಿತ್ರ ಪ್ರಸಂಗ ನಡೆದಿತ್ತು. ಶಿವ ವಿಷ್ಣುಪಾದೋದಕವೆಂಬ ಕಾರಣದಿಂದ ಗಂಗೆಯನ್ನು ಜಟೆಯಲ್ಲಿ ಧರಿಸಿದ್ದ. ಅದು ವಿಷ್ಣುಪಾದೋದಕವೆಂಬ ಗೌರವದಿಂದ ಮಾತ್ರ. ಅದು ಗಂಗೆಗೂ ತಿಳಿದಿತ್ತು. ಪಕ್ಕದಲ್ಲಿ ಪಾರ್ವತಿ, ತಲೆಯ ಮೇಲೆ ಗಂಗೆ. ಈ ಸನ್ನಿವೇಶ ಅನೇಕರು ಗಂಗೆಯನ್ನು ಶಿವನ ಮತ್ತೊಬ್ಬ ಮಡದಿಯೆಂಬುದಾಗಿ ತಪ್ಪಾಗಿ ತಿಳಿಯುವಷ್ಟು ಪ್ರಭಾವ ಬೀರಿತ್ತು. ಪ್ರಾರಬ್ಧವಶಾತ್ ಆಗೊಮ್ಮೆ ಗಂಗೆಗೂ ತನ್ನ ಉನ್ನತಸ್ಥಾನದ ಬಗ್ಗೆ ಹೆಮ್ಮೆಯ ಬದಲಾಗಿ ಅಹಂಕಾರ ತಲೆದೋರಿತು. ತಾನು ಗೌರಿಗಿಂತ ಮಿಗಿಲು ಎಂಬ ಭ್ರಮೆಗೂ ಅದು ಇಂಬು ಕೊಟ್ಟಿತು.

ಇದನ್ನೆಲ್ಲ ಗೌರಿ ಗಮನಿಸಿದಳು. ಪರಿಸ್ಥಿತಿ ಹೀಗೆ ಮುಂದುವರೆಯುವುದು ತರವಲ್ಲವೆಂದು ಯೋಚಿಸಿದಳು. ಅದಕ್ಕೊಂದು ಪರಿಹಾರವನ್ನೂ ಯೋಜಿಸಿದಳು. ತನ್ನ ಮಗ ಗಣೇಶನನ್ನು ಕರೆದು ಗಂಗೆಯನ್ನು ಸ್ಥಾನಪಲ್ಲಟಗೊಳಿಸುವ ವ್ಯವಸ್ಥೆಮಾಡಲು ಆದೇಶಿಸಿದಳು. ಗಣೇಶ ತಡಮಾಡಲಿಲ್ಲ. ವಟುವೇಷವನ್ನು ಧರಿಸಿ ಗೌತಮರ ಆಶ್ರಮದತ್ತ ನಡೆದ. ಅಲ್ಲಿದ್ದ ಮುನಿವೃಂದದೊಂದಿಗೆ ಬೆರೆತು ಅವರ ವಿಶ್ವಾಸವನ್ನು ಗಳಿಸಿದ. ಸಮಯ ನೋಡಿ ಮಾತು ತೆಗೆದ : "ಪರಾನ್ನದಿಂದ ಎಷ್ಟು ದಿನ ಹೀಗೆ ಬದುಕುವಿರಿ? ಇದು ಶಾಸ್ತ್ರಸಮ್ಮತವಲ್ಲ, ಮನಸ್ಸಿಗೆ ಹಿತವೂ ಅಲ್ಲ. ಪ್ರಾಜ್ಞರಾದ ನೀವು ಇದನ್ನೇಕ ಮರೆತಿರಿ?" ಮುನಿಗಳು ಹೇಳಿದರು: "ಇದು ನಮಗೂ ಬೇಕಿಲ್ಲ. ಅಗತ್ಯವಂತೂ ಇಲ್ಲವೇ ಇಲ್ಲ. ಆದರೆ ನಿಷ್ಠುರವಾದಿಗಳಾಗಿ ಗೌತಮರನ್ನು ಬೀಳ್ಕೊಳ್ಳುವುದು ಮಾತ್ರ ನಮಗೆ ಸಾಧ್ಯವಾಗುತ್ತಿಲ್ಲ. ಬುದ್ಧಿವಂತನಂತೆ ತೋರುವ ನೀನು ದಾರಿ ತೋರುವುದಿದ್ದಲ್ಲಿ ಅದಕ್ಕೆ ಸ್ವಾಗತ."

ಗಣೇಶ ಉಪಾಯವೊಂದನ್ನು ತಿಳಿಸಿದ: "ನೀವೆಲ್ಲ ನಿಮ್ಮ ತಪಃಶಕ್ತಿಯಿಂದ ಒಂದು ಗೋವನ್ನು ನಿರ್ಮಿಸಿರಿ. ಅದನ್ನು ಈ ಗೌತಮರ ಸಸ್ಯ ತುಂಬಿದ ಆಶ್ರಮಕ್ಕೆ ನುಗ್ಗಿಸಿ ಅದಕ್ಕೆ ಬಾಯಿ ಹಾಕುವಂತೆ ಮಾಡಿರಿ. ಅದನ್ನು ತಪ್ಪಿಸಲು ಗೌತಮರು ಮಾಡುವ ಯಾವುದೇ ಪ್ರಯತ್ನಕ್ಕೂ ಆ ಗೋವು ಮೃತವಾಗುವಂತೆ ಮಾಡಿರಿ. ಅನಂತರ ಗೋಹತ್ಯೆಗೆ ಕಾರಣವಾದ ನಿಮ್ಮ ಅನ್ನ ನಮಗೆ ನಿಷಿದ್ಧ ಎಂದು ಆಶ್ರಮ ಬಿಟ್ಟು ತೆರಳಿರಿ. ಅದರ ಪರಿಹಾರ ಕೇಳುವ ಮುನಿಗೆ ಹೀಗೆಂದು ಹೇಳಿ—ಶಿವನ ಜಟೆಯಲ್ಲಿರುವ ಗಂಗೆಯನ್ನು ಗೋವಿನ ಮೃತದೇಹದ ಮೇಲೆ ಹರಿಸಿದಾಗ ಅದು ಮತ್ತೆ ಬದುಕುವುದು. ಆಗಲೇ ನಿಮ್ಮ ಗೋಹತ್ಯೆ ಪರಿಹಾರ."

ಅವರು ಹಾಗೆಯೇ ಮಾಡಿದರು. ಗೌತಮರು ಸಸ್ಯವನ್ನು ಮೇಯಲು ಬಂದ ಗೋವನ್ನು ಓಡಿಸುವ ಪ್ರಯತ್ನಕ್ಕೆ ಕೈಹಾಕಿಯೇ ಬಿಟ್ಟರು. ಸ್ವಭಾವತಃ ಧರ್ಮಿಷ್ಠರಾದ ಅವರ ಧರ್ಮಬುದ್ಧಿ ಆಗಲೂ ಪೂರ್ಣವಾಗಿ ದಾರಿ ತಪ್ಪಲಿಲ್ಲ. ಅವರು ನೀರನ್ನು ಪ್ರೋಕ್ಷಿಸುತ್ತಲೇ ಅದು ಮೃತವಾಗಿ ಬಿದ್ದಿತು. ಅದು ಆ ಮುನಿಗಳ ಯೋಜನೆಯಾಗಿತ್ತು. ಆಘಾತಗೊಂಡ ಗೌತಮರ ಬಳಿಗೆ ಮುನಿಗಳು ತೆರಳಿ "ಗೋಹತ್ಯೆ ಮಾಡಿದ ನಿಮ್ಮ ಆತಿಥ್ಯ ನಿಷಿದ್ಧ; ನಾವಿನ್ನು ತೆರಳುವೆವು." ಇದನ್ನು ಕೇಳಿದ ಗೌತಮರಿಗೆ ಆಘಾತವಾಯಿತು. ಅವರು ಕಳಕಳಿಯಿಂದ ಮುನಿಗಳನ್ನು ಕೇಳಿದರು : "ಇದಕ್ಕೆ ಪರಿಹಾರವೆಂತು?" ಅದಕ್ಕೆ ಅವರು "ಶಿವನ ಜಟೆಯಿಂದ ಗಂಗೆಯನ್ನು ತಂದು ಇದರ ಮೇಲೆ ಹರಿಸಿದಾಗ ಇದು ಮತ್ತೆ ಬದುಕುವುದು. ಆಗಲೇ ನಿಮ್ಮ ಗೋಹತ್ಯೆಯ ಪಾಪ ಪರಿಹಾರವಾಗುವುದು" ಎಂದು ಸೂಚಿಸಿದರು.

ಗೌತಮರು ಬಹುಕಾಲ ಶಿವನನ್ನು ಶ್ರದ್ಧೆಯಿಂದ ಆರಾಧಿಸಿದರು. ಇವರ ಆರಾಧನೆಗೆ ಶಿವನು ಮೆಚ್ಚಿ ಅವರೊಂದಿಗೆ ಗಂಗೆಯನ್ನು ಕರುಣಿಸಲು ಸಮ್ಮತಿ ನೀಡಿದ. ಶಿವನ ಜಟೆಯಿಂದ ಕವಲಾಗಿ ಹರಿದ ಗಂಗೆ ಗೌತಮರ ಅಪೇಕ್ಷೆಯಂತೆ ಗೋವಿನ ಮೃತದೇಹದ ಮೇಲೆ ಹರಿದಳು. ಗೋವು ಬದುಕಿತು. ಹರಿದ ಗಂಗೆಗೆ 'ಗೋದಾವರೀ' ಎಂದು ಹೆಸರಾಯಿತು. ಗೌತಮರ ಸಿದ್ಧಿಯ ಸಂಕೇತವಾಗಿ ಗೌತಮೀ ಎಂಬ ಹೆಸರೂ ಅದಕ್ಕೆ ಬಂತು. ಭಗೀರಥದಿಂದ ಬಂದ ಕವಲು ಭಾಗೀರಥಿಯಾಗಿ ಕಪಿಲಮುನಿಗಳಿಂದ ದಗ್ಧರಾದ ಸಗರಪುತ್ರರ ಭಸ್ಮದ ಮೇಲೆ ಹರಿದು ಅವರ ಸದ್ಗತಿಗೆ ಕಾರಣವಾದಂತೆ, ಇದು ಮೃತಗೋವಿನ ಮೇಲೆ ಹರಿದು, ಅದರ ಬದುಕಿಗೂ, ಗೌತಮರ ಶುದ್ಧಿಗೂ ಕಾರಣವಾಯಿತು. ವಿಷ್ಣುಪಾದೋದಕವಾದ ಗಂಗೆಗೆ ಇಂತಹ ಸಾಮರ್ಥ್ಯ ಅಸಹಜವೇನಲ್ಲ.

ಗೌತಮರು ಚಿಂತಿಸತೊಡಗಿದರು. "ಇದೆಲ್ಲ ಹೇಗಾಯಿತು? ಗೋವೊಂದು ಜಲಪ್ರೋಕ್ಷಣೆ ಮಾತ್ರಕ್ಕೇ ಹಾಗೆ ಸಾಯಲು ಹೇಗೆ ಸಾಧ್ಯ? ಇದರ ಹಿಂದೆ ಏನೋ ಕುತಂತ್ರವಿರುವಂತೆ ಕಾಣುತ್ತಿದೆ." ವಿವೇಕವೆಂದರೆ ಮೊದಲು ಚಿಕಿತ್ಸೆ. ಅನಂತರ ಅದರ ಹಿನ್ನೆಲೆಯ ಅನ್ವೇಷಣೆ. ಗೋಹತ್ಯೆಯಂತಹ ಪ್ರಬಲಪಾತಕದ ಪರಿಹಾರ ಮೊದಲ ಹೆಜ್ಜೆ. ಅದನ್ನು ಸಾಧಿಸಿದ ನಂತರ ಆ ಬಗ್ಗೆ ಜಿಜ್ಞಾಸೆ.

ಗೌತಮಮುನಿಯ ಭೀಕರಶಾಪವೃತ್ತಾಂತ : ಯೋಗಸಿದ್ಧನಾದ ಮುನಿಗೆ ಕಾರಣ ತಿಳಿಯಲು ಶ್ರಮವೆನ್ನಿಸಲಿಲ್ಲ. ಅವರ ಧ್ಯಾನದೃಷ್ಟಿಗೆ ಮುನಿಗಳ ವಂಚನೆ ಗೋಚರಿಸಿತು. ತಮ್ಮ ಸ್ವಾರ್ಥಕ್ಕಾಗಿ ತಮ್ಮನ್ನು ಬಲಿಪಶು ಮಾಡಿದ ಬಗ್ಗೆ ಮುನಿಸು ಮೂಡಿತು. ಅನ್ನವಿಟ್ಟ ತಮ್ಮ ಬಗ್ಗೆ ಕೃತಜ್ಞರಾಗುವ ಬದಲು ಗೋಹತ್ಯೆಯಂತಹ ಪರಮಪಾತಕಕ್ಕೆ ತಮ್ಮನ್ನು ಕಾರಣರಾಗಿಸಿದ ಅವರ ಕೃತಘ್ನತೆಯ ಬಗ್ಗೆ ಅವರು ಕೋಪಗೊಂಡರು. ಎಂತಹ ಹೀನ ಗುರಿ, ಅದಕ್ಕಾಗಿ ಎಂತಹ ಹೀನ ಮಾರ್ಗ. ಅವರಿಗಿನ್ನು ತಡೆಯಲಾಗಲಿಲ್ಲ. ಅವರನ್ನು ಶಿಕ್ಷಿಸಲು ನಿರ್ಧರಿಸಿದರು. "ಇದಕ್ಕೆಲ್ಲ ಕಾರಣ ಅವರಿಗಿದ್ದ ಜ್ಞಾನದ ಹಮ್ಮು. ಅದೇ ಅವರ ಶಕ್ತಿಯ ಮೂಲ ಸಹ. ಇದು ಇದ್ದದ್ದರಿಂದ ಇಂತಹ ಅನರ್ಥಪರಂಪರೆ. ನಮ್ಮ ಆಶ್ರಮದಲ್ಲಿ ನೆಲಸಿ ಅವರು ಸಂಪಾದಿಸಿದ ಜ್ಞಾನಸಿದ್ಧಿಯೆಲ್ಲ ನಾಶಹೊಂದಲಿ" ಎಂದು ಶಪಿಸಿದರು.

ಗೌತಮಶಾಪ*ದಿಂದ ಮುನಿಗಳ ಜ್ಞಾನವೆಲ್ಲ ಅಳಿಯಿತು. ಹೇಳುವ ಅವರಿಗೇ ಜ್ಞಾನವಿಲ್ಲದಾಗ ಕೇಳಿ ತಿಳಿಯುವ ಜನಗಳ ಪಾಡು ಘೋರವೆನ್ನಿಸಿತು. ಕಾಲಬಲದಿಂದಾಗಿ ಮೊದಲೇ ಕ್ಷೀಣಿಸಿದ್ದ ತತ್ತ್ವಜ್ಞಾನ ಪೂರ್ಣ ಮರೆಯಾಯಿತು. ಮುಳುಗುವ ಸೂರ್ಯನಿಗೆ ಗ್ರಹಣ ಹಿಡಿದಂತಾಯಿತು. ಮೋಡ ಮುಸುಕಿದಂತಾಯಿತು. ಅಜ್ಞಾನದ ಅಂಧಕಾರ ಜಗತ್ತಿನ ಜನರನ್ನು ಆವರಿಸಿತು. ಜ್ಞಾನಸೂರ್ಯ ಅಸ್ತಮಿಸಿದರೆ ಒಳಗೂ ಅಂಧಕಾರ.

ಭೂಲೋಕದ ಜಿಜ್ಞಾಸುಗಳ ಪರಿಸ್ಥಿತಿ ದುರ್ಭರವಾಯಿತು. ಜ್ಞಾನವಿರಲಿ, ಅದು ತಮಗಿಲ್ಲ ಎಂಬ ತಿಳಿವಳಿಕೆಯೂ ಜನಕ್ಕೆ ಇಲ್ಲವಾಯಿತು. ಅನ್ನದ ಬರದಿಂದಾಗಿ ಗೌತಮರನ್ನು ಆಶ್ರಯಿಸಿದ್ದು ಜ್ಞಾನದ ಬರಕ್ಕೆ ಕಾರಣವಾದದ್ದು ವಿಧಿವಿಲಾಸ. ಅನ್ನದ ಬರ ಸಹ್ಯ. ಜ್ಞಾನದ ಬರ ಅಸಹನೀಯ ಎನ್ನಲೂ ಇದು ಸೂಚಕ. ಅನ್ನದ ಬರ ಪರಿಹಾರಕ್ಕೆ ಗೌತಮರು ಸಾಕಾಯಿತು. ಜ್ಞಾನದ ಬರದ ಪರಿಹಾರಕ್ಕೆ ಭಗವಂತನೇ ಬರಬೇಕಾಯಿತು. (ವರಾಹಪುರಾಣ ೬, ೭೧)

37. ವೇದವ್ಯಾಸರು ಅವತಾರ ಮಾಡಿ ಸೂತ್ರ ರಚಿಸಿದ್ದು : ಮೇಲೆ ತಿಳಿಸಿದಂತೆ ಕಾಲಮಾನದಿಂದಲೂ ಗೌತಮರ ಶಾಪದ ಫಲವಾಗಿಯೂ ಜ್ಞಾನವು ಮರೆಯಾಗಲು ದುರ್ಮಾರ್ಗಾಸಕ್ತರಾದ ಸಜ್ಜನರೆಲ್ಲ ಮರುಕಗೊಂಡು ಬ್ರಹ್ಮರುದ್ರಾದಿದೇವತೆಗಳು ಭಗವಂತ ನಾರಾಯಣನಲ್ಲಿ ಮೊರೆಹೊಕ್ಕರು. ಜ್ಞಾನಜ್ಯೋತಿಯನ್ನು ಬೆಳಗಿಸಿ ಸಜ್ಜನರನ್ನು ಉದ್ಧಾರ ಮಾಡಬೇಕೆಂದು ಪ್ರಾರ್ಥಿಸಿದರು. ಅದರಂತೆ ಭಗವಂತನಾದ ನಾರಾಯಣನೇ ಸತ್ಯವತಿಯಲ್ಲಿ ಪರಾಶರರಿಂದ ವೇದವ್ಯಾಸರಾಗಿ ಅವತಾರಮಾಡಿ ಖಿಲವಾಗಿದ್ದ ವೇದಗಳನ್ನು ಉದ್ಧಾರ ಮಾಡಿದ್ದಲ್ಲದೆ ಅಲ್ಪಶಕ್ತಿಯುಳ್ಳ ಜನರ ಸಲುವಾಗಿ ವೇದವಿಭಾಗವನ್ನೂ ಮಾಡಿದನು. ಕೊನೆಗೆ ಆ ವೇದಾರ್ಥ ನಿರ್ಣಯಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿದನು.

38. ಬ್ರಹ್ಮಸೂತ್ರಗಳ ಮಹತ್ವ : ಈ ಬ್ರಹ್ಮಸೂತ್ರಗಳು ಸಕಲ ಸೂತ್ರಗ್ರಂಥಗಳಲ್ಲೂ ಅತಿಮುಖ್ಯವಾದ್ದರಿಂದ ಇವಕ್ಕೆ ಯಾವ ವಿಶೇಷಣವೂ ಸೇರಿಸುವುದಿಲ್ಲ; ಸುಮ್ಮನೆ (ನಿರ್ವಿಶೇಷಣವಾಗಿ) 'ಸೂತ್ರ'ಗಳೆಂದೇ ಕರೆಯುವರು. ಮಿಕ್ಕ ಎಲ್ಲ ಸೂತ್ರಗಳಿಗೂ ಇಂಥಾ ಸೂತ್ರಗಳೆಂದೇ ಹೆಸರು ಹೇಳಬೇಕು. (ಗೌತಮ ಸೂತ್ರ, ಜೈಮಿನಿ ಸೂತ್ರ, ಪಾಣಿನಿಸೂತ್ರ ಅಥವಾ ವ್ಯಾಕರಣಸೂತ್ರ ಇತ್ಯಾದಿ) ಏಕೆಂದರೆ ಮುಖ್ಯಸ್ಯ ನಿರ್ವಿಶೇಷೇಣ ಶಬ್ದೋಽನ್ಯೇಷಾಂ ವಿಶೇಷತಃ—ಮುಖ್ಯವಾದುದಕ್ಕೆ ಮಾತ್ರ ವಿಶೇಷಣವಿಲ್ಲದೇ (ನಿರ್ವಿಶೇಷಣವಾಗಿ) ಹೇಳುವುದೂ ಅತಿಮುಖ್ಯವಾದುದಕ್ಕೆ ವಿಶೇಷಣ ಸೇರಿಸಿ ಹೇಳುವುದೂ ಪದ್ಧತಿ (ಗೀತೆ ಎಂದರೆ ಭಗವದ್ಗೀತೆ ಎಂದೇ ಅರ್ಥ; ಮಿಕ್ಕ ಗೀತೆಗಳಿಗೆಲ್ಲಾ ರುದ್ರಗೀತೆ, ಭ್ರಮರಗೀತೆ ಎಂದು ಮೊದಲಾಗಿ 'ವಿಶೇಷಣ' ಸೇರಿಸಿ ಹೇಳಬೇಕು) ಪ್ರಸ್ತುತ ಈ ಬ್ರಹ್ಮಸೂತ್ರಗಳಲ್ಲಿ ಸಕಲ

---

* ಮೊದಲೇ ಕಪಿ, ಅದಕ್ಕೆ ಪಿಶಾಚಿಯ ಆವೇಶ. ಜೊತೆಗೆ ಮದ್ಯಪಾನ. ಸಾಲದ್ದಕ್ಕೆ ಚೇಳೊಂದು ಕಚ್ಚುವುದು. ಆಗ ಕಪಿಯ ವರ್ತನೆ ಊಹಾತೀತ. ಆ ಕಾಲದ ಜನರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಯೇನೂ ಇರಲಿಲ್ಲ ಎಂದಿರುವರು ಶ್ರೀ ವಾದಿರಾಜತೀರ್ಥ ಶ್ರೀಚರಣರು. ಕಪಿ ಆ ಕಾಲದ ಜಿಜ್ಞಾಸು. ಮದ್ಯಪಾನ ಪ್ರಸಾರದಲ್ಲಿದ್ದ ದುಃಶಾಸ್ತ್ರಗಳ ಅಧ್ಯಯನ. ಪಿಶಾಚಿ ಪೀಡೆಯಂತೆ ಒಳಗೆ ಕಲ್ಯಾದಿ ಅಸುರರ ಪ್ರವೇಶ. ಚೇಳಿನ ಕಡಿತದಂತೆ ಗೌತಮರ ಶಾಪ.—ಶ್ರೀ ವಾದಿರಾಜರು (ಮ.ಭಾ.ತಾ.ನಿ.ಭಾವಪ್ರಕಾಶಿಕಾ ೧೦/೩೬)

ವೇದಶಾಸ್ತ್ರಗಳಿಗೂ ಸಂಬಂಧಪಟ್ಟ ಸಮಸ್ತ ನಿರ್ಣಯಗಳೂ ಹೇಳಲ್ಪಟ್ಟಿವೆ. ಆದ್ದರಿಂದ ಇವು ಅತ್ಯಂತ ಪ್ರಾಮಾಣಿಕವಾದುವು—

ಸೂತ್ರೇಷು ಯೇಷು ಸರ್ವೇಽಪಿ ನಿರ್ಣಯಾಃ ಸಮುದೀರಿತಾಃ |
ಶಬ್ದಜಾತಸ್ಯ ಸರ್ವಸ್ಯ ಯತ್ಪ್ರಮಾಣಶ್ಚ ನಿರ್ಣಯಃ ||

ಇಂಥಾ ಸೂತ್ರಗಳನ್ನು ರಚಿಸಿ ವೇದವ್ಯಾಸರು ವೇದೋದ್ಧಾರ ಮಾಡಿದರೆಂದು ಸ್ಕಾಂದ ಪುರಾಣದಲ್ಲಿ ಹೇಳಿದೆ.

39. ಅವು ಪರವಿದ್ಯೆ : ನ್ಯಾಯಸುಧಾದಲ್ಲೂ ಈ ಶಾಸ್ತ್ರದ ಬಗ್ಗೆ ಇನ್ನೊಂದು ವಿಚಾರವನ್ನೂ ಹೇಳಿದೆ; ಅದನ್ನೂ ಇಲ್ಲಿ ಸೇರಿಸಬಹುದು. 'ದ್ವೇ ವಿದ್ಯೇ ವೇದಿತವ್ಯೇ... ಪರಾಚೈವಾಪರಾ ಚ' (ಅಥರ್ವಣೋಪನಿಷತ್ ೧/೧/೪) ಎಂಬಂತೆ ಪರವಿದ್ಯೆ, ಅಪರವಿದ್ಯೆ ಎಂದು ವೈದಿಕವಿದ್ಯೆ ಎರಡು ಪ್ರಕಾರವಾಗಿದೆ. ಅದರಲ್ಲಿ ಋಗಾದಿ ಸಕಲಶಾಸ್ತ್ರಗಳೂ 'ಇದಮಿತ್ಥಂ' (ಇದು ಹೀಗೆಯೇ ಸರಿ) ಎಂಬ ವಿಷ್ಣುಪರವಾದ ನಿರ್ಣಯಾರ್ಥವನ್ನು ಆಪಾತತಃ ಕೊಡತಕ್ಕವುಗಳಲ್ಲ; ಆದಕಾರಣ ಅವುಗಳು 'ಅಪರವಿದ್ಯೆ'ಗಳೆನಿಸಿಕೊಳ್ಳುತ್ತವೆ. ಬ್ರಹ್ಮಸೂತ್ರಗಳಾದರೋ ಆ ಸಕಲ ಶಾಸ್ತ್ರಗಳ ಅರ್ಥವನ್ನು ನಿರ್ಣಯಿಸಿ ಇದಕ್ಕೆ ಇದೇ ಅರ್ಥ 'ಇದಕ್ಕೆ ಹೀಗೆ ಅರ್ಥ ಹೇಳಬೇಕು' ಎಂಬ ನಿರ್ಣಯವನ್ನು ಕೊಡುವ ಶಾಸ್ತ್ರವಾದ್ದರಿಂದ ಇದಕ್ಕೆ 'ಪರವಿದ್ಯೆ' ಎಂದು ಹೆಸರು. ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ತೋರಿಸಿಕೊಟ್ಟ ನ್ಯಾಯ(ಯುಕ್ತಿ)ಗಳನ್ನು ಬಳಸಿಕೊಳ್ಳದೇ ಹೋದರೆ ವೇದಾದಿಗಳು ವಿಷ್ಣುವಾಚಕಗಳೆಂದು ಗೊತ್ತಾಗುವುದಿಲ್ಲ. ಆದಕಾರಣ ಅವೆಲ್ಲ ಅಪರವಿದ್ಯೆಗಳು. ಈ ಶಾಸ್ತ್ರದಲ್ಲಿ ಹೇಳಿದ ಯುಕ್ತಿ(ನ್ಯಾಯ)ಗಳನ್ನು ಹೊಂದಿಸಿಕೊಂಡರೆ ವಿಷ್ಣುವಾಚಕಗಳೇ ಆಗುತ್ತವೆ; ಆದ್ದರಿಂದ ಇದಕ್ಕೆ (ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ*) ಪರವಿದ್ಯೆ ಎಂದು ಹೆಸರು.† ಅಷ್ಟೇ ಅಲ್ಲದೆ ಈ ಸೂತ್ರಗಳು ವೇದಾರ್ಥನಿರ್ಣಾಯಕವಾದುದರಿಂದ ಇವಕ್ಕೆ ವೇದಮೂಲತವಾಗಿದ್ದರಿಂದ ಪ್ರಾಮಾಣ್ಯವೇ ಹೊರತು ಪ್ರತ್ಯೇಕ ಪ್ರಾಮಾಣ್ಯವನ್ನು ನಾವು ಹೇಳುವುದಿಲ್ಲ.

40. ಓಂಕಾರವಾದ : ಬ್ರಹ್ಮಸೂತ್ರಗಳನ್ನು ಪಠಿಸುವಾಗ ಮಾಧ್ವರನ್ನು ಬಿಟ್ಟರೆ ಬೇರೆ ಯಾರೂ ಓಂಕಾರವನ್ನು ಸೇರಿಸಿ ಹೇಳುವುದಿಲ್ಲ. ಶಂಕರ ರಾಮಾನುಜಾದಿ ಸಕಲ ಭಾಷ್ಯಕಾರರೂ 'ಅಥಾತೋ ಬ್ರಹ್ಮಜಿಜ್ಞಾಸಾ' ಎಂದೇ ಮೊದಲನೇ ಸೂತ್ರವನ್ನು ಪಠಿಸುತ್ತಾರೆ. ಹೀಗೇಕೆ ಹೇಳಬಾರದೆಂದು ಶಂಕಾಮಾಡಿಕೊಂಡು ಆಚಾರ್ಯರೂ ಸುಧಾಕಾರರೂ ಅದಕ್ಕೆ ಸಮಾಧಾನ ಹೇಳಿದ್ದಾರೆ. ಇದನ್ನೇ 'ಓಂಕಾರವಾದ' ಎನ್ನುವುದುಂಟು.

'ಪ್ರವತ್ಯನೋಂಕೃತಂ ಬ್ರಹ್ಮಪರಸ್ತಾಚ್ಚ ವಿಶೀರ್ಯತೇ' ಎಂದು ವೇದೋಕ್ತಿಯೇ ಇದೆ.

---

* ಬ್ರಹ್ಮಮೀಮಾಂಸಾಶಾಸ್ತ್ರ ವ್ಯುತ್ಪಾದಿತನ್ಯಾಯಾನುಪಕೃತಾ ಹಿ ವೇದಾದಯೋ ವಿಷ್ಣೋರವಾಚಕಾಃ; ತದುಪಕೃತಾಶ್ಚ ತಸ್ಯ ವಾಚಕಾ ಭವಂತೀತಿ | ['ಪರವಿದ್ಯಾಖ್ಯಂ ಚಕ್ರೇ ಶಾಸ್ತ್ರಂ' ಎಂಬ ಅನುವ್ಯಾಖ್ಯಾನದ (೩ನೇ ಶ್ಲೋಕದ) ಸುಧಾದಲ್ಲಿ] ಋಗಾದ್ಯಾ ಅಪರಾ ವಿಶ್ಯಾಯದಾ ವಿಷ್ಣೋರ್ನ ವಾಚಕಾಃ | ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ||

† ವೇದಾದಿ ಇತಿಕರ್ತವ್ಯತಾರೂಪಸ್ಯಾಸ್ಯ ಪೃಥಕ್ ಪ್ರಾಮಾಣ್ಯಾನಭ್ಯುಪಗಮಾತ್ || (ಸುಧಾ)

ಇದಕ್ಕೆ ಹೀಗರ್ಥ—ವೇದವನ್ನು ಓಂಕಾರ ಸೇರಿಸದೇ ಎಂದರೆ ಮೊದಲು ಓಂ ಎಂದು ಹೇಳಿ ಕೊಳ್ಳದೆ ಹೇಳಿದರೆ ಅದು ಸೋರಿ ಹೋಗುತ್ತದೆ. ಕೊನೆಯಲ್ಲಿ ಓಂಕಾರ ಸೇರಿಸದಿದ್ದರೆ ಅದು ಆವಿಯಾಗಿ ಹಾರಿಹೋಗುತ್ತದೆ. ಆದಕಾರಣ ವೇದಗಳನ್ನು ಪಠಿಸುವಾಗ ಪ್ರಾರಂಭ ದಲ್ಲೂ ಕೊನೆಯಲ್ಲೂ ಓಂಕಾರವನ್ನು ಸೇರಿಸಬೇಕೆಂದು ತಿಳಿಸಿದಂತಾಯಿತು. ಹೀಗೆ ಮೊದ ಲಲ್ಲೂ ಕೊನೆಯಲ್ಲೂ ಓಂಕಾರ ಸೇರಿಸಿ ಹೇಳುವದಕ್ಕೆ ಸಂಪುಟೀಕರಣವೆಂದು ಹೆಸರು.

ಪ್ರಸ್ತುತ ಐನೂರ ಅರವತ್ತನಾಲ್ಕು ಬ್ರಹ್ಮಸೂತ್ರಗಳೂ ಬೇರೆಬೇರೆ ಶಾಸ್ತ್ರಗಳಿದ್ದಂತೆಯೇ ಸರಿ* ಏಕೆಂದರೆ ಒಂದೊಂದು ಸೂತ್ರವೂ ಅಸಂಖ್ಯ ವೇದವಾಕ್ಯಗಳಿಗೆ ನಿರ್ಣಯವಾಗಿದೆ; ಒಂದೊಂದೂ ವೇದಕ್ಕೆ ಸಮಾನವಾಗಿದೆ. ಆದಕಾರಣ ಯಾವ ಸೂತ್ರ ಹೇಳಿಕೊಂಡರೂ ಅದಕ್ಕೆ ಪ್ರಾರಂಭದಲ್ಲೂ ಕೊನೆಯಲ್ಲೂ ಓಂಕಾರ ಸೇರಿಸಿಕೊಂಡೇ ಹೇಳಬೇಕೆಂಬುದು ನಮ್ಮ ಪ್ರಾಚೀನ ಪದ್ಧತಿ. ಇದು ಒಂದು ಕಾರಣ.

41. ಸೂತ್ರದಲ್ಲಿ ಮಂಗಳಾಚರಣೆ : ಕೆಲವರು ಭಾಷ್ಯಕಾರರು ಬ್ರಹ್ಮಸೂತ್ರಗಳ ಪ್ರಾರಂಭ ದಲ್ಲಿ ಮಂಗಳಾಚರಣೆಯೇ ಮಾಡಿಲ್ಲವಲ್ಲ ಎಂದು ಆಕ್ಷೇಪ ಮಾಡಿಕೊಂಡು ಅದಕ್ಕೆ ಏನೇನೋ ಸಮಾಧಾನ ಹೇಳುತ್ತಾರೆ. ಅದಕ್ಕೆ ಪ್ರತಿಯಾಗಿ ಸುಧಾಕಾರರು (ಟೀಕಾರಾಯರು) 'ಕರ್ತವ್ಯಮೇವ ಕಾರ್ಯಾರಂಭೇ ಮಂಗಲಾಚರಣಮ್ | ಕೃತಂಚ ಭಗವತಾಸೂತ್ರ ಕಾರೇಣ | ನಿವೇಶಿತಂ ಚ ಗ್ರಂಥಾದೌ, ಯದಯಮೋಂಕಾರಾಥ ಶಬ್ದಾವಾದಿತಃ ಕೃತವಾನ್' ಎಂಬ ಸಮರ್ಥನೆ ಮಾಡು ತ್ತಾರೆ. ಇದರ ಭಾವವೇನೆಂದರೆ—ಗ್ರಂಥಾರಂಭದಲ್ಲಿ ಮಂಗಳಾಚರಣೆ ಮಾಡಬೇಕಾದ್ದು ಶಿಷ್ಟಾಚಾರವಾದ್ದರಿಂದ ಮಾಡಲೇಬೇಕು. ಭಗವಾನ್ ಸೂತ್ರಕಾರರು ಮಂಗಳಾಚರಣೆಯನ್ನು ಮಾಡಿಯೂ ಇದ್ದಾರಲ್ಲದೆ ಅದನ್ನು ಗ್ರಂಥದಲ್ಲಿ (ಸೂತ್ರದಲ್ಲಿ) ಸೇರಿಸಿಯೂ ಇದ್ದಾರೆ. ಹೇಗೆಂದರೆ ಮಂಗಳಾರ್ಥವಾದ ಓಂಕಾರವನ್ನೂ ಅಥಶಬ್ದವನ್ನೂ ಪ್ರಾರಂಭದಲ್ಲೇ ಜೋಡಿಸಿರು ವುದೇ ಇದಕ್ಕೆ ಪ್ರಮಾಣ ಎಂದು ವಾದಿಸುತ್ತಾರೆ. ಹೀಗೆ ಓಂಕಾರವನ್ನು ಮೊದಲನೇ ಸೂತ್ರದ ಪ್ರಾರಂಭದಲ್ಲೇ ಪಠಿಸಿರುವದರಿಂದ ಗ್ರಂಥಕ್ಕೆ (ಸೂತ್ರಗಳಿಗೆ) ಮಂಗಳಾಚರಣೆ ಮಾಡಿ ದಂತೆಯೂ ಆಗುತ್ತದೆ. ಇದು ಎರಡನೇ ಪ್ರಯೋಜನ.

42. ಪೃಥಕ್ ಪಠನದ ಫಲ : ಇಲ್ಲಿ ಇನ್ನೂ ಒಂದು ವಿಶೇಷವನ್ನು ಗಮನಿಸಬೇಕು. ಓಂ ಎಂದು ಹೇಳುವಾಗ ಅದನ್ನು ಮುಂದಿನ ಅಥಶಬ್ದದೊಡನೆ ಸೇರಿಸಿ 'ಓಮಥಾತೋ . . .' ಎಂದು ಹೇಳದೆ 'ಓಂ ಅಥಾತೋ-' ಎಂದು ಬಿಡಿಸಿಯೇ ಹೇಳಿದೆ. ಇದಕ್ಕೂ ಒಂದು ಪ್ರಯೋಜನವಿದೆ. ಅದೇನೆಂದರೆ—

ಸರ್ವತ್ರಾನುಗತತ್ವೇನ ಪೃಥಗೋಂಕ್ರಿಯತೇಽಖಿಲೈಃ ಎಂದು ಅನುವ್ಯಾಖ್ಯಾನದಲ್ಲಿ ಹೇಳಿ ದ್ದಾರೆ. (ಶ್ಲೋ. ೮, ಜಿಜ್ಞಾಸಾಧಿಕರಣ). (ಭಾವಾರ್ಥ) 'ಓಂಕಾರವನ್ನು ಸಕಲ ಸೂತ್ರಗಳಲ್ಲೂ ಮೊದಲಲ್ಲೂ ಕಡೆಯಲ್ಲೂ ಸೇರಿಸಿಕೊಳ್ಳಬೇಕೆಂಬುದನ್ನು ಸೂಚಿಸುವುದಕ್ಕಾಗಿಯೇ ಅದನ್ನು (ಓಂಕಾರವನ್ನು) ಸಕಲ ಸೂತ್ರಕಾರರೂ ಬಿಡಿಯಾಗಿ (ಸಂಧಿಮಾಡದೆಯೇ) ಸೂತ್ರಗಳಲ್ಲಿ

---

* ಸರ್ವಾಣಿ ಹಿ ಸೂತ್ರಾಣಿ ಪ್ರತ್ಯೇಕಮನೇಕವೇದವಿಚಾರಪರತ್ವಾತ್ ಅವಾಂತರ ಬ್ರಹ್ಮವಿದ್ಯಾಃ (ನ್ಯಾಯ ಸುಧಾ)

ಪಠಿಸುತ್ತಾರೆ.' ಆ ಪ್ರಕಾರ ನಾವು ಸೂತ್ರಗಳನ್ನು ಪಠಿಸುವಾಗ 'ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ' 'ಓಂ ಜನ್ಮಾದ್ಯಸ್ಯ ಯತಃ ಓಂ' 'ಓಂ ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್ ಓಂ' (ಕಡೆಯ ಸೂತ್ರ) ಎಂದು ಪ್ರಣವ ಸಂಪುಟಾಕಾರವಾಗಿಯೇ ಪಠಿಸಬೇಕು.

ಹೀಗೆ ಅಣುಭಾಷ್ಯದಲ್ಲಿ ಕಂಠೋಕ್ತವಾಗಿ ಹೇಳದಿದ್ದರೂ ಅದರ ತಿಳಿವಳಿಕೆಗೆ ಮುಖ್ಯವಾಗಿ ತಿಳಿದಿರಬೇಕಾದ ಅನೇಕ ವಿಚಾರಗಳನ್ನು ಸಂಕ್ಷೇಪವಾಗಿ ತಿಳಿಸಿದ್ದಾಯಿತು. ಈಗ ಸೂತ್ರ ಭಾಷ್ಯಕ್ಕೂ ಅನುವ್ಯಾಖ್ಯಾನಕ್ಕೂ ನ್ಯಾಯವಿವರಣಕ್ಕೂ ಈ ಅಣುಭಾಷ್ಯಕ್ಕೂ ಇರುವ ಪರಸ್ಪರ ಸಂಬಂಧವನ್ನು ತಿಳಿಸುತ್ತಾ ಅಣುಭಾಷ್ಯದಲ್ಲಿ ಏನು ವೈಶಿಷ್ಟ್ಯವಿದೆ ಎಂಬ ವಿಚಾರಕ್ಕೆ ಹೋಗುವೆನು.

43. ಸೂತ್ರಪ್ರಸ್ಥಾನದ ಬೃಹತ್ತ್ರಯದೊಡನೆ ಸಂಬಂಧ : ಸೂತ್ರಭಾಷ್ಯವು ಸೂತ್ರಕ್ರಮದಲ್ಲೇ ವಿವರಣೆ ಮಾಡಿ ಅರ್ಥ ಹೇಳುವುದಲ್ಲದೆ ಹೆಚ್ಚು ಜಟಿಲವಾದ ತರ್ಕಕ್ಕೆ ಹೋಗುವದಿಲ್ಲ. ಅನುವ್ಯಾಖ್ಯಾನವಾದರೋ ಭಾಷ್ಯದಲ್ಲಿ ಗೂಢವಾಗಿರುವ ಅಂಥಾ ಜಟಿಲ ವಿಚಾರಗಳನ್ನೇ ಹತ್ತಿ ಬಿಡಿಸಿದಂತೆ ಚರ್ಚಿಸಿ ಸಮಾಧಾನ ಮಾಡುತ್ತದೆ. ಆದರೆ ಇದರಲ್ಲಿ ಉದ್ದಕ್ಕೂ ಸೂತ್ರ ಕ್ರಮವನ್ನೇ ಅನುಸರಿಸಿಲ್ಲ. ಸಮಯೋಚಿತವಾಗಿ ಹಿಂದೆ ಮುಂದೆ ಮಾಡಿ ಹೇಳಿರುವುದೂ ಉಂಟು. ನ್ಯಾಯ ವಿವರಣದಲ್ಲಿ ಬಾಲಕರಿಗೂ ಅರ್ಥವಾಗುವ ರೀತಿ ಬ್ರಹ್ಮಸೂತ್ರಗಳಲ್ಲಿ ಅಡಗಿದ ಮುಖ್ಯಮುಖ್ಯ ನ್ಯಾಯಗಳನ್ನು ತಿಳಿಸುತ್ತಾ ಪೂರ್ವಪಕ್ಷವನ್ನೂ ಸಿದ್ಧಾಂತವನ್ನೂ ಸಂಕ್ಷೇಪವಾಗಿ ತಿಳಿಸಿಕೊಡುತ್ತಾರೆ. ಈ ಗ್ರಂಥದಲ್ಲಿ ಅಧಿಕರಣಗಳಿಗೂ ಅದರಲ್ಲಿ ಹೇಳಿದ ನ್ಯಾಯಗಳಿಗೆ ಮಾತ್ರ ಪ್ರಾಧಾನ್ಯ, ಸೂತ್ರಗಳಿಗಲ್ಲ. ಇನ್ನು ಅಣುಭಾಷ್ಯದಲ್ಲಾದರೋ ಸೂತ್ರಗಳಿಗೂ ಪ್ರಾಧಾನ್ಯತೆಯಿಲ್ಲ, ಅಧಿಕರಣಗಳಿಗೂ ಪ್ರಾಧಾನ್ಯತೆಯಿಲ್ಲ, ಅಧ್ಯಾಯಗಳಿಗೂ ಪಾದಗಳಿಗೂ ಮಾತ್ರವೇ ಪ್ರಾಧಾನ್ಯ. ನಾಲ್ಕು ಅಧ್ಯಾಯಗಳ ನಾಲ್ಕು ಪಾದಗಳು ಏನೇನು ವಿಚಾರ ತಿಳಿಸಿಕೊಡುತ್ತವೆಯೆಂಬುದನ್ನು ತಿಳಿಸಿಕೊಡುವುದೇ ಇದರ ಮುಖ್ಯ ಧ್ಯೇಯವಾಗಿದೆ. ಈ ಅಣುಭಾಷ್ಯದಲ್ಲಿ ಉಳಿದ ಮೂರು ಗ್ರಂಥಗಳಲ್ಲಿ ನಿರೂಪಿತವಾದ ಬಹುಮುಖ್ಯ ವಿಚಾರಗಳೇ ಸಾರರೂಪವಾಗಿ ಅಡಗಿಕೊಂಡಿವೆ, ವಿಸ್ತಾರವಿಲ್ಲ. ಸಾರ ಮಾತ್ರ ಸೇರಿದೆಯೆಂದ ಹಾಗಾಯಿತು.

44. ಅಣುಭಾಷ್ಯದ ವೈಶಿಷ್ಟ್ಯ : ಪ್ರೊ. ಶ್ರೀ ಪಾಂಡುರಂಗಿಯವರು ಈ ವಿಚಾರವನ್ನು ಸಾಕಷ್ಟು ಸ್ಪಷ್ಟಪಡಿಸಿ 'ತತ್ವಮಂಜರಿ'ಯ ಪೀಠಿಕೆಯಲ್ಲಿ (ಪುಟ viii-ix) ತಿಳಿಸಿಕೊಟ್ಟಿದ್ದಾರೆ. ಅದನ್ನೇ ಬೇರೆ ಶಬ್ದದಲ್ಲಿ ಹೇಳುತ್ತಿದ್ದೇನೆ. ಮೇಲೆ ನಿರೂಪಿಸಿದಂತೆಯೇ (ಹಿಂದಿನ ಖಂಡ) ಸೂತ್ರಗಳ ಸಾರಸಂಗ್ರಹವೇ ಅಣುಭಾಷ್ಯದ ಮುಖ್ಯಧ್ಯೇಯವಾದ್ದರಿಂದ ಅಣುಭಾಷ್ಯದ ರಚನಾಶೈಲಿಯೇ ಮಿಕ್ಕ ಮೂರು ಗ್ರಂಥಗಳಿಂದ ಭಿನ್ನವಾಗಿದೆ. ಹೆಚ್ಚು ವಿಸ್ತಾರ ಮಾಡುವುದಿರಲಿ, ಶ್ರೀ ಪಾಂಡುರಂಗಿಯವರು ತೋರಿಸಿರುವಂತೆ, ಅನೇಕ ಅಧಿಕರಣಗಳ ಸಾರವನ್ನು ಒಂದೊಂದು ಶಬ್ದದಿಂದಲೇ ಸಂಗ್ರಹಿಸಿದ್ದಾರೆ. ಇದಕ್ಕೆ ಸರ್ವಕರ್ತಾ, ಪೂರ್ಣಾನಂದಃ, ಪ್ರಣೇತಾ, ಅತ್ತಾ ಇತ್ಯಾದಿ ಅಣುಭಾಷ್ಯದ ಪದಗಳನ್ನು ಉದಾಹರಣೆಗಾಗಿ ಕೊಡಬಹುದು. (ಇವುಗಳ ಅರ್ಥ ಮುಂದೆ ಪ್ರಥಮಾಧ್ಯಾಯದ ವಿವರಣೆ ಓದಿದಾಗ ತಿಳಿಯುವುದು.) ಹೀಗೆ ಒಂದೊಂದೇ ಪದದಲ್ಲೇ ಅಧಿಕರಣಗಳ ಸಾರವನ್ನು ಕೊಟ್ಟಿರುವುದರಿಂದ ಇವುಗಳೇ ಗಹನವಾಗಿ ಶಾಸ್ತ್ರ

ಧ್ಯಯನ ಮಾಡಿದ ಪಂಡಿತರಿಗೆ ತಾವು ಅಧ್ಯಯನ ಮಾಡಿದ ಸಕಲ ಪ್ರಮೇಯಗಳನ್ನೂ ಸಂಗ್ರಹಿಸಿ (index) ಅರ್ಥ ಮಾಡಿಕೊಳ್ಳಲು ದಾರಿತೋರಿಸುವ ಕೈಮರಗಳಂತೆ ದಿಗ್ದರ್ಶನ ಮಾಡುತ್ತವೆ. ಆದರೆ, ವಿಸ್ತಾರ ಮಾಡದೆ ಕೇವಲ ಸಾರವನ್ನೇ ತಿಳಿಸುವುದರಿಂದ, ಶಾಸ್ತ್ರದಲ್ಲಿ ಪರಿಶ್ರಮವಿಲ್ಲದ ಪಾಮರರಿಗೂ ಪೀಠಿಕೆಯಂತೆ ಸುಲಭವಾಗಿ ಅರ್ಥವಾಗುವಂತಿದೆ.

ಎರಡನೆಯದಾಗಿ ಪ್ರತಿಯೊಂದು ಪಾದದ ಕೊನೆಯಲ್ಲೂ ಆಯಾ ಪಾದದಲ್ಲಿ ಹೇಳಿದ ಮುಖ್ಯ ಪ್ರಮೇಯವನ್ನೇ ಸ್ಪಷ್ಟವಾಗಿ ತೋರಿಸಿಕೊಡುವುದರಿಂದ ಒಂದು ಪಾದಕ್ಕೂ ಇನ್ನೊಂದು ಪಾದಕ್ಕೂ ಇರುವ ವ್ಯತ್ಯಾಸವು ಬಹುಬೇಗ ಮನಸ್ಸಿಗೆ ನಾಟುತ್ತದೆ. ನಾಲ್ಕು ಬೇರೆ ಬೇರೆ ಅಧ್ಯಾಯಗಳೇ ಇರುವುದರಿಂದ ಅಧ್ಯಾಯಗಳ ವಿಷಯಗಳೂ ಸ್ಪಷ್ಟವಾಗಿ ತಿಳಿದು ಹೋಗುತ್ತವೆ.

ಮೂರನೆಯದಾಗಿ ಪಂಡಿತಾಚಾರ್ಯರು 'ಅನಂತೋಽರ್ಥಃ ಪ್ರಕಟಿತಃ' ಎಂದು ಹೇಳಿದಂತೆ ಜ್ಯೋತಿಃ ನಿಯಂತಾ ಇತ್ಯಾದಿ ಒಂದೊಂದು ಚಿಕ್ಕ 'ಉಕ್ತಿ'(ಹೇಳಿಕೆ)ಯಲ್ಲೇ ಅನೇಕ ಅಧಿಕರಣ ಗಳ ಸಾರವನ್ನು ಸಂಗ್ರಹಿಸಿದ್ದಾರೆ. ಇದನ್ನು ಮಂತ್ರಾಲಯದ ಶ್ರೀರಾಯರು ಅನುವೃತ್ತಿ, ಆವೃತ್ತಿ, ಭಿನ್ನಕ್ರಮ, ವಿಭಕ್ತಿ ವಿಪರ್ಯಾದಿ ವ್ಯಾಖ್ಯಾನ ತಂತ್ರವನ್ನು ಬಳಸಿ ಅನೇಕ ಕಡೆ ತೋರಿಸಿಕೊಟ್ಟಿದ್ದಾರೆ. ಎರಡನೇ ಅಧ್ಯಾಯದ ಎರಡನೇ ಪಾದದಲ್ಲಿ ಬರುವ ಸಮಯಗಳ (ಭಿನ್ನ ಮತಗಳ) ನಿರೂಪಣೆಯು ದುರೂಹವಾದ್ದರಿಂದ, ನ್ಯಾಯವಿವರಣದಲ್ಲಿ ಬಿಟ್ಟಂತೆಯೇ ಇಲ್ಲೂ ವಿಸ್ತರಿಸದೆ 'ಅಯುಕ್ತಿತಃ' ಎಂಬ ಒಂದೇ ಪದದಿಂದ ಇಡೀ ಪದಾರ್ಥವನ್ನು ಹೇಳಿ ಮುಗಿಸಿಬಿಟ್ಟಿದ್ದಾರೆ.

ಕಡೆಯದಾಗಿ ಸಾಧನಾಧ್ಯಾಯ ಫಲಾಧ್ಯಾಯಗಳ ವಿಚಾರಗಳು ಅನೇಕವೂ ಬಿಡಿಬಿಡಿಯವೂ ಆಗಿದ್ದು ಕ್ರಮದಲ್ಲಿ ನಿರೂಪಿಸಲು ಕ್ಲಿಷ್ಟವಾದ್ದರಿಂದ ಅವನ್ನು ಅಧಿಕರಣ ಕ್ರಮದಲ್ಲಿ ವಿವರಿಸದೆ ಅನುಸಂಧಾನಕ್ಕೆ ಅನುಕೂಲವಾಗುವಂತೆ ಕ್ರೋಢೀಕರಿಸಿ ನಿರೂಪಣೆ ಮಾಡಿದ್ದಾರೆ. ಇದರಿಂದ ಪಾರಾಯಣ ಮತ್ತು ಚಿಂತನೆಯ ಕಾಲದಲ್ಲಿ ಈ ಪ್ರಮೇಯಗಳು ಸುಲಭಗ್ರಾಹ್ಯವಾಗಿವೆ. ಅಂತೂ ಒಟ್ಟಿನಲ್ಲಿ ಅಣುಭಾಷ್ಯವನ್ನು ಅರ್ಥಾನುಸಂಧಾನಪೂರ್ವಕವಾಗಿ ಒಂದು ಸಾರಿ ಪಠಿಸಿದರೂ ಇಡೀ ಬ್ರಹ್ಮಸೂತ್ರಗಳಲ್ಲಿ ಅಡಗಿರುವ 'ಅನಂತಾರ್ಥ'ಗಳೂ ನಮ್ಮ ಮನಃಪಟಲದ ಮುಂದೆ ಸುಳಿದಾಡುವುದರಿಂದ ದೂರದರ್ಶನದಲ್ಲಿ ಚಿತ್ರಗಳು ಹಾದು ಹೋದಾಗ ಆನಂದ ವಾಗುವಂತೆ, ಪಾಮರನಿಗೂ ಹರ್ಷೋದ್ರೇಕವಾಗದೆ ಇರದು. ಇದಕ್ಕೆ ಅನುಭವವೇ ಸಾಕ್ಷಿ.

45. ಅಣುಭಾಷ್ಯಕ್ಕೆ ನಾಮಾಂತರಗಳು : ಈ ಪ್ರಕಾರ ಅಣುಭಾಷ್ಯದಲ್ಲಿ ವೇದಾಂತದ ಸಕಲ ಸಾರವೂ ಅಡಗಿರುವುದರಿಂದ ಇದನ್ನು ಅಣುವೇದಾಂತ, ಭಾಷ್ಯಾರ್ಥಸಂಗ್ರಹ, ಸರ್ವಶಾಸ್ತ್ರಾರ್ಥಸಂಗ್ರಹ, ಸಂಗ್ರಹ ಭಾಷ್ಯ, ವೇದಾಂತಸಾರ, ಸರ್ವಶಾಸ್ತ್ರಾರ್ಥಸಾರ ಎಂದು ನಾನಾ ಬಗೆಯಾಗಿ ಕರೆಯುವರು. ಹೀಗೆ ಈ ಗ್ರಂಥವು ಬಹಳ ಚಿಕ್ಕದಾಗಿರುವುದರಿಂದಲೂ ಇದರಲ್ಲೇ ಸರ್ವಶಾಸ್ತ್ರಾರ್ಥವೂ ಅಡಗಿರುವುದರಿಂದಲೂ ಇದನ್ನು ಪೂಜಾಸಮಯದಲ್ಲಿ ಅಥವಾ ಭೋಜನಾತ್ಪೂರ್ವದಲ್ಲಿ ಪ್ರತಿನಿತ್ಯ ಪಾರಾಯಣ ಮಾಡುವುದು ಪದ್ಧತಿಯಾಗಿದೆ.

46. ಗ್ರಂಥದ ಸಾರ ನಿರೂಪಣೆ : ಹೀಗೆ ಅಣುಭಾಷ್ಯಕ್ಕೆ ಪೀಠಿಕಾರೂಪವಾಗಿ ತಿಳಿಸಬೇಕಾದ

ಮುಖ್ಯ ವಿಷಯಗಳು ಮುಗಿದ ಕಾರಣ ಈಗ ಇಡೀ ಗ್ರಂಥದ ವಿಷಯಗಳ ವಿಹಂಗಾವಲೋಕನ ಮಾಡಿಸುವುದು ಮೊದಲನೆಯ ಕರ್ತವ್ಯವಾಗಿದೆ. ಇದರಿಂದ ನಾಲ್ಕು ಅಧ್ಯಾಯಗಳ ನಾಲ್ಕು ಪಾದಗಳಲ್ಲಿ ಹೇಳಿದ ವಿಚಾರಗಳ ಪರಿಚಯವಾಗುವುದಲ್ಲದೆ ವಿಶಿಷ್ಟ ಗ್ರಂಥದ ಪ್ರಮೇಯ ಸಾರದ ಕಲ್ಪನೆಯೂ ಉಂಟಾಗುತ್ತದೆ. ಆಗ ಹೆಚ್ಚು ವಿಸ್ತಾರವನ್ನು ತಿಳಿಯಬೇಕೆಂಬ ಆಸಕ್ತಿಯು ಹುಟ್ಟುವುದಲ್ಲದೆ ಅದನ್ನು ಸರಿಯಾಗಿ ಗ್ರಹಿಸಲು ಅನುಕೂಲವೂ ಆಗುವುದು. ಇದನ್ನು ತಿಳಿದೇ ನಮ್ಮ ಶ್ರೀಮದಾಚಾರ್ಯರು—

ಸಂಕ್ಷೇಪವಿಸ್ತರಾಭ್ಯಾಂ ತು ಪ್ರವದಂತಿ ಮನೀಷಿಣಃ|
ಬಹುವಾರ ಸ್ಮೃತೇಸ್ತಸ್ಯ ಫಲಬಾಹುಲ್ಯಕಾರಣಾತ್ || (ಭಾಗವತ ತಾತ್ಪರ್ಯ)

ಎಂದರೆ ಜ್ಞಾನಿಗಳು ಏನು ಹೇಳಿದರೂ ಮೊದಲು ಸಂಕ್ಷೇಪವಾಗಿ ಹೇಳಿ ಅನಂತರ ವಿಸ್ತರಿಸುವರು. ಹೀಗೆ ಅನೇಕ ವೇಳೆ ಹೇಳುವುದರಿಂದ 'ಫಲಬಾಹುಳ್ಯವೂ ಉಂಟು' ಎಂದು ಹೇಳಿದ್ದಾರೆ. ಅದರಂತೆ ಈಗ ಪ್ರಥಮಾಧ್ಯಾಯದ ವಿಷಯ ನಿರೂಪಣೆ ಮಾಡುವೆವು.

47. ಪ್ರಥಮಾಧ್ಯಾಯ : ಹಿಂದೆ 28-29ನೇ ಖಂಡಗಳಲ್ಲಿ ಪ್ರಥಮಾಧ್ಯಾಯಕ್ಕೆ ಸಮನ್ವಯಾಧ್ಯಾಯವೆಂದು ಹೆಸರೆಂದೂ ಇದರಲ್ಲಿ ಪುನಃ ಪಾದಗಳೆಂಬ ನಾಲ್ಕು ವಿಭಾಗಗಳಿವೆಯೆಂದೂ ಹೇಳಲಾಗಿತ್ತಷ್ಟೆ. ಇದು ಸಾಮಾನ್ಯ ವಿಚಾರವಾಯಿತು. ಆದರೆ ಮೊಟ್ಟಮೊದಲನೆಯ ಐದು ಅಧಿಕರಣಗಳು ಇಡೀ ಪ್ರಥಮಾಧ್ಯಾಯಕ್ಕೆ ಮಾತ್ರವಲ್ಲದೆ ಸಮಗ್ರ ಸೂತ್ರ ಗ್ರಂಥಕ್ಕೂ (ನಾಲ್ಕೂ ಅಧ್ಯಾಯಗಳಿಗೂ) ಪೀಠಿಕಾರೂಪವಾಗಿರುವುದರಿಂದ ಅವಕ್ಕೆ ತಮ್ಮದೇ ಆದ ಒಂದು ವೈಶಿಷ್ಟ್ಯವಿದೆ. ಮೂರುಭಾಷ್ಯಗಳಲ್ಲೂ ಈ ಐದು ಅಧಿಕರಣಗಳನ್ನು ಒಟ್ಟಾಗಿ ಸೇರಿಸಿ ಪಂಚಾಧಿಕರಣೀ ಎಂದು ವ್ಯವಹರಿಸುತ್ತಾರೆ. ಈ ಪಂಚಾಧಿಕರಣಿಯಲ್ಲೂ ಮೊದಲನೆಯ ನಾಲ್ಕು ಅಧಿಕರಣಗಳಲ್ಲಿ ಒಂದೊಂದೇ ಸೂತ್ರವಿರುವುದರ ಜೊತೆಗೆ ವಿಶೇಷವಾಗಿ ಈ ನಾಲ್ಕು ಸೂತ್ರಗಳೇ ಇಡೀ ಬ್ರಹ್ಮಮೀಮಾಂಸಾಶಾಸ್ತ್ರಕ್ಕೆ ತಳಪಾಯದಂತಿರುವುದರಿಂದ ಈ ನಾಲ್ಕರಲ್ಲಿ ಮತ್ತೊಂದು ವೈಶಿಷ್ಟ್ಯವುಂಟಾಗಿದೆ. ಈ ನಾಲ್ಕನ್ನೂ ಚತುಸ್ಸೂತ್ರೀ ಎನ್ನುತ್ತಾರೆ. ಈ ನಾಲ್ಕರಲ್ಲಿ ಮೊದಲನೆಯದೇ ಜಿಜ್ಞಾಸಾಧಿಕರಣ, ಎರಡನೆಯದು ಜನ್ಮಾಧಿಕರಣ, ಮೂರನೆಯದು ಶಾಸ್ತ್ರಯೋನಿತ್ವಾಧಿಕರಣ ಮತ್ತು ಸಮನ್ವಯಾಧಿಕರಣವೇ ನಾಲ್ಕನೆಯದು. ಈಗ ಈ ನಾಲ್ಕೂ ಅಧಿಕರಣಗಳ ಸೂತ್ರಗಳ ಪಾಠವನ್ನು ಹೇಳಿ ಅವುಗಳ ಮಹತ್ವವನ್ನೂ ಕ್ರಮವಾಗಿ ಸಂಕ್ಷೇಪವಾಗಿ ತಿಳಿಸುವೆನು.

48. ಜಿಜ್ಞಾಸಾಧಿಕರಣ : ಖಂಡ 6ರಲ್ಲಿ ಹೇಳಿದಂತೆ 'ಜಿಜ್ಞಾಸೆ'ಯೇ ಮೀಮಾಂಸಾಶಾಸ್ತ್ರದ ಜೀವಾಳವಲ್ಲವೆ! ಆ ಜಿಜ್ಞಾಸೆಯಿಂದಲೇ ಈ ಶಾಸ್ತ್ರ ಆರಂಭವಾಗುತ್ತದೆ. ಅದಕ್ಕೆ ಅನುಗುಣವಾಗಿ ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ ಎಂಬುದೇ ಪ್ರಥಮ ಸೂತ್ರ. ಇದರಲ್ಲಿರುವ ಬ್ರಹ್ಮ ಶಬ್ದವು ವಿಷ್ಣುವನ್ನೇ ಹೇಳುತ್ತಿದೆಯೆಂಬುದು ಭಾಷ್ಯಾರ್ಥ. ಬ್ರಹ್ಮ ಶಬ್ದಕ್ಕೆ ಅನಂತ ಗುಣಗಳುಳ್ಳವನೆಂದು ಅರ್ಥ. ಹಾಗೆ ಆ ವಿಷ್ಣು ಅನಂತಗುಣಗಳುಳ್ಳವನೆಂಬುದನ್ನು ಶಾಸ್ತ್ರಗಳಿಂದ ವಿಚಾರಮಾಡಿ ತಿಳಿದುಕೊಳ್ಳಬೇಕೆಂಬುದೇ ಈ ಸೂತ್ರದ ಮುಖ್ಯಾರ್ಥ. ಈ ವಿಚಾರಕ್ಕೆ ಜಿಜ್ಞಾಸಾ ಎಂದು ಹೆಸರು. ಈ ಅಧಿಕರಣದಲ್ಲಿ ಬ್ರಹ್ಮಜಿಜ್ಞಾಸಾ ಮಾಡಬೇಕೇ ಬೇಡವೇ

ಎಂದು ಕೂಲಂಕಷವಾಗಿ ವಿಚಾರ ಮಾಡಿ 'ಜಿಜ್ಞಾಸಾ ಕರ್ತವ್ಯಾ' ಎಂದು ನಿರ್ಣಯ(ಸಿದ್ಧಾಂತ) ಮಾಡಲಾಗಿದೆ. ಆದ್ದರಿಂದ ಈ ಒಂದನೇ ಅಧಿಕರಣಕ್ಕೆ ಜಿಜ್ಞಾಸಾಧಿಕರಣವೆಂದು ಹೆಸರು.

49. ಜನ್ಮಾದ್ಯಧಿಕರಣ : ಜಿಜ್ಞಾಸಕ್ಕೆ ಕಾರಣೀಭೂತನಾದ ವಿಷ್ಣುವಿನಲ್ಲಿ ಅನಂತಗುಣಗಳಿವೆ ಯೆಂಬುದನ್ನು ಸಾಧಿಸಬೇಕಾದರೆ ಅವನು ಜೀವಾದಿಗಳಿಂದ ಭಿನ್ನನೆಂಬುದನ್ನು ಸ್ಥಾಪಿಸಬೇಕಾ ಗುತ್ತದೆ. ಅದಕ್ಕಾಗಿ ಆ ಬ್ರಹ್ಮನ (ವಿಷ್ಣುವಿನ) ಜಗತ್ಕರ್ತೃತ್ವರೂಪ ಲಕ್ಷಣವನ್ನು ಓಂ ಜನ್ಮಾ ದ್ಯಸ್ಯ ಯತಃ ಓಂ ಎಂಬ ಎರಡನೇ ಅಧಿಕರಣದಲ್ಲಿ ಹೇಳಿದೆ. ಇದನ್ನು ತಾತ್ಪರ್ಯಚಂದ್ರಿಕೆಯ ಈ ಕಾರಿಕೆ ತಿಳಿಸುತ್ತದೆ.

ಜಿಜ್ಞಾಸಾಕಾರಣೀಭೂತ-ಗುಣಪೂರ್ತಿ ಪ್ರಸಿದ್ಧಯೇ |
ಜೀವಾದಿಭೇದಕಂ ವಿಷ್ಣೋ-ರ್ವಿಶ್ವಕರ್ತೃತ್ವಮುಚ್ಯತೇ ||

ಸಕಲ ಜಗತ್ತಿನ ಜನ್ಮಾದಿಕಾರಣೀಭೂತನಾದವನೇ ಬ್ರಹ್ಮ. ಆದ್ದರಿಂದ ಅವನು ರಮಾ ಬ್ರಹ್ಮಾದಿ ಸಕಲರಿಂದಲೂ ಭಿನ್ನನೂ ಉತ್ತಮನೂ ಆಗಿದ್ದಾನೆ. ಅವನು ಆ ರೀತಿ ಸ್ವಷ್ಟಾದ್ಯಷ್ಟ ಕರ್ತೃತ್ವ ಲಕ್ಷಣವುಳ್ಳವನೆಂದು ಜಿಜ್ಞಾಸೆ ಮಾಡಿ ತಿಳಿದುಕೊಳ್ಳಬೇಕೆಂದು ಹಿಂದಿನ ಅಧಿಕರಣ ದೊಡನೆ ಸಂಬಂಧವನ್ನು (ಸಂಗತಿಯನ್ನು) ತಿಳಿಯಬೇಕು.

50. ಶಾಸ್ತ್ರಯೋನಿತ್ವಾಧಿಕರಣ : ಪಾಶುಪತಾದಿ ಶಾಸ್ತ್ರಗಳ ಆಧಾರದ ಮೇಲೆಯೂ ಅನು ಮಾನ(ತರ್ಕ ಅಥವಾ ಯುಕ್ತಿಗಳ ಬಲ)ದಿಂದಲೂ ಜಗಜನ್ಮಾದಿಕಾರಣತ್ವವನ್ನು ಶಿವ ಬ್ರಹ್ಮಾದಿ ಇತರರಿಗೂ ಸಾಧಿಸಬಹುದಲ್ಲಾ; ಆದಕಾರಣ ವಿಷ್ಣುಜಿಜ್ಞಾಸೆಗಿಂತ ಅವರ ಜಿಜ್ಞಾಸೆಯೇ ನಡೆಯಲಿ ಎಂದು ಪೂರ್ವಪಕ್ಷ ಬಂದರೆ ಓಂ ಶಾಸ್ತ್ರಯೋನಿತ್ವಾತ್ ಓಂ ಎಂಬ ಮೂರನೇ ಸೂತ್ರ ಸಮಾಧಾನ ಹೇಳುತ್ತದೆ. ಋಗಾದಿಗಳೂ (ನಾಲ್ಕು ವೇದಗಳೂ) ಅದಕ್ಕೆ ಅನುಕೂಲವಾದ ಮಹಾಭಾರತ, ಮೂಲರಾಮಾಯಣ, ಪಂಚರಾತ್ರಾದಿಗಳು ಮಾತ್ರವೇ ಶಾಸ್ತ್ರಗಳು. ಅವು ಮಾತ್ರವೇ ಪ್ರಮಾಣ, ಮಿಕ್ಕವೆಲ್ಲ ದುಶ್ಶಾಸ್ತ್ರಗಳು, ಇವೆಲ್ಲ ಪ್ರಮಾಣವಲ್ಲ ಮತ್ತು ಅನುಮಾನ(ತರ್ಕ)ಕ್ಕೆ ನಿಯತ ಪ್ರಾಮಾಣ್ಯವಿಲ್ಲ, ಹೇಗೆ ಬೇಕಾದರೂ ತರ್ಕಮಾಡಲು ಬರುತ್ತದೆ. ಆದಕಾರಣ ಇತರ ಶಾಸ್ತ್ರಗಳಿಂದಲೂ ಅನುಮಾನದಿಂದಲೂ ಶಿವಾದಿಗಳಿಗೆ ಜಗ ತ್ಕಾರಣತ್ವ ಕೂಡಿದರೂ ಅದು ಪ್ರಮಾಣವಲ್ಲ. ಜಗತ್ಕಾರಣವನ್ನು ವೇದಾದಿ ಶಾಸ್ತ್ರಗಳಿಂದಲೇ ತಿಳಿಯಬೇಕು. ಅದು ವಿಷ್ಣುವಿಗೆ ಮಾತ್ರ ಸಿದ್ಧಿಸುತ್ತದೆ. ರುದ್ರಾದಿಗಳಿಗೆ ಕೂಡುವುದಿಲ್ಲ. ಆದ್ದರಿಂದ ವಿಷ್ಣುವನ್ನೇ ಜಗಜ್ಜನ್ಮಾದಿಕಾರಣನೆಂದು ಋಗಾದಿಶಾಸ್ತ್ರಗಳಿಂದ ವಿಚಾರಮಾಡಿ ತಿಳಿದುಕೊಳ್ಳಬೇಕೆಂಬುದೇ ಸಿದ್ಧಾಂತ.

51. ಸಮನ್ವಯಾಧಿಕರಣ : ಮೂರನೇ ಅಧಿಕರಣದಲ್ಲಿ ಆ ವಿಷ್ಣು ಜಗತ್ಕಾರಣನೆಂಬ ಪ್ರಮೇಯವನ್ನು ತಿಳಿಸಲು ಋಗ್ವೇದಾದಿ ಶಾಸ್ತ್ರಗಳೇ ಸಮರ್ಥ ಎಂದು ಪ್ರತಿಪಾದಿಸುವುದರಿಂದ ಅದರ ಮೇಲೆ ಪುನಃ ಈ ರೀತಿ ಸಂದೇಹ ಬರುತ್ತದೆ—ವೇದಗಳಲ್ಲೇ 'ಏಕ ಏವ ರುದ್ರಃ' (ತೈತ್ತಿರೀಯ ಸಂಹಿತಾ ೧/೮/೬), 'ರುದ್ರನೇ ಮುಖ್ಯ' ಇತ್ಯಾದಿ ವಾಕ್ಯಗಳಿಂದ ರುದ್ರಾದಿಗಳಿಗೂ ಜಗತ್ಕಾರಣತ್ವ ಹೇಳಿರುವುದರಿಂದ ವಿಷ್ಣುವೇ ಜಗತ್ಕಾರಣನೆಂಬುದಕ್ಕೆ ವಿರೋಧ ಬರುತ್ತದೆ ಯಲ್ಲಾ ಎಂದು ಪೂರ್ವಪಕ್ಷ ಬಂದರೆ ಓಂ ತತ್ತು ಸಮನ್ವಯಾತ್ ಓಂ ಎಂಬ ಸೂತ್ರ

ಸಮಾಧಾನ ಹೇಳುತ್ತದೆ. ಈ ಸೂತ್ರದ 'ಸಮನ್ವಯ' ಶಬ್ದದಿಂದ ಈ ಅಧಿಕರಣಕ್ಕೆ ಸಮನ್ವಯಾಧಿಕರಣವೆಂದು ಹೆಸರಾಯಿತು. ಅನ್ವಯ ಎಂದರೆ ಅರ್ಥ-ತಾತ್ಪರ್ಯಗಳನ್ನು ನಿರ್ಣಯಿಸಲು ಉಪಯುಕ್ತವಾಗುವ 'ಉಪಕ್ರಮಾದಿ' ಲಿಂಗಗಳು. ಅವುಗಳಿಂದ ನಿರ್ಣೀತವಾದ ಅರ್ಥಕ್ಕೂ ಅನ್ವಯವೆಂದೇ ಹೆಸರು. ಅದರಂತೆ ಈ ಸೂತ್ರಕ್ಕೆ ಹೀಗೆ ಅರ್ಥವಾಗುತ್ತದೆ—ಉಪಕ್ರಮಾದಿ ತಾತ್ಪರ್ಯನಿರ್ಣಾಯಕ ಲಿಂಗ(ಯುಕ್ತಿ)ಗಳನ್ನು ಯೋಜಿಸಿ, ಬಲಾಬಲ ಪರೀಕ್ಷೆ ಮಾಡಿ, ಶಕ್ತಿತಾತ್ಪರ್ಯಗಳಿಗೆ ವಿರೋಧ ಬರದಂತೆ ಅರ್ಥ ಹೇಳಿದರೆ, ವೇದಾದಿ ಸಕಲ ಶಾಸ್ತ್ರಗಳಿಂದಲೂ ಮುಖ್ಯವೃತ್ತಿಯಿಂದ ಜಗಜ್ಜನ್ಮಾದಿಕಾರಣನು ಆ ವಿಷ್ಣುವೆಂದೇ ಸಿದ್ಧವಾಗುತ್ತದೆಯೇ ವಿನಹ ರುದ್ರಾದಿಗಳಿಗೆ ಆ ಕಾರಣತ್ವ ಮುಖ್ಯವಾಗಿ ಕೂಡುವದಿಲ್ಲ. ಆದ್ದರಿಂದ ವಿಷ್ಣುವಿನ ಜಿಜ್ಞಾಸೆ ಮಾಡಬೇಕೆಂಬುದೇ ಸಂಗತವಾಗಿದೆ.

52. ಈಕ್ಷತ್ಯಧಿಕರಣ : ಈ ಅಧಿಕರಣವು ಐದನೆಯದೂ ಆಗಿದೆಯಲ್ಲದೆ 'ಪಂಚಾಧಿಕರಣಿ'ಯಲ್ಲಿ ಕಡೆಯದೂ ಆಗಿದೆ. ಇದರಲ್ಲಿ, ಚತುಸ್ಸೂತ್ರಿಯ ಒಂದೊಂದು ಸೂತ್ರಕ್ಕೆ ಪ್ರತಿಯಾಗಿ, ಏಳು ಸೂತ್ರ(5-11)ಗಳಿರುವದರಿಂದ ಚತುಸ್ಸೂತ್ರಿಗೆ ವಿಲಕ್ಷಣವಾಗಿದೆ. ಈ ಅಧಿಕರಣದ ಮೊದಲನೇ ಸೂತ್ರ **ಓಂ ಈಕ್ಷತೇ ನಾಽಶಬ್ದಮ್ ಓಂ.** ಈ ಸೂತ್ರದ ಮೊದಲನೇ ಪದದಿಂದಲೇ ಈ ಅಧಿಕರಣಕ್ಕೆ ಈಕ್ಷತ್ಯಧಿಕರಣವೆಂಬ ಹೆಸರು ಬಂದಿದೆ. ಈ ಅಧಿಕರಣವು ಹಿಂದಿನ (ನಾಲ್ಕನೇ) ಅಧಿಕರಣದಲ್ಲಿ ನಿರ್ಣಯಿಸಿ ಹೇಳಿದ ಸಮನ್ವಯವೇ ಕೂಡುವದಿಲ್ಲವೆಂಬ ಆಕ್ಷೇಪ(ಪೂರ್ವಪಕ್ಷ)ವನ್ನು ತಾನೇ ಆರೋಪಣೆ ಮಾಡಿ ಅದಕ್ಕೆ ಪರಿಹಾರವನ್ನು ನಾನಾ ರೀತಿಯಿಂದ ಹೇಳುತ್ತದೆ. ಹೀಗೆ ಪ್ರಕಾರಾಂತರದಿಂದ ಪ್ರಥಮ ಸೂತ್ರದಲ್ಲಿ ಹೇಳಿದ 'ಬ್ರಹ್ಮಜಿಜ್ಞಾಸಾ ಕರ್ತವ್ಯಾ' ಎಂಬ ಸಿದ್ಧಾಂತವನ್ನೇ ಸಮರ್ಥಿಸುತ್ತದೆ. ಈಗ ಆ ಪೂರ್ವಪಕ್ಷವೇನು? ಅದಕ್ಕೆ ಸಮಾಧಾನವೇನು? ಸಿದ್ಧಾಂತವೇನು? ಎಂಬುದನ್ನೇ ನೋಡೋಣ.

53. ಪೂರ್ವಪಕ್ಷ–ಸಿದ್ಧಾಂತಗಳು : (ಪೂರ್ವಪಕ್ಷ) ಉಪಕ್ರಮಾದಿ ಲಿಂಗಗಳಿಂದ ಬಲಾಬಲಗಳನ್ನು ಪರೀಕ್ಷಿಸಿ ಅರ್ಥ ಹೇಳಿದರೆ ಸಕಲ ಶಾಸ್ತ್ರಗಳೂ ವಿಷ್ಣುವನ್ನೇ ಬೋಧಿಸುತ್ತವೆ ಎಂದು ಹೇಳಿದ್ದೇ ಸರಿಯಲ್ಲ. ಏಕೆಂದರೆ ವೇದಗಳಲ್ಲೇ ಅನೇಕ ಕಡೆ ಆ ಪರಬ್ರಹ್ಮವು ಅವಾಚ್ಯ, ಅಜ್ಞೇಯ, ಅರೂಪ ಎಂದು (ಮೂಲ ಶ್ರುತಿಗಳನ್ನು ಅಣುಭಾಷ್ಯಕ್ಕೆ ಅರ್ಥ ಹೇಳುವಾಗ ತೋರಿಸುವೆವು) 'ಸರ್ವವೇದಗಳೂ ಆ ವಿಷ್ಣುವೊಬ್ಬನನ್ನೇ ತಿಳಿಸುತ್ತವೆ' ಎಂದು ಐತರೇಯ (೨/೨/೨) ಶ್ರುತಿಯೂ 'ವೇದಾದಿ ಸಕಲ ಶಾಸ್ತ್ರಗಳೂ ಪರಸ್ಪರ ವಿರೋಧವಿಲ್ಲದೆ ಒಂದೇ ವಿಚಾರವನ್ನೇ ಹೇಳುತ್ತವೆ' ಎಂದು ಪೈಂಗಿ ಶ್ರುತಿಯೂ, 'ಸಕಲ ವೇದಗಳಿಂದಲೂ ನಾನೇ ವೇದ್ಯವಾಗಿದ್ದೇನೆ' ಎಂದು ಗೀತೆಯೂ ಮೊದಲಾಗಿ ವರ್ಣಿಸಿರುವುದರಿಂದ ಆ ಪರಬ್ರಹ್ಮಕ್ಕೆ ವಾಚತ್ವವೇ ಕೂಡದಿರುವಾಗ ಸರ್ವಶಾಸ್ತ್ರಾರ್ಥಸಮನ್ವಯವಂತೂ ದೂರತೋಪಾಸ್ತವಾಯಿತು—ಎಂದು ಪೂರ್ವಪಕ್ಷ ಬಂದರೆ ಸಿದ್ಧಾಂತ ಏನೆಂದರೆ, 'ಸಕಲ ವೇದಗಳೂ ಯಾರ ಸ್ವರೂಪವನ್ನು ಪ್ರವೇಶಿಸುವವೋ' ಎಂದ ಕಠಶ್ರುತಿಯೂ (೧/೨/೧೫) 'ವೇದಗಳಲ್ಲೂ ರಾಮಾಯಣಾದಿಗಳಲ್ಲೂ ಸರ್ವತ್ರ ವಿಷ್ಣುವೇ ಹೇಳಲ್ಪಡುತ್ತಾನೆ' ಎಂದು ಹರಿವಂಶವೂ ಹೀಗೆ ನೂರಾರು ಶ್ರುತಿಸ್ಮೃತಿಗಳು ಹೇಳುವುದರಿಂದ ಆ ವಿಷ್ಣು ವೇದೈಕಜನ್ಯವಾದ ಜ್ಞಾನಕ್ಕೆ ವಿಷಯವೇ

ಆಗಿದ್ದಾನಲ್ಲದೆ (ಇದೇ ಈಕ್ಷತೇಃ ಎಂಬುದರ ಅರ್ಥ) ಮುಖ್ಯ ವೃತ್ತಿಯಿಂದಲೇ ಸಕಲ ವೇದಗಳಿಂದಲೂ ಏಕರೀತಿಯಾಗಿ ವಿರೋಧವಿಲ್ಲದಂತೆ ಪ್ರತಿಪಾದ್ಯನಾಗಿದ್ದಾನೆ. ಆದಕಾರಣ ಪೂರ್ವಪಕ್ಷದಲ್ಲಿ ಹೇಳಿದ ಅವಾಚ್ಯ, ಅಜ್ಞೇಯಾದಿ ಶಬ್ದಗಳಿಗೆ (ಅನುವ್ಯಾಖ್ಯಾನದಲ್ಲಿ ಹೇಳಿದ ಪೈಂಗಿ ಶ್ರುತಿಯು ವಿವರಿಸುವಂತೆ) 'ಕಲ್ಪನೆಗೂ ಮೀರಿ ಆಶ್ಚರ್ಯಕರವಾದ್ದರಿಂದ ಸಮಗ್ರವಾಗಿ ವರ್ಣಿಸುವುದಕ್ಕಾಗಲಿ ತಿಳಿಯುವುದಕ್ಕಾಗಲಿ ಸಾಧ್ಯವಿಲ್ಲದ್ದು' ಎಂದೇ ಅರ್ಥ ಹೇಳಬೇಕೆಂದು ಈ ಅಧಿಕರಣ ವಿವರಿಸುತ್ತದೆ.

54. ಪಂಚಾಧಿಕರಣಿಯ ಒಟ್ಟು ಸಾರ : ಈ ಪ್ರಕಾರ ಪಂಚಾಧಿಕರಣಿಯಲ್ಲಿ ಐದು ಅಧಿಕರಣಗಳೂ ಹನ್ನೊಂದು ಸೂತ್ರಗಳೂ ಇದ್ದರೂ ಅವೆಲ್ಲ ಒಟ್ಟಾಗಿ ಸೇರಿ ಒಂದೇ ವಿಷಯವನ್ನು ಸ್ಪಷ್ಟೀಕರಿಸುತ್ತವೆಯೆಂಬುದನ್ನು ನಾವು ಮುಖ್ಯವಾಗಿ ಗಮನಿಸಬೇಕು. ಆ ಪರಬ್ರಹ್ಮನು (ವಿಷ್ಣುವು) ಮುಖ್ಯವೃತ್ತಿಯಿಂದಲೇ ಶ್ರುತಿಸ್ಮೃತ್ಯಾದಿ ಸಕಲ ಶಾಸ್ತ್ರಗಳಿಂದ ಅವಿರುದ್ಧವಾಗಿ ಜನ್ಯವಾದ (ತಿಳಿದುಬರುವ) ಜ್ಞಾನಕ್ಕೆ ವಿಷಯನೇ ಆಗಿದ್ದಾನೆ. (ಇದು ಐದನೇ ಈಕ್ಷತ್ಯಧಿಕರಣದ ಸಾರ) ಆದಕಾರಣ ಉಪಕ್ರಮಾದಿ ಲಿಂಗಗಳಿಂದ ಬಲಾಬಲ ಪರೀಕ್ಷೆ ಮಾಡಿ ಶಕ್ತಿತಾತ್ಪರ್ಯಗಳನ್ನು ಹೊಂದಿಸಿ ಅರ್ಥಹೇಳುತ್ತಾ ಹೋದರೆ ಸಕಲ ಶಾಸ್ತ್ರಗಳೂ ಮುಖ್ಯವಾಗಿ ಆ ವಿಷ್ಣುವಿಗೇ ಅನ್ವಯಿಸುತ್ತವೆ. ಬೇರೆ ಯಾರಿಗೂ ಮುಖ್ಯತಃ ಅನ್ವಯಿಸುವುದಿಲ್ಲ. (ಇದು ಸಮನ್ವಯಾಧಿಕರಣದ ಸಾರ) ಹೀಗೆ ವಿಷ್ಣು ವೇದೈಕ ಸಮಧಿಗಮ್ಯನಾದ್ದರಿಂದ (ಅರ್ಥಾತ್ ಕೇವಲ ವೇದಗಳಿಂದಲೇ ಅವನ ವಿಚಾರ ತಿಳಿಯಲು ಸಾಧ್ಯವಾದ ಕಾರಣ) ಕ್ವಚಿತ್ ಶೈವಾದ್ಯಾಗಮಗಳಿಂದಲೂ ಅಥವಾ ಅನುಮಾನ(ತರ್ಕ)ದಿಂದಲೂ ಶಿವಾದಿಗಳಿಗೆ ಜಗತ್ಕಾರಣತ್ವ ಹೇಳಲು ಸಾಧ್ಯವಿದ್ದರೂ ಈ ವಿಚಾರಗಳು ವೇದಾದಿ ಸದಾಗಮಗಳ ನಿರ್ಣಯಕ್ಕೆ 'ವಿರುದ್ಧ'ವಾಗಿರುವುದರಿಂದ ಪ್ರಮಾಣಗಳಲ್ಲ (ಇದು ಮೂರನೇ ಶಾಸ್ತ್ರಯೋನಿತ್ವಾಧಿಕರಣದ ಸಾರ). ಅದಕ್ಕೆ ಪ್ರತಿಯಾಗಿ ವೇದಾದಿಗಳಲ್ಲಿ ಪ್ರತಿಪಾದಿತವಾದ ಜಗಜ್ಜನ್ಮಾದಿ ಕಾರಣತ್ವರೂಪ ಲಕ್ಷಣಗಳೆಲ್ಲವೂ ಆ ವಿಷ್ಣುವಿನಲ್ಲೇ ಹೊಂದುತ್ತವೆ. ಅತ ಏವ ಅವನು ಚರಾಚರಾತ್ಮಕ ಇತರ ಸಮಸ್ತ ಜಗತ್ತಿಗಿಂತಲೂ ಅತ್ಯಂತ ಭಿನ್ನನೆಂದೂ ಉತ್ತಮನೆಂದೂ ಸಿದ್ಧವಾಗುತ್ತದೆ. (ಇದು ಎರಡನೇ ಜನ್ಮಾಧಿಕರಣದ ಸಾರ.) ಹೀಗೆ ಜಗಜ್ಜನ್ಮಾದಿಕಾರಣತ್ವ ಲಕ್ಷಣದಿಂದ ಆ ವಿಷ್ಣುವೊಬ್ಬನೇ ಅನಂತ ಗುಣಪರಿಪೂರ್ಣನೆಂದೂ ಅವನೇ ಸರ್ವೋತ್ತಮನೆಂದೂ ಸಿದ್ಧವಾಗುವುದರಿಂದ ಅವನ ಜಿಜ್ಞಾಸೆಯನ್ನೇ ಮಾಡಬೇಕೆಂಬುದು (ಇದೇ ಜಿಜ್ಞಾಸಾಧಿಕರಣದ ಸಾರ) ಯುಕ್ತವಾಗಿದೆಯೆಂದು ಪ್ರತಿಪಾದಿತವಾಯಿತು. ಹೀಗೆ, ಒಟ್ಟಾಗಿ, ಇಡೀ ಪಂಚಾಧಿಕರಣಿಯು ಬ್ರಹ್ಮಮೀಮಾಂಸೆಯೆಂಬ ಈ ಶಾಸ್ತ್ರಾರಂಭವನ್ನು ಸಮರ್ಥಿಸುತ್ತಾ ಈ ಪ್ರಥಮಾಧ್ಯಾಯದ ಮುಖ್ಯ ವಿಷಯವಾದ ಬ್ರಹ್ಮಜಿಜ್ಞಾಸಾಕ್ಕೆ ಪೀಠಿಕೆ ಹಾಕಿದ್ದರಿಂದ ಇದನ್ನು (ಪಂಚಾಧಿಕರಣಿಯನ್ನು) ಟೀಕಾದಿ ಗ್ರಂಥಗಳಲ್ಲಿ 'ಅಧ್ಯಾಯ ಪಾದಪೀಠ'ವೆಂದು ಕರೆದಿದ್ದಾರೆ.

55. ಪ್ರಥಮಾಧ್ಯಾಯದ ವಿಷಯ ನಿರೂಪಣೆ : ಈ ಪ್ರಕಾರ ಪಂಚಾಧಿಕರಣಿಯು ಶಾಸ್ತ್ರಾರಂಭ ಸಮರ್ಥನೆಯನ್ನು ಮಾಡಿ ಸಮನ್ವಯಕ್ಕೆ ಪೀಠಿಕೆ ಹಾಕಿಕೊಟ್ಟಿತಷ್ಟೆ. ಆ ಸಮನ್ವಯವನ್ನೇ ಮುಂದಿನ ಇಡೀ ಪ್ರಥಮಾಧ್ಯಾಯವು ವಿಸ್ತರಿಸಿ ಪ್ರಕಟಿಸುತ್ತದೆಯೆಂದು ಭಾಷ್ಯದಲ್ಲಿ ಭಾಷ್ಯ

ಕಾರರು ಹೇಳುತ್ತಾರೆ—ತಮೇವ ಸಮನ್ವಯಂ ಪ್ರಕಟಯತ್ಯಾನಂದಮಯೋಽಭ್ಯಾಸಾದಿತ್ಯಾದಿನಾ ಸಮಸ್ತೇನಾಧ್ಯಾಯೇನ ಪ್ರಾಯೇಣ'—ಸೂತ್ರಕಾರರು ಆ ಸಮನ್ವಯವನ್ನೇ 'ಆನಂದಮಯೋಽಭ್ಯಾಸಾತ್' ಎಂದಾರಂಭಿಸಿ ಮಿಕ್ಕ ಪ್ರಾಯಶಃ ಸಮಸ್ತ ಅಧ್ಯಾಯದಿಂದಲೂ ನಿರೂಪಣೆ ಮಾಡಿ ಸ್ಪಷ್ಟಪಡಿಸುತ್ತಾರೆ. ಈ ಅಧ್ಯಾಯದಲ್ಲಿ ಒಂದೆರಡು ಕಡೆ (೨ ಪಾದ, ೪ ಅಧಿಕರಣ, ೩ ಪಾದ ೮-೯ ಅಧಿಕರಣ) ಪ್ರಾಸಂಗಿಕವಾಗಿ ಬೇರೆ ವಿಚಾರಗಳೂ ಬಂದಿರುವುದರಿಂದ 'ಪ್ರಾಯೇಣ' ಎಂದು ಹೇಳಿದ್ದಾರೆ. ಆಗಲಿ ಅಧ್ಯಾಯದ ವಿಷಯ ಸಮನ್ವಯವಾದರೆ ಪಾದಭೇದಕ್ಕೆ ಆಧಾರವೇನು? ಎಂಬುದನ್ನು ತೋರಿಸುವುದಕ್ಕಾಗಿ ಭಾಷ್ಯದಲ್ಲಿ ಸೂಚಿತವಾದ ವಿಷಯವನ್ನು ವಿವರಿಸಿ ಶಬ್ದಗಳು ನಾಲ್ಕು ವಿಧವಾಗಿವೆಯೆಂಬುದನ್ನು ಶ್ರೀಮಜ್ಜಯತೀರ್ಥರು ತತ್ವಪ್ರಕಾಶಿಕೆಯಲ್ಲಿ ತೋರಿಸಿದ್ದಾರೆ. ಶ್ರೀಮದ್ವ್ಯಾಸರಾಯರು ಚಂದ್ರಿಕಾದಲ್ಲಿ ಆ ವಿಭಾಗವನ್ನೇ ಮತ್ತಷ್ಟು ಸ್ಪಷ್ಟೀಕರಿಸಿದ್ದಾರೆ.

56. ನಾಲ್ಕು ವಿಧ ಶಬ್ದಗಳು : ಬ್ರಹ್ಮಸೂತ್ರಗಳು ಅನಂತವೇದಗಳಲ್ಲಿರುವ ಸಕಲ ಶಬ್ದಗಳನ್ನು ವಿಷ್ಣುವಿನಲ್ಲೇ ಸಮನ್ವಯ ಮಾಡುವುದರಿಂದ ಈ ವಿಚಾರ ಮುಖ್ಯವಾಗಿ ವೈದಿಕ ಶಬ್ದಗಳಿಗೇ ಅನ್ವಯಿಸುತ್ತದೆ. ವೈದಿಕ ಶಬ್ದಗಳು (೧) ಅನ್ಯತ್ರೈವ ಪ್ರಸಿದ್ಧಾಃ (೨) ಉಭಯತ್ರ ಪ್ರಸಿದ್ಧಾಃ (೩) ಅನ್ಯತ್ರ ಪ್ರಸಿದ್ಧಾಃ (೪) ತತ್ರಪ್ರಸಿದ್ಧಾಃ ಎಂದು ನಾಲ್ಕು ಬಗೆಯಾಗಿವೆ. (೧) ಅನ್ಯತ್ರೈವ ಪ್ರಸಿದ್ಧಾಃ ಎಂದರೆ (ವಿಷ್ಣುವಲ್ಲದೆ) ಬೇರೆ ಕಡೆ ಮಾತ್ರವೇ ಪ್ರಸಿದ್ಧವಾದ ಶಬ್ದಗಳು ಎಂದರ್ಥ. ಇದನ್ನು ಸ್ಪಷ್ಟಪಡಿಸುತ್ತಾ ಚಂದ್ರಿಕಾದಲ್ಲಿ 'ಯೇಷಾಂ ಬ್ರಹ್ಮಪರತ್ವಸ್ಯ ಅತ್ಯಶಕ್ಯತಾ' ಎಂದಿದ್ದಾರೆ. ಅಂದರೆ ಯಾವ ಶಬ್ದಗಳನ್ನು ವಿಷ್ಣುಪರವೆಂದು ಹೇಳಲು ಸುತರಾಂ ಸಾಧ್ಯವಿಲ್ಲವೋ ಅಂಥಾ ಶಬ್ದಗಳು, ಉದಾಹರಣೆಗೆ ಕ್ರಿಯಾಪದಗಳು, ಸ್ತ್ರೀಲಿಂಗ ಶಬ್ದಗಳು, ತುಚ್ಛ, ಹೀನ, ಶೂನ್ಯ ಮೊದಲಾದ ನಿಂದಾತ್ಮಕ ಶಬ್ದಗಳು ಇತ್ಯಾದಿ. (೨) ಉಭಯತ್ರ ಪ್ರಸಿದ್ಧಾಃ ಎಂದರೆ ಶ್ರೀ ವಿಷ್ಣುವಿನಲ್ಲೂ ಬೇರೆಯವರಲ್ಲೂ ಸಮಸಮವಾಗಿ ಪ್ರಸಿದ್ಧಿಯಿರುವ ಶಬ್ದಗಳು. ಉದಾಹರಣೆಗೆ ಹರಿ ಎಂದರೆ ವಿಷ್ಣು, ಕಪಿ, ಯಮ, ವಾಯು ಇತ್ಯಾದಿ ಅನೇಕ ಅರ್ಥಗಳಿವೆ. ಇಲ್ಲಿ ಹರಿ ಎಂದೂ ಅರ್ಥ, ಬೇರೆ ಅರ್ಥವೂ ಸಮ-ಸಮವಾಗಿವೆ. ಹೀಗೆಯೇ ಭೂಮಾ ಎಂದರೆ ವಾಯುವೆಂದೂ ವಿಷ್ಣುವೆಂದೂ ಅರ್ಥವಾಗುತ್ತದೆ. ಆದ್ದರಿಂದ ಇವೆಲ್ಲ ಉಭಯತ್ರ ಪ್ರಸಿದ್ಧ ಶಬ್ದಗಳು. (೩) ಅನ್ಯತ್ರ ಪ್ರಸಿದ್ಧಾಃ (ವಿಷ್ಣುವಲ್ಲದೆ) ಬೇರೆ ಕಡೆಯೇ ಪ್ರಸಿದ್ಧವಾದ ಪದಗಳು. 'ಬೇರೆ ಕಡೆ' ಎಂಬುದರ ಭಾವವನ್ನೇ ಸ್ಪಷ್ಟಪಡಿಸುತ್ತಾ ಚಂದ್ರಿಕಾದಲ್ಲಿ 'ಯೇಷಾಂ ಬ್ರಹ್ಮಣಿ ಅಪ್ರಸಿದ್ಧಿಃ ಪ್ರಸಿದ್ಧಿಶ್ಚ ಅನ್ಯವಸ್ತುಷು' ಎಂದಿದ್ದಾರೆ. ಅದಕ್ಕೆ 'ಯಾವ ಪದಗಳಿಗೆ ಬ್ರಹ್ಮ(ವಿಷ್ಣುವಿ)ನಲ್ಲಿ ಪ್ರಸಿದ್ಧಿಯಿಲ್ಲವೋ ಮತ್ತು ಯಾವುವಕ್ಕೆ ಬೇರೆ ವಸ್ತುಗಳಲ್ಲೇ ಪ್ರಸಿದ್ಧಿಯಿದೆಯೋ ಅಂಥಾ ಶಬ್ದಗಳನ್ನು ಅನ್ಯತ್ರ ಪ್ರಸಿದ್ಧಾಃ ಎನ್ನುತ್ತಾರೆ. ಉದಾಹರಣೆಗೆ ಆನಂದಮಯ, ಅನ್ನಮಯ ಮೊದಲಾದ ಶಬ್ದಗಳು ದೇಹದಲ್ಲಿರುವ ಕೋಶಗಳೆಂದು ಪ್ರಸಿದ್ಧಿಯಿದೆ; ಹೀಗೆಯೇ ಗಾಯತ್ರೀ ಒಂದು ಛಂದಸ್ಸೆಂದು, ಜ್ಯೋತಿಃ ಶಬ್ದ ಬೆಂಕಿಯಲ್ಲಿ ಪ್ರಸಿದ್ಧವಾಗಿದೆ. ಇವು ಯಾವುವೂ ವಿಷ್ಣುವಿನಲ್ಲಿ ಪ್ರಸಿದ್ಧಿಯಿಲ್ಲ, ಆದಕಾರಣ ಇಂಥಾ ಶಬ್ದಗಳು ಅನ್ಯತ್ರ ಪ್ರಸಿದ್ಧ ಶಬ್ದಗಳು. (ಮೊದಲನೆಯ ಗುಂಪಿಗೆ ಸೇರಿದ ಅನ್ಯತ್ರೈವ ಪ್ರಸಿದ್ಧ

ಶಬ್ದಗಳು ಸರ್ವಥಾ ವಿಷ್ಣು ವಾಚಕವಾಗಲಾರವು, ಈ ಮೂರನೇ ಗುಂಪಿನ ಶಬ್ದಗಳು ಹಾಗಲ್ಲ; ಪ್ರಸಿದ್ಧಿಯಿಲ್ಲ–ಅಷ್ಟೇ.) ಕಡೆಯದಾಗಿ (೪) ತತ್ರಪ್ರಸಿದ್ಧಾಃ ಎಂದರೆ ವಿಷ್ಣುವಿನಲ್ಲೇ ಪ್ರಸಿದ್ಧವಾದ ಕೇಶವ, ನಾರಾಯಣ, ಮಾಧವ ಮೊದಲಾದ ಶಬ್ದಗಳು. ಹೀಗೆ ಶಬ್ದಗಳು ನಾಲ್ಕು ವಿಧವಾಗಿರುವುವಲ್ಲದೆ ಪುನಃ ನಾಮಾತ್ಮಕವೆಂದೂ ಲಿಂಗಾತ್ಮಕವೆಂದೂ ಎರಡು ವಿಧವಾಗಿವೆ.

57. ನಾಮಾತ್ಮಕ-ಲಿಂಗಾತ್ಮಕ ಶಬ್ದಗಳು : ಚಂದ್ರಿಕಾದಲ್ಲಿ 'ಯಾನಿ ಪದಾನಿ ಆಪಾತತೋ ರೂಢಾನ್ಯೇವ ತಾನಿ ನಾಮಾತ್ಮಕಾನಿ' ಎಂದು ಅರ್ಥ ಹೇಳಿದ್ದಾರೆ. ಯಾವ ಪದಗಳು ಆಪಾತತಃ ರೂಢಿಯಾಗಿಯೇ ಪ್ರಸಿದ್ಧಿಗೆ ಬಂದಿವೆಯೋ ಅವು ನಾಮಾತ್ಮಕ ಶಬ್ದಗಳು. ಉದಾಹರಣೆಗೆ ಆಕಾಶ ಪ್ರಾಣ ಆನಂದಮಯ ಮೊದಲಾದ ಶಬ್ದಗಳು ರೂಢಿಯಿಂದಲೇ ಪ್ರಸಿದ್ಧಿಗೆ ಬಂದಿರುವುದರಿಂದ ಇವೆಲ್ಲ ನಾಮಾತ್ಮಕ ಶಬ್ದಗಳು. ಲಿಂಗಾತ್ಮಕ ಶಬ್ದಗಳ ಲಕ್ಷಣವನ್ನು ಮಂತ್ರಾಲಯದ ರಾಯರು ಚಂದ್ರಿಕಾಪ್ರಕಾಶದಲ್ಲಿ 'ಯೌಗಿತಾನಿ, ಯೋಗಾರೂಢಾನಿ ವಾ, ಲಿಂಗಾನಿ' ಎಂದು ಹೇಳಿದ್ದಾರೆ. ಕೇವಲ ಯೋಗದಿಂದಲೋ ಅಥವಾ ಯೋಗ ರೂಢಿ ಎರಡೂ ವಿಧದಿಂದಲೂ ಪ್ರಸಿದ್ಧವಾದ ಶಬ್ದಗಳಿಗೆ 'ಲಿಂಗಾತ್ಮಕಾನಿ' ಎಂದು ಸಂಕೇತ. ಉದಾಹರಣೆಗೆ ಕಮಲಕ್ಕೆ ಜಲಜ, ಸರೋಜ, ವಾರಿಜ ಮೊದಲಾದ ಶಬ್ದಗಳು ಲಿಂಗಾತ್ಮಕ ಶಬ್ದಗಳು. ನೀರಿನಲ್ಲಿ ಅಥವಾ ಸರೋವರದಲ್ಲಿ ಹುಟ್ಟಿದ್ದು ಎಂಬ ಯೋಗದಿಂದ ಹೆಚ್ಚು ಪ್ರಸಿದ್ಧಿಗೆ ಬಂದ ಕಾರಣ ಲಿಂಗಾತ್ಮಕಗಳು.

58. ಪ್ರಥಮಾಧ್ಯಾಯದ ನಾಲ್ಕು ಪಾದಗಳು : ಹಿಂದೆ ಹೇಳಿದ ನಾಲ್ಕು ವಿಧ ಪದಗಳಲ್ಲಿ ನಾಲ್ಕನೇ ಗುಂಪಿಗೆ ಸೇರಿದ ತತ್ರಪ್ರಸಿದ್ಧ ಶಬ್ದಗಳು ವಿಷ್ಣುವನ್ನೇ ನೇರವಾಗಿ ಹೇಳುವುದರಿಂದ ಅವನ್ನು ಸಮನ್ವಯ ಮಾಡುವ ಆವಶ್ಯಕತೆಯೇ ಇಲ್ಲ. ಇನ್ನು ಅನ್ಯತ್ರೈವ ಶಬ್ದಗಳ ಅನ್ವಯ ಬಹಳ ಕಠಿನವಾದ್ದರಿಂದ ಅದನ್ನು ನಾಲ್ಕನೇ ಪಾದದಲ್ಲಿ ಹೇಳುತ್ತಾರೆ. ಉಭಯತ್ರ ಪ್ರಸಿದ್ಧ ಶಬ್ದಗಳು ಬೇರೆ ಅರ್ಥವನ್ನು ಹೇಳಿದಂತೆ ಕಂಡರೂ ಮುಖ್ಯವಾಗಿ ವಿಷ್ಣುವನ್ನೇ ಹೇಳುವುವೆಂದು ಮೂರನೇ ಪಾದದಲ್ಲಿ ನಿರೂಪಣೆ ಮಾಡುವರು. ಇನ್ನು ಅನ್ಯತ್ರ ಪ್ರಸಿದ್ಧ ಶಬ್ದಗಳನ್ನು ನಾಮಾತ್ಮಕ, ಲಿಂಗಾತ್ಮಕ ಎಂದು ವಿಭಾಗ ಮಾಡಿಕೊಂಡು ನಾಮಾತ್ಮಕ ಪದಗಳನ್ನು ಪ್ರಥಮ ಪಾದದಲ್ಲೂ ಲಿಂಗಾತ್ಮಕ ಶಬ್ದಗಳನ್ನು ಎರಡನೇ ಪಾದದಲ್ಲೂ ಸಮನ್ವಯ ಮಾಡುತ್ತಾರೆ. ಆದ್ದರಿಂದ ಪ್ರಥಮಾಧ್ಯಾಯದ ಪಾದಕ್ರಮವು ಹೀಗಿದೆ—

1ನೇ ಪಾದ ಅನ್ಯತ್ರ ಪ್ರಸಿದ್ಧ ನಾಮಾತ್ಮಕ ಶಬ್ದಗಳು
2ನೇ ಪಾದ ಅನ್ಯತ್ರ ಪ್ರಸಿದ್ಧ ಲಿಂಗಾತ್ಮಕ ಶಬ್ದಗಳು
3ನೇ ಪಾದ ಉಭಯತ್ರ ಪ್ರಸಿದ್ಧ ನಾಮಲಿಂಗಾತ್ಮಕ ಶಬ್ದಗಳು
4ನೇ ಪಾದ ಅನ್ಯತ್ರೈವ ಪ್ರಸಿದ್ಧ ನಾಮಲಿಂಗಾತ್ಮಕ ಶಬ್ದಗಳು

ಹೀಗೆ ಪರ್ಯಾಯ ವಾಚಕಗಳಲ್ಲದ ಅನಂತ ಶಬ್ದಗಳೂ ವಿಷ್ಣುವಿನಲ್ಲೇ ಸಮನ್ವಯವಾಗುವುದರಿಂದ ಆ ಪದಗಳೆಲ್ಲವೂ ಹೇಳುವ ಅನಂತ ಗುಣಗಳು ವಿಷ್ಣುವಿನಲ್ಲಿವೆಯೆಂದು ಸಿದ್ಧವಾಗುವುದರಿಂದ ಈ ಸಮನ್ವಯಾಧ್ಯಾಯದಲ್ಲಿ ವಿಷ್ಣು ಅನಂತಗುಣ ಪರಿಪೂರ್ಣನೆಂದು ಪ್ರತಿಪಾದಿಸಿದ ಹಾಗಾಯಿತು. ಈ ವಿಷಯವನ್ನು ಶ್ರೀಮಚ್ಚಂದ್ರಿಕಾಚಾರ್ಯರು ಈ ಶ್ಲೋಕದಿಂದ

ಸಂಗ್ರಹಿಸಿ ಹೇಳಿದ್ದಾರೆ—

ಅಪರ್ಯಾನಂತಶಬ್ದೈ-ರ್ಯೌಗಿಕೈರ್ಗುಣವಾಚಕೈಃ |
ವಾಚತ್ವಾದ್ ಬ್ರಹ್ಮಣಃ ಸಿದ್ಧಾ ಸಮಸ್ತಗುಣಪೂರ್ಣತಾ ||

(ಅರ್ಥ) ಪರ್ಯಾಯವಲ್ಲದ, ಯೌಗಿಕವಾದ (ಎಂದರೆ ಅರ್ಥವತ್ತಾದ ಅಥವಾ ಅನ್ವರ್ಥಕವಾದ) ಗುಣವಾಚಕವಾದ ಅನಂತಶಬ್ದಗಳಿಂದ ಪರಬ್ರಹ್ಮನೆಂಬ ವಿಷ್ಣುವಾಚ್ಯನಾಗಿದ್ದಾನೆಂದು ತೋರಿಸಿದ್ದರಿಂದ ವಿಷ್ಣು ಸಮಸ್ತಗುಣಪೂರ್ಣನೆಂಬುದು ಸಿದ್ಧಿಸಿದ ಹಾಗಾಯಿತು.

59. **ಅವಿರೋಧಾಧ್ಯಾಯ :** ಪ್ರಥಮಾಧ್ಯಾಯಕ್ಕೂ ದ್ವಿತೀಯಾಧ್ಯಾಯಕ್ಕೂ ಇರುವ ಸಂಬಂಧವನ್ನು ('ಸಂಗತಿ'ಯನ್ನು) ಅಥವಾ ಸಾಂಗತ್ಯವನ್ನು ತಿಳಿಸುತ್ತಾ ಈ ಅಧ್ಯಾಯದ ಮುಖ್ಯ ವಿಚಾರವೇನೆಂಬುದನ್ನು ಇದರಲ್ಲಿ ಪಾದಭೇದಕ್ಕೆ ಮೂಲ ಕಾರಣವನ್ನು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಪ್ರಾರಂಭದಲ್ಲೇ ಹೀಗೆ ತೋರಿಸಿಕೊಟ್ಟಿದ್ದಾರೆ-

ಉಕ್ತಃ ಸಮನ್ವಯಃ ಸಾಕ್ಷಾತ್, ಅವಿರೋಧೋಽತ್ರ ಸಾಧ್ಯತೇ |
ಚತುರ್ವಿಧಸ್ಯ ತಸ್ಯಾದೌ ಯೌಕ್ತಸ್ತತ್ರಾಪಿಕ್ತ ಚ ಸ್ಮೃತೇಃ || ೧ ||

(ಇದಕ್ಕೆ ಸಾಮಾನ್ಯಾರ್ಥ) ಪ್ರಥಮಾಧ್ಯಾಯದಲ್ಲಿ ಜಗತ್ಕಾರಣನಾದ ಶ್ರೀಹರಿಯಲ್ಲಿ ಪರಮ ಮುಖ್ಯವೃತ್ತಿಯಿಂದಲೂ ಮಹಾತಾತ್ಪರ್ಯದಿಂದಲೂ 'ಸ್ವರ-ವರ್ಣ-ಪದ-ವಾಕ್ಯ - ಮಹಾವಾಕ್ಯರೂಪಗಳಾದ' ಸಮಸ್ತ ವೇದಗಳಿಗೂ ಸಮನ್ವಯವು ಹೇಳಲ್ಪಟ್ಟಿತು. ಈಗ ಪ್ರಥಮಾಧ್ಯಾಯದಲ್ಲಿ ಸಾಧಿಸಿದ ನಿಖಿಲಗುಣಪೂರ್ಣತ್ವಕ್ಕೂ ಜಗಜ್ಜನ್ಮಾದಿ ಕರ್ತೃತ್ವಕ್ಕೂ ಕಿಂಚಿತ್ ವಿರೋಧ ಬಂದರೂ ಆ ಸಮನ್ವಯ ಕೂಡುವುದಿಲ್ಲ. ಹಿಂದೆ ಸಾಧಿಸಿದ ಸಮನ್ವಯವನ್ನು ಸಮರ್ಥಿಸುವುದಕ್ಕಾಗಿಯೇ ಈ ಅಧ್ಯಾಯದಲ್ಲಿ ಸಮನ್ವಯಕ್ಕೆ ವಿರೋಧವೆಂದು ಕಾಣುವ ಸಕಲ ವಿರೋಧಗಳನ್ನೂ ಪರಿಹರಿಸುತ್ತಾರೆ ಅಥವಾ ಅವಿರೋಧವನ್ನು ಸ್ಥಾಪಿಸುತ್ತಾರೆ. ಹೀಗೆ ಪ್ರಥಮಾಧ್ಯಾಯಕ್ಕೂ ದ್ವಿತೀಯಾಧ್ಯಾಯಕ್ಕೂ ಹೇತು-ಹೇತುಮದ್ಭಾವವೇ ಸಂಗತಿಯೆಂದು ಶ್ರೀ ಪದ್ಮನಾಭತೀರ್ಥರು ಸನ್ನ್ಯಾಯರತ್ನಾವಳಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಶ್ರೀಮಟ್ಟೀಕಾಕೃತ್ಪಾದರು ಕಾರ್ಯಕಾರಣಭಾವ ಎಂದು ಸುಧಾದಲ್ಲಿ ತೋರಿಸಿಕೊಟ್ಟಿದ್ದಾರೆ, ಇರಲಿ.

ಈ ಅವಿರೋಧವು ನಾಲ್ಕು ವಿಧವಾಗಿರುವುದರಿಂದ ಅದನ್ನು ಕ್ರಮವಾಗಿ ನಾಲ್ಕು ಪಾದಗಳಲ್ಲಿ ತೋರಿಸಿಕೊಡುತ್ತಾರೆ. ಎಲ್ಲ ವಿರೋಧಗಳಿಗೂ ಮುಕ್ತಿಯೇ ಮೂಲವಾದ್ದರಿಂದ ಯುಕ್ತಿವಿರೋಧವನ್ನೇ ಮೊದಲನೇ ಪಾದದಲ್ಲಿ ಹೇಳಿದ್ದಾರೆಂಬುದನ್ನು ಅನುವ್ಯಾಖ್ಯಾನದ **'ಆದೌ ಯೌಕ್ತಃ'** ಎಂಬ ಭಾಗ ತಿಳಿಸುತ್ತದೆ. ಆ ನಾಲ್ಕು ವಿಧ ಅವಿರೋಧಗಳನ್ನೂ ಶ್ರೀ ವ್ಯಾಸರಾಯರು ಚಂದ್ರಿಕಾದಲ್ಲಿ ತೋರಿಸಿದ್ದಾರೆ.

60. **ದ್ವಿತೀಯಾಧ್ಯಾಯದ ನಾಲ್ಕು ಪಾದಗಳು :** ನಾಲ್ಕು ಅವಿರೋಧಗಳು ಯಾವುವೆಂದರೆ:

(i) **ಆದ್ಯಪಾದೇಯುಕ್ತ್ಯವಿರೋಧಃ :** ಮೊದಲನೇ ಪಾದದಲ್ಲಿ ಯಾವ ಯುಕ್ತಿಯೂ ವಿರೋಧ ಮಾಡಲಾರದೆಂದು ಸ್ಥಾಪಿಸಿದ್ದಾರೆ. ಆದ್ದರಿಂದ ಈ ಪಾದಕ್ಕೆ 'ಯುಕ್ತಿಪಾದ'ವೆಂದು ಹೆಸರು.

(ii) **ದ್ವಿತೀಯೇ ಸಮಯಾವಿರೋಧಃ :** ಸಮಯಗಳೆಂದರೆ ಬೇರೆ ಬೇರೆ ಮತಗಳು

ಅರ್ಥಾತ್ ಇದು ಹೀಗೆಯೇ ಸರಿ ಎಂದು·ವಾದಿಸುವ (ಅಪ)ಸಿದ್ಧಾಂತಗಳು. ಅಂಥಾ ಅಪ ಸಿದ್ಧಾಂತಗಳು ಸಂಖ್ಯೆಯಲ್ಲಿ ಅನೇಕವಿದ್ದರೂ ಅವೆಲ್ಲವೂ ವಾದಿಸುವ ಮುಖ್ಯ ಮೂಲಭೂತ ವಿಚಾರಗಳು ಹನ್ನೆರಡೆಂದು ವಿಶ್ಲೇಷಣ ಮಾಡಿ ಹನ್ನೆರಡು 'ಸಮಯ'ಗಳೂ ವಿರೋಧಮಾಡ ಲಾರವು ಎಂದು ಎರಡನೇ ಪಾದದಲ್ಲಿ ಸ್ಥಾಪಿಸಿದ್ದಾರೆ. ಆದ್ದರಿಂದ ಈ ಎರಡನೇ ಪಾದಕ್ಕೆ 'ಸಮಯಪಾದ'ವೆಂದು ಹೆಸರು.

(iii) **ತೃತೀಯೇ ಕೇವಲ ಶ್ರುತ್ಯವಿರೋಧಃ** : ಮೂರನೇ ಪಾದದಲ್ಲಿ ವೇದಗಳ ಪರಸ್ಪರ ಹೇಳಿಕೆಗಳಲ್ಲೂ ಬೇರೆ ರೀತಿಯಲ್ಲಿ ಕಂಡುಬರುವ ವಿರೋಧಗಳೆಲ್ಲವನ್ನೂ ಪರಿಹರಿಸಿದ್ದಾರೆ. ಆದ್ದರಿಂದ ಈ ಪಾದಕ್ಕೆ ಶ್ರುತಿಪಾದವೆಂದು ಹೆಸರು.

(iv) **ಚತುರ್ಥೇಸಯುಕ್ತಿಕ ಶ್ರುತ್ಯವಿರೋಧಃ** : ನಾಲ್ಕನೇ ಪಾದದಲ್ಲಿ ಶ್ರುತಿ ವಿರೋಧವನ್ನೇ ಪೂರ್ವಪಕ್ಷಮಾಡಿಕೊಂಡು ಅದನ್ನೇ ಬಲವತ್ತರ ಯುಕ್ತಿಗಳಿಂದ ಸಾಧಿಸಿ ತೋರಿಸಿ ಕೊನೆಗೆ ಅವನ್ನೂ ಪರಿಹರಿಸಲಾಗಿದೆ. ಆದ್ದರಿಂದ ಈ ನಾಲ್ಕನೇ ಪಾದಕ್ಕೆ ಸಯುಕ್ತಿಕ ಶ್ರುತಿಪಾದವೆಂದು ಹೆಸರು. ಈ ಅಧ್ಯಾಯದ ಉದ್ದಕ್ಕೂ ಅವಿರೋಧವನ್ನೇ ಸ್ಥಾಪಿಸಲಾಗಿದೆಯೆಂಬುದನ್ನು ಸ್ಪಷ್ಟಪಡಿಸುವದಕ್ಕಾಗಿ ಶ್ರೀವ್ಯಾಸರಾಯರು ಉದ್ದಕ್ಕೂ 'ಅವಿರೋಧ' ಎಂದು ಸೇರಿಸಿಯೇ ಹೇಳಿದ್ದಾರೆ. ಈ ನಾಲ್ಕು ವಿರೋಧಗಳನ್ನೂ ಒಟ್ಟಿಗೆ ನೆನಪಿಟ್ಟುಕೊಳ್ಳಲು ಅನುಕೂಲವಾಗು ವಂತೆ ನಾಲ್ಕನ್ನೂ ಸೇರಿಸಿ ಒಂದು ಕಾರಿಕೆ (ಶ್ಲೋಕ) ಮಾಡಿದ್ದಾರೆ—

> **ಯುಕ್ತಿಭಿಃ ಸಮಯೈಃ ಶುದ್ಧ-ವೇದೈರ್ಯುಕ್ತ್ಯುಪಬೃಂಹಿತಃ |**
> **ವೇದೈಶ್ಚಾಸ್ಯಾವಿರೋಧೋಽತ್ರ ಕ್ರಮಾತ್ ಪಾದೇಷು ಕೀರ್ತ್ಯತೇ ||**

"ಯುಕ್ತ್ಯುಪಬೃಂಹಿತಃ = ಯುಕ್ತಿಸಹಿತಃ"–ಮೇಲಿನ ವಾಕ್ಯಗಳನ್ನು ಓದಿಕೊಂಡರೆ ಈ ಶ್ಲೋಕ ತನಗೆ ತಾನೇ ಅರ್ಥವಾಗುತ್ತದೆ. ಒಟ್ಟಿನಲ್ಲಿ ಎರಡನೇ ಅಧ್ಯಾಯದ ನಾಲ್ಕು ಪಾದಗಳು ಹೀಗೆ ನಾಲ್ಕು ಅವಿರೋಧಗಳನ್ನು ನಿರೂಪಣೆ ಮಾಡುತ್ತವೆ—

(i) ಯುಕ್ತಿಪಾದ ಅಥವಾ ಯುಕ್ತ್ಯವಿರೋಧಪಾದ
(ii) ಸಮಯಪಾದ ಅಥವಾ ಸಮಯಾವಿರೋಧಪಾದ
(iii) ಶ್ರುತಿಪಾದ ಅಥವಾ ಕೇವಲಶ್ರುತ್ಯವಿರೋಧಪಾದ
(iv) ಯುಕ್ತಿಕ ಶ್ರುತಿಪಾದ ಅಥವಾ ಸಯುಕ್ತಿಕ ಶ್ರುತ್ಯವಿರೋಧಪಾದ

ಹೀಗೆ ಸಕಲ ಶ್ರುತಿ ವಿರೋಧಗಳನ್ನು ಯುಕ್ತಿಯಿಂದ ಪರಿಹರಿಸಿ ಈ ಎರಡನೇ ಅಧ್ಯಾಯ ದಲ್ಲಿ ವಿಷ್ಣುವಿನಲ್ಲಿ ಯಾವ ದೋಷಗಳೂ ಕೂಡುವುದಿಲ್ಲವೆಂದು ಸಮರ್ಥನೆ ಮಾಡಿರುವುದ ರಿಂದ ಪ್ರಥಮಾಧ್ಯಾಯದಲ್ಲಿ ಹೇಳಿದ ಸಮನ್ವಯವು ಸಂಗತವಾಗುತ್ತದೆ, ತನ್ಮೂಲಕ ಆ ವಿಷ್ಣು ಅನಂತಗುಣಪೂರ್ಣನೆಂಬುದೂ ಸಿದ್ಧವಾಗುತ್ತದೆ.

61. ಸಾಧನಾಧ್ಯಾಯ : ಪ್ರಥಮಾಧ್ಯಾಯದಲ್ಲಿ ಸಮಸ್ತ ವೇದಗಳಿಂದ ಪ್ರತಿಪಾದ್ಯನಾದ ವಿಷ್ಣು ಅನಂತ ಗುಣಪೂರ್ಣನೆಂದು ಸಾಧಿಸಿ ಎರಡನೇ ಅಧ್ಯಾಯದಲ್ಲಿ ಅದಕ್ಕೆ ಬರುವ ವಿರೋಧಗಳನ್ನೆಲ್ಲ ಪರಿಹರಿಸಿ ಅವನು ನಿರ್ದೋಷನೆಂದೂ ಸ್ಥಾಪಿಸಲಾಯಿತು. ಇದನ್ನು ತಿಳಿದುಕೊಂಡ ಬಳಿಕ ಆ ಅಧಿಕಾರಿಗೆ 'ಈಗ ಮುಂದೆ ನಾನೇನು ಮಾಡಬೇಕು?' ಎಂಬ

ವಿಚಾರ ಸಹಜವಾಗಿಯೇ ಬರುವುದು. ಅದರ ಪರಿಹಾರಕ್ಕಾಗಿಯೇ ಮುಕ್ತಿಯೆಂಬ ಚರಮ ಧ್ಯೇಯ ಸಾಧನೆಗಾಗಿ ಮಾಡಬೇಕಾದ ವಿಷ್ಣು ಪ್ರೀತಿಜನಕವಾದ ಸಾಧನಗಳನ್ನು ಈ ಅಧ್ಯಾಯ ತಿಳಿಸುತ್ತದೆ. ಇದನ್ನೇ ಸಾಧನವಿಚಾರೋಽಯಮಧ್ಯಾಯಃ ಎಂಬ ಸೂತ್ರಭಾಷ್ಯದ ವಾಕ್ಯ ತಿಳಿಸುತ್ತದೆ. ಹೀಗೆ ಹೇಳಿದ್ದರಿಂದ ಈ ಮೂರನೇ ಅಧ್ಯಾಯಕ್ಕೆ ಹಿಂದಿನ ಎರಡು ಅಧ್ಯಾಯ ಗಳೊಡನೆ ಅನಂತರ್ಯಸಂಗತಿಯೆಂದು ತಿಳಿಸಿದಂತಾಯಿತು.

ಈ ಸಾಧನವು ಮುಖ್ಯವಾಗಿ ವೈರಾಗ್ಯ, ಭಕ್ತಿ, ಉಪಾಸನೆ ಮತ್ತು ಜ್ಞಾನ ಎಂದು ನಾಲ್ಕು ಬಗೆಯಾಗಿರುವುದರಿಂದ ಅದನ್ನು ಕ್ರಮವಾಗಿ ಮೂರನೆಯ ಅಧ್ಯಾಯದ ನಾಲ್ಕು ಪಾದಗಳು ಪ್ರತಿಪಾದಿಸುತ್ತವೆ. ನಾಲ್ಕರ ಪೈಕಿ ವೈರಾಗ್ಯವೇ ಸರ್ವಪ್ರಧಾನವಾದ್ದರಿಂದ ಪ್ರಥಮಪಾದ ಅದನ್ನೇ ವಿವರಿಸುತ್ತದೆ. ವೈರಾಗ್ಯ ಎಂಬುದಕ್ಕೆ ಎರಡು ವಿಧವಾಗಿ ಅರ್ಥವಾಗುತ್ತದೆ. ರಾಗ ಎಂದರೆ ಅನುರಾಗ ಅಥವಾ ಆಸಕ್ತಿ ಎಂದರ್ಥ. ವಿ ಅಂದರೆ ವಿಗತ, ವಿನಷ್ಟ ಅಥವಾ ಹೊರಟು ಹೋದ ಎಂದರ್ಥ. ಏವಂಚ ವಿರಾಗ ಎಂದರೆ ಆಸಕ್ತಿ ಹೊರಟುಹೋದ, ಆಸಕ್ತಿಯಿಲ್ಲದ ಎಂದರ್ಥವಾಯಿತು. ವಿರಾಗಸ್ಯ ಭಾವಃ (ವೈರಾಗ್ಯ = ಆಸಕ್ತಿ ಹೊರಟು ಹೋಗುವಿಕೆ ಅಥವಾ ಅನಾಸಕ್ತಿ ಎಂದರ್ಥ. ವಿಷಯಭೋಗಾಭಿಲಾಷೆಗಳು ಕ್ಷಣಿಕ ನಶ್ವರ ಎಂದು ಚೆನ್ನಾಗಿ ಅನು ಭವಕ್ಕೆ ಬಂದಾಗ ಅದರಲ್ಲಿರುವ ಆಸಕ್ತಿ ಹೋಗಿ ಜುಗುಪ್ಸೆ ಹುಟ್ಟುತ್ತದೆ. ಇದೇ ವೈರಾಗ್ಯ) ವಿ ಎಂದರೆ ವಿಷ್ಣು ಎಂದು ಅರ್ಥವಾಗುತ್ತದೆ. (ವಿಃ ಪಕ್ಷಿ ಪರಮಾತ್ಮನೋ ಎಂದು ವಿಶ್ವಕೋಶ) ವಿ-ವಿಷ್ಣುವಿನಲ್ಲಿ ವಿ-ವಿಶೇಷವಾಗಿ (ತನಗೆ ತಾನೇ ಹುಟ್ಟುವ) ರಾಗ - ಆಸಕ್ತಿ ಎಂದೂ ಅರ್ಥ (ತತ್ವಮಂಜರಿಯಂತೆ). ಹೀಗೆ ವಿಷ್ಣುವಿನಲ್ಲಿ ಶ್ರದ್ಧಾಭಕ್ತಿಗಳು ಹುಟ್ಟುವುದಕ್ಕೂ ವೈರಾಗ್ಯವೆಂದೇ ಹೆಸರು. ಆದರೆ ವಿಷ್ಣುಭಕ್ತಿ ಬರಬೇಕಾದರೆ ಮೊದಲು ವಿಷಯಭೋಗಗಳಲ್ಲಿ ಜುಗುಪ್ಸೆ ಹುಟ್ಟಬೇಕು. ಆದ್ದರಿಂದಲೇ ಪ್ರಥಮ ಪಾದದಲ್ಲಿ ವೈರಾಗ್ಯವನ್ನೂ ಎರಡನೇ ಪಾದದಲ್ಲಿ ಭಕ್ತಿಯನ್ನೂ ನಿರೂಪಣೆ ಮಾಡಿದ್ದಾರೆ. ಇವೆರಡೂ ಮೊದಲನೆಯ ಸೂತ್ರ(ಅಥಾತೋ ಬ್ರಹ್ಮಜಿಜ್ಞಾಸಾ)ದಲ್ಲಿ ಇರುವ ಅಥ ಶಬ್ದದಿಂದ ಸೂಚಿತವಾದ ಸಾಧನದ್ವಯವೆಂದು ಮಂತ್ರಾ ಲಯದ ರಾಯರು ತತ್ವಮಂಜರಿಯಲ್ಲಿ ತೋರಿಸಿಕೊಟ್ಟಿದ್ದಾರೆ.

ಕೇವಲ ವೈರಾಗ್ಯವಾಗಲಿ, ಕೇವಲ ಭಕ್ತಿಯಾಗಲಿ ಕಾರ್ಯಕಾರಿಯಾಗಲಾರದು. ಅದಕ್ಕೆ ಉಪಾಸನಾ ಅಗತ್ಯ; (ಉಪಾಸನೆಯ ಹೆಚ್ಚಿನ ವಿವರಣೆಯನ್ನು ಮುಂದೆ ಖಂಡ 64ರಲ್ಲಿ ಮಾಡುವೆವು.) ಅದನ್ನೇ ತೃತೀಯ ಪಾದ ನಿರೂಪಣೆ ಮಾಡುತ್ತದೆ. ಉಪಾಸನೆಯ ಪರಮ ಧ್ಯೇಯವೇ ಭಗವದಾಪರೋಕ್ಷ್ಯ (ಎಂದರೆ ಭಗವಂತನ ಪ್ರತ್ಯಕ್ಷೀಕರಣ); ಇದಕ್ಕೆ ಅಪರೋಕ್ಷ ಜ್ಞಾನವೆಂದೂ ಹೆಸರು. ಈ ಜ್ಞಾನವೇ ನಾಲ್ಕನೇ ಪಾದದ ವಿಷಯ. ಭಗವದಪರೋಕ್ಷವು ಈ ಕ್ರಮದಿಂದಲೇ ಲಭಿಸುವುದರಿಂದ ತೃತೀಯಾಧ್ಯಾಯದ ಪಾದಕ್ರಮವೂ ಅದೇ ಆಗಿದೆಯೆಂದು ಅನುವ್ಯಾಖ್ಯಾನದಲ್ಲಿ (ತೃತೀಯ ಪಾದದ ಪ್ರಾರಂಭದಲ್ಲಿ) ತೋರಿಸಿದ್ದಾರೆ.

ವೈರಾಗ್ಯತೋ ಭಕ್ತಿದಾರ್ಢ್ಯಂ ತೇನೋಪಾಸಾ ಯದಾ ಭವೇತ್ |
ಆಪರೋಕ್ಷ್ಯಂ ತಯಾ ವಿಷ್ಣೋ - ರಿತಿ ಪಾದಕ್ರಮೋ ಭವೇತ್ ||

ಈ ರೀತಿ ಪಾದಕ್ರಮವನ್ನು ತೋರಿಸಿಕೊಟ್ಟ ಬಳಿಕ ಈಗ ಈ ನಾಲ್ಕೂ ಪಾದಗಳಲ್ಲಿ ನಿರೂಪಿತವಾದ ವಿಷಯಗಳನ್ನು ಸಂಗ್ರಹಿಸಿ ಹೇಳುವೆನು.

62. ವೈರಾಗ್ಯಪಾದ : ಎಲ್ಲಿಯವರೆಗೆ ವಿಷಯಭೋಗಗಳಲ್ಲಿ ಜುಗುಪ್ಸೆ ಹುಟ್ಟುವುದಿಲ್ಲವೋ ಅಲ್ಲಿಯವರೆಗೆ ಅವುಗಳಲ್ಲಿ ಅಭಿರುಚಿಯೂ ಹೋಗುವುದಿಲ್ಲ. ಬಿಡಬೇಕೆಂಬ ಬುದ್ಧಿಯೂ ಹುಟ್ಟುವುದಿಲ್ಲ. ಆದಕಾರಣ ವಿಷಯಭೋಗಗಳಲ್ಲಿ ಅನಾಸಕ್ತಿಯನ್ನು ಜಾಗೃತಿಗೊಳಿಸಲು ಸ್ವರ್ಗಭೂಮಿನರಕಗಳ ಯಾತನಾ ವಿಚಾರವನ್ನೂ ಗರ್ಭವಾಸಾದಿ ನಾನಾ ಕ್ಲೇಶಗಳನ್ನೂ ಈ ಪಾದದ ಇಪ್ಪತ್ತು ಅಧಿಕರಣಗಳಲ್ಲಿ ನಿರೂಪಿಸಿದ್ದಾರೆ. ಹೀಗೆ ನಿರೂಪಣೆ ಮಾಡಿದ ಬಳಿಕ ಅಣುಭಾಷ್ಯದಲ್ಲಿ 'ತಸ್ಮಾದ್ ವಿರಕ್ತಃ ಸನ್ ಜ್ಞಾನವೇವ ಸಮಾಶ್ರಯೇತ್' ಎಂದು ಪಾದಾರ್ಥವನ್ನು ಉಪಸಂಹಾರ ಮಾಡಿದ್ದಾರೆ. ಇಲ್ಲಿ 'ವಿರಕ್ತಃ ಸನ್' ಎಂಬುದಕ್ಕೆ 'ವಿಷಯಾಭಿಲಾಷೆಯಿಂದ ದೂರನಾಗಿ' ಎಂಬುದು ಒಂದರ್ಥ, ಇದು ಪ್ರಥಮ ಪಾದದ ವಿಷಯ. ವಿಷ್ಣುವಿನಲ್ಲಿ ಭಕ್ತಿ ಮಾಡಬೇಕು ಎಂಬುದು ಎರಡನೇ ಅರ್ಥ, ಇದು ಎರಡನೇ ಪಾದಕ್ಕೆ ಪೀಠಿಕೆಯಂತಿದೆ.

63. ಭಕ್ತಿಪಾದ : ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ ಸರ್ವತೋಧಿಕವಾದ ವಿಷ್ಣುವಿನಲ್ಲಿ ಮಾಡುವ ಸ್ನೇಹಕ್ಕೆ ಭಕ್ತಿಯೆಂದು ಹೆಸರು.* ಇದನ್ನೇ ಮತ್ತಷ್ಟು ಪುಷ್ಟೀಕರಿಸಿ ಟೀಕಾರಾಯರು ಸುಧಾದಲ್ಲಿ (ಜಿಜ್ಞಾಸಾಧಿಕರಣ 'ತತ್ಪ್ರಸಾದೇವ ಮುಚ್ಯತೇ'–ಶ್ಲೋ. ೧೨) ಎಂಬ ಅನುವ್ಯಾಖ್ಯಾನಕ್ಕೆ ಅರ್ಥಹೇಳುವಾಗ ಪರಮೇಶ್ವರ ಭಕ್ತಿರ್ನಾಮ ನಿರವಧಿಕಾ[೧]ನಂತಾನವದ್ಯ[೨]-ಕಲ್ಯಾಣಗುಣತ್ವ ಜ್ಞಾನಪೂರ್ವಕಃ ಸ್ವಾತ್ಮಾತ್ಮೀಯ[೩] ಸಮಸ್ತ ವಸ್ತುಭ್ಯೋಽನೇಕ ಗುಣಾಧಿಕೋಽನ್ತರಾಯ[೪] ಸಹಸ್ರೇಣಾಪ್ಯಪ್ರತಿಬದ್ಧೋ[೫] ನಿರಂತರ ಪ್ರೇಮ ಪ್ರವಾಹಃ ಎಂದು ಹೇಳಿದ್ದಾರೆ; ಈ ವಾಕ್ಯ ಸ್ವಯಂ ಸ್ಪಷ್ಟವಾಗಿದೆ. ಅಂಥಾ ಭಕ್ತಿ ಹುಟ್ಟುವುದಕ್ಕಾಗಿ ದ್ವಿತೀಯ ಪಾದದಲ್ಲಿ 'ಭಗವನ್ಮಹಿಮೋಚ್ಯತೇ' ಭಗವಂತನು ಜಾಗ್ರತ್ ಸ್ವಪ್ನ ಸುಷುಪ್ತಿ ಮೂರ್ಛಾದಿ ಸರ್ವಾವಸ್ಥೆಗಳಿಗೂ ಪ್ರೇರಕ, ಸರ್ವರೂಪಗಳಲ್ಲೂ ಭೇದ ವರ್ಜಿತ, ಅವ್ಯಕ್ತನಾದರೂ ಭಕ್ತಿವಶ ಇತ್ಯಾದಿ ಭಗವನ್ಮಹಿಮೆಯನ್ನು ವರ್ಣಿಸುತ್ತಾ ಅವನಲ್ಲಿ ಭಕ್ತಿಮಾಡಬೇಕೆಂದು ನಿರೂಪಿಸಿದೆ. ಆ ಹದಿನಾರರಲ್ಲೂ ಆಕಾರದಲ್ಲಿ ಈ ಉಪಾಸನಾಪಾದವೇ ಎಲ್ಲಕ್ಕಿಂತ ದೊಡ್ಡದು. ಇದರಲ್ಲಿ ನಲವತ್ತೆರಡು ಅಧಿಕರಣಗಳೂ ಅರವತ್ತೆಂಟು ಸೂತ್ರಗಳೂ ಇವೆ. ಈ ಪಾದದ ಸಾರಾಂಶವನ್ನು ಅಣುಭಾಷ್ಯ(೩ ಅ. ೫ ಶ್ಲೋ)ದಲ್ಲಿರುವ 'ಉಪಾಸ್ಯ . . . ವಿಷ್ಣುಃ' ಎಂಬ ಎರಡು ಪದಗಳೇ ಹೇಳುತ್ತವೆ. ವಿಷ್ಣುವನ್ನು ಉಪಾಸನೆ ಮಾಡಬೇಕೆಂಬುದೇ ಇದರ ಅರ್ಥ. ಪ್ರಥಮ ಸೂತ್ರದಲ್ಲಿ (ಜಿಜ್ಞಾಸಾಧಿಕರಣದಲ್ಲಿ) ಹೇಳಿದ ಜಿಜ್ಞಾಸೆಯೇ ಈ ಉಪಾಸನೆ. ಇದು 'ಉಪಾಸನಾ ನಾಮ

---

* ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಧಿತಃ |
ಸ್ನೇಹೋ ಭಕ್ತಿರಿತಿ ಪ್ರೋಕ್ತಃ || (ತಾತ್ಪರ್ಯನಿರ್ಣಯ ೧ ಅಧ್ಯಾಯ, ೮೬ನೆಯ ಶ್ಲೋಕ)

೧. ನಿರವಧಿಕ=ಎಲ್ಲೆ ಇಲ್ಲದ (ಅಪರಿಚಿತವಾದ); ೨. ಅನವದ್ಯ=ನಿರ್ದುಷ್ಟವಾದ, ದೋಷರಹಿತವಾದ; ೩. ಸ್ವಾತ್ಮಾತ್ಮೀಯ=ತಾನು ಮತ್ತು ತನ್ನದೇ; ೪. ಅಂತರಾಯ=ವಿಘ್ನ, ಅಡಚಣೆ; ೫ ಅಪ್ರತಿಬದ್ಧ =ತಡೆಯಿಲ್ಲದ, ಹಿಂಜರಿಯದಂಥ, ಪ್ರತಿಬಂಧಿತವಾಗದಂಥ.

ಜಿಜ್ಞಾಸಾ' ಎಂಬ ಟೀಕಾವಾಕ್ಯದಿಂದ ಸ್ಪಷ್ಟವಾಗುತ್ತದೆ. ಈ ಉಪಾಸನೆಯು ಶಾಸ್ತ್ರಾಭ್ಯಾಸ, ಧ್ಯಾನ ಎಂದು ಎರಡು ಪ್ರಕಾರವಾಗಿದೆ.* ಶಾಸ್ತ್ರಾಭ್ಯಾಸದ ವಿಚಾರ ಮೊದಲನೆಯ ಸರ್ವ ವೇದಾಧಿಕರಣದಲ್ಲೇ ಬಂದಿದೆ. ಅದು ಸರ್ವವೇದ ವಿಷಯಕ ಶ್ರವಣಮನನಾದಿರೂಪವಾಗಿದೆ. ಆದರೆ ಸಾರ್ವತ್ರಿಕವಾಗಿ ಒಂದೇ ಪ್ರಕಾರವಾಗಿರದೆ ಮಂದಮಧ್ಯೋತ್ತಮಾಧಿಕಾರಿಗಳಿಗೆ ಅನುಗುಣವಾಗಿ ಭಿನ್ನಭಿನ್ನವಾಗಿದೆ. ಈ ವಿಚಾರವನ್ನು ಅಣುಭಾಷ್ಯದ 'ಉಪಾಸ್ಯಃ ಸರ್ವ ವೇದೈಶ್ಚ ಸರ್ವೈರಪಿ ಯಥಾಬಲಮ್' ಎಂಬ ಭಾಗ ತಿಳಿಸುತ್ತದೆ. ಧ್ಯಾನೋಪಾಸನೆಯು ಸರ್ವಾಧಿಕಾರಿಗಳಿಂದಲೂ ಯೋಗ್ಯತಾನುಸಾರ ಅನುಷ್ಠೇಯವಾದ್ದರಿಂದ ಅದರ ನಿರೂಪಣೆ ಅನೇಕ ಅಧಿಕರಣಗಳಲ್ಲಿ ಹರಡಿ ಹಂಚಿಹೋಗಿದೆ. ಆದರೆ ಇದು ಸರ್ವರಿಗೂ ಅತ್ಯಾವಶ್ಯಕ ಕರ್ತವ್ಯವಾದ್ದರಿಂದ ಈ ವಿಷಯವನ್ನು ಅಣುಭಾಷ್ಯದಲ್ಲಿ ಹೇಳುವಾಗ ಶ್ರೀಮದಾಚಾರ್ಯರು ಸೂತ್ರಕ್ರಮದಲ್ಲಿಯೇ ಹೇಳದೆ ಬುದ್ಧಿಗೆ ಸುಲಭವಾಗಿ ಹತ್ತುವಂತೆ ಆ ವಿಚಾರಗಳನ್ನೆಲ್ಲ ಸಂಗ್ರಹಿಸಿ ಅಧಿಕಾರಕ್ರಮಕ್ಕೆ ಅನುಗುಣವಾಗಿ ಮೆಟ್ಟಲು-ಮೆಟ್ಟಲಾಗಿ ಪ್ರತಿಪಾದನೆ ಮಾಡಿದ್ದಾರೆ.

65. ಧ್ಯಾನೋಪಾಸನೆ : ಮೋಕ್ಷಾಪೇಕ್ಷಿಗಳಾದ ಸಮಸ್ತ ಮನುಷ್ಯೋತ್ತಮಾಧಿಕಾರಿಗಳೂ ವಿಷ್ಣುವನ್ನು ಸತ್-ಚಿತ್-ಆನಂದ-ಆತ್ಮ ಎಂಬ ಕನಿಷ್ಠ ನಾಲ್ಕು ಗುಣಗಳಿಂದ ಧ್ಯಾನ ಮಾಡ ಬೇಕು. (ಈ ಗುಣಗಳ ಹೆಚ್ಚಿನ ವಿವರಣೆಯನ್ನು ಮೂಲಕ್ಕೆ ಅರ್ಥ ಬರೆಯುವಾಗಲೇ ತಿಳಿಸು ವೆವು.) ಜೊತೆಗೆ ಈ ನಾಲ್ಕೂ ಭೂಮಾ (ನಿರತಿಶಯವಾಗಿ ಪರಿಪೂರ್ಣ) ಗುಣವಿಶಿಷ್ಟವಾದು ವೆಂದೇ ಉಪಾಸಿಸಬೇಕು. ಆದರೆ ಮನುಷ್ಯೋತ್ತಮರಿಗಿಂತ ಹೆಚ್ಚು ಹೆಚ್ಚು ಯೋಗ್ಯತೆ (ಅಧಿಕಾರ) ಉಳ್ಳ ಋಷಿಗಳೂ ದೇವತೆಗಳೂ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಹೆಚ್ಚು ಹೆಚ್ಚು ಗುಣಗಳಿಂದ ಉಪಾಸನೆ ಮಾಡುತ್ತಾರೆ. ಹೀಗೆ ಎಲ್ಲರಿಗೂ ಎಲ್ಲ ಗುಣಗಳನ್ನು ಧ್ಯಾನ ಮಾಡುವ ಶಕ್ತಿಯಿಲ್ಲ. ಚತುರ್ಮುಖ ಬ್ರಹ್ಮದೇವರೊಬ್ಬರು ಮಾತ್ರ ಅನಂತ ವೇದೋಕ್ತ ಸಮಸ್ತ ಗುಣಗಳನ್ನೂ ಧ್ಯಾನಮಾಡಬಲ್ಲರು. ಮನುಷ್ಯೋತ್ತಮರಿಂದ ಬ್ರಹ್ಮದೇವರವರೆಗೆ ಸಕಲರೂ ತಮ್ಮ ತಮ್ಮ ಶಕ್ತಿಯಿದ್ದಷ್ಟು ಗುಣಗಳನ್ನು ತಿಳಿದುಕೊಂಡು ಅವನ್ನೆಲ್ಲ ಉಪ ಸಂಹಾರ ಮಾಡಿ (ಏಕೀಕರಿಸಿ) ಧ್ಯಾನಮಾಡಬೇಕು. ದುರಿತಾದಿ ನಿವೃತ್ತಿಗಾಗಿಯೂ ಕೇವಲ ಭಗವತ್ಪ್ರೀತಿಗಾಗಿಯೂ ಭಗವಂತನ ನಾನಾ ರೂಪಗಳನ್ನು ಧ್ಯಾನ ಮಾಡಬಹುದಾದರೂ ಮೋಕ್ಷವಾಗಬೇಕಾದರೆ ಮಾತ್ರ ಬಿಂಬೋಪಾಸನೆಯನ್ನೇ ಮಾಡಬೇಕಲ್ಲದೆ ಬಿಂಬಾಪರೋಕ್ಷ ವನ್ನು ಪಡೆಯುವದೂ ಅನಿವಾರ್ಯ. ಧ್ಯಾನೋಪಾಸನೆಯು ಮೋಕ್ಷದಲ್ಲೂ ವಿಹಿತವಾಗಿ ದ್ದರೂ ಬಂಧನರೂಪವಾಗಿ ಅಲ್ಲ. ಧ್ಯಾನ ಮಾಡುವುದು ಭಗವಂತನನ್ನು ಮಾತ್ರವೇ ಅಲ್ಲ; ಭಗವಂತನಂತೆ ರಮಾ ಬ್ರಹ್ಮಾದಿ ಸಕಲ ಪರಿವಾರ ದೇವತೆಗಳ ಸೇವೆಯನ್ನೂ ಭಗವತ್ಪರಿವಾರ ವೆಂದು ತಿಳಿದು ಮಾಡಬೇಕು. ಯಾರು ಯಾರು ಎಷ್ಟೆಷ್ಟು ಹೆಚ್ಚು ಹೆಚ್ಚು ಗುಣಗಳನ್ನು ಉಪಾಸನೆ ಮಾಡುವರೋ ಅದಕ್ಕೆ ತಕ್ಕಂತೆ ಅವರಿಗೆ ಮೋಕ್ಷದಲ್ಲಿ ಹೆಚ್ಚು ಹೆಚ್ಚು ಆನಂದವೂ

---

* ಸೋಪಾಸಿನಾ ಚ ದ್ವಿವಿಧಾ ಶಾಸ್ತ್ರಾಭ್ಯಾಸಸ್ವರೂಪಿಣೋ | ಧ್ಯಾನಗಪಿ ಪರಾಚ್ಯೈವ ಅನುವ್ಯಾ (೩/೩/೫೫ ಶ್ಲೋಕ.)

ಆಗುವುದಲ್ಲದೆ ಕಡಿಮೆ ಅಧಿಕಾರಿಗಳಿಗಿಂತ ಉತ್ತಮತ್ವವೂ ಮೋಕ್ಷದಲ್ಲೂ ಇದ್ದೇ ಇರುವುದು. ಹೀಗೆ ಮೋಕ್ಷದಲ್ಲೂ ಆನಂದ ತಾರತಮ್ಯ ಇದ್ದೇ ಇದೆ.

ಈ ಯೋಗ್ಯತಾ ತಾರತಮ್ಯವು ಮನುಷ್ಯೋತ್ತಮರಿಂದ ಆರಂಭವಾಗಿ ಹೆಚ್ಚುತ್ತ ಹೆಚ್ಚುತ್ತ ಹೋಗಿ ಮುಖ್ಯಪ್ರಾಣನಲ್ಲಿ ಪರ್ಯವಸಾನಗೊಳ್ಳುವುದು. (ಆ ಮುಖ್ಯಪ್ರಾಣನೇ ಮುಂದಿನ ಕಲ್ಪದಲ್ಲಿ ಬ್ರಹ್ಮನಾಗುವನು.) ಅವನಿಗಿಂತ ಹೆಚ್ಚಿನ ಅಧಿಕಾರಿಗಳು ಜೀವಕೋಟಿಯಲ್ಲೇ ಬೇರೆ ಯಾರೂ ಇಲ್ಲ. ಆದರೆ ಭಗವಂತನು (ನಾರಾಯಣನು) ಆ ಮುಖ್ಯಪ್ರಾಣನಿಗಿಂತಲೂ ಅನಂತಾನಂತ ಗುಣಗಳಿಂದ ಶ್ರೇಷ್ಠನಾಗಿರುವನಲ್ಲದೆ ಭಗವಂತನಿಗೆ ಸಮಾನರಾದವರಾಗಲಿ ಉತ್ತಮರಾಗಲಿ ಬೇರೆ ಯಾರೂ ಇಲ್ಲ. ಲಕ್ಷ್ಮೀದೇವಿಯು ಮುಖ್ಯಪ್ರಾಣನಿಗಿಂತ ಶ್ರೇಷ್ಠ ಳೆಂಬುದು ಮಾತ್ರವಲ್ಲ, ಅವಳು ಪ್ರಾಣನಂತೆ ಬದ್ಧಳೂ ಅಲ್ಲ. ಜೀವಕೋಟಿಗೆ ಸೇರಿದವಳೂ ಅಲ್ಲ, ಅವಳಿಗೆ ಕರ್ಮಬಂಧನವೂ ಇಲ್ಲ. ಅವಳು ನಿತ್ಯಮುಕ್ತಳಾಗಿದ್ದರೂ ಪರಮಾತ್ಮಾ ಧೀನಳೇ ಹೌದು. ಆದ ಕಾರಣವೇ ಅವಳು ಕೇವಲ ಪ್ರೇಮಾತಿಶಯದಿಂದ ನಿತ್ಯವೂ ಭಗವ ದುಪಾಸನೆ ಮಾಡುತ್ತಿರುವಳು.

ಯಥಾಶಕ್ತಿ ಚತುರ್ವೇದಾದಿ ಶಾಸ್ತ್ರಾಧ್ಯಯನವನ್ನು ಯೋಗ್ಯಗುರುಗಳಲ್ಲಿ ಮಾಡಿ ಶ್ರವಣ ಮನನನಿಧಿಧ್ಯಾಸನರೂಪವಾದ ಗುಣೋಪಾಸನೆಯನ್ನು ಮಾಡಿದರೆ ಗುರುಪ್ರಸಾದದಿಂದ ಭಗವದಪರೋಕ್ಷವಾಗುತ್ತದೆ. ಅದರ ವರ್ಣನೆಯೇ ಜ್ಞಾನಪಾದದ ವಿಷಯ.

66. ಜ್ಞಾನಪಾದ : ಮೂರನೆಯ ಪಾದದಲ್ಲಿ ವಿವರಿಸಿದ ಉಪಾಸನೆಯಿಂದ ಲಭ್ಯವಾದ ಜ್ಞಾನದ ಸಾಮರ್ಥ್ಯವನ್ನು ಈ ಪಾದದಲ್ಲಿ ಹೇಳುತ್ತಾರೆ. (ಜ್ಞಾನ ಸಾಮರ್ಥ್ಯಮಸ್ಮಿನ್ ಪಾದ ಉಚ್ಯತೇ—ಸೂತ್ರಭಾಷ್ಯ.) ಆದರೆ ಇಲ್ಲಿ ಜ್ಞಾನ ಎಂದರೆ ಕೇವಲ ಶಾಸ್ತ್ರಜನ್ಯವಾದ ಜ್ಞಾನಸಾಮಾನ್ಯವೆಂದು ತಿಳಿಯಬಾರದು. ಅಂಥಾ ಜ್ಞಾನದ ವಿಚಾರವನ್ನು 'ಶಾಸ್ತ್ರಾಭ್ಯಾಸ ಸ್ವರೂಪಿಣೀ' ಎಂದು ಹೇಳಿ ಹಿಂದಿನ ಪಾದದಲ್ಲೇ ನಿರೂಪಣೆ ಮಾಡಿರುವುದರಿಂದ ಈ ಪಾದದಲ್ಲಿ ಜ್ಞಾನ ಶಬ್ದವು ಭಗವತ್‌ಸಾಕ್ಷಾತ್ಕಾರ ಅಥವಾ ಅಪರೋಕ್ಷಜ್ಞಾನ ಎಂಬ ಅರ್ಥದಲ್ಲೇ ಪ್ರಸಕ್ತವಾಗಿದೆಯೆಂದು ತಿಳಿಯಬೇಕು.

ಅಂಥಾ ಅಪರೋಕ್ಷಜ್ಞಾನದ ಮಹಿಮೆಯನ್ನು 'ಓಂ ಪುರುಷಾರ್ಥೋಽತಃ ಶಬ್ದಾತ್ . . . . ಓಂ' ಎಂಬ ಎಂಬ ಮೊದಲನೆಯ ಪುರುಷಾರ್ಥಿಕರಣದಲ್ಲಿ ಒಂಬತ್ತು ಸೂತ್ರಗಳಿಂದ ವಿವರಿಸಿದ್ದಾರೆ. ಅದನ್ನು ಅಣುಭಾಷ್ಯಕ್ಕೆ 'ಸರ್ವೇಽಪಿ ಪುರುಷಾರ್ಥಾಃ ಸ್ಯುರ್ಜ್ಞಾನಾದೇವ' ಎಂಬ ವಾಕ್ಯ ತಿಳಿಸುತ್ತದೆ. ಪುರುಷಾರ್ಥಗಳು ಧರ್ಮಾರ್ಥಕಾಮಮೋಕ್ಷಗಳೆಂದು ನಾಲ್ಕು— ಅಪರೋಕ್ಷಜ್ಞಾನದಿಂದ ಮೋಕ್ಷವೂ ಮೋಕ್ಷೇತರ ಸ್ವರ್ಗಾದಿ ಇತರ ಪುರುಷಾರ್ಥಗಳೂ ದೊರಕುವುದೆಂಬುದು ಬಾದರಾಯಣರ ಮತ. ಆದರೆ ಅವರ ಶಿಷ್ಯರಾದ ಜೈಮಿನ್ಯಾದಿಗಳು ಇದರಲ್ಲಿ ಸ್ವಲ್ಪ ಮಾರ್ಪಾಡುಮಾಡಿ ಹೇಳುತ್ತಾರೆ. ಛಾಂದೋಗ್ಯಶ್ರುತಿಯಲ್ಲಿ 'ಯದೇವ ವಿದ್ಯಯಾ ಕರೋತಿ ತದೇವ ವೀರ್ಯವತ್ತರಂ ಭವತಿ' ಹೇಳುವ ಮಂತ್ರಗಳ ಅರ್ಥವನ್ನು ತಿಳಿದುಕೊಂಡು ಶ್ರೀಹರಿಪ್ರೀತ್ಯರ್ಥವಾಗಿ ಮಾಡಿದ ಕರ್ಮವೇ ವೀರ್ಯವತ್ತರಾಗುವುದೆಂದು ಹೇಳಿರುವುದರಿಂದಲೂ 'ಶುಭಾಶುಭಕರ್ಮಾನುಸಾರವಾಗಿ ದೇವರ್ಷಿಮನುಷ್ಯರಿಗೆ ಸುಖ

ದುಃಖಿಗಳಾಗುತ್ತವೆ'* ಎಂದು ಮಾಠರಶ್ರುತಿ ಹೇಳುವುದರಿಂದಲೂ, ಜ್ಞಾನಿಯಾದವನು ನಿರಂತರ ವಿಹಿತ ಕರ್ಮಗಳನ್ನು ನಿಷ್ಕಾಮ ಭಾವನೆಯಿಂದ ಮಾಡಬೇಕೆಂದು ಕಮಠ† ಶ್ರುತಿ ಹೇಳುವುದರಿಂದಲೂ ಈಶಾವಾಸ್ಯ ಶ್ರುತಿಯು (೨ನೇ ಮಂತ್ರ) 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್'—'ಈ ಜೀವನ ಇರುವ ಪರ್ಯಂತವೂ ಸ್ವವಿಹಿತ ಕರ್ಮಗಳನ್ನು ಮಾಡುತ್ತಲೇ ಇರಬೇಕೆಂದು' ಹೇಳಿರುವುದರಿಂದಲೂ ಮೋಕ್ಷದ ಹೊರತು ಮಿಕ್ಕ ಪುರುಷಾರ್ಥಗಳಿಗೆ ಜ್ಞಾನವು 'ಕರ್ಮಶೇಷ' ಎಂದು ಜೈಮಿನಿಯ ಮತ. ಇದಕ್ಕೆ ಕರ್ಮವೇ ಪ್ರಧಾನಸಾಧನವೆಂದೂ ಜ್ಞಾನ ಅದರಲ್ಲಿ ವೀರ್ಯಪ್ರದ ಎಂದೂ ಅರ್ಥ. ಇದಕ್ಕೆ ನಿರ್ಣಯವನ್ನು ಆಚಾರ್ಯರು 'ನ ಸಂಶಯಃ' ಎಂದು ಹೇಳಿದರು. ಇದರ ಅಭಿಪ್ರಾಯವೇನೆಂದರೆ ದೇವತೆಗಳಿಗೆ ಮಾತ್ರ ಜ್ಞಾನ ದಿಂದಲೇ ಸರ್ವಪುರುಷಾರ್ಥಪ್ರಾಪ್ತಿ. ಆದರೆ ಮಾನುಷಾದಿಗಳಿಗೆ ಕರ್ಮದಿಂದ ಮೋಕ್ಷೇತರ ಪುರುಷಾರ್ಥಗಳೂ ಜ್ಞಾನದಿಂದ ಮೋಕ್ಷವೂ ದೊರಕುವುದೆಂಬುದೇ ನಿರ್ಣಯ.

ಆ (ಅಪರೋಕ್ಷ) ಜ್ಞಾನವು ವೇದಾದಿ ಶಾಸ್ತ್ರಾಧ್ಯಯನಾದಿ ಸಾಧನಗಳನ್ನು ಮಾಡಿದವರಿಗೆ ಮಾತ್ರ, ಅವರವರ ಸ್ವರೂಪಯೋಗ್ಯತಾನುಸಾರ ಮತ್ತು ಅಧಿಕಾರ ತಾರತಮ್ಯಕ್ಕೆ ಅನುಗುಣ ವಾಗಿ ಹೆಚ್ಚುಹೆಚ್ಚಾಗಿ ಲಭಿಸುತ್ತದೆ. ಅಯೋಗ್ಯನಿಗೆ ಎಷ್ಟು ಪ್ರಯತ್ನ ಮಾಡಿದರೂ ದೊರಕಲು ಶಕ್ಯವಿಲ್ಲ. ಇದನ್ನು ಭಾಷ್ಯದಲ್ಲಿ ನಿದರ್ಶನ ಕೊಟ್ಟು ತಿಳಿಸಿದ್ದಾರೆ. ಬ್ರಹ್ಮದೇವರು ಇಂದ್ರನಿಗೂ (ಪ್ರಹ್ಲಾದನ ಮಗನೂ ಬಲಿಚಕ್ರವರ್ತಿಯ ತಂದೆಯೂ ಆದ) ವಿರೋಚನನಿಗೂ ಒಂದೇ ಉಪದೇಶ ಮಾಡಿದರೂ ಇಂದ್ರನಿಗೆ ಸರಿಯಾದ ತಿಳಿವಳಿಕೆಯೇ ಆಯಿತು; ವಿರೋಚನನಿಗೆ ಮಿಥ್ಯಾಜ್ಞಾನವೇ ಬಂತು. ದೇವಾದಿಪದವಿಗಳೂ ಕೂಡ ಇದರಂತೆ ಅವರವರ ಸ್ವರೂಪಾನು ಗುಣವಾಗಿಯೇ ಲಭಿಸುವುದು; ಇದಕ್ಕೆ ವಿಪರೀತವಾಗಿ ಅಯೋಗ್ಯವಾದುದನ್ನು ಬಯಸಿದವರಿಗೆ ದುರ್ಗತಿಯೇ ಆಗುವುದು.†† ಸತ್ಪ್ರವೃತ್ತಿಯಿಂದ ಆನಂದವಿಶೇಷವೂ ಅಸತ್ಪ್ರವೃತ್ತಿಯಿಂದ ಆನಂದಹ್ರಾಸವೂ ಆಗುವುದೇ ಹೊರತು ಮೋಕ್ಷಕ್ಕೆ ಚ್ಯುತಿಯಿಲ್ಲ. ಆದರೆ ಸಂಚಿತಾಗಾಮಿ ಯಾದ ಕರ್ಮಗಳೂ ಅಪರೋಕ್ಷಜ್ಞಾನಾನಂತರ ಮುಕ್ತಿಯವರೆಗೆ ಬರಲಾರವು.

ಬ್ರಹ್ಮರುದ್ರಾದಿ ತತ್ತ್ವಾಭಿಮಾನದೇವತೆಗಳು ಮನುಷ್ಯರಲ್ಲಿ ನಿಂತು ಪ್ರೇರಣೆ ಮಾಡಿ ಅವರಿಂದ ಸತ್ಕಾರ್ಯ ಮಾಡಿಸುವುದರಿಂದ ಆ ಪುಣ್ಯಕರ್ಮದ ಪೂರ್ಣ ಫಲ ಅವರಿಗೆ ತಾರ ತಮ್ಯಾನುಸಾರ ಹೋಗುತ್ತದೆ; ಅದಕ್ಕೆ ವಿಘ್ನ ಮಾಡಿದ ತತ್ತ್ವಾಭಿಮಾನಿ ಅಸುರರಿಗೆ ಅದರ ಪಾಪಫಲವೂ ಅವರವರ ಯೋಗ್ಯತಾನುಸಾರ ಹೋಗುತ್ತದೆ. ಮನುಷ್ಯಾಧಿಕಾರಿಗಳಿಗೆ ಕಿಂಚಿತ್ ಫಲ ಮಾತ್ರ ದಕ್ಕುತ್ತದೆ. ಹಾಗೇಕೆ ಹೋಗುವುದೆಂದರೆ ದೇವತೆಗಳು ಸಕಲ ವರ್ಣಾಶ್ರಮ ಧರ್ಮಗಳನ್ನು ಮಾಡುವುದರಿಂದ ಅವರು ಯತಿಗಳಿಗಿಂತಲೂ ಮೋಕ್ಷದಲ್ಲಿಯೂ ಬಹಳ ಶ್ರೇಷ್ಠರು. ಆ ಯತಿಗಳು ಗೃಹಸ್ಥರಿಗಿಂತ ಹೆಚ್ಚು ಸಾಧನ ಮಾಡುವುದರಿಂದ ಗೃಹಸ್ಥರಿಗಿಂತ

---

* ಭೋಗಾಂಸ್ತದೀಯಾಹಿಷ್ಟ ಯಥಾವಿಭಾಗಂ ದದಾತಿ ಕಿಮ್ಮೈವ ಶುಭಾಶುಭಾಯತ್ ಇತಿ ಮಾಠರಶ್ರುತೀಶ್ಚ (ಸೂತ್ರಭಾಷ್ಯ)

† ಜ್ಞಾನೀ ಚ ಕರ್ಮಾಣಿ ಸದೋದಿತಾನಿ ಕುರ್ಯಾದಕಾಮಃ ಸತತಂ ಭವೇತ || (ಅಲ್ವೇ)

†† ಅಯೋಗ್ಯಮಿಚ್ಛನ್ ಪುರುಷಃ ಪತತ್ಯೇವ ನ ಸಂಶಯಃ ||

ಶ್ರೇಷ್ಠರು. ಅಲ್ಲದೆ ದೇವತೆಗಳು (ನ್ಯಾಯವಿವರಣದಲ್ಲಿ) ತಿಳಿಸಿದಂತೆ ಶಾಸ್ತ್ರೋಕ್ತ ಸಮಸ್ತಾಚರಣೆಗಳನ್ನೂ ಮಾಡುವರು. ಋಷಿಗಳು ಅರ್ಧ ಮಾತ್ರ ಮಾಡಿದರೆ ಗೃಹಸ್ಥರು ದಶಾಂಶವನ್ನು ಮಾತ್ರ ಮಾಡುವರು. ಆದ್ದರಿಂದ ದೇವತೆಗಳಿಗೆ ಶಾಸ್ತ್ರೋಪದೇಶವೂ, ಋಷಿಗಳಿಗೆ ತಪಸ್ಸೂ, ಮನುಷ್ಯೋತ್ತಮರಿಗೆ ಆಚಾರವೂ ವಿಹಿತ ಧರ್ಮಗಳಾಗಿವೆ.

ಹೀಗೆ ವಿಹಿತ ಧರ್ಮಾನುಷ್ಠಾನಪೂರ್ವಕ ಶ್ರವಣಮನನಾದಿ ಸಾಧನಗಳನ್ನು ಮಾಡುತ್ತಾ ಹೋದರೆ ಪ್ರಾರಬ್ಧ ಪ್ರತಿಬಂಧವಿಲ್ಲದಿದ್ದರೆ (ಅದೆಲ್ಲವೂ ಮುಗಿದುಹೋದರೆ) ಭಗವದಪರೋಕ್ಷವು ಈ ಜನ್ಮದಲ್ಲೇ ಆಗುವುದೆಂದೂ ಹಾಗಿಲ್ಲದಿದ್ದರೆ ಜನ್ಮಾಂತರದಲ್ಲಿ ಆಗುವುದೆಂದೂ ಕಡೆಯ ಎರಡು ಅಧಿಕರಣಗಳಲ್ಲಿ ನಿರೂಪಣೆ ಮಾಡಿ ಸೂತ್ರಕಾರರು ಈ ಪಾದದ ಮತ್ತು ಸಾಧನಾಧ್ಯಾಯದ ಉಪಸಂಹಾರ ಮಾಡಿದ್ದಾರೆ.

67. ಫಲಾಧ್ಯಾಯ : ತೃತೀಯಾಧ್ಯಾಯದಲ್ಲಿ ನಿರೂಪಣೆ ಮಾಡಿದ ಸಾಧನೆಗಳಿಂದ ಲಭಿಸುವ ಫಲವನ್ನು ಈ ನಾಲ್ಕನೇ ಅಧ್ಯಾಯ ವರ್ಣಿಸುವುದರಿಂದ ಇದಕ್ಕೆ ಫಲಾಧ್ಯಾಯವೆಂದು ಹೆಸರು. ಆ ಫಲವು ನಾಲ್ಕು ಹಂತಗಳಲ್ಲಿ ದೊರಕುವುದರಿಂದ ಆ ಹಂತಗಳಿಗೆ ಅನುಗುಣವಾಗಿ ಈ ಅಧ್ಯಾಯ ನಾಲ್ಕು ಪಾದಗಳಾಗಿ ವಿಭಕ್ತವಾಗಿದೆ. ಜನನ ಮರಣಗಳ ಚಕ್ರದಂತಿರುವ ಸಂಸಾರವೆಂಬ ಸುಳಿಗೆ ಮೂಲಭೂತವಾದ ಅನಾದಿಕಾಲೀನವಾದ ಕರ್ಮವು ಹೇಗೆ ನಾಶವಾಗುವುದೆಂಬುದನ್ನು ಮೊದಲನೆಯ ಕರ್ಮಕ್ಷಯಪಾದ ತಿಳಿಸುತ್ತದೆ. ಈ ಪಾದವು, ಮೊದಲನೆಯ ಏಳು ಅಧಿಕರಣಗಳಲ್ಲಿ ಕರ್ಮಕ್ಷಯಕ್ಕೆ ಅತ್ಯುಪಯುಕ್ತವಾದ ಕೆಲವು ನಿತ್ಯಾನುಷ್ಠೇಯವಾದ ಅಂತರಂಗ ಸಾಧನಗಳನ್ನು ತಿಳಿಸಿ ಇವನ್ನು ಮಾಡಿದರೆ ಪ್ರಾರಬ್ಧಕರ್ಮವು ಭೋಗದಿಂದ ನಾಶವಾಗುವುದೆಂದೂ ಅಪರೋಕ್ಷವಾದ ಬಳಿಕ ಮಿಕ್ಕ ಸಂಚಿತಾಗಾಮಿ ಕರ್ಮಗಳೆಲ್ಲ ನಾಶವಾಗುವವೆಂಬುದನ್ನೂ ಸ್ಪಷ್ಟಪಡಿಸುತ್ತದೆ. ಹೀಗೆ ಕರ್ಮಕ್ಷಯವಾದ ಮೇಲೆ ಜೀವರು ಹೇಗೆ ಮೇಲೆಮೇಲೆ ಏರುತ್ತ ಹೋಗುವರೆಂಬುದನ್ನು ಉತ್ಕ್ರಾಂತಿಪಾದ ತಿಳಿಸುತ್ತದೆ. (ಉತ್= ಮೇಲಕ್ಕೆ ಕ್ರಾಂತಿ, ಕ್ರಮ್=ಹೆಜ್ಜೆಯಿಡುವಿಕೆ): ಅಲ್ಲಿಂದ ಮುಂದೆ ಯಾವ ಮಾರ್ಗವನ್ನು (ಅಥವಾ ಗತಿಯನ್ನು) ಅವಲಂಬಿಸಿ ಮುಕ್ತಿಗೆ ಹೋಗುತ್ತಾರೆಂಬುದನ್ನು ಮಾರ್ಗ (ಅಥವಾ ಗತಿ) ಪಾದ ತೋರಿಸಿಕೊಡುತ್ತದೆ. ಮುಕ್ತಿಗೆ ಹೋದ ಬಳಿಕ ಮುಕ್ತರು ಏನೇನು ಸುಖಗಳನ್ನು ಅನುಭೋಗಿಸುತ್ತಾರೆ ಎಂಬುದರ ವರ್ಣನೆಯನ್ನು 4ನೆಯ ಭೋಗಪಾದ ಮಾಡುತ್ತದೆ. ಇದೇ ಫಲಾಧ್ಯಾಯದ ಮುಖ್ಯವಿಷಯ. ಈ ವಿಚಾರಗಳೆಲ್ಲ ಹಿಂದಿನ ಅಧ್ಯಾಯಗಳ ವಿಚಾರಗಳಂತೆ ಜಟಿಲವಾಗಿಲ್ಲವಾದ ಕಾರಣ ಇದಕ್ಕೂ ಹೆಚ್ಚಿನ ವಿವರಣೆಯನ್ನು ನಾಲ್ಕನೆಯ ಅಧ್ಯಾಯದ ಪಾದಗಳನ್ನು ವರ್ಣಿಸುವಾಗಲೇ ತಿಳಿಸುವೆವು. ಪ್ರಕೃತ ಇಡೀ ಬ್ರಹ್ಮಸೂತ್ರಶಾಸ್ತ್ರಕ್ಕೇ ಸಂಬಂಧಪಟ್ಟ ಮತ್ತು ಅನುವ್ಯಾಖ್ಯಾನದಲ್ಲಿ ದ್ವಿತೀಯಾಧ್ಯಾಯದ ಪ್ರಾರಂಭದಲ್ಲಿ ಹೇಳಿದ ಮುಖ್ಯ ಪ್ರಮೇಯವೊಂದನ್ನು ತಿಳಿಸಿ ಈ ಭೂಮಿಕೆಯನ್ನು ಉಪಸಂಹಾರ ಮಾಡುವೆನು.

68. ಚತುರ್ಮೂರ್ತಿಗಳ ಅನುಸಂಧಾನ : ಬ್ರಹ್ಮಮೀಮಾಂಸಾಶಾಸ್ತ್ರವೆಂಬ ಈ ಶಾಸ್ತ್ರವು ನಾಲ್ಕು ಅಧ್ಯಾಯಗಳುಳ್ಳದ್ದಾಗಿರುವುದಲ್ಲದೆ ಪ್ರತಿಯೊಂದು ಅಧ್ಯಾಯವೂ ಪಾದ ಚತುಷ್ಟಯಾತ್ಮಕವಾಗಿರುವದಷ್ಟೇ. ಹೀಗೆ ಅಧ್ಯಾಯಗಳೂ ಪಾದಗಳೂ ನಾಲ್ಕು-ನಾಲ್ಕು ಆಗಿರುವುದರಿಂದ

ಒಂದೊಂದೂ ಪ್ರ-ಪ್ರತ್ಯೇಕವಾಗಿ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧಗಳೆಂಬ ನಾಲ್ಕು ಭಗವನ್ಮೂರ್ತಿಗಳ ಪ್ರತಿಪಾದಕವೂ ಆಗಿದೆ. ಅಧ್ಯಾಯ-ಪಾದಗಳು ಮಾತ್ರವಲ್ಲ, ಅಧಿಕರಣಗಳು, ಸೂತ್ರಗಳು, ಸೂತ್ರಗಳಲ್ಲಿರುವ ಅಕ್ಷರಗಳೂ ಸಹ ಈ ರೀತಿಯೇ ಚತುರ್ಮೂರ್ತ್ಯಾತ್ಮಕವಾಗಿವೆಯೆಂದು ಬೃಹತ್ತಂತ್ರಾದ್ಯಾಮಗಳಿಂದ ತಿಳಿಯುತ್ತದೆಯೆಂಬುದನ್ನು **ಪಾದಾಃ ಸರ್ವೇ ತದಂತಾಶ್ಚ ಮೂರ್ತೀನಾಂ ವರ್ಣಮಾಗಮಾತ್** ಎಂಬ ಅನು ವ್ಯಾಖ್ಯಾನದ ವಾಕ್ಯಕ್ಕೆ ವ್ಯಾಖ್ಯಾನ ಮಾಡುತ್ತಾ ಶ್ರೀ ಪದ್ಮನಾಭತೀರ್ಥರು ಸನ್ನ್ಯಾಯರತ್ನಾವಳಿ ಟೀಕೆಯಲ್ಲಿ ಸೂಚಿಸಿದ್ದಾರೆ. ಇದರಿಂದ ಏನು ಹೇಳಿದಂತಾಯಿತೆಂದರೆ—

ಬ್ರಹ್ಮಸೂತ್ರದ ಪ್ರಥಮಾಧ್ಯಾಯವು ವಾಸುದೇವನ ಪ್ರತೀಕವಾಗಿದೆ. ದ್ವಿತೀಯಾಧ್ಯಾಯ ಸಂಕರ್ಷಣ, ಮೂರನೇ ಅಧ್ಯಾಯ ಪ್ರದ್ಯುಮ್ನ, ನಾಲ್ಕನೇ ಅಧ್ಯಾಯ ಅನಿರುದ್ಧನ ರೂಪ. ಇದೇ ರೀತಿ ಪ್ರತಿಯೊಂದು ಅಧ್ಯಾಯದ ಪ್ರಥಮ ಪಾದವೂ ವಾಸುದೇವನ ರೂಪ, ದ್ವಿತೀಯ ಪಾದಗಳು ಸಂಕರ್ಷಣ ರೂಪ, ತೃತೀಯ ಪಾದಗಳು ಪ್ರದ್ಯುಮ್ನ ರೂಪವೂ, ಚತುರ್ಥಪಾದಗಳು ಅನಿರುದ್ಧ ರೂಪಗಳೂ ಆಗಿವೆ. ಇನ್ನೂ ಮುಂದೆ ಹೋದರೆ ಜಿಜ್ಞಾಸಾಧಿಕರಣವೂ, ಮೊದಲನೆಯ ಸೂತ್ರವೂ ವಾಸುದೇವರೂಪವಾದರೆ ಜನ್ಮಾಧಿಕರಣವೂ, ಎರಡನೇ ಸೂತ್ರವೂ ಸಂಕರ್ಷಣ ರೂಪವಾಗಿಯೂ, ಶಾಸ್ತ್ರಯೋನಿತ್ವಾಧಿಕರಣವೆಂಬ ಮೂರನೇ ಅಧಿಕರಣವೂ, ಮೂರನೇ ಸೂತ್ರವು ಪ್ರದ್ಯುಮ್ನರೂಪವೂ ಇತ್ಯಾದಿಯಾಗಿ ತಿಳಿಯಬೇಕು. ಇನ್ನು 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಪ್ರಥಮ ಸೂತ್ರದಲ್ಲೇ ಮೊದಲನೆಯ ಅ-ಥಾ-ತೋ-ಬ್ರ ಎಂಬ ನಾಲ್ಕು ಅಕ್ಷರಗಳು ಕ್ರಮವಾಗಿ ವಾಸುದೇವಾದಿ ರೂಪಗಳೆಂದು ಮುಂದಿನ ನಾಲ್ಕು ಅಕ್ಷರಗಳು (ಹ್ಮ-ಜಿ-ಜ್ಞಾ-ಸಾ) ಪುನಃ ವಾಸುದೇವಾದಿ ರೂಪಗಳು. ಇದೇ ಪ್ರಕಾರ **ವರ್ಣಂ ಆ ಆಗಮಾತ್** 'ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್' ಎಂಬ ಕಡೆಯ ಸೂತ್ರದವರೆಗಿರುವ ಪ್ರತಿಯೊಂದು ಅಕ್ಷರವೂ ಪ್ರತಿಯೊಂದು ಸೂತ್ರವೂ ಪ್ರತಿಯೊಂದು ಅಧಿಕರಣವೂ ವಾಸುದೇವಾದಿ ಚತುರ್ಮೂರ್ತ್ಯಾತ್ಮಕವಾಗಿದೆಯೆಂದು ತಿಳಿಯಬೇಕು. ಶ್ರೀಮದಾಚಾರ್ಯರ ಈ ವಾಕ್ಯದಿಂದ ಬ್ರಹ್ಮಸೂತ್ರಕ್ಕೆ ಏನು ಮಹತ್ವವಿದೆಯೆಂಬುದು ಅರ್ಥವಾಗುತ್ತದೆ.

69. ವಿಶೇಷ ಮಹಿಮೆ : ಇದರ ಜೊತೆ ವರಾಹ ಪುರಾಣದಲ್ಲಿ ಹೇಳಿದ ಮಹಿಮೆಯನ್ನೂ ಸೇರಿಸಿಕೊಳ್ಳಬೇಕು. ಅದರಲ್ಲಿ ಚಾತುರ್ಮಾಸ್ಯಮಹಿಮಾ ವರ್ಣನೆ ಮಾಡುವಾಗ ಹತ್ತನೇ ಅಧ್ಯಾಯದಲ್ಲಿ ಹೀಗೆ ಹೇಳಿದೆ: ಬ್ರಹ್ಮಮೀಮಾಂಸಾಶಾಸ್ತ್ರವೆಂಬ ಈ ಬ್ರಹ್ಮಸೂತ್ರಗಳ ಅಕ್ಷರ (ವರ್ಣ)ಗಳನ್ನು ಓದಿದರೆ ಒಂದೊಂದು ವರ್ಣಕ್ಕೂ ನೂರುನೂರು ಗಾಯತ್ರೀ ಜಪಿಸಿದಷ್ಟು ಫಲ ಬರುವದೆಂದು ಹೇಳಿದೆ:

ಪ್ರತ್ಯಕ್ಷರಂ ತು ಲಭತೇ ಗಾಯತ್ರೀಶತಜಂ ಫಲಮ್ ||

70. ಉಪಸಂಹಾರ : ಹೀಗೆ ಬ್ರಹ್ಮಸೂತ್ರದ ಒಂದೊಂದು ಅಧ್ಯಾಯವೂ ಒಂದೊಂದು ಪಾದವೂ ಮಾತ್ರ ವಾಸುದೇವಾದಿ ಚತುರ್ಮೂರ್ತ್ಯಾತ್ಮಕವಾಗಿರುವುದಲ್ಲದೆ ಪ್ರತಿಯೊಂದು ಅಧಿಕರಣವೂ, ಪ್ರತಿಯೊಂದು ಸೂತ್ರವೂ ಒಂದೊಂದು ವರ್ಣವೂ ಸಹ ಒಂದೊಂದು ಭಗವನ್ಮೂರ್ತಿರೂಪವೇ ಆಗಿರುವುದರಿಂದ ತದರ್ಥಬೋಧಕವಾದ ಅಣುಭಾಷ್ಯದಲ್ಲೂ

ಅದೇ ಅನುಸಂಧಾನ ಮಾಡಿಕೊಳ್ಳಬೇಕು. ನ್ಯಾಯಸುಧಾಕಾರರು ನಿರೂಪಣೆ ಮಾಡಿರುವಂತೆ ಪ್ರತಿಯೊಂದು ಅಧ್ಯಾಯದಲ್ಲೂ ಪ್ರತಿಯೊಂದು ಪಾದದಲ್ಲೂ ನಾಲ್ಕೂ ಅಧ್ಯಾಯಗಳ ನಾಲ್ಕೂ ಪಾದಗಳ ಅರ್ಥಗಳು ಅಡಕವಾಗಿವೆ. ಹೀಗೆ ಪಂಡಿತಾಚಾರ್ಯರು ಹೇಳಿದಂತೆ ಅನಂತಾರ್ಥಗಳು ಅಣುಭಾಷ್ಯದಲ್ಲಿ ತುಂಬಿಕೊಂಡಿವೆ. ಅವನ್ನು ಯಥಾಮತಿ ಯಥಾಶಕ್ತಿ ತಿಳಿದುಕೊಂಡು ಪ್ರತಿನಿತ್ಯ ಪಾರಾಯಣ ಮಾಡಿದರೆ ಮನುಷ್ಯಮಾತ್ರರಿಗಿರಲಿ, ದೇವಾನುದೇವತೆಗಳಿಗೂ ಮೋಕ್ಷಪ್ರಾಪ್ತಿಯಾಗುತ್ತದೆಂದು ಮಧ್ವವಿಜಯ(೧೧ ಸರ್ಗ/೩೭ ಶ್ಲೋ.)ದಲ್ಲಿ ಹೇಳಿದೆ:-

ಮಹಾನಂದತೀರ್ಥಸ್ಯ ಯೇ ಭಾಷ್ಯಭಾವಂ
ಮನೋವಾಗ್ಭಿರಾವರ್ತಯಂತೇ ಸ್ವಶಕ್ತ್ಯಾ |
ಸುರಾದ್ಯಾ ನರಾಂತಾ ಮುಕುಂದಪ್ರಸಾದಾತ್
ಇಮಂ ಮೋಕ್ಷಮೇತೇ ಭಜಂತೇ ಸದೇತಿ ||

(ಅರ್ಥ) ಶ್ರೀಮದಾಚಾರ್ಯರ ಸೂತ್ರಭಾಷ್ಯದ ಅಭಿಪ್ರಾಯವನ್ನು ಯಾರು ಪುನಃ ಪುನಃ ಬಾಯಲ್ಲಿ ಹೇಳಿಕೊಳ್ಳುತ್ತಾ (ಪಠಿಸುತ್ತಾ) ತಮ್ಮ ಯಥಾಶಕ್ತಿ ಪುನಃ ಪುನಃ (ಸದಾ) ಮನನ ಮಾಡಿಕೊಳ್ಳುತ್ತಾರೋ ಅವರು ಮನುಷ್ಯೋತ್ತಮರಿಂದ ಹಿಡಿದು ರುದ್ರಾದಿದೇವತೆಗಳವರೆಗೆ ಎಲ್ಲರೂ ಶ್ರೀಹರಿಯ ಪ್ರಸಾದದಿಂದ ಮೋಕ್ಷವನ್ನು ಪಡೆಯುತ್ತಾರೆ.

ಅದರಂತೆ ಈ ಅಣುಭಾಷ್ಯವನ್ನು ಸಕಲರೂ ಯಥಾಶಕ್ತಿ ಅರ್ಥಾನುಸಂಧಾನಪೂರ್ವಕ ಪಾರಾಯಣ ಮಾಡಲಿ, ಅವರಿಗೆ ಈ ಸಂಗ್ರಹಾರ್ಥಗ್ರಂಥದಿಂದ ಅಲ್ಪಸ್ವಲ್ಪವಾದರೂ ಸಹಾಯವಾಗಲಿ, ಇದರಿಂದ ಅಸ್ಮದ್ಗುರುವರ್ಯರಾದ ಶ್ರೀಮದ್ವ್ಯಾಸರಾಜಾದಿಗುರ್ವಂತರ್ಗತ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಹೃತ್ಕಮಲನಿವಾಸೀ ಶ್ರೀವೇದವ್ಯಾಸದೇವರು ಸುಪ್ರೀತರಾಗಲಿ ಎಂದು ಪ್ರಾರ್ಥಿಸುತ್ತೇನೆ.

ವ್ಯಾಸತೀರ್ಥಹೃದಾವಾಸ - ಮಧ್ವಮಾನಸಮೋದನ |
ವೇದವ್ಯಾಸ ದಯಾಸಿಂಧೋ ಪ್ರಸನ್ನೋ ಭವ ಮೇಽನಿಶಮ್ ||

ಅಕ್ಷಯ ಸಂ | ೧೯೦೮
ವೈಶಾಖ ಕೃಷ್ಣೈಕಾದಶೀ

ವಿಷ್ಣುತೀರ್ಥ
ಬೆಂಗಳೂರು 3-6-1986

|| ಸ್ವಸ್ತಿ ಶ್ರೀ ||
ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಲಕ್ಷ್ಮೀಹಯಗ್ರೀವಾಯ ನಮಃ ||
ಅಥ
ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ

ಅಣುಭಾಷ್ಯೇ ಪ್ರಥಮೋಧ್ಯಾಯಃ

ಮಂಗಳಾಚರಣಮ್

ಶ್ರೀಗುರುಭ್ಯೋನಮಃ | ಹರಿಃ ಓಂ ||

ನಾರಾಯಣಂ ಗುಣೈಃ ಸರ್ವೈ-ರುದೀರ್ಣಂ ದೋಷವರ್ಜಿತಮ್ |
ಜ್ಞೇಯಂ ಗಮ್ಯಂ ಗುರೂಂಶ್ಚಾಪಿ ನತ್ವಾ ಸೂತ್ರಾರ್ಥ ಉಚ್ಯತೇ || ೧ ||

ಭಾವಾರ್ಥಸಂಗ್ರಹ

ದೇವಂ ನಾರಾಯಣಂ ವಂದೇ ಗುಣಾರ್ಣಂ ದೋಷವರ್ಜಿತಮ್ |
ಸೂತ್ರಕಾರಂ ತಥೈವೈನಂ ವ್ಯಾಸಂ ಚ ಜ್ಞಾನವಾರಿಧಿಮ್ || ೧ ||

ಪ್ರಣಮ್ಯ ಶ್ರೀಮದಾನಂದ - ತೀರ್ಥಾದಿ ಗುರುಶೇಖರಾನ್ |
ವಕ್ಷ್ಯೇಽಣುಭಾಷ್ಯಭಾವಾನಾಂ ಸಂಗ್ರಹಂ ತತ್ಪ್ರಸಾದತಃ || ೨ ||

ಶ್ರೀರಾಘವೇಂದ್ರತೀರ್ಥೀಯಾ ವ್ಯಾಖ್ಯಾ ಸಾ ತತ್ವಮಂಜರೀ |
ಭಾಷ್ಯಾರ್ಥಕಥನೇ ಮಹ್ಯಂ ಮುಖ್ಯತೋ ಮಾರ್ಗದರ್ಶಿನೀ || ೩ ||

ಅವತಾರಿಕೆ : ಈ ಸಂಸಾರಸಾಗರದಲ್ಲಿ ಬಿದ್ದು ನಾನಾ ವಿಧ ಕ್ಲೇಶಗಳನ್ನು ಅನುಭವಿಸಿ, ಅನುಭವಿಸಿ, ನೊಂದು ವಿರಕ್ತರಾದ ಅಧಿಕಾರಿಗಳಿಗೆ ಸಕಲ ಕ್ಲೇಶನಿವಾರಣೆಗೂ ಪರಮಾನಂದ ಪ್ರಾಪ್ತಿಗೂ ಕಾರಣಭೂತನಾದ ಭಗವಂತನ ಜ್ಞಾನವನ್ನು ತಿಳಿಸಿಕೊಡಲು ಪ್ರವೃತ್ತವಾದ ಅನಂತ ವೇದಗಳ ಅರ್ಥವನ್ನು ನಿರ್ಣಯಿಸುವುದಕ್ಕಾಗಿ ಶ್ರೀಮನ್ನಾರಾಯಣಾವತಾರರಾದ ಶ್ರೀ ಬಾದ ರಾಯಣರು ರಚಿಸಿದ ಬ್ರಹ್ಮಸೂತ್ರಗಳಿಗೆ ಸರಿಯಾದ ಅರ್ಥವನ್ನು ತಿಳಿಸಲೋಸುಗ ಭಾಷ್ಯ ವನ್ನೂ ಅನುವ್ಯಾಖ್ಯಾನವನ್ನೂ ನ್ಯಾಯವಿವರಣವನ್ನೂ ರಚಿಸಿ, ಅವುಗಳಲ್ಲಿ ಹೇಳಿದ ಅರ್ಥ ಗಳನ್ನೇ ನಿತ್ಯ ಅವಲೋಡನೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಸಂಗ್ರಹಿಸಿ ಹೇಳಲು ಪ್ರವೃತ್ತರಾದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಈ ಅಣುಭಾಷ್ಯದ ಪ್ರಾರಂಭ ದಲ್ಲಿ ಶಿಷ್ಯಶಿಕ್ಷಾರ್ಥ ಮಂಗಳಾಚರಣೆಯನ್ನು ಮಾಡುತ್ತಾ ಬ್ರಹ್ಮಸೂತ್ರದ ನಾಲ್ಕೂ ಅಧ್ಯಾಯ ಗಳಲ್ಲಿ ಹೇಳಿದ ಗುಣಗಳಿಂದ ಕೂಡಿದ ದೇವತಾವಂದನೆಯನ್ನೂ ಗುರುವಂದನೆಯನ್ನೂ ಮಾಡಿ ಗ್ರಂಥೋಪಕ್ರಮಸಂಕಲ್ಪವನ್ನು 'ನಾರಾಯಣಂ...' ಎಂಬ ಶ್ಲೋಕದಿಂದ ಮಾಡುತ್ತಾರೆ.

2. ಶ್ಲೋಕಾರ್ಥ : ಸರ್ವೈಃ ಗುಣೈಃ - ಜ್ಞಾನಾನಂದಾದಿ ಸಮಸ್ತ ಗುಣಗಳಿಂದಲೂ,

ಉದೀರ್ಣಂ - ಪರಿಪೂರ್ಣನಾದ (ತುಂಬಿತುಳುಕಾಡುತ್ತಿರುವ), ದೋಷವರ್ಜಿತಂ - ಚಿಂತಾ ಸಂತಾಪಜನನಮರಣಾದಿ ಸಮಸ್ತ ದೋಷಗಳಿಂದಲೂ ದೂರನಾದ, ಜ್ಞೇಯಂ - ಶ್ರವಣ ಮನನಾದಿ ಸಾಧನಗಳಿಂದ ಪ್ರತ್ಯಕ್ಷನಾಗುವಂಥಾ, ಮತ್ತು ಗಮ್ಯಂ - ಮೋಕ್ಷದಲ್ಲಿ ಸೇರ ಬೇಕಂಥಾ (ಆಶ್ರಯನಾದಂಥಾ), ನಾರಾಯಣಂ - ಸ್ವಾಮಿಯಾದ ನಾರಾಯಣನನ್ನೂ, ಗುರೂನ್ ಚ ಅಪಿ - ನಾರಾಯಣಾಭಿನ್ನರಾದ ಗುರುಗಳಾದ ವೇದವ್ಯಾಸರನ್ನೂ ಸಹ (ಅಪಿ ಶಬ್ದವು ದೇವತೆಯೂ ಗುರುಗಳೂ ಶ್ರೀಮದಾಚಾರ್ಯರ ವಿಷಯದಲ್ಲಿ ಮಾತ್ರ ಒಂದೇ ಎಂಬುದನ್ನು ಸೂಚಿಸುತ್ತದೆ), ನತ್ವಾ - ನಮಸ್ಕರಿಸಿ, ಸೂತ್ರಾರ್ಥ - ಬ್ರಹ್ಮಸೂತ್ರಗಳ ಅರ್ಥವು, ಉಚ್ಯತೇ - ಹೇಳಲ್ಪಡುತ್ತದೆ.

3. ತಾತ್ಪರ್ಯ : ಜ್ಞಾನಾನಂದಾದಿ ಸಕಲ ಗುಣಪರಿಪೂರ್ಣನೂ ಚಿಂತಾಸಂತಾಪಾದಿ ಸಮಸ್ತದೋಷದೂರನೂ, ಶ್ರವಣಮನನಾದಿ ಸಾಧನಗಳಿಂದ ಪ್ರತ್ಯಕ್ಷನಾಗಿ ಮೋಕ್ಷವನ್ನು ಕೊಡುವವನೂ ಆದ ಭಗವಂತ ನಾರಾಯಣನನ್ನೂ ಅವನ ಸಾಕ್ಷಾತ್ ಸ್ವರೂಪರೇ ಆದ ವಿದ್ಯಾಗುರುಗಳಾದ ವೇದವ್ಯಾಸರನ್ನೂ ವಂದಿಸಿ ಬ್ರಹ್ಮಸೂತ್ರಗಳ ಅರ್ಥವನ್ನು ಹೇಳುತ್ತೇನೆ.

4. ಪಾಠಭೇದ : ಅಣುಭಾಷ್ಯದ ಪಾರಾಯಣದಿಂದಲೇ ಇಡೀ ಸೂತ್ರಭಾಷ್ಯ ಪಾರಾ ಯಣದ ಫಲವೂ ಲಭಿಸಲೆಂಬ ಉದ್ದೇಶದಿಂದಲೂ, ಭಾಷ್ಯಾದಿ ಗ್ರಂಥಗಳಲ್ಲಿ ಹೇಳಿದ ಪ್ರಮೇಯಗಳೇ ಇದರಲ್ಲಿ ಸಂಗ್ರಹಿತವಾಗಿವೆಯೆಂದು ಸೂಚಿಸುವುದಕ್ಕಾಗಿಯೂ, ಸೂತ್ರ ಭಾಷ್ಯದ ಮಂಗಳಶ್ಲೋಕವನ್ನು ಹಾಗೆಯೇ ಇಲ್ಲಿಯೂ ಪಠಿಸಿದ್ದಾರೆ. ಆದರೆ ಕೆಲವರು ಅಣುಭಾಷ್ಯದಲ್ಲಿ ಈ ಮಂಗಳಾಚರಣ ಶ್ಲೋಕವನ್ನು ಪಠಿಸುವದಿಲ್ಲ. 'ವಿಷ್ಣುರೇವ ವಿಜಿ ಜ್ಞಾಸ್ಯ' ಎಂಬುದೇ ಆರಂಭ ಎನ್ನುತ್ತಾರೆ. ಅದೇನೇ ಇರಲಿ, ಸಂಪ್ರದಾಯಾರ್ಥಕೋವಿದರಾದ ಶ್ರೀ ರಾಘವೇಂದ್ರ ಸ್ವಾಮಿಗಳು ಈ ಮಂಗಳಶ್ಲೋಕ ಪೂರ್ವಕವಾಗಿಯೇ ಅಣುಭಾಷ್ಯಕ್ಕೆ ವ್ಯಾಖ್ಯಾನ ಬರೆದಿರುವುದರಿಂದ ನಮಗೆ ಅದೇ ಪ್ರಮಾಣ.

5. ವಿವರಣೆ : ಈ ಶ್ಲೋಕಕ್ಕೆ ಸಾಕ್ಷಾತ್ ಶ್ರೀಟೀಕಾಕೃತ್ಪಾದರೆ 'ತತ್ವಪ್ರಕಾಶಿಕಾ'ದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಅದರಲ್ಲಿ ಹೇಳಿದ ಮುಖ್ಯ ವಿಚಾರಗಳನ್ನೇ ಸಂಗ್ರಹಿಸಿ ಹೀಗೆ ಹೇಳಬಹುದು. ಸೂತ್ರಾರ್ಥ ಎಂಬಲ್ಲಿ ಸೂತ್ರ ಶಬ್ದಕ್ಕೆ ಯಾವ ವಿಶೇಷಣವನ್ನೂ ಸೇರಿಸದೆ ಹೇಳಿದ್ದರಿಂದ ಸೂತ್ರ ಶಬ್ದದಿಂದ ಬ್ರಹ್ಮಸೂತ್ರಗಳೇ ಗ್ರಾಹ್ಯವಾಗಿವೆ. (ಭೂಮಿಕೆ ಖಂಡ 43 ನೋಡಿ.) ನಿರುಪಪದಪ್ರಯೋಗವು ಮುಖ್ಯಾರ್ಥವನ್ನೇ ಹೇಳುವುದರಿಂದಲೂ ಬ್ರಹ್ಮಸೂತ್ರಗಳು ಸಕಲ ಸೂತ್ರಗ್ರಂಥಗಳಲ್ಲೂ ಅತ್ಯಂತ ಪ್ರಮುಖವಾಗಿದ್ದರಿಂದಲೂ ಸುಮ್ಮನೆ ಸೂತ್ರ ಎಂದು ಹೇಳಿದ್ದು ಸಮಂಜಸವಾಗಿದೆ.

6. ಸೂತ್ರಗಳ ಸಾರ : ಬ್ರಹ್ಮಸೂತ್ರಗಳು ಬ್ರಹ್ಮಜಿಜ್ಞಾಸೆ ಮಾಡಬೇಕೆಂದು ಸಮರ್ಥಿಸು ತ್ತವೆ. ಬ್ರಹ್ಮ ಎಂದರೆ ನಾರಾಯಣನೇ ಎಂದು ಸೂಚಿಸುತ್ತಾ ಮಂಗಳ ಶ್ಲೋಕದಲ್ಲಿ ಅವನಿಗೇ ವಂದಿಸಿದರು. ಅವನೇ ಈ ಗ್ರಂಥದ ಅಧಿದೇವತೆ. ಏಕೆಂದರೆ ಈ ಗ್ರಂಥದ ನಾಲ್ಕು ಅಧ್ಯಾಯ ಗಳೂ ಅವನ ಗುಣಗಳನ್ನೇ ವರ್ಣಿಸುತ್ತವೆಯೆಂದು ತೋರಿಸುವುದಕ್ಕಾಗಿ ಆ ನಾರಾಯಣನನ್ನು ನಾಲ್ಕು ವಿಶೇಷಣಗಳಿಂದ ಸ್ತುತಿಸಿದ್ದಾರೆ. ಗುಣಪೂರ್ಣನೆಂಬುದು ಮೊದಲನೆಯ ಅಧ್ಯಾಯದ

ಅರ್ಥ. ನಿರ್ದೋಷ ಎಂಬುದು ಎರಡನೆಯ ಅಧ್ಯಾಯದ ಅರ್ಥ. ಶ್ರವಣಮನನಾದಿ ಸಾಧನ ಗಳಿಂದ ಅವನ ಸಾಕ್ಷಾತ್ಕಾರವಾಗುತ್ತದೆ ಎಂಬುದೇ ಮೂರನೆಯ ಅಧ್ಯಾಯದ ಅರ್ಥ; ಇದನ್ನು 'ಜ್ಞೇಯಂ' ತಿಳಿಸಿಕೊಡುತ್ತದೆ. ಸಾಕ್ಷಾತ್ಕಾರವಾದ ಬಳಿಕ ಕೊನೆಗೆ ಮೋಕ್ಷದಲ್ಲಿ ಅವನನ್ನೇ ಹೇಗೆ ಹೊಂದುತ್ತಾರೆ ಎಂಬುದನ್ನು ನಾಲ್ಕನೇ ಅಧ್ಯಾಯ ವಿವರಿಸುತ್ತದೆ; ಇದನ್ನು 'ಗಮ್ಯಂ' ಎಂಬ ವಿಶೇಷಣ ತಿಳಿಸಿಕೊಡುತ್ತದೆ. ಏವಂ ಚ ಬ್ರಹ್ಮಸೂತ್ರಗಳಲ್ಲಿ ಹೇಳಿದ ಸಕಲಾರ್ಥಗಳೂ ನಾರಾಯಣನಿಗೆ ಅನ್ವಯಿಸುವುದರಿಂದ ಅವನೇ ಬ್ರಹ್ಮಶಬ್ದಾರ್ಥವೆಂಬುದೂ ಅವನೇ ಈ ಗ್ರಂಥಕ್ಕೆ ಪ್ರತಿಪಾದ್ಯ ದೇವತೆಯೆಂಬುದೂ ಸಿದ್ಧವಾಯಿತು.

7. ನಾರಾಯಣ ಶಬ್ದಾರ್ಥ : ಅಥವಾ ನಾರಾಯಣನಿಗೆ ಕೊಟ್ಟ ನಾಲ್ಕು ವಿಶೇಷಣಗಳೂ 'ನಾರಾಯಣ' ಶಬ್ದದ ಅರ್ಥಗಳೇ ಎಂದೂ ಟೀಕಾರಾಯರು ತೋರಿಸಿಕೊಡುತ್ತಾರೆ. ನಾರಾ ಯಣನಿಗೆ ಬಂದಿರುವ ಆ ಹೆಸರು ದೇವದತ್ತಾದಿಗಳ ಹೆಸರಿನಂತೆ ಕೇವಲ ಸಂಕೇತಕ್ಕಾಗಿ ಇಟ್ಟ ಹೆಸರಲ್ಲ. ಅದಕ್ಕೆ ಪ್ರತಿಯಾಗಿ ಆ ಹೆಸರು ಅವನಲ್ಲಿರುವ ಅನಂತ ಗುಣಗಳಿಗೆ ದ್ಯೋತಕ ವಾಗಿದೆ ಎಂದು ಸೂಚಿಸುತ್ತಾ ಆ 'ನಾರಾಯಣ' ಶಬ್ದದ ನಾಲ್ಕು ಅರ್ಥಗಳನ್ನೇ ನಾಲ್ಕು ವಿಶೇಷಣಗಳಿಂದ ಹೇಳಿದ್ದಾರೆ ಎಂದು ತೋರಿಸಿಕೊಡುತ್ತಾರೆ.

8. ಗುಣಪೂರ್ಣತ್ವ : ಅರ ಶಬ್ದವು ದೋಷ ಶಬ್ದಕ್ಕೆ ಪರ್ಯಾಯ. ಅರ್ಥಾತ್ ಅರ ಎಂದರೆ ದೋಷ ಎಂದರ್ಥ. ನ ಕಾರವು ಭಿನ್ನಾರ್ಥವನ್ನು ಹೇಳುವುದರಿಂದ ನ ಅರ ಸೇರಿ ನಾರ ಎಂಬುದು ದೋಷಭಿನ್ನವಾದ ಗುಣಗಳನ್ನು ಹೇಳುತ್ತದೆ. ನಾರ=ಗುಣಗಳಿಗೆ, ಅಯನ = ಆಶ್ರಯನಾದ್ದರಿಂದ ಅವನಿಗೆ ನಾರಾಯಣ ಎಂದು ಹೆಸರಾಗಿದೆ. ವ್ಯಾಕರಣ ರೀತ್ಯಾ ರಕಾರದ ಯೋಗವಿದ್ದಾಗ ನಕಾರಕ್ಕೆ ಣಕಾರಾದೇಶ ಬರುವುದು (ಉದಾಹರಣೆ : ರಾಮ+ಅಯನ= ರಾಮಾಯಣ) ಅದರಂತೆ ನಾರಾಯಣ ಎಂಬ ರೂಪ ಸಿದ್ಧಿಯಾಗಿದೆ. ಹೀಗೆ ನಾರಾಯಣ ಎಂಬುದರ ವಿವರಣೆಯೇ 'ಗುಣೈಃ ಸರ್ವೈರುದೀರ್ಣಂ' ಎಂದು ಸ್ಪಷ್ಟವಾಯಿತು. ಇದನ್ನು ತತ್ತ್ವಪ್ರಕಾಶಿಕಾದಲ್ಲಿ ಹೀಗೆ ಹೇಳಿದ್ದಾರೆ : ದೋಷವಿರುದ್ಧಾ ಗುಣಾ ನಾರಾಃ | ತದಾಶ್ರಯೋ ನಾರಾಯಣಃ ||

9. ನಿರ್ದೋಷತ್ವ : ಎರಡನೇ ಅರ್ಥ ಹೇಳುವಾಗ ನಕಾರವನ್ನು ಬೇರೆಯಾಗಿ ಹೇಳಬೇಕು. ಅರ=ದೋಷಗಳಿಗೆ, ಅಯನಂ=ಆಶ್ರಯನು, ನ=ಅಲ್ಲದವನು ಎಂದರೆ ದೋಷರಹಿತನೆಂದೇ ಅರ್ಥವಾಗುತ್ತದೆ. ಇದು 'ದೋಷವರ್ಜಿತಂ' ಎಂಬುದರ ಅನ್ವಯ. ಇದನ್ನೇ ಟೀಕಾರಾಯರು ಹೀಗೆ ಹೇಳಿದ್ದಾರೆ : ಅರಾಶ್ರಯೋ ನ ಭವತೀತಿ ನಾರಾಯಣಃ ||

10. ಜ್ಞಾನಾಶ್ರಯತ್ವ : ಈ ಅರ್ಥದಲ್ಲೂ ಮೊದಲನೇ ಅರ್ಥ ಹೇಳುವಾಗ ಪದಚ್ಛೇದ ಮಾಡಿದಂತೆ ನಾರ+ಅಯನ ಎಂದೇ ಬಿಡಿಸಬೇಕು. ಆದರೆ ಇಲ್ಲಿ ನಾರ ಶಬ್ದಕ್ಕೆ ನಾಲ್ಕು ಪ್ರಕಾರ ವ್ಯುತ್ಪತ್ತಿ ತೋರಿಸಿ ಜ್ಞಾನ ಎಂದು ಅರ್ಥ ಮಾಡುತ್ತಾರೆ. ಸಂಸ್ಕೃತದಲ್ಲಿ ಜ್ಞಾನ ಶಬ್ದ ನಪುಂಸಕ ಲಿಂಗ, ಅದಕ್ಕೆ ಅನುಗುಣವಾಗಿ ನಾರ ಶಬ್ದವನ್ನೂ ನಪುಂಸಕ ಲಿಂಗದಲ್ಲೇ ಗ್ರಹಣ ಮಾಡುತ್ತಾರೆ (i) ನರ ಎಂದರೆ ಮನುಷ್ಯರು; ನರಸಂಬಂಧಿತ್ವಾತ್ ನಾರಂ = ಮನುಷ್ಯರಿಗೆ ಮಾತ್ರ ಸಂಬಂಧಿಸಿದ್ದಾದ್ದರಿಂದ ನಾರಂ ಎಂದರೆ ಜ್ಞಾನ, ನರ ಶಬ್ದದ ಮೇಲೆ 'ತಸ್ಯೇದಮ್'

(ಪಾ. ೪/೩/೧೨೦) ಅದಕ್ಕೆ ಸಂಬಂಧಿಸಿದ್ದು ಎಂಬ ಅರ್ಥದಲ್ಲಿ ಅಣ್ ಪ್ರತ್ಯಯ ಬಂದು ನಾರಂ ಎಂದಾಗುತ್ತದೆ. ಜ್ಞಾನವು ಕೇವಲ ಮನುಷ್ಯರಿಗೆ ಸಂಬಂಧಿಸಿದ ಗುಣವಲ್ಲವೆ. (ii) ರೀಚ್-ಕ್ಷಯೇ ಎಂದು ಧಾತು ಪಾಠವಿರುವುದರಿಂದ ರಕಾರವು ಕ್ಷಯವಾಚಿಯೂ ಆಗುತ್ತದೆ. ನ+ಆ+ರ ಯಾವುದರಿಂದ ಕ್ಷಯವು (ಜನನಮರಣರೂಪ ನಾಶವು) ತಪ್ಪುತ್ತದೋ ಅದು ನಾರಂ ಜ್ಞಾನ (iii) ರಮುಕ್ರೀಡಾಯಾಂ ಎಂಬ ಧಾತುವಿನಿಂದ ರಕಾರವು ರತಿ, ರಮಣ=ಸುಖ ವನ್ನು ಸೂಚಿಸುತ್ತದೆ. ತದ್ಭಿನ್ನವಾದುದು ಅರ=ದುಃಖಪಡುವುದು. ಯಾವುದರಿಂದ ನ= ಇಲ್ಲವೋ ಎಂದರೆ ತಪ್ಪುವುದೋ ಅದು ನಾರಂ = ಮೋಕ್ಷಕ್ಕೆ ಸಾಧನವಾದ ಅಪರೋಕ್ಷ ಜ್ಞಾನ (iv) ಹಿಂದೆ ತಿಳಿಸಿದಂತೆ ಅರ ಎಂದರೆ ದೋಷ. ಅರ=ದೋಷವು ಯಾವುದರಲ್ಲಿ ನ=ಇಲ್ಲವೋ ಅವು ನಾರಾಃ=ವೇದಗಳು. ನಾರ=ನಿರ್ದುಷ್ಟ ವೇದಗಳಿಂದ ಹುಟ್ಟಿದ್ದಾದ್ದ ರಿಂದಲೂ ನಾರಂ ಎಂದರೆ ಜ್ಞಾನ. ಈ ನಾರ=ಜ್ಞಾನಕ್ಕೆ ಅಯನಂ = ವಿಷಯ(ಗೋಚರ)ನಾಗಿ ಆಶ್ರಯನಾದ್ದರಿಂದಲೂ ಇವನು ನಾರಾಯಣ, ಎಂದರೆ ಅಪರೋಕ್ಷ ಜ್ಞಾನಕ್ಕೆ ವಿಷಯೀಭೂತ ಎಂದರ್ಥ. ಇದು ಜ್ಞೇಯಂ ಎಂಬುದರ ಅನ್ವಯ. ಈಗ ಟೀಕಾರಾಯರ ವಾಕ್ಯವನ್ನು ಅರ್ಥ ಮಾಡಿಕೊಂಡು ನಾಲ್ಕಾರು ಸರಿ ಪಠಿಸಿ ಮಂದಟ್ಟು ಮಾಡಿಕೊಳ್ಳಿ. ನರಸಂಬಂಧಿತ್ವಾತ್, ನ ರೀಯತೇ (=ಕ್ಷೀಯತೇ) ಅನೇನೇತಿ ವಾ, ನ ಅರಮಣಂ ಯೇನೇತಿ ವಾ, ನಿರ್ದೋಷ ವೇದೋತ್ಪನ್ನತ್ವಾದ್ವಾ ನಾರಂ-ಜ್ಞಾನಂ | ವಿಷಯತಯಾ ತದಾಶ್ರಯ ತ್ವಾಚ್ಚ ನಾರಾಯಣಃ ||

11. ಮುಕ್ತಾಶ್ರಯತ್ವ : ಮೂರನೇ ಅರ್ಥ ಹೇಳುವಾಗ ನಾರಂ ಎಂಬ ನಪುಂಸಕ ಲಿಂಗ ಶಬ್ದದ ಏಕವಚನ ರೂಪವನ್ನು ಗ್ರಹಣ ಮಾಡಿದ್ದೆವು. ಈ ನಾಲ್ಕನೇ ಅರ್ಥದಲ್ಲಿ ನಾರಾಃ ಎಂದು ಪುಲ್ಲಿಂಗ ಬಹುವಚನ ರೂಪವನ್ನು ಗ್ರಹಣ ಮಾಡಬೇಕು. ಈ ಶಬ್ದಕ್ಕೂ ಮೂರು ವಿಧವಾಗಿ ವ್ಯುತ್ಪತ್ತಿ ತೋರಿಸಿ ಇದಕ್ಕೆ 'ಮುಕ್ತರು' ಎಂದು ಅರ್ಥ ಮಾಡುತ್ತಾರೆ. (i) ಅರ=ದೋಷಗಳು, ನ=(ವಿಧುರತ್ವಾತ್) ಇಲ್ಲದವರಾದ್ದರಿಂದಲೂ; (ii) ರ=ರತಿ, ಸುಖ; ಅ+ರ=ಅರತಿ = ದುಃಖವು, ನ=(ರಹಿತ್ವಾತ್) = ಇಲ್ಲದವರಾದ್ದರಿಂದಲೂ; = iii) ಅ+ರ=ಕ್ಷಯವು (ನಾಶವು); ನ (ರಹಿತ್ವಾತ್) = ಇಲ್ಲದವರಾದ್ದರಿಂದಲೂ ನಾರಾಃ ಎಂದರೆ ಮುಕ್ತರು. ಮುಕ್ತರಿಗೂ ಸಹ ಚಿಂತಾಸಂತಾಪಾದಿ ದೋಷಗಳು ಇರುವುದಿಲ್ಲ; ಜನನಮರಣ ಮುಪ್ಪು ಮೊದಲಾದ ದುಃಖಗಳೂ ಇರುವದಿಲ್ಲ; ದೇಹನಾಶ, ರೋಗರುಜಿನಾದಿ ಕ್ಷಯಗಳು ಯಾವುವೂ ಇರುವುದಿಲ್ಲವೆಂದು ನಾಲ್ಕನೆಯ ಅಧ್ಯಾಯದಲ್ಲಿ ನಿರೂಪಣೆ ಮಾಡುವರು. ಅಂಥಾ ನಾರ=ಮುಕ್ತರಿಗೆ, ಅಯನಂ=ಆಶ್ರಯನಾದ್ದರಿಂದಲೂ, ಇವನು ನಾರಾಯಣ. ಮುಕ್ತರು ಈ ಭಗವಂತನನ್ನು ಸೇರಿ ಸಾರೂಪ್ಯಸಾಯುಜ್ಯಾದಿರೂಪ ಸೌಖ್ಯವನ್ನು ಹೊಂದುತ್ತಾ ರೆಂಬುದನ್ನು ಗಮ್ಯಂ ಎಂಬ ವಿಶೇಷಣದ ಅರ್ಥ. ಕೆಳಗಿನ ಟೀಕಾವಾಕ್ಯವನ್ನು ಹಿಂದಿನಂತೆಯೇ ಪುನಃ ಪುನಃ ಆಲೋಡನೆ ಮಾಡಿ ಅರ್ಥ ತಿಳಿದುಕೊಳ್ಳಿ. ಅರ ವಿಧುರತ್ವಾತ್, ಅರತಿರಹಿತ ತ್ವಾತ್, ಕ್ಷಯರಹಿತತ್ವಾದ್ವಾ ನಾರಾಃ - ಮುಕ್ತಾಃ | ತದಾಶ್ರಯೋ ನಾರಾಯಣಃ ||

(ನಾರಾಯಣ ಶಬ್ದದ ಈ ನಾಲ್ಕೂ ಅರ್ಥಗಳು ಹತ್ತಿಪ್ಪತ್ತು ಸಲ ಓದಿಓದಿ ತಿಳಿದುಕೊಳ್ಳು ವವರೆಗೆ ಮನಸ್ಸಿಗೆ ನಾಟುವುದು ಕಷ್ಟ. ಸಾವಕಾಶವಾಗಿ ಅಭ್ಯಾಸ ಮಾಡಿ ಗ್ರಹಿಸಿಕೊಳ್ಳಬೇಕು.

ಆದಕ್ಕೆ ಮುಖ್ಯವಾಗಿ ಟೀಕಾಚಾರ್ಯರ ವಾಕ್ಯಾವಳಿಯನ್ನೇ ಕಂಠಪಾಠ ಮಾಡುವುದೇ ಅತ್ಯಂತ ಸುಲಭೋಪಾಯ)

12. ಸುಧಾದಲ್ಲಿ ಹೇಳಿದ ಪ್ರಮೇಯ : ಯಾರಿಗೆ ವಂದಿಸಬೇಕೆಂದರೆ ಟೀಕಾರಾಯರು ಹೇಳುತ್ತಾರೆ — ತ್ರಿವಿಧಾ ಹಿ ದೇವತಾ ವಂದ್ಯಾ ಭವತಿ - ವಿಶಿಷ್ಟಾ, ಅಧಿಕೃತಾ, ಇಷ್ಟಾ ಚೇತಿ| ಅನೇಕ ಗುಣಗಳಿಂದ ಕೂಡಿದವನೇ ವಿಶಿಷ್ಟ ದೇವತೆ; ನಮ್ಮ ಇಷ್ಟಾರ್ಥವನ್ನು ನೆರವೇರಿಸಲು ಅಂಥವನೇ ಸಮರ್ಥ. ಗ್ರಂಥಪ್ರತಿಪಾದ್ಯನೇ ಅಧಿಕೃತ, ಭಕ್ತಿ ವಿಶಿಷ್ಟವಾಗಿದ್ದರೆ ಮಾತ್ರವೇ ವಂದನೆ ಫಲಿಸುತ್ತದೆ. ಅದಕ್ಕೆ ಇಷ್ಟದೇವತೆಯಾಗಿದ್ದರೆ ಮೇಲಲ್ಲವೆ. ಪ್ರಕೃತ ನಾರಾಯಣನಲ್ಲಿ ಈ ಮೂರೂ ಗುಣಗಳನ್ನು ಪ್ರತಿಪಾದಿಸಿ ತೋರಿಸುತ್ತಾರೆ. ನಾರಾಯಣನು ಗುಣಪೂರ್ಣನೆಂಬು ದರಿಂದ ವಿಶಿಷ್ಟತ್ವವು ಸಿದ್ಧಿಸುತ್ತದೆ. ನಿರ್ದೋಷವೆಂಬುದರಿಂದ ಇಷ್ಟತ್ವ ಸಿದ್ಧಿಸುತ್ತದೆ. ಜ್ಞೇಯಂ ಗಮ್ಯಂ ಎಂದದ್ದರಿಂದ ಅಧಿಕೃತತ್ವ ಹೇಳಿದಂತಾಯಿತು. ಹೀಗೆ ನಾರಾಯಣನಲ್ಲಿ ಮೂರೂ ಗುಣಗಳು ಕೂಡಿರುವುದರಿಂದ ಅವನೇ ಸರ್ವಥಾ ವಂದ್ಯನಾಗಿದ್ದಾನೆಂಬುದು ಸಿದ್ಧವಾಯಿತು.

13. ಗುರುನಮಸ್ಕಾರ : ನಾರಾಯಣ ಪ್ರಣಾಮದಂತೆ ಗುರುನಮಸ್ಕಾರವೂ ಇಷ್ಟಾರ್ಥ ಸಿದ್ಧಿಗೆ ಅಂಗವಾಗಿರುವುದರಿಂದ ಗ್ರಂಥಾರಂಭದಲ್ಲಿ ಗುರುಗಳಿಗೂ ನಮಸ್ಕಾರ ಮಾಡಬೇಕಾ ದುದು ಅತ್ಯಾವಶ್ಯಕವಾದುದರಿಂದ ಗುರುಗಳನ್ನು ವಂದಿಸುತ್ತಾರೆ - **ಗುರೂಂಶ್ಚಾಪಿ ನತ್ವಾ** || - ಗುರುಗಳಿಗೂ ಸಹ ನಮಸ್ಕಾರ ಮಾಡಿ ಶಿಷ್ಯನು ಗುರುಗಳ ಹೆಸರನ್ನೂ, ಪತ್ನಿಯು ಪತಿಯ ಹೆಸರನ್ನೂ ಹೇಳಬಾರದೆಂಬುದು ಪ್ರಾಚೀನ ಸಂಪ್ರದಾಯ. ಅದರಂತೆ ಗುರುಗಳ ಹೆಸರು ಹೇಳಲಿಲ್ಲ. ಆ ಗುರುಗಳು ವೇದವ್ಯಾಸರೇ ಹೊರತು ಬೇರೆಯಲ್ಲ. ಯದ್ಯಪಿ ಶ್ರೀಮದಾ ಚಾರ್ಯರ ವಿಷಯದಲ್ಲಿ ಗುರುಗಳೂ ದೇವತೆಯೂ ಒಬ್ಬನೇ ಆಗಿದ್ದರೂ ವಿಶೇಷಾನುಗ್ರಹ ಕ್ಕಾಗಿ ಪುನಃ ನಮಸ್ಕಾರ ಮಾಡಿದ್ದಾರೆಂದು ತಿಳಿಯಬೇಕು. ಹೀಗೆ ದೇವತೆಯಾದ ನಾರಾಯಣ ನಿಗೂ ಗುರುಗಳಾದ ವೇದವ್ಯಾಸದೇವರಿಗೂ ವಂದಿಸಿ ಬ್ರಹ್ಮಸೂತ್ರಾರ್ಥವನ್ನು ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದಾರೆ.

14. ವಿಷಯಾದಿ ಅನುಬಂಧ ಚತುಷ್ಟಯ : ಯಾವ ಶಾಸ್ತ್ರವನ್ನು ಅಭ್ಯಾಸ ಮಾಡಬೇಕಾ ದರೂ ಮೊಟ್ಟಮೊದಲು ಆ ಶಾಸ್ತ್ರದ ವಿಷಯವೇನು? ಅದಕ್ಕೆ ಅಧಿಕಾರಿಗಳಾರು? ಈ ಶಾಸ್ತ್ರ ದಿಂದ ಪ್ರಯೋಜನವೇನು? ಈ ಶಾಸ್ತ್ರಕ್ಕೂ ನಮಗೂ ಏನು ಸಂಬಂಧ? ಎಂಬುದನ್ನು ವಿಚಾರ ಮಾಡಬೇಕು; ಇದನ್ನೇ ಶಾಸ್ತ್ರಕಾರರು ಅನುಬಂಧ ಚತುಷ್ಟಯ ಎನ್ನುತ್ತಾರೆ. ಈ ಅನುಬಂಧ ಚತುಷ್ಟಯವನ್ನು ತಿಳಿದುಕೊಂಡೇ ಗ್ರಂಥಾರಂಭ ಮಾಡಬೇಕೆಂಬುದನ್ನು ಎಲ್ಲ ಶಾಸ್ತ್ರಕಾರರೂ ಒಪ್ಪಿದ್ದಾರಲ್ಲದೆ ಎಲ್ಲರೂ ಇದನ್ನು ನಿರೂಪಣೆ ಮಾಡುತ್ತಲೇ ಬಂದಿದ್ದಾರೆ. ಹೀಗೆ ಅನುಬಂಧ ಚತುಷ್ಟಯವನ್ನು ಸ್ಮರಣೆ ಮಾಡಿಕೊಂಡು ಗ್ರಂಥಾರಂಭ ಮಾಡಿದರೆ ಅದಕ್ಕೆ ಮಹಾಫಲ ವುಂಟೆಂದು ಭಾಗವತತಾತ್ಪರ್ಯೋದಾಹೃತ ಪ್ರಮಾಣವೂ ಹೇಳುತ್ತದೆ. ಇದಕ್ಕೆ ಅನುಗುಣವಾಗಿ ಶ್ರೀಮಜ್ಜಯತೀರ್ಥರು ತತ್ವಪ್ರಕಾಶದಲ್ಲಿ ಸೂತ್ರಭಾಷ್ಯದ ಅಧಿಕಾರಾದಿ ಚತುಷ್ಟಯವನ್ನು ತೋರಿಸಿಕೊಟ್ಟಿದ್ದಾರೆ. ಅದನ್ನು ನಾವೂ ಸಹ ತಿಳಿದುಕೊಳ್ಳಬೇಕಾದ್ದರಿಂದ ಇಲ್ಲಿ ತೋರಿಸಿದೆ.

'ಜ್ಞೇಯಂ', 'ಗಮ್ಯಂ' ಎಂದು ಹೇಳಿದ್ದರಿಂದ ನೋಡುವವನೂ ಹೋಗುವವನೂ ಬೇರೆ

ಇದ್ದಾರೆಂದು ಅರ್ಥವಾಯಿತು. ಅದನ್ನು (ಎಂದರೆ ಅಪರೋಕ್ಷವನ್ನೂ ಮೋಕ್ಷವನ್ನೂ) ಬಯಸುವವನೇ ಅಧಿಕಾರಿ. ನಾರಾಯಣನೇ ವಿಷಯ. ಅವನನ್ನು ತಿಳಿದುಕೊಂಡು ಅವನ ಸಾಕ್ಷಾತ್ಕಾರ ಪಡೆದು ಅವನನ್ನು ಹೊಂದುವುದೇ ಪ್ರಯೋಜನ. ಸಂಬಂಧವನ್ನೂ ಹೀಗೆಯೇ ಯಥೋಚಿತವಾಗಿ ತಿಳಿದುಕೊಳ್ಳಬೇಕು. ಇಲ್ಲಿಗೆ ಮಂಗಳಾಚರಣ ಶ್ಲೋಕದ ವಿವರಣೆಯನ್ನು ಮುಗಿಸಬಹುದು.

ಪ್ರಥಮ ಪಾದಾರ್ಥ ನಿರೂಪಣೆ

15. ಪಂಚಾಧಿಕರಣೀ : ಪ್ರಥಮಾಧ್ಯಾಯದ ಪ್ರಥಮ ಪಾದದಲ್ಲಿ ಹನ್ನೆರಡು ಅಧಿಕರಣಗಳೂ ಮೂವತ್ತೊಂದು ಸೂತ್ರಗಳೂ ಇವೆ. ಈ ಪೈಕಿ ಮೊದಲನೆಯ ಐದು ಅಧಿಕರಣಗಳು ಇಡೀ ಶಾಸ್ತ್ರಕ್ಕೂ ಇಡೀ ಅಧ್ಯಾಯಕ್ಕೂ ಪೀಠಿಕಾರೂಪವಾಗಿವೆ. ಆ ಪೈಕಿ ಮೊದಲ ನಾಲ್ಕೂ ಅಧಿಕರಣಗಳಲ್ಲೂ ಒಂದೊಂದೇ ಸೂತ್ರವಿರುವುದರಿಂದ ಆ ನಾಲ್ಕನ್ನೇ ಚತುಸ್ಸೂತ್ರೀ ಎನ್ನುತ್ತಾರೆ. ಐದನೇ ಅಧಿಕರಣದಲ್ಲಿ ಏಳು ಸೂತ್ರಗಳಿವೆ. ಮೊದಲ ಐದು ಕರಣಗಳಿಗೆ ಪಂಚಾಧಿಕರಣೀ ಎಂದು ಹೆಸರು. ಈ ಪಂಚಾಧಿಕರಣಿಯು ಇಡೀ ಶಾಸ್ತ್ರಕ್ಕೇ ಪೀಠಿಕೆಯಂತಿರುವುದರಿಂದ ಮೊದಲು ಅದನ್ನೇ ತೆಗೆದುಕೊಳ್ಳೋಣ. ಇದರಲ್ಲೂ ಚತುಸ್ಸೂತ್ರಿಯೇ ಒಂದು ಗುಂಪಾದ್ದರಿಂದ ಮೊಟ್ಟಮೊದಲು ಅದಕ್ಕೆ ಹೋಗೋಣ.

16. ಚತುಸ್ಸೂತ್ರೀ : ಹೆಸರಿಗೆ ತಕ್ಕಂತೆ ಈ ಚತುಸ್ಸೂತ್ರಿಯಲ್ಲಿ ನಾಲ್ಕೇ ಸೂತ್ರಗಳಿವೆ. ಒಂದೊಂದು ಸೂತ್ರವೂ ಒಂದೊಂದು ಬೇರೆ ಬೇರೆ ಅಧಿಕರಣವೂ ಆಗಿದೆ. ಈ ನಾಲ್ಕರ ಪೈಕಿ ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ ಎಂಬುದೇ ಪ್ರಥಮ ಸೂತ್ರ. ಮಾಧ್ವ ಭಾಷ್ಯದ ಪ್ರಕಾರ ಪ್ರತಿಯೊಂದು ಸೂತ್ರವನ್ನು ಪ್ರಣವದಿಂದ ಸಂಪುಟೀಕರಣ ಮಾಡಿಯೇ ಹೇಳಬೇಕು. (ಭೂಮಿಕೆ 44ನೇ ಖಂಡ ನೋಡಿ); ಈ ಪ್ರಣವವು ಸೂತ್ರಾಂಗವಾದರೂ ಮುಂದಿನ ಅಥ ಶಬ್ದದೊಡನೆ ಬೆರೆಯುವುದಿಲ್ಲ, ಬೇರೆಯಾಗಿಯೇ ಇರುತ್ತದೆ. ಈ ಸೂತ್ರದಲ್ಲಿ ಜಿಜ್ಞಾಸಾ ಶಬ್ದ ಬಂದಿರುವುದರಿಂದ ಮೊದಲನೇ ಅಧಿಕರಣಕ್ಕೆ ಜಿಜ್ಞಾಸಾಧಿಕರಣವೆಂದು ಹೆಸರು. ಓಂ ಜನ್ಮಾದ್ಯಸ್ಯ ಯತಃ ಓಂ ಎಂಬುದು ಎರಡನೇ ಸೂತ್ರ. ಈ ಸೂತ್ರ ಜನ್ಮಶಬ್ದದಿಂದ ಆರಂಭವಾಗಿರುವುದರಿಂದ ಈ ಎರಡನೇ ಅಧಿಕರಣಕ್ಕೆ ಜನ್ಮಾಧಿಕರಣ ಅಥವಾ ಜನ್ಮಾದ್ಯಧಿಕರಣ ಎಂದು ಹೆಸರು. ಓಂ ಶಾಸ್ತ್ರಯೋನಿತ್ವಾತ್ ಓಂ ಎಂಬುದು ಮೂರನೆಯ ಸೂತ್ರವಾದ್ದರಿಂದ ಇದನ್ನು ಶಾಸ್ತ್ರಯೋನಿತ್ವಾಧಿಕರಣ ಎನ್ನುತ್ತಾರೆ. ಓಂ ತತ್ತು ಸಮನ್ವಯಾತ್ ಓಂ ಎಂಬುದು ನಾಲ್ಕನೇ ಸೂತ್ರ. ಈ ಸೂತ್ರದಲ್ಲಿ ಸಮನ್ವಯ ಶಬ್ದ ಬಂದಿರುವುದರಿಂದ ಈ ಅಧಿಕರಣಕ್ಕೆ ಸಮನ್ವಯಾಧಿಕರಣವೆಂದು ಹೆಸರು. ಹೊಂದಾಣಿಕೆಯ ದೃಷ್ಟಿಯಿಂದ ನೋಡಿದರೂ ಈ ನಾಲ್ಕೂ ಸೂತ್ರಗಳೂ ಒಂದೇ ಸಮಷ್ಟಿ (ಒಟ್ಟು) ವಿಷಯವನ್ನು ತಿಳಿಸಿಕೊಡುತ್ತದೆ. ಮೂವರೂ ಭಾಷ್ಯಕಾರರೂ (ದ್ವೈತಾದ್ವೈತ ವಿಶಿಷ್ಟಾದ್ವೈತ) ಈ ನಾಲ್ಕೂ ಸೂತ್ರಗಳಿಗೆ ಮಹತ್ವದ ಸ್ಥಾನ ಕೊಟ್ಟಿದ್ದಾರೆ.

17. ಈಕ್ಷತ್ಯಧಿಕರಣ : ಐದನೇ ಸೂತ್ರದ ಪಾಠವು ಓಂ ಈಕ್ಷತೇರ್ನಾಶಬ್ದಮ್ ಓಂ

ಎಂದಿದೆ. ಈ ಸೂತ್ರದಲ್ಲಿ ಬಂದಿರುವ ಈಕ್ಷತೇಃ ಎಂಬ ಶಬ್ದದಿಂದ ಈ ಅಧಿಕರಣಕ್ಕೆ ಈಕ್ಷತ್ಯಧಿಕರಣವೆಂದು ಹೆಸರು. ಮೇಲೆ (ಖಂಡ 15) ತಿಳಿಸಿದಂತೆ ಈ ಅಧಿಕರಣದಲ್ಲಿ ಏಳು ಸೂತ್ರಗಳಿವೆ. ವೇದಾಂತ ಶಾಸ್ತ್ರದಲ್ಲಿ ವಿಶೇಷತಃ ಈ ಐದೂ ಅಧಿಕರಣಗಳ ಹೆಸರು ಮತ್ತೆ ಮತ್ತೆ ಬರುತ್ತಿರುವುದರಿಂದ ಈ ಐದೂ ಅಧಿಕರಣಗಳ ಹೆಸರುಗಳನ್ನಾದರೂ ಚೆನ್ನಾಗಿ ನೆನಪಿಟ್ಟುಕೊಳ್ಳಬೇಕು. ಮುಂದೆ ಅಧಿಕರಣಗಳ ಸಿದ್ಧಾಂತಸಾರವನ್ನು ಹೇಳುವಾಗ ಈ ಸೂತ್ರಗಳ ಅರ್ಥವನ್ನು ಸ್ವಲ್ಪಮಟ್ಟಿಗಾದರೂ ತಿಳಿಸಲೇಬೇಕಾಗುವುದರಿಂದ ಮೊದಲ ಈ ಐದು ಸೂತ್ರಗಳನ್ನಾದರೂ ಮತ್ತೆ ಮತ್ತೆ ಹೇಳಿ ಹೇಳಿ ಅಭ್ಯಾಸ ಮಾಡಿಕೊಳ್ಳಬೇಕು. ಭೂಮಿಕೆಯಲ್ಲಿ ಖಂಡ 63ರಲ್ಲಿ ತೋರಿಸಿದಂತೆ ಈ ಸೂತ್ರಗಳೂ ಅಧಿಕರಣಗಳೂ ಸೂತ್ರಾಕ್ಷರಗಳೂ ವಾಸುದೇವಾದಿ ಚತುರ್ಮೂರ್ತ್ಯಾತ್ಮಕವಾಗಿರುವುದರಿಂದಲೂ ಅವುಗಳ ಉಚ್ಚಾರಣೆಯೇ ವಿಷ್ಣುಸಹಸ್ರನಾಮ ಪಠಿಸಿದಂತೆ. ಆದಕಾರಣ ಮತ್ತಷ್ಟು ಶ್ರದ್ಧೆಯಿಂದ ಹೇಳಿಕೊಳ್ಳಿ.

18. ಅಣುಭಾಷ್ಯದಲ್ಲಿ ಪಂಚಾಧಿಕರಣೀ : ಇಷ್ಟು ಪೀಠಿಕೆ ಹೇಳಿದ ನಂತರ ಈಗ ಅಣುಭಾಷ್ಯದ ಮೂಲಕ್ಕೆ ಹೋಗೋಣ. ಅದರಲ್ಲಿ—

ವಿಷ್ಣುರೇವ ವಿಜಿಜ್ಞಾಸ್ಯಃ ಸರ್ವಕರ್ತಾಽಽಗಮೋದಿತಃ |
ಸಮನ್ವಯಾ-ದೀಕ್ಷತೇಶ್ಚ

—ಎಂಬ ತ್ರಿಪಾದಿ (ಮುಕ್ಕಾಲು) ಶ್ಲೋಕದಲ್ಲೇ ಪಂಚಾಧಿಕರಣಿಯ ಸಮಸ್ತ ಪ್ರಮೇಯವನ್ನೂ ಸಂಗ್ರಹಿಸಿದ್ದಾರೆ. ಇದರಲ್ಲಿ 'ವಿಷ್ಣುರೇವ ವಿಜಿಜ್ಞಾಸ್ಯಃ' ಎಂಬುದು ಜಿಜ್ಞಾಸಾಧಿಕರಣದ ಸಾರ. 'ಸರ್ವಕರ್ತಾ' ಎಂಬುದು ಜನ್ಮಾಧಿಕರಣದ ಸಾರ. ಹೀಗೆಯೇ 'ಆಗಮೋದಿತಃ ಸಮನ್ವಯಾತ್', 'ಈಕ್ಷತೇಶ್ಚ' ಎಂಬವು ಕ್ರಮವಾಗಿ ಶಾಸ್ತ್ರಯೋನಿತ್ವಾಧಿಕರಣ, ಸಮನ್ವಯಾಧಿಕರಣ ಮತ್ತು ಈಕ್ಷತ್ಯಧಿಕರಣಗಳ ಸಾರ. ಈಗ ಮೊದಲು ಈ ತ್ರಿಪಾದಿ ಶ್ಲೋಕಕ್ಕೆ ಪದಶಃ ಏನರ್ಥ, ನೋಡೋಣ.

19. ಪದಶಃ ಅರ್ಥ : ವಿಷ್ಣುಃ ಏವ = ವಿಷ್ಣುವೊಬ್ಬನೇ, ವಿಷ್ಣು ಮಾತ್ರವೇ, ವಿಜಿಜ್ಞಾಸ್ಯಃ = ಅಧ್ಯಯನ ಶಮದಮಾದಿ ಅಧಿಕಾರವುಳ್ಳವರಿಂದ ಶ್ರವಣ ಮನನಧ್ಯಾನರೂಪ ಜಿಜ್ಞಾಸೆಯಿಂದ ವಿಚಾರ ಮಾಡಲ್ಪಡಬೇಕು. ವೇದಾಧಿಕಾರವಿಲ್ಲದ ಶೂದ್ರಾದಿಗಳಿಗೆ ಜಿಜ್ಞಾಸೆಯಲ್ಲಿ ಅಧಿಕಾರವಿಲ್ಲವೆಂಬುದನ್ನೂ ಮೋಕ್ಷಾಖ್ಯ ಫಲ ಕೇವಲ ಕರ್ಮದಿಂದಲೇ ಸಿದ್ಧಿಸಲಾರದೆಂದೂ ಸೂಚಿಸುವುದಕ್ಕಾಗಿಯೇ ವಿಯನ್ನು ಸೇರಿಸಿ ವಿ-ಜಿಜ್ಞಾಸ್ಯಾಃ ಎಂದಿದ್ದಾರೆ. ಸರ್ವಕರ್ತಾ = ಸರ್ವ-ಚಿದಾಚಿದಾತ್ಮಕವಾದ ಸಕಲ ಜಗತ್ತಿನ ಸೃಷ್ಟ್ಯಾದಿ ಎಂಟನ್ನೂ ಕರ್ತಾ = ಮಾಡುವವನು. ಆಗಮ = ಋಗಾದಿ ಸಕಲ ಸಚ್ಛಾಸ್ತ್ರಗಳಿಂದ, (ಸರ್ವಕರ್ತಾ ಎಂಬುದನ್ನು ಆವೃತ್ತಿ ಮಾಡಿಕೊಳ್ಳಬೇಕು—ವಿಷ್ಣುವೇ ಸಕಲ ಜಗತ್ತಿನ ಸೃಷ್ಟ್ಯಾದ್ಯಷ್ಟಕರ್ತನೆಂದು) ಉದಿತಃ = ಪ್ರತಿಪಾದಿತನಾಗಿದ್ದಾನೆ. ಅದು ಹೇಗೆ ಸಿದ್ಧವಾಗುತ್ತದೆ ಎಂದರೆ 'ಸಮನ್ವಯಾತ್' ಎನ್ನುತ್ತಾರೆ. ಸಮ್ ಎಂದರೆ ಸಮ್ಯಕ್ = ಚೆನ್ನಾಗಿ, ಅನ್ವಯ ಎಂದರೆ ಉಪಕ್ರಮಾದಿ ಲಿಂಗಗಳ ಸಮುದಾಯ, ಅದರಿಂದ ಸಂ = ಚೆನ್ನಾಗಿ ಬಲಾಬಲಗಳ ಪರೀಕ್ಷೆ ಮಾಡಿ ನೋಡಿದರೆ ಎಂದರ್ಥ. ಇದನ್ನು ಹಿಂದಕ್ಕೆ ಜೋಡಿಸಿಕೊಂಡರೆ ಹೀಗೆ ಅರ್ಥವಾಗುತ್ತದೆ—ಸಮನ್ವಯವೆಂಬ ಉಪಕ್ರಮಾದಿ

ಲಿಂಗಗಳಿಂದ ಚೆನ್ನಾಗಿ ವಿಚಾರ ಮಾಡಿದರೆ ಸಕಲಾಗಮಗಳಿಂದಲೂ ವಿಷ್ಣುವೇ ಸಕಲ ಜಗತ್ತಿನ ಸೃಷ್ಟ್ಯಾದ್ಯಷ್ಟಕರ್ತನೆಂದು ಗೊತ್ತಾಗುವುದರಿಂದ ಆ ಲಕ್ಷಣಗಳಿಂದಲೇ ವಿಷ್ಣುವಿನ ವಿಚಾರ ಮಾಡಬೇಕು ಎಂಬುದು ಚತುಸ್ಸೂತ್ರಿಯ ಪಿಂಡಿತಾರ್ಥ.

ಕೆಲವು ವೇದಶಾಖೆಗಳಲ್ಲಿ 'ಆ ಭಗವಂತನು ಅವಾಚ್ಯನೂ, ಅಜ್ಞೇಯ, ರೂಪರಹಿತ, ಸ್ಪರ್ಶಾದಿಗಳಿಗೆ ಅಗೋಚರ' (ಅಶಬ್ದಮಸ್ಪರ್ಶಮರೂಪಮವ್ಯಯಂ, ಕಠೋಪನಿಷತ್ ೩/೧೫; ಅವಚನೇನೈವ ಪ್ರೋವಾಚ-ಬಾಷ್ಕಲ ಶ್ರುತಿ) ಎಂದು ಹೇಳಿರುವುದರಿಂದ, ಸಕಲ ವೇದ ಗಳೂ ಅವನನ್ನೇ ತಿಳಿಸುತ್ತವೆಯೆಂಬುದು ಕೂಡಲಾರದಲ್ಲಾ! ಎಂದು ಆಶಂಕಾಮಾಡಿದರೆ ಐದನೆಯ ಸೂತ್ರ (ಓಂ ಈಕ್ಷತೇರ್ನಾ ಶಬ್ದಮ್ ಓಂ) ಸಮಾಧಾನ ಹೇಳುತ್ತದೆ. ಅದನ್ನೇ ಭಾಷ್ಯಕಾರರು 'ಈಕ್ಷತೇಶ್ಚ' ಎಂಬುದರಿಂದ ಸೂಚಿಸಿದ್ದಾರೆ. ಈಕ್ಷತೇಃ ಎಂಬುದಕ್ಕೆ ಈಕ್ಷಣೀಯತ್ವಾತ್ = ಜ್ಞಾನವಿಷಯನಾದುದರಿಂದ ಎಂದರ್ಥ. ಚ ಶಬ್ದವು ಸಮುಚ್ಚಯಾರ್ಥದಲ್ಲಿ ಪ್ರಯುಕ್ತವಾಗಿದೆ. ಎಂದರೆ ಜ್ಞಾನವಿಷಯನಾದುದರಿಂದಲೇ ಸಮನ್ವಯವೂ ಕೂಡುತ್ತದೆ. ಇಲ್ಲದಿದ್ದರೆ ಅದೇ (ಸಮನ್ವಯವೇ) ಕೂಡುತ್ತಿರಲಿಲ್ಲ ಎಂದು ತೋರಿಸುತ್ತದೆ.

20. ಪಂಚಾಧಿಕರಣಿಯ ಸಾರಾಂಶ : ಈ ಐದೂ ಅಧಿಕರಣಗಳ ಸಾರಾಂಶ ಏನೆಂದರೆ (ಕ) ಬ್ರಹ್ಮನೆಂಬ ಆ ವಿಷ್ಣು ವೇದಗಳಿಂದ ಮಾತ್ರವೇ ತಿಳಿದು ಬರುವ (ಖ) ಜ್ಞಾನಕ್ಕೆ ವಿಷಯನಾದುದರಿಂದ (ಗ) ಅವನೇ ಮುಖ್ಯವೃತ್ತಿಯಿಂದ ಸಕಲ ವೇದಗಳಿಗೂ ಪ್ರತಿಪಾದ್ಯನಾದ ಕಾರಣ (ಘ) ಸಕಲ ಜಗತ್ತುಗಳ ಸೃಷ್ಟ್ಯಾದಿ ಅಷ್ಟಕ್ಕೂ (ಎಂಟಕ್ಕೂ) ಅವನೇ ಮುಖ್ಯಕರ್ತನೆಂಬ ವಿಷಯವನ್ನು (ಙ) ವೇದಾಧ್ಯಯನ ಶಮದಮಾದಿ ಸಂಪತ್ತುಳ್ಳ ಅಧಿಕಾರಿಯು ಮೋಕ್ಷಾಖ್ಯ ಉತ್ತಮೋತ್ತಮ ಫಲವು ವಿಷ್ಣುವಿನ ಅತ್ಯರ್ಥ (ಅತ್ಯುತ್ತಮ) ಪ್ರಸಾದದಿಂದ ಮಾತ್ರವೇ ಲಭಿಸುವುದರಿಂದ ಆ ಭಗವಂತನ ಅತ್ಯರ್ಥ (ಅತ್ಯುತ್ತಮ) ಪ್ರೀತಿಯ ಸಂಪಾದನೆಗಾಗಿ ಶ್ರವಣ ಮನನ ಧ್ಯಾನರೂಪ ಜಿಜ್ಞಾಸೆಯನ್ನು (ವಿಚಾರವನ್ನು) ಮಾಡಿ ತಿಳಿದುಕೊಳ್ಳಬೇಕು— ಎಂಬುದೇ ಮುಖ್ಯಭಾವ. ಈ ವಿಚಾರಗಳೆಲ್ಲ ಮುಂದಿನ ವಿವರಗಳಿಂದ ಹೆಚ್ಚು ಸ್ಫುಟವಾಗುವುವು.

ಮೇಲೆ ಹೇಳಿದ ಸಾರಾಂಶದಲ್ಲಿ ಙ– ಎಂಬ ಭಾಗವೇ ಜಿಜ್ಞಾಸಾಧಿಕರಣದ ವಿಷಯ. ಘ ಎಂಬುದು ಜನ್ಮಾಧಿಕರಣದ ವಿಚಾರ. ಕ ಎಂಬುದು ಶಾಸ್ತ್ರಯೋನಿತ್ವಾಧಿಕರಣದ ಸಾರ. ಗ ವಿಷಯವು ಸಮನ್ವಯಾಧಿಕರಣದ ಪ್ರಮೇಯವಾದರೆ ಖ ಎಂಬುದು ಐದನೇ ಈಕ್ಷತ್ಯಧಿಕರಣದ ಮುಖ್ಯಭಾವ. ಹೀಗೆ ಮುಂದೆ ಮುಂದೆ ಹೇಳುವ ವಿಷಯಗಳೆಲ್ಲ ಹೇಗೆ ಮೊದಲನೆಯ ಮುಖ್ಯ ವಿಷಯವನ್ನು ಪುಷ್ಟೀಕರಿಸುತ್ತವೆಯೆಂಬುದನ್ನು ನಮ್ಮ ಶ್ರೀಮದಾಚಾರ್ಯರು ಉದ್ದಕ್ಕೂ ತೋರಿಸಿಕೊಡುತ್ತಲೇ ಹೋಗುತ್ತಾರೆ. ಅದನ್ನು ನಾವು ಯಥಾಶಕ್ತಿ ಗಮನಿಸುತ್ತಾ ಗ್ರಹಿಸುತ್ತಾ ಹೋಗಬೇಕು. ಹೀಗೆ ವಿಚಾರಪೂರ್ವಕ ಮಥನ ಮಾಡಿ ಮಾಡಿ ತಿಳಿಸಿಕೊಡುವುದರಿಂದಲೇ ಈ ಶಾಸ್ತ್ರಕ್ಕೆ ಮೀಮಾಂಸಾ ಎಂಬ ಹೆಸರು.

ಹೀಗೆ ಪಂಚಾಧಿಕರಣಿಯ ಸ್ಥೂಲ ಪರಿಚಯ ಮಾಡಿಸಿದ ಬಳಿಕ ಈಗ ಐದೂ ಅಧಿಕರಣಗಳ ವಿಶೇಷ ಪರಿಚಯ ಮಾಡಿಸಿ ಈ ವಿಷಯಗಳನ್ನು ಸ್ಫುಟವಾಗಿ ತಿಳಿಸಲು ಪ್ರಯತ್ನಿಸುವೆನು.

21. ಜಿಜ್ಞಾಸಾಧಿಕರಣದ ಮಹತ್ವ : ಏಕಸೂತ್ರವುಳ್ಳ ಈ ಅಧಿಕರಣವು ಬ್ರಹ್ಮಸೂತ್ರಗಳಿಗೆ ಕ್ರಮದಲ್ಲಿ ಹೇಗೆ ಮೊದಲನೆಯದಾಗಿದೆಯೋ ಹಾಗೆಯೇ ಪ್ರಾಮುಖ್ಯತೆಯಲ್ಲೂ ಮಹತ್ವದಲ್ಲೂ ಸರ್ವಪ್ರಥಮವೇ ಆಗಿದೆ. ಶ್ರೀಮಜ್ಜಯತೀರ್ಥರು ರಚಿಸಿದ ಇಡೀ ನ್ಯಾಯಸುಧಾ ಗ್ರಂಥ ಆರುನೂರು ಪತ್ರಗಳಷ್ಟಿದ್ದರೆ ಜಿಜ್ಞಾಸಾಧಿಕರಣವೊಂದೇ ಸುಮಾರು ನೂರು ಪುಟದಷ್ಟಿದೆ. ಇದರಿಂದಲೇ ಈ ಅಧಿಕರಣದ ಮಹತ್ವವೇನೆಂಬುದು ಸೂಚಿತವಾಗುತ್ತದೆ. ಈ ಪ್ರಥಮ ಸೂತ್ರದಲ್ಲೇ ಇಡೀ ಶಾಸ್ತ್ರದ ನಾಲ್ಕು ಅಧ್ಯಾಯಗಳ ಸಾರವೂ ಅಡಗಿದೆ ಅಥವಾ ಪ್ರಥಮ ಸೂತ್ರದಲ್ಲಿರುವ ನಾಲ್ಕು ಪದ(ಶಬ್ದ)ಗಳ ವಿವರಣೆಯೇ ನಾಲ್ಕು ಅಧ್ಯಾಯಗಳೆಂದು ಭಾಷ್ಯಕಾರರು ಅಲ್ಲಲ್ಲೇ ತೋರಿಸಿಕೊಡುತ್ತಾ ಹೋಗಿದ್ದಾರೆ. ಆದಕಾರಣ ಈ ಜಿಜ್ಞಾಸಾಧಿಕರಣದ ಮುಖ್ಯ ವಿಚಾರಗಳನ್ನು ಸ್ವಲ್ಪ ವಿಸ್ತರಿಸಿ ಹೇಳುತ್ತಾ ಪ್ರಥಮ ಸೂತ್ರದ ಅರ್ಥವನ್ನೂ ಸಂಕ್ಷೇಪವಾಗಿ ಹೇಳುತ್ತೇನೆ. ಈ ಒಂದು ಸೂತ್ರದ ಅರ್ಥಜ್ಞಾನವೇ ಮುಂದಿನ ವಿಚಾರಗಳನ್ನು ಮನನ ಮಾಡಿಕೊಳ್ಳಲು ಬಹಳ ಸಹಕಾರಿಯಾಗುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

22. ಪ್ರಥಮ ಸೂತ್ರದ ನಾಲ್ಕು ಪದಗಳು : ಹಿಂದೆ (ಖಂಡ 16) ತಿಳಿಸಿದಂತೆ 'ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ' ಎಂಬುದೇ ಪ್ರಥಮ ಸೂತ್ರ. ಶ್ರೀಮಧ್ವಾಚಾರ್ಯರಲ್ಲದೆ ಬೇರೆ ಯಾವ ಭಾಷ್ಯಕಾರರೂ ಸೂತ್ರದಲ್ಲಿ ಓಂಕಾರ ಗ್ರಹಣ ಮಾಡುವುದಿಲ್ಲ. ಓಂಕಾರವನ್ನು ಬಿಡಿಯಾಗಿಯೇ ಹೇಳಬೇಕು. ಮುಂದಿನ ಅಥ ಶಬ್ದದೊಡನೆ ಸೇರಿಸಿ ಓಮಥಾತೋ ಎಂದು ಪಾಠ ಮಾಡುವಂತಿಲ್ಲ. ಹೀಗೇಕೆ ಬಿಡಿಸಿ ಹೇಳಬೇಕೆಂದರೆ ಪ್ರತಿಸೂತ್ರದಲ್ಲೂ ಪ್ರಾರಂಭದಲ್ಲೂ ಕೊನೆಯಲ್ಲೂ ಸೇರಿಸಿಕೊಳ್ಳಬೇಕೆಂದು ಸೂಚಿಸುವುದಕ್ಕಾಗಿ ಬಿಡಿಸಿ ಹೇಳಬೇಕೆನ್ನುತ್ತಾರೆ. (ಪೃಥಗೋಕ್ರಿಯತೇ–ಅನುವ್ಯಾಖ್ಯಾನ). ಹೀಗೆ ಮೊದಲನೆಯ ಓಂ ಎಂಬುದು ಮಾತ್ರ ಒಂದು ಪದ. ಅದಕ್ಕೆ ದೃಷ್ಟ ಅದೃಷ್ಟ ಎರಡೂ ಅರ್ಥವುಂಟು. ಎರಡನೆಯ ಓಂಕಾರ ಸೂತ್ರದ ಅಂಗವಲ್ಲ. ಅಥ, ಅತಃ, ಬ್ರಹ್ಮಜಿಜ್ಞಾಸಾ ಎಂದು ಪದಚ್ಛೇದ. ಬ್ರಹ್ಮಜಿಜ್ಞಾಸಾ ಎಂಬುದು ಸಮಾಸಪದ; ಅದರಲ್ಲಿ ಪುನಃ ಎರಡು ಪದಗಳಿವೆ—ಬ್ರಹ್ಮ, ಜಿಜ್ಞಾಸಾ, ಬ್ರಹ್ಮಣೋ ಜಿಜ್ಞಾಸಾ = ಬ್ರಹ್ಮಜಿಜ್ಞಾಸಾ ಎಂದು ಷಷ್ಠೀತತ್ಪುರುಷ ಸಮಾಸ. (ಷಷ್ಠೀಗೆ ವ್ಯಾಕರಣರೀತ್ಯಾ ಅನೇಕ ಅರ್ಥಗಳಿದ್ದರೂ ಈ ಸಮಾಸದಲ್ಲಿ ಕರ್ಮಣಿ ಷಷ್ಠಿ ಎಂದೇ ಹೇಳಬೇಕೆಂಬ ವಿಚಾರವನ್ನು ಸುಧಾದಲ್ಲೂ ಚಂದ್ರಿಕಾದಲ್ಲೂ ಸ್ಪಷ್ಟಪಡಿಸಿದ್ದಾರೆ.) ಈ ಪ್ರಕಾರ ಬ್ರಹ್ಮಜಿಜ್ಞಾಸಾ ಎಂಬುದನ್ನು ಒಂದು ಪದವೆಂದು ಗ್ರಹಣ ಮಾಡಿದರೆ ಈ ಸೂತ್ರದಲ್ಲಿ ನಾಲ್ಕು ಪದಗಳಿವೆಯೆಂದಾಗುತ್ತದೆ; ಬ್ರಹ್ಮ ಜಿಜ್ಞಾಸಾ ಎರಡೂ ಬೇರೆ ಪದಗಳೆಂದು ಗ್ರಹಣ ಮಾಡಿದರೆ ಐದು ಪದಗಳಾಗುತ್ತವೆ.

23. ನಾಲ್ಕು ಪದಗಳಲ್ಲಿ ಓಂಕಾರಾರ್ಥ : ಸೂತ್ರಕ್ಕೆ ಪ್ರಾರಂಭದಲ್ಲಿರುವ ಓಂಕಾರವು ದೃಷ್ಟಾದೃಷ್ಟಾರ್ಥವೆಂದು ಎರಡು ಅರ್ಥವುಳ್ಳದ್ದೆಂದು ಹಿಂದೆಯೇ (ಖಂಡ 22) ಹೇಳಿದ್ದೇವೆ. ಓಂಕಾರವೂ ಅಥ ಶಬ್ದವೂ ಸೂತ್ರಕ್ಕೆ ಮಂಗಳಾರ್ಥಕವಾಗಿವೆಯೆಂದು ಸುಧಾಕಾರರು ತೋರಿಸಿಕೊಟ್ಟಿದ್ದಾರೆ. (ಭೂಮಿಕೆ ಖಂಡ 44 ನೋಡಿ) ಮಂಗಳರೂಪವಾಗಿರುವುದೇ ಅದೃಷ್ಟಾರ್ಥ. ಅಲ್ಲದೆ 'ಪ್ರವತ್ಯನೋಂಕೃತಂ ಬ್ರಹ್ಮ' ಎಂದು ಹೇಳಿರುವುದರಿಂದ (ಭೂಮಿಕೆ ಖಂಡ 44) ಸೋರಿ ಹೋಗದಂತೆ ತಡೆದು ನಿಲ್ಲಿಸುವುದೂ ಒಂದು ಅದೃಷ್ಟಾರ್ಥವೇ. ಇನ್ನು ಯೌಗಿಕವಾಗಿ

(ಎಂದರೆ ವ್ಯುತ್ಪತ್ತಿ ದೃಷ್ಟಿಯಿಂದ) ಓಂಕಾರವು ಗತ್ಯರ್ಥಕವಾದ ಅವಧಾತುವಿಗೆ ಮನಿನ್ ಪ್ರತ್ಯಯ ಸೇರಿ ನಿಷ್ಪನ್ನವಾಗಿರುವುದರಿಂದ ಇದು, ಅನುವ್ಯಾಖ್ಯಾನದಲ್ಲಿ (ಜಿಜ್ಞಾಸಾಧಿಕರಣ ಶ್ಲೋ.9) ಹೇಳಿದಂತೆ.

ಓ ತತ್ವವಾಚೀ ಹ್ಯೋಂಕಾರೋ ವಕ್ತ್ಯಸೌ ತದ್ಗುಣೋತತಾಮ್—ವಿಷ್ಣು ಅಥವಾ ನಾರಾಯಣನೆಂಬ ಬ್ರಹ್ಮನ ಗುಣಪೂರ್ಣತ್ವವನ್ನು ಹೇಳುತ್ತದೆ. (ಅನುವ್ಯಾಖ್ಯಾನಕ್ಕೆ ಅರ್ಥ—ಹ್ಯೋಂಕಾರೋ ಎಂಬಲ್ಲಿ ಹಿ, ಓಂಕಾರಃ ಎಂದೂ, ವಕ್ತ್ಯಸೌ ಎಂಬಲ್ಲಿ ವಕ್ತಿ, ಅಸೌ ಎಂದೂ ಪದಚ್ಛೇದ. ಹಿ=ಯಾವ ಕಾರಣದಿಂದ, ಓಂಕಾರಃ=ಪ್ರಣವವು, ಓತತ್ವವಾಚೀ=ಹೋಗು ವಿಕೆಯನ್ನು ಅಥವಾ ಹಾಸುಹೊಕ್ಕಾಗಿ ಹೆಣೆದುಕೊಂಡಿರುವಿಕೆಯನ್ನು ಹೇಳುತ್ತದೋ, ಆದ್ದ ರಿಂದ, ಅಸೌ ಇದು ತತ್=ಅವನ (ಜಿಜ್ಞಾಸ್ಯನಾದ ಬ್ರಹ್ಮನ) ಗುಣ=ಆನಂದಾದ್ಯನಂತಕಲ್ಯಾಣ ಗುಣಗಳಿಂದ ಓತತಾಂ=ಪ್ರವಿಷ್ಟತ್ವವನ್ನು (ಎಂದರೆ ಆನಂದಾದಿ ಅನಂತ ಕಲ್ಯಾಣಗುಣಗಳು ತುಂಬಿತುಳುಕಾಡುತ್ತಿವೆಯೆಂಬುದನ್ನು ಅಥವಾ ಬಟ್ಟೆಯಲ್ಲಿ ನೂಲುಗಳು ಹಾಸುಹೊಕ್ಕಾಗಿ ಹೆಣೆದುಕೊಂಡಿರುವಂತೆ) ಅನಂತ ಗುಣಗಳು ಅವನಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ ಎಂಬುದನ್ನು ವಕ್ತಿ- ಹೇಳುತ್ತದೆ. ತಾತ್ಪರ್ಯವೇನೆಂದರೆ ಬಟ್ಟೆಯಲ್ಲಿ ನೂಲುಗಳು ಹಾಸು ಹೊಕ್ಕಾಗಿ ಹೆಣೆದುಕೊಂಡಿರುವ ಜ್ಞಾನಾನಂದಾದಿ ಅನಂತ ಕಲ್ಯಾಣ ಗುಣಗಳು ಒಂದೊಂದೂ ಅನಂತವಾಗಿ, ಅಪಾರವಾಗಿ, ನಿರವಧಿಕವಾಗಿ ಹೆಣೆದುಕೊಂಡಿವೆ ಎಂಬ ಅರ್ಥವನ್ನು ಓಂಕಾರ ತಿಳಿಸುತ್ತದೆ.

ಇದೇ ರೀತಿ ಬ್ರಹ್ಮ ಶಬ್ದವೂ ಗುಣೋತತ್ವವನ್ನೇ ಹೇಳುವುದರಿಂದಲೂ ನಾರಾಯಣ ಶಬ್ದಾರ್ಥವೂ ಅದೇ ಆದ್ದರಿಂದಲೂ ಓಂಕಾರವೂ ಬ್ರಹ್ಮಶಬ್ದವೂ ನಾರಾಯಣನನ್ನೇ ಹೇಳು ತ್ತವೆ ಎಂದೂ ಭಗವಾನ್ ಭಾಷ್ಯಕಾರರು ಅನುವ್ಯಾಖ್ಯಾನದಲ್ಲಿ (ಅಲ್ಲೇ, ಶ್ಲೋ. ೯) ತೋರಿಸಿ ಕೊಡುತ್ತಾರೆ—

ಓತತ್ವವಾಚೀ ಹ್ಯೋಂಕಾರೋ ವಕ್ತ್ಯಸೌ ತದ್ಗುಣೋತತಾಮ್ |
ಸ ಏವ ಬ್ರಹ್ಮಶಬ್ದಾರ್ಥೋ ನಾರಾಯಣಪದೋದಿತಃ ||

(ವಾಕ್ಯಕ್ಕೆ ಅರ್ಥ) ಹಿ=ಯಾವ ಕಾರಣದಿಂದ ಓಂಕಾರವು ಪ್ರವಿಷ್ಟತ್ವವನ್ನು ಹೇಳುತ್ತಾ ಗುಣೋತತ್ವವನ್ನೂ ಹೇಳುವುದೋ, ಆದ್ದರಿಂದಲೇ ಸಃ ಏವ = ಅದೇ ಎಂದರೆ (ಗುಣೋತತ್ವ ವನ್ನು ಹೇಳುವ) ಓಂಕಾರವೇ; ಬ್ರಹ್ಮಶಬ್ದಾರ್ಥಃ=ಬ್ರಹ್ಮಶಬ್ದಾರ್ಥವೂ ಆಗಿದೆ. ಸಃ ಏವ (ಎಂದು ಆವೃತ್ತಿ ಮಾಡಿಕೊಳ್ಳಬೇಕು) = ಅದೇ (ಓಂಕಾರಾರ್ಥವೇ) ನಾರಾಯಣ ಪದೋದಿತಃ = ನಾರಾಯಣ ಪದದಿಂದಲೂ ಹೇಳಲ್ಪಡುತ್ತದೆ. ಹೀಗೆ ಓಂಕಾರವೂ ಬ್ರಹ್ಮ ಶಬ್ದವೂ ನಾರಾಯಣಪದವೂ ಗುಣೋತತ್ವವನ್ನೇ ಹೇಳುವುದರಿಂದ ಸಮಾನಾರ್ಥಕಗಳು—ಪರ್ಯಾಯ ಪದಗಳು ಎಂದು ಹೇಳಿದಂತಾಯಿತು.

ಈ ಸೂತ್ರದಲ್ಲಿ ಓಂಕಾರವನ್ನು 'ಬ್ರಹ್ಮ' ಶಬ್ದಕ್ಕೆ ವಿಶೇಷಣವೆಂದಾದರೂ ತೆಗೆದುಕೊಳ್ಳ ಬಹುದು ಅಥವಾ ಓಂಕಾರವು ನಾರಾಯಣವಾಚಿಯಾದ್ದರಿಂದ ಅದೇ ವಿಶೇಷ್ಯ ಎಂದೂ ತೆಗೆದುಕೊಳ್ಳಬಹುದು. ಆಗ ಬ್ರಹ್ಮ ಶಬ್ದವು ಇದಕ್ಕೆ ವಿಶೇಷಣವಾಗುತ್ತದೆ. ಇದೇ ರೀತಿ ಈ

ಓಂಕಾರಕ್ಕೆ 'ಪರಿಮಳ' ಟಿಪ್ಪಣಿಯಲ್ಲಿ ಮಂತ್ರಾಲಯದ ರಾಯರು 'ಪಂಚ ಪ್ರಯೋಜನ'ವನ್ನು ತೋರಿಸಿಕೊಡುತ್ತಾರೆ. ಅವೆಲ್ಲ ಸಾಮಾನ್ಯಮಟ್ಟದ ಜನರಿಗೆ ಎಟುಕದ ಹೆಚ್ಚಿನ ವಿಚಾರಗಳಾದ್ದರಿಂದ ಇಲ್ಲಿ ಹೇಳಿಲ್ಲ.

24. ಅಥ ಶಬ್ದಾರ್ಥ : ಓಂಕಾರವು ಸೂತ್ರಾವಯವವೆಂಬುದನ್ನು ಇತರ ಭಾಷ್ಯಕಾರರು ಒಪ್ಪುವುದಿಲ್ಲವಾದರೂ ಅಥ ಶಬ್ದದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಅರ್ಥದ ಬಗ್ಗೆ ಮಾತ್ರ ಭಿನ್ನಾಭಿಪ್ರಾಯಗಳಿವೆ. ಕೆಲವರು ಕೇವಲ ಮಾಂಗಲಿಕ ಎನ್ನುತ್ತಾರೆ. ಆದರೆ ಪೂರ್ಣಪ್ರಜ್ಞರು ಗರುಡ ಪುರಾಣೋಕ್ತ ಪ್ರಮೇಯವನ್ನನುಸರಿಸಿ ಅಥ ಶಬ್ದೋ ಮಂಗಳಾರ್ಥೋಽಧಿಕಾರಾನಂತರ್ಯಾರ್ಥಶ್ಚ ಎಂದು ಭಾಷ್ಯದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಓಂಕಾರವೂ ಅಥ ಶಬ್ದವೂ ಸೃಷ್ಟಿಕಾಲದಲ್ಲಿ ಪರಮಾತ್ಮನ ಬಾಯಿಂದ ಮೊಟ್ಟಮೊದಲು ಹೊರಟ ಕಾರಣ ಇವೆರಡಕ್ಕೂ ಪ್ರಾಧಾನ್ಯತೆಯುಂಟು. ಇವೆರಡೂ ಉಚ್ಚಾರಣೆ ಮಾತ್ರದಿಂದ ಮಂಗಳದ್ಯೋತಕಗಳೂ ಆಗಿವೆ. ಅಥ ಶಬ್ದವು ಮಂಗಳಾರ್ಥವಲ್ಲದೆ 'ಅಧಿಕಾರಪ್ರಾಪ್ತಿಯಾದ ನಂತರ' ಎಂಬ ಅರ್ಥವನ್ನೂ ಹೇಳುತ್ತದೆ. ಅಲ್ಲದೆ ಸ್ವರೂಪತಃ ಕೂಡ ಅಥ ಶಬ್ದಕ್ಕೂ ಅತಃ ಶಬ್ದಕ್ಕೂ ಶ್ರೇಷ್ಠತೆಯಿದೆ. ಹೇಗೆಂದರೆ 'ಅ ಇತಿ ಬ್ರಹ್ಮ' ಎಂದು ಐತರೇಯೋಪನಿಷತ್ತು (೨ ಆ, ೩ ಅಧ್ಯಾ. ೮ ಖಂಡ) ಹೇಳುವಂತೆ ಅಕಾರವು ಪರಬ್ರಹ್ಮನನ್ನೇ ಹೇಳುತ್ತದೆ. ಸ್ಥಾ-ಧಾತುವಿನ ರೂಪಾಂತರವಾದ ಥ ಕಾರವು ಪ್ರಾಣನಿಯಾಮಕನಾದವನೆಂಬುದನ್ನೂ ಶಶ್ವದೇಕ ಪ್ರಕಾರವಾಗಿಯೇ (ಯಾವ ಕಾಲಕ್ಕೂ ಯಾವ ವಿಧವಾದ ವಿಕಾರವೂ ಇಲ್ಲದವನಾಗಿಯೇ) ಇರತಕ್ಕವನು ಎಂಬುದನ್ನೂ (ಅವಿಕಾರೇಣ) 'ಅ' 'ಇತಿ ಬ್ರಹ್ಮ' ಎಂದು ಐತರೇಯೋಪನಿಷತ್ತು (೨ ಆ. ೩ ಅಧ್ಯಾ. ೮೩೦) ಹೇಳುವಂತೆ ಅ ಕಾರವು ಪರಬ್ರಹ್ಮನನ್ನೇ ಹೇಳುತ್ತದೆ. ಸ್ಥಾ ಧಾತುವಿನ ರೂಪಾಂತರವಾದ ಥ ಕಾರವು ಪ್ರಾಣನಿಯಾಮಕನಾದವನೆಂಬುದನ್ನೂ ಶಶ್ವದೇಕ ಪ್ರಕಾರವಾಗಿಯೇ (ಯಾವ ಕಾಲಕ್ಕೂ ಯಾವ ವಿಧವಾದ ವಿಕಾರವೂ ಇಲ್ಲದವನಾಗಿಯೇ) ಇರತಕ್ಕವನು ಎಂಬುದನ್ನೂ (ಅವಿಕಾರಣಸ್ಥಿತಿಯನ್ನೂ) ಹೇಳುತ್ತದೆ. 'ತನು ವಿಸ್ತಾರೆ' ಎಂಬ ಧಾತುವಿನ ರೂಪವಾದ ತ ಕಾರವು ದೇಶಕಾಲ ಗುಣಗಳ ವ್ಯಾಪ್ತಿಯನ್ನು ಹೇಳುತ್ತದೆ. ಇವಿಷ್ಟೂ ಗರುಡಪುರಾಣದಲ್ಲಿ ಹೇಳಿದ ಪ್ರಮೇಯಗಳಾಗಿವೆ.

25. ಅಧಿಕಾರಾನಂತರ್ಯಾರ್ಥ : ಅಥ ಶಬ್ದವು ಸೂಚಿಸುವ ಅಧಿಕಾರವು ಮಂದ ಮಧ್ಯಮ ಉತ್ತಮ ಎಂದು ಮೂರು ವಿಧವಾಗಿದೆ. ಸಂಸಾರದಲ್ಲಿ ವಿರಕ್ತಿ ಹೊಂದಿ ಭಗವಂತನಲ್ಲಿ ಭಕ್ತಿಯ ನಿಷ್ಠೆಯುಳ್ಳ ವೇದಾಧ್ಯಯನಸಂಪನ್ನರಾದ ಮನುಷ್ಯೋತ್ತಮರು ಅಧಮಾಧಿಕಾರಿಗಳು. ಅವುಗಳ (ಆ ಗುಣಗಳ ಜೊತೆಗೆ) ಜೊತೆ ಶಮ ದಮಾದಿ ಗುಣವುಳ್ಳ ಋಷ್ಯಾದಿಗಳು ಮಧ್ಯಮಾಧಿಕಾರಿಗಳು. ಶಮ ಎಂದರೆ ಭಗವನ್ನಿಷ್ಠೆ ಅಥವಾ ಶ್ರೀಹರಿಯೇ ಸರ್ವವಿಧದಲ್ಲೂ ರಕ್ಷಿಸುತ್ತಾನೆಂಬ ಅಚಲವಾದ ವಿಶ್ವಾಸ. ದಮ ಎಂದರೆ ಇಂದ್ರಿಯ ನಿಗ್ರಹ. ವಿಷ್ಣು ಭಿನ್ನ ಸಮಸ್ತ ಜಗತ್ತೂ ನಿಸ್ಸಾರವಾದುದು, ಅನಿತ್ಯವಾದುದೆಂಬುದನ್ನು ಮನಗಂಡು ಅದರಲ್ಲಿ ಸಂಪೂರ್ಣ ವಿರಕ್ತಿಯನ್ನು ಹೊಂದಿ, ಕೇವಲ ವಿಷ್ಣುಪಾದಾರವಿಂದವೇ ಗತಿಯೆಂದು ನಿಶ್ಚಲವಾಗಿ ನಂಬಿಕೆಯುಳ್ಳ ದೇವತೆಗಳೇ ಮುಖ್ಯಾಧಿಕಾರಿಗಳು. ಅಂತೂ ಒಟ್ಟಿನಲ್ಲಿ ಅಥ ಎಂದರೆ ಅಧ್ಯಯನ

ಶಮದಮಾದಿ ಅಧಿಕಾರವು ಲಭಿಸಿದ ಅನಂತರ ಎಂದರ್ಥವಾಗುತ್ತದೆ (ಈ ಅಧಿಕಾರವನ್ನೇ ತೃತೀಯಾಧ್ಯಾಯದ ಪ್ರಥಮ ದ್ವಿತೀಯ ಪಾದಗಳಲ್ಲಿ ವಿವರಿಸಿ ಹೇಳಿದೆ.)

26. ಅತಶ್ಶಬ್ದವಿಚಾರ : ಕೇವಲ ಬ್ರಹ್ಮಸೂತ್ರಗಳೇ ಅಲ್ಲ, ಪ್ರಾಯಶಃ ಸಕಲ ಸೂತ್ರಗಳೂ ಅಥ-ಅತಃ ಶಬ್ದಗಳಿಂದಲೇ ಆರಂಭವಾಗುತ್ತವೆ. (ಉದಾಹರಣೆಗೆ ಅಥಾತೋ ಧರ್ಮಜಿಜ್ಞಾಸಾ, ಅಥಾತೋ ದೈವೀಮೀಮಾಂಸಾ, ಅಥಾತೋ ಧರ್ಮವ್ಯಾಖ್ಯಾಸ್ಯಾಮಃ, ಅಥಾತಃ ಸಾಮಯಾಚಾರಿತಾನ್ ಧರ್ಮಾನ್ ವ್ಯಾಖ್ಯಾಸ್ಯಾಮಃ ಇತ್ಯಾದಿ) ಹೀಗೇಕೆ ಎಲ್ಲರೂ ಸೂತ್ರಗಳನ್ನು 'ಅಥಾತಃ' ಶಬ್ದಗಳಿಂದಲೇ ಆರಂಭಿಸುತ್ತಾರೆ ಎಂದು ನಾರದರು ಬ್ರಹ್ಮದೇವರನ್ನು ಕೇಳಲು ಬ್ರಹ್ಮದೇವರು ಸಮಾಧಾನ ಹೇಳುತ್ತಾರೆ. (ಇದೂ ಗರುಡ ಪುರಾಣದ ಪ್ರಮೇಯವೇ) ಓಂಕಾರಕ್ಕೂ ಅಥ ಶಬ್ದಕ್ಕೂ ಮೂರನೆಯದಾಗಿ ಅತಃ ಶಬ್ದವು ಪರಬ್ರಹ್ಮನಿಂದ ಹೊರಟಿತು. ಆದ್ದರಿಂದ ಇದಕ್ಕೆ ಪ್ರಾಶಸ್ತ್ಯ ಬಂದಿದೆ. ಅಲ್ಲದೇ ಇದು ಕಾರಣವನ್ನು ತೋರಿಸುವುದರಿಂದಲೂ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಸ್ವರೂಪದಿಂದಲೂ ಇದಕ್ಕೆ ಶ್ರೇಷ್ಠತ್ವವಿದೆ. ಮೊದಲನೆಯ **ಅ**-ಕಾರವು ಪರಬ್ರಹ್ಮನನ್ನು ಹೇಳಿದರೆ ಎರಡನೆಯ **ತ**-ಕಾರವು ತನು ವಿಸ್ತಾರೇ ಎಂಬ ಧಾತುವಿನ ರೂಪವಾದ್ದರಿಂದ ಆ ಪರಬ್ರಹ್ಮನ (ವಿಷ್ಣುವಿನ) ದೇಶತಃ ಕಾಲತಃ ವ್ಯಾಪ್ತಿಯನ್ನು ಹೇಳುತ್ತದೆ. ಈ ಕಾರಣಗಳಿಂದ ಮಹಾಪ್ರಾಜ್ಞರು ಸೂತ್ರಗಳನ್ನು ಅಥ-ಅತಃ ಶಬ್ದಪೂರ್ವಕವಾಗಿಯೇ ಆರಂಭಿಸುತ್ತಾರೆ ಎಂಬುದು ನಾರದರಿಗೆ ಬ್ರಹ್ಮದೇವರು ಹೇಳಿದ ಸಮಾಧಾನ. ಇನ್ನು ಅತಃ ಶಬ್ದದ ಅರ್ಥಕ್ಕೆ ಹೋಗೋಣ.

27. ಅತಶ್ಶಬ್ದಾರ್ಥ : ವ್ಯಾಕರಣ ರೀತ್ಯಾ ಅತಃ ಶಬ್ದವು ಏತದ್ ಶಬ್ದದ ಅವ್ಯಯರೂಪ. ಏತಚ್ಛದ ಮೇಲೆ 'ಪಂಚಮ್ಯಾಸ್ತಸಿಲ್' (ಪಾ. ೫.೩.೭) ಎಂಬ ಸೂತ್ರದಂತೆ ಪಂಚಮ್ಯರ್ಥದಲ್ಲಿ ತಸಿಲ್ (ತಃ) ಪ್ರತ್ಯಯ ಬಂದಾಗ 'ಏತದೋಽನ್' (ಪಾ.೫/೩/೫) ಎಂಬ ಸೂತ್ರದಂತೆ ಏತದ್‌ಗೆ ಅ(ನ್) ಆದೇಶ ಬರುವುದರಿಂದ (ಏತದ್-ತಃ=ಅನ್+ತಃ) ಅತಃ ಎಂದಾಗುತ್ತದೆ. ಆದರೆ ಗರುಡಪುರಾಣದಲ್ಲಿ ಹೇಳಿದಂತೆ ಅಕಾರವು ಪರಬ್ರಹ್ಮನ(ವಿಷ್ಣುವ)ನ್ನು ಹೇಳುವುದರಿಂದಲೂ ತಸಿಲ್ (ತಃ) ಪ್ರತ್ಯಯಕ್ಕೆ ಪಂಚಮೀ ಅರ್ಥವಿರುವುದರಿಂದಲೂ ಅತಃ ಎಂದರೆ ಅಕಾರ ಶಬ್ದವಾಚ್ಯನಾದ ಪ್ರಸನ್ನನಾದ ಶ್ರೀವಿಷ್ಣುವಿನ ದೆಸೆಯಿಂದ ಎಂದರೆ ಅಕಾರವಾಚ್ಯನಾದ ಪ್ರಸನ್ನನಾದ ವಿಷ್ಣುವಿನ ಅತ್ಯರ್ಥಪ್ರಸಾದದಿಂದಲೇ ಮೋಕ್ಷವು ದೊರಕುವುದರಿಂದ ಎಂಬ ಅರ್ಥವು ಪ್ರಮಾಣಗಳ ಆಧಾರದಿಂದ ಲಭಿಸುತ್ತದೆ. ಅವನ ಆ ಅತ್ಯರ್ಥಪ್ರಸಾದವು ಜ್ಞಾನದಿಂದಲೇ ಲಭಿಸುತ್ತದೆ. ಆ ಜ್ಞಾನವು ವೇದಾಧ್ಯಯನಗಳಿಂದಲೇ ಲಭಿಸುತ್ತದೆ. ಹೀಗೆ ಅತಃ ಎಂದರೆ ಪರಂಪರಯಾ - ವೇದಾಧ್ಯಯನಜನ್ಯ - ವಿಷ್ಣು (ಅತ್ಯರ್ಥ) ಪ್ರಸಾದಜನ್ಯ - ಮೋಕ್ಷಾಖ್ಯಫಲ (ಯುಕ್ತತ್ವಾತ್ ಅಥವಾ) ಸದ್ಭಾವಾತ್ ಎಂದರ್ಥವಾಗುತ್ತದೆ. ವೇದಾಧ್ಯಯನದಿಂದಲೇ ಅಪರೋಕ್ಷಜ್ಞಾನ ಸಿದ್ಧಿ, ಅದರಿಂದ ವಿಷ್ಣುವಿನ ಅತ್ಯರ್ಥಪ್ರಸಾದ ಸಿದ್ಧಿ, ಅದರಿಂದಲೇ ಮೋಕ್ಷವು ದೊರಕುವುದರಿಂದ ಎಂದು ಅನೇಕ ಕಾರಣಗಳನ್ನು ಅತಃ ಶಬ್ದವು ತಿಳಿಸುತ್ತದೆ.

ಅನುವ್ಯಾಖ್ಯಾನದಲ್ಲಿ ಅತಃ ಶಬ್ದಾರ್ಥವನ್ನೇ ಎಪ್ಪತ್ತು ಶ್ಲೋಕಗಳಲ್ಲಿ ವಿಸ್ತರಿಸಿದ್ದಾರೆ.

ಇದರ ವಿವರಣೆ ಸುಧಾದಲ್ಲಿ ಸುಮಾರು ಎಪ್ಪತ್ತೈದು ಪತ್ರದಷ್ಟು ಆಗಿದೆ. ಅದರ ಸಾರಾಂಶವೆಂದರೆ (1) ಜ್ಞಾನಪ್ರಸಾದದ್ವಾರಾ ಮುಕ್ತಿರೂಪ ಫಲವಿರುವುದರಿಂದಲೂ, (2) ಬಂಧವು ಸತ್ಯವಾದ್ದರಿಂದಲೂ, (3) ವೇದವು ಸಿದ್ಧಾರ್ಥವನ್ನು ಹೇಳುವುದರಿಂದಲೂ, (4) ವೇದವು ಪ್ರಮಾಣವಾದ್ದರಿಂದಲೂ ಮತ್ತು (5) ವೇದವು ಅನ್ವಿತಾಭಿಧಾಯಿಯಾಗಿರುವುದರಿಂದಲೂ ಎಂದು ಅತಃ ಶಬ್ದಕ್ಕೆ ಐದು ವಿಧ ಅರ್ಥವಾಗುತ್ತದೆಯೆಂದು 'ಪರಿಮಳ'ದಲ್ಲಿ ದಿಗ್ದರ್ಶನ ಮಾಡಿಸಿದ್ದಾರೆ.

28. ಇದಕ್ಕೂ ಹೆಚ್ಚಿನ ವಿವರಣೆ : ಸ್ವಯಂ ನಾರಾಯಣನೇ ಅತಶ್ಶಬ್ದದಲ್ಲಿ ಗುಂಫಿತವಾದ ಪ್ರಮೇಯಗಳನ್ನು 'ಬ್ರಹ್ಮತರ್ಕ'ವೆಂಬ ಗ್ರಂಥದಲ್ಲಿ ವಿಸ್ತರಿಸಿ ಹೇಳಿದ್ದಾನೆ. ಅದು ಐವತ್ತು ಕೋಟಿಯಷ್ಟು ವಿಸ್ತಾರವಾಗಿದೆ. ಅದನ್ನು ಗ್ರಹಿಸಲು ಅಸಮರ್ಥರಾದ ಮಂದಾಧಿಕಾರಿಗಳಿಗಾಗಿ ವೇದವ್ಯಾಸರು, ಐವತ್ತು ಕೋಟಿ ಗ್ರಂಥದಲ್ಲಿ ಹೇಳಿದ ಪ್ರಮೇಯಗಳನ್ನೇ ಉದ್ಧರಿಸಿ (ಸಂಗ್ರಹಿಸಿ), ಐದು ಸಾವಿರ ಗ್ರಂಥವುಳ್ಳ ಚಿಕ್ಕ ಬ್ರಹ್ಮತರ್ಕವನ್ನು ರಚಿಸಿದರು; ಅದರಲ್ಲೂ ಸಾಕಷ್ಟು ವಿವರಿಸಿದ್ದಾರೆ. ಆದರೆ ತರ್ಕಶಾಸ್ತ್ರಕ್ಕೆ ಸಂಬಂಧಪಟ್ಟ ಕಾರಣವೂ, ತರ್ಕವು ಮೀಮಾಂಸಾಶಾಸ್ತ್ರಕ್ಕೆ ಅಂಗವಾದ ಕಾರಣವೂ ಈ ಮೀಮಾಂಸಾ ಶಾಸ್ತ್ರದಲ್ಲಿ ಅದನ್ನು ವಿಸ್ತರಿಸುವುದು ಅಸಂಗತವೆಂದು ತಿಳಿದು ಅಲ್ಲಿ (ಬ್ರಹ್ಮತರ್ಕದಲ್ಲಿ) ಹೇಳಿದ ಸಕಲ ಪ್ರಮೇಯಗಳನ್ನು 'ಅತಃ' ಎಂಬ ಎರಡು ಅಕ್ಷರಗಳಲ್ಲೇ ಸಂಗ್ರಹಿಸಿದ್ದಾರೆಂದು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ (ಜಿಜ್ಞಾ. ಅಧಿ. ೩೪-೩೮ ಶ್ಲೋ) ಹೇಳಿದ್ದಾರೆ—

ಏತತ್ ಸರ್ವಂ ತರ್ಕಶಾಸ್ತ್ರೇ ಬ್ರಹ್ಮತರ್ಕೇ ವಿಸ್ತರಾತ್ |
ಉಕ್ತಂ, ವಿದ್ಯಾಪೃಥಕ್ತ್ವಾತ್ ತು ಸಂಕ್ಷೇಪೇಣಾತ್ರ ಸೂಚಿತಮ್ || ೩೪ ||
ಏತದ್-ತಃ=ಅನ್-ತಃ ಅತಸ್ತದರ್ಥಂ ಸಂಕ್ಷೇಪಾ - ದತ ಇತ್ಯಭ್ಯಸೂಚಯತ್ ||

ಹೀಗೆ ಸಂಕ್ಷೇಪ ಮಾಡಿ ಹೇಳಿದ್ದಕ್ಕೆ ಇನ್ನೊಂದು ಕಾರಣವನ್ನು ಹೇಳುತ್ತಾರೆ—

ಯತೋಽನುಭವತಃ ಸರ್ವಂ ಸಿದ್ಧಮೇತದತೋಽಪಿ ಚ ||

(ಅರ್ಥ) ಏತತ್ ಸರ್ವಂ = ಬಂಧಸತ್ಯತ್ವ, ಪ್ರಪಂಚಸತ್ಯತ್ವಾದಿಗಳೆಲ್ಲವೂ, ಯತಃ = ಯಾವ ಕಾರಣದಿಂದ, ಅನುಭವತಃ ಸಿದ್ಧಂ = ಅನುಭವಸಿದ್ಧವಾಗಿವೆಯೋ, ಅತಃ ಅಪಿ ಚ = ಆದ್ದರಿಂದಲೂ ಇವನ್ನು ವಿಸ್ತರಿಸಲಿಲ್ಲ, ಸಂಕ್ಷೇಪವಾಗಿ 'ಅತಃ' ಎಂಬುದರಿಂದಲೇ ಹೇಳಿದರು. ಇಲ್ಲಿಗೆ ಅತಶ್ಶಬ್ದ ವಿವರಣೆಯನ್ನು ಮುಗಿಸಬಹುದು.

29. ಬ್ರಹ್ಮಶಬ್ದಾರ್ಥ : ಸಂಸ್ಕೃತದಲ್ಲಿ ಪುಲ್ಲಿಂಗದ ಒಂದು ಬ್ರಹ್ಮಶಬ್ದವೂ ನಪುಂಸಕ ಲಿಂಗದ ಒಂದು ಶಬ್ದವೂ ಇದೆ. ಪುಲ್ಲಿಂಗ ಶಬ್ದಕ್ಕೆ ಚತುರ್ಮುಖನೆಂದೂ ಬ್ರಾಹ್ಮಣನೆಂದೂ ಅರ್ಥ. ಇದರ ರೂಪ ಬ್ರಹ್ಮಾ | ಬ್ರಹ್ಮಾಣೌ | ಬ್ರಹ್ಮಾಣಃ ಎಂದಾಗುತ್ತವೆ. ನಪುಂಸಕ ಶಬ್ದಕ್ಕೆ ವೇದ, ತತ್ವ, ತಪಸ್ಸು, ಜೀವ, ಜಾತಿ ಇತ್ಯಾದಿ ಅರ್ಥಗಳಿವೆ. ಇದರ ರೂಪಗಳು ಬ್ರಹ್ಮ | ಬ್ರಹ್ಮಣೀ | ಬ್ರಹ್ಮಾಣಿ ಎಂದಾಗುತ್ತವೆ. 'ಬೃಹ, ಬೃಹಿವೃದ್ಧೌ = ಬೆಳೆ ಎಂಬ (ಭ್ವಾದಿ ಪರಸ್ಮೈ) ಧಾತುವಿನ ಮೇಲೆ 'ಬೃಂಹೇರ್ನೋಽಚ್ಚ' ಎಂಬ ಉಣಾದಿ ಸೂತ್ರ(೪/೧೪೬)ದಂತೆ ಮನಿನ್ ಪ್ರತ್ಯಯವೂ ಅಕಾರಾದೇಶವೂ ಬಂದು ಬ್ರಹ್ಮಶಬ್ದ ನಿಷ್ಪನ್ನವಾಗಿದೆ.

ಪ್ರಕೃತ ಈ ಸೂತ್ರದಲ್ಲಿರುವ ಬ್ರಹ್ಮಶಬ್ದವು ನಪುಂಸಕ ಲಿಂಗಕ್ಕೆ ಸೇರಿದ್ದಾಗಿ ಪರಬ್ರಹ್ಮನನ್ನೇ ಹೇಳುತ್ತದೆ. ಯದ್ಯಪಿ ಈ ಶಬ್ದಕ್ಕೆ ಅನೇಕಾರ್ಥಗಳಿವೆಯಾದರೂ 'ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಮುಖ್ಯ'ವಾದ್ದರಿಂದ ಈ ಸೂತ್ರದಲ್ಲಿ ಆ ಮುಖ್ಯಾರ್ಥವನ್ನೇ ಗ್ರಹಣ ಮಾಡಬೇಕೆಂದು ಹೇಳಿ ಭಾಷ್ಯದಲ್ಲಿ ಮುಖ್ಯಾರ್ಥ ಹೇಗೆಂಬುದನ್ನೇ ಅನೇಕ ಪ್ರಮಾಣಗಳಿಂದಲೂ ಯುಕ್ತಿಗಳಿಂದಲೂ ಸಮರ್ಥಿಸಿದ್ದಾರೆ. ಜೊತೆಗೆ ನ್ಯಾಯವಿವರಣದಲ್ಲೂ ಸ್ಪಷ್ಟವಾದ ಮತ್ತೊಂದು ಯುಕ್ತಿಯನ್ನೂ ಹೇಳಿದ್ದಾರೆ. ಅಥರ್ವಶಿರಃ ಶ್ರುತಿಯು 'ಅಥ ಕಸ್ಮಾದುಚ್ಯತೇ ಬ್ರಹ್ಮೇತಿ | ಬೃಹಂತೋ ಹ್ಯಸ್ಮಿನ್ ಗುಣಾಃ' ಇವನಿಗೆ ಬ್ರಹ್ಮನೆಂಬ ಹೆಸರು ಏತಕ್ಕೆ ಬಂತು? ಎಂದು ಪ್ರಶ್ನೆ ಕೇಳಿ ತಾನೇ '—ಇವನಲ್ಲಿ ಸರ್ವಜ್ಞತ್ವ ಪರಿಪೂರ್ಣತ್ವಾದಿ ದೊಡ್ಡ ದೊಡ್ಡ (ಅಸಾಧಾರಣವಾದ) ಗುಣಗಳಿವೆ. ಆದ್ದರಿಂದ ಬಂತು' ಎಂದು ಸಕಾರಣವಾಗಿ ತಿಳಿಸುವುದರಿಂದ ಬ್ರಹ್ಮಶಬ್ದವು ವಿಷ್ಣುವಿನಲ್ಲೇ ಮುಖ್ಯವೆಂದು ಅರ್ಥ ಸ್ಪಷ್ಟವಾಗುತ್ತದೆ. ಇದೇ ರೀತಿ ಅನುವ್ಯಾಖ್ಯಾನದಲ್ಲೂ ಕೆಲವು ಬೇರೆ ಯುಕ್ತಿಗಳನ್ನು ತೋರಿಸಿದ್ದಾರೆ.

30. ಅನುವ್ಯಾಖ್ಯಾನದಲ್ಲಿ ಹೇಳಿದ ಯುಕ್ತಿಗಳು : (i) ಬ್ರಹ್ಮಮೀಮಾಂಸಾಕ್ಕೆ ಪೂರ್ವದಲ್ಲಿಯೇ ದೇವೀಮೀಮಾಂಸಾ ರಚಿತವಾಗಿತ್ತು. ಆ ಶಾಸ್ತ್ರದ ಮಧ್ಯಭಾಗವು ಶೇಷ–ಪೈಲರಿಂದ ರಚಿತವಾಗಿದ್ದರೂ ಅದರ ಆದ್ಯಂತಗಳು ಮಾತ್ರ ವೇದವ್ಯಾಸರಚಿತವಾದುವು. ಹೀಗೆ ಅದರ ಮೊದಲನೆಯ ಸೂತ್ರವಾದ 'ಅಥಾತೋ ದೈವೀಮೀಮಾಂಸಾ' ಎಂಬುದನ್ನು ಕಡೆಯ ಎರಡು ಸೂತ್ರಗಳಾದ 'ಸ ವಿಷ್ಣುರಾಹ ಹಿ'=ಅವನು ವಿಷ್ಣುವೆಂಬುದು ಪ್ರಸಿದ್ಧವಾಗಿದೆ. 'ತಂ ಬ್ರಹ್ಮೇತ್ಯಾಚಕ್ಷತೇ'=ಅವನನ್ನು–ವಿಷ್ಣುವನ್ನು ಬ್ರಹ್ಮನೆಂದು ಕರೆಯುತ್ತಾರೆ—ಎಂಬುವನ್ನೂ ರಚಿಸಿದವರು ವ್ಯಾಸರೇ. ಈ ಸೂತ್ರಗಳಲ್ಲಿ ವಿಷ್ಣುವನ್ನು ಬ್ರಹ್ಮನೆಂದು ಕರೆಯುತ್ತಾರೆಂದು ವೇದವ್ಯಾಸರೇ ಸ್ಪಷ್ಟವಾಗಿ ಹೇಳಿದ್ದರಾದ್ದರಿಂದ ಮುಂದೆ ರಚಿಸಿದ ಬ್ರಹ್ಮಸೂತ್ರದಲ್ಲಿ 'ಬ್ರಹ್ಮಜಿಜ್ಞಾಸಾ' ಎಂದು ಹೇಳಿದಾಗ ಅನುವೃತ್ತಿಯಿಂದಲೇ ವಿಷ್ಣುವೆಂದು ಅರ್ಥವಾಗುತ್ತದೆ. ಇದು ಸ್ಪಷ್ಟವಾದ ವಿಚಾರ.

(ii) ಬ್ರಹ್ಮಶಬ್ದವೂ ಗುಣಪೂರ್ತಿಯನ್ನು ಹೇಳುತ್ತದೆ. ನಾರಾಯಣ ಶಬ್ದವೂ ಗುಣಪೂರ್ತಿಯನ್ನೇ ಹೇಳುತ್ತದೆ (ಖಂಡ 8 ನೋಡಿ). ಆದಕಾರಣ ಬ್ರಹ್ಮ ಎಂದರೆ ನಾರಾಯಣನೆಂದೇ ಅರ್ಥವಾದ್ದರಿಂದ ಈ ಸೂತ್ರದಲ್ಲಿ ಬ್ರಹ್ಮಜಿಜ್ಞಾಸಾ ಎಂಬುದರಿಂದ ವಿಹಿತವಾದದ್ದು (ಮಾಡಬೇಕೆಂದು ಹೇಳಿದ್ದು) ನಾರಾಯಣನ ಜಿಜ್ಞಾಸೆಯೇ ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

(iii) ಮಹಾನಾರಾಯಣೋಪನಿಷತ್ತಿನಲ್ಲಿ (೧/೧) ಆ ಬ್ರಹ್ಮನ ಲಕ್ಷಣವನ್ನು 'ಅಂಭಸ್ಯ ಪಾರೇ'—ಅಪಾರವಾದ ನೀರಿನಲ್ಲಿದೆ ಎಂದು ಹೇಳಿದೆ. ಈ ರೀತಿ 'ನೀರಿನಲ್ಲಿರುವುದು' ನಾರಾಯಣನ ಲಕ್ಷಣವೂ ಹೌದೆಂದು 'ಆಪೋನಾರಾ' ಎಂಬ ಸ್ಮೃತಿ ತಿಳಿಸಿಕೊಡುತ್ತದೆ. ಆದ್ದರಿಂದಲೂ ಬ್ರಹ್ಮಶಬ್ದವು ನಾರಾಯಣಪರ ಎಂದು ಸ್ಪಷ್ಟವಾಯಿತು.

(iv) ಋಗ್ವೇದದಲ್ಲೂ 'ಅಪ್ಸ್ವಂತಃ' (೧೦/೮೫/೭)=ಆ ವಿಷ್ಣು ನೀರಿನ ಮಧ್ಯದಲ್ಲಿ ಮಲಗಿದ್ದಾನೆ (ಸಮುದ್ರ ಜಲಶಾಯಿ) ಎಂದು ಹೇಳಿದೆ. ಇದೂ 'ಅಂಭಸ್ಯ ಪಾರೇ' ಎಂಬುದಕ್ಕೆ ಸಮಾಖ್ಯೆ (ಒಂದೇ ಅರ್ಥ ಹೇಳುವ ವಾಕ್ಯ) ಆಗಿದೆ. ಹೀಗೆ ಬ್ರಹ್ಮಶಬ್ದಕ್ಕೂ ನಾರಾಯಣ

ಶಬ್ದಕ್ಕೂ ಅರ್ಥ ಒಂದೇ ಆದ್ದರಿಂದ ಈ ಸೂತ್ರದಲ್ಲಿ ಬ್ರಹ್ಮ ಎಂಬುದು ನಾರಾಯಣನ ದ್ಯೋತಕವೇ ಆಗಿದೆ. ನಾರಾಯಣನೇ ವಿಷ್ಣುವೆಂಬ ಬಗ್ಗೆ ಯಾವ ಸಂದೇಹ ಬರಲೂ ಸಾಧ್ಯ ವಿಲ್ಲವಷ್ಟೆ.

ಈ ಯುಕ್ತಿಗಳನ್ನೆಲ್ಲಾ ಚಂದ್ರಿಕಾದಲ್ಲೂ ಸುಧಾದಲ್ಲೂ ಬಹಳ ವಿಸ್ತಾರವಾಗಿ ಚರ್ಚಿಸಿ ಬ್ರಹ್ಮಶಬ್ದವು ಮುಖ್ಯತಃ ವಿಷ್ಣುವನ್ನೇ ಹೇಳುತ್ತದೆಂದು ಸಮರ್ಥಿಸಿ ತೋರಿಸಿಕೊಟ್ಟಿದ್ದಾರೆ.

31. ಜಿಜ್ಞಾಸಾ ಶಬ್ದಾರ್ಥ : ಸಂಸ್ಕೃತದಲ್ಲಿ ಜ್ಞಾ-ಅವಬೋಧನೇ - ತಿಳಿ, ಅರಿತುಕೋ ಎಂಬ (ಕ್ರ್ಯಾದಿ ಉಭ) ಧಾತುವಿನ ಮೇಲೆ ಇಚ್ಛಾರ್ಥದಲ್ಲಿ 'ಧಾತೋಃ ಕರ್ಮಣಃ ಸಕರ್ಮಕಾದಿಚ್ಛಾಯಾಂ' (ಪಾ.೩/೧/೭) ಎಂಬ ಸೂತ್ರದಂತೆ ಸನ್ ಪ್ರತ್ಯಯ ಬರಲು 'ಸನ್ಯಘೋಃ' (ಪಾ.೬/೧/೯) ಎಂಬ ಸೂತ್ರದಂತೆ ದ್ವಿತ್ವ ಬಂದು, ಮೇಲೆ ಟಾಪ್ (ಆ) ಪ್ರತ್ಯಯ ಬರಲು ಜಿಜ್ಞಾಸಾ ಎಂದಾಗುತ್ತದೆ. ಹೀಗೆ ವ್ಯಾಕರಣ ರೀತ್ಯಾ ಜಿಜ್ಞಾಸಾ ಶಬ್ದಕ್ಕೆ ತಿಳಿದುಕೊಳ್ಳಬೇಕೆಂಬ ಇಚ್ಛೆಯೇ ಮುಖ್ಯವೃತ್ತಿಯಿಂದ ಅರ್ಥವಾದರೂ ಇಲ್ಲಿ ಆ ಅರ್ಥ ಹೊಂದುವುದಿಲ್ಲವಾದ ಕಾರಣ ಲಕ್ಷಣಾ (ಅಮುಖ್ಯ) ವೃತ್ತಿಯಿಂದ ಜ್ಞಾನಕ್ಕೆ ಸಾಧನವೂ ಇಚ್ಛಾಸಾಧ್ಯವೂ ಆದ ವಿಚಾರವನ್ನೇ ಗ್ರಹಣ ಮಾಡಬೇಕೆಂದು ಸುಧಾದಲ್ಲೂ ಚಂದ್ರಿಕಾದಲ್ಲೂ ವಿಮರ್ಶೆ ಮಾಡಿ ತೋರಿಸಿದ್ದಾರೆ. ಸುಧಾಕಾರರು ಜಿಜ್ಞಾಸಾನಾಮಯುಕ್ತ್ಯನು ಸಂಧಾನಾತ್ಮಕಂ ವಿಚಾರಾ ಪರಪರ್ಯಾಯಂ ಮನನಂ ಎನ್ನುತ್ತಾರೆ. ಇದನ್ನೇ ಚಂದ್ರಿಕಾಚಾರ್ಯರು ಯುಕ್ತ್ಯನು ಸಂಧಾನಾತ್ಮಕೋ ಮನನಾಪರನಾಮಕೋ ವಿಚಾರೋ ಜಿಜ್ಞಾಸಾ ಎಂದು ಬೇರೆ ರೀತಿಯಿಂದ ಹೇಳಿದ್ದಾರೆ.

ಒಟ್ಟಿನಲ್ಲಿ ಯಾವ ವಿಷಯವನ್ನೇ ಆಗಲಿ, ಕಣ್ಣು ಮುಚ್ಚಿಕೊಂಡು ಅಥವಾ ಅಂಧ ಶ್ರದ್ಧೆ ಯಿಂದ ತಿಳಿದುಕೊಳ್ಳದೆ, ಯುಕ್ತ್ಯನುಸಂಧಾನಪೂರ್ವಕವಾಗಿ ಎಂದರೆ ಇದು ಹೀಗೇ ಏಕಾಗ ಬೇಕು? ಹಾಗೇಕೆ ಆಗಬಾರದು? ಎಂದು ಕೂಲಂಕಷವಾಗಿ ಪುನಃ ಪುನಃ ವಿಮರ್ಶೆ ಮಾಡಿ— ಪರೀಕ್ಷಿಸಿ ಮನನ ಮಾಡಿಕೊಂಡು ಮನಸ್ಸೊಪ್ಪಿದ ಮೇಲೆ ತಿಳಿದುಕೊಳ್ಳುವ ವಿಚಾರ ಎಂದರ್ಥ.

32. ಬ್ರಹ್ಮಜಿಜ್ಞಾಸಾ : ಬ್ರಹ್ಮಣೋ ಜಿಜ್ಞಾಸಾ=ಬ್ರಹ್ಮಜಿಜ್ಞಾಸಾ ಎಂದು ಕರ್ಮಣಿ ಷಷ್ಠಿಯಿಂದ ಷಷ್ಠೀ ತತ್ಪುರುಷ ಸಮಾಸ. ಬ್ರಹ್ಮಮೀಮಾಂಸಾ ಶಾಸ್ತ್ರವು 'ಹೀಗೆಯೇ ಅರ್ಥ ಹೇಳಬೇಕು' ಹೀಗೆಯೇ ಮಾಡಬೇಕೆಂದು ಯುಕ್ತಿಪೂರ್ವಕವಾಗಿ ವಿಧಾನ ಮಾಡುವ ಶಾಸ್ತ್ರ ವಾದ್ದರಿಂದ ಅದಕ್ಕೆ ಅನುಗುಣವಾಗಿ ಜಿಜ್ಞಾಸಾ ಶಬ್ದದ ಜೊತೆ ಕರ್ತವ್ಯಾ ಎಂಬ ಯೋಗ್ಯ ಪದವನ್ನು ಸೇರಿಸಿಕೊಳ್ಳಬೇಕೆಂದು ಭಾಷ್ಯದಲ್ಲಿ ಹೇಳಿ ಅದಕ್ಕೆ ಪ್ರಮಾಣವನ್ನು ತೋರಿಸಿದ್ದಾರೆ. ಅದರಂತೆ 'ಯುಕ್ತ್ಯನುಸಂಧಾನಪೂರ್ವಕವಾಗಿ' ವೇದವಾಕ್ಯಗಳನ್ನು ವಿಮರ್ಶೆ ಮಾಡಿ, ಆ ನಾರಾಯಣನು ಅನಂತ ಕಲ್ಯಾಣಗುಣ ಪರಿಪೂರ್ಣನಾಗಿದ್ದಾನೆಂಬ ವಿಚಾರವನ್ನು ಮಥನ ಮಾಡಿ ಮನವರಿಕೆ ಮಾಡಿಕೊಂಡು ಅದರಂತೆಯೇ ಉಪಾಸನೆಯೆಂಬುವಂಥಾ ವಿಚಾರವನ್ನು (ಜಿಜ್ಞಾಸೆಯನ್ನು) ಮಾಡಬೇಕೆಂಬುದೇ ಬ್ರಹ್ಮಜಿಜ್ಞಾಸಾಕರ್ತವ್ಯಾ ಎಂಬುದರ ಒಟ್ಟು ಅರ್ಥ.

ಹೀಗೆ ಪ್ರಥಮ ಸೂತ್ರದ ಪ್ರತಿಯೊಂದು ಪದಕ್ಕೂ ಅರ್ಥವಿವರಣೆ ಮಾಡಿದ ಬಳಿಕ ಈಗ ಅಧಿಕರಣವೆಂದರೇನು ಎಂಬುದನ್ನು ಕಿಂಚಿತ್ತಾದರೂ ತಿಳಿಸುವುದು ಪ್ರಸಕ್ತವಾಗಿದೆ.

33. ಅಧಿಕರಣವೆಂದರೇನು? : ಜಗನ್ನಾಥಯತಿಗಳು 'ಭಾಷ್ಯದೀಪಿಕೆ'ಯಲ್ಲಿ ಹೇಳಿದಂತೆ 'ಅಧಿಕರಣಂ ನಾಮ ವಿಷಯ-ಸಂಶಯ - ಪೂರ್ವಪಕ್ಷ – ಸಿದ್ಧಾಂತ–ಪ್ರಯೋಜನ ರೂಪ ಪಂಚಾಂಗ ಸಮುದಾಯಃ.' 1. ಮುಖ್ಯ ವಿಷಯ, 2. ಆ ಬಗ್ಗೆ ಬರುವ ಸಂದೇಹ, 3. ಸಂದೇಹಕ್ಕೆ ಮೂಲವಾದ ಪ್ರತಿಪಕ್ಷದ ಕಾರಣಗಳು, 4. ಅದರ ನಿರಾಕರಣಪೂರ್ವಕ ನಿರ್ಣಯ ಮಾಡಿದ ಸಿದ್ಧಾಂತ, 5. ಈ ವಿಚಾರದಿಂದ ಏನು ಲಾಭ? ಏನು ಪ್ರಯೋಜನ? ಎಂಬ ಐದು ವಿಚಾರಗಳನ್ನೊಳಗೊಂಡ ಪ್ರತಿಪಾದನೆಗೆ (ನಿರೂಪಣೆಗೆ) ಅಧಿಕರಣವೆಂದು ಹೆಸರು. (ಭೂಮಿಕೆ ಖಂಡ 8 ಕೂಡ ನೋಡಿ.) ಶ್ರೀಮಟ್ಟೀಕಾರಾಯರು 'ತತ್ವಪ್ರಕಾಶಿಕಾ'ದಲ್ಲಿ ಬ್ರಹ್ಮಸೂತ್ರಗಳ ಪ್ರತಿಯೊಂದು ಅಧಿಕರಣಕ್ಕೂ ಈ ಐದೂ ಅಂಶಗಳನ್ನು ತೋರಿಸಿಕೊಡುತ್ತಾ ಹೋಗಿದ್ದಾರೆ. ಅವೆಲ್ಲ ಗುರುಮುಖಶ್ರವಣವಿಲ್ಲದೆ ಶಾಸ್ತ್ರದಲ್ಲಿ ಪ್ರವೇಶವಿಲ್ಲದೆ ತಿಳಿಯುವುದೂ ಇಲ್ಲ, ಸಾಮಾನ್ಯ ಮಟ್ಟದ ಜನರಿಗಂತೂ ನಿಲುಕುವುದೂ ಅತ್ಯಂತ ದುಸ್ತರ. ಇನ್ನು ಶ್ರೀಮದ್ರಾಘವೇಂದ್ರಸ್ವಾಮಿಗಳು ಆ ವಿಷಯಗಳನ್ನು ಎಷ್ಟೋ ಸುಲಭಮಾಡಿ ಸಂಕ್ಷೇಪವಾಗಿ ತತ್ವಮಂಜರಿಯಲ್ಲಿ ನಿರೂಪಣೆ ಮಾಡಿದ್ದಾರೆ. ಅದನ್ನು ಕನ್ನಡದಲ್ಲಿ ವಿವರಿಸುತ್ತಾ ಪ್ರೊ. ಶ್ರೀ ಕೆ. ಟಿ. ಪಾಂಡುರಂಗಿಯವರು ಸಾಕಷ್ಟು ವಿವರಣೆ ಸಹಿತ ಸಾಧ್ಯವಾದಷ್ಟು ವಿಶದ ಮಾಡಿ ಬಿಡಿಸಿ ಬಿಡಿಸಿ ಕನ್ನಡದಲ್ಲೂ ಹೇಳಿದ್ದಾರೆ. ಆದರೂ ಸಹ ಆ ಮಟ್ಟಕ್ಕೆ ಏರುವುದೂ ಸಹ ಕಠಿಣವೆಂದು ಧಾರಾಳವಾಗಿ ಹೇಳಬಹುದು. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ಈ ಭಾವಸಂಗ್ರಹದಲ್ಲಿ ತತ್ವಮಂಜರಿಯ ಮಾರ್ಗವನ್ನನುಸರಿಸಿ ಅಧಿಕರಣಗಳ ಪ್ರತಿಪಾದನೆ ಮಾಡಲು ನಾವು ಹೊರಟಿಲ್ಲ. ಪ್ರಮೇಯ ನಿರೂಪಣೆಯೇ ನಮ್ಮ ಮುಖ್ಯ ಧ್ಯೇಯ.

ಆದರೂ ಅಧಿಕರಣದ ಸ್ವರೂಪವೇನೆಂಬುದರ ಅರಿವಾಗುವದಕ್ಕಾಗಿ ಈ ಜಿಜ್ಞಾಸಾಧಿಕರಣ ಒಂದಕ್ಕೆ ಮಾತ್ರ (ನಿದರ್ಶನ ರೂಪವಾಗಿ) ಆ ಐದೂ ಅಂಗಗಳನ್ನು, ಆದಷ್ಟು ಸುಲಭ ಶೈಲಿಯಲ್ಲಿ, ಜಗನ್ನಾಥಯತಿಗಳ 'ಭಾಷ್ಯದೀಪಿಕೆ'ಯನ್ನನುಸರಿಸಿ, ತೋರಿಸಿಕೊಡುತ್ತೇವೆ. ಬ್ರಹ್ಮಸೂತ್ರದಲ್ಲಿರುವ ಇನ್ನೂರ ಇಪ್ಪತ್ತುಮೂರು ಅಧಿಕರಣಗಳಿಗೂ ಇದೇ ರೀತಿ ಐದೈದು ಅಂಗಗಳಿವೆಯೆಂಬುದು ಮನಸ್ಸಿಗೆ ಬಂದರೆ ಪ್ರಕೃತಕ್ಕೆ ಸಾಕು.

34. ಜಿಜ್ಞಾಸಾಧಿಕರಣದ ಪಂಚಾಂಗಗಳು : ತೈತ್ತಿರೀಯೋಪನಿಷತ್ತಿನಲ್ಲಿ (೩/೧/೧) 'ತದ್‌ವಿಜಿಜ್ಞಾಸಸ್ವ | ತದ್‌ಬ್ರಹ್ಮೇತಿ | ಅದನ್ನು ಎಂದರೆ ಆ ಪರಬ್ರಹ್ಮನನ್ನು ವಿಮರ್ಶೆಯಿಂದ ವಿಚಾರಮಾಡಿ ತಿಳಿದುಕೋ' ಎಂದು ಬೋಧಿಸಿರುವ ಜಿಜ್ಞಾಸೆಯೇ ಈ ಅಧಿಕರಣದ ಮುಖ್ಯ ವಿಷಯ. 2. ಜಿಜ್ಞಾಸೆ ಮಾಡಬೇಕೆ? ಬೇಡವೇ? ಎಂಬುದೇ ಸಂಶಯ. 3. ಅನಾವಶ್ಯಕವಾದ್ದರಿಂದಲೂ ವಿಷಯಾದಿಗಳಿಲ್ಲವಾದ್ದರಿಂದಲೂ ನಿಷ್ಪ್ರಯೋಜನವಾದ್ದರಿಂದಲೂ ಮಾಡಬೇಕಾಗಿಲ್ಲ ಎಂಬುದೇ ಪೂರ್ವ ಪಕ್ಷ. (ತತ್ವಪ್ರಕಾಶಿಕಾದಲ್ಲೂ, ಸುಧಾದಲ್ಲೂ, ಚಂದ್ರಿಕಾದಿಗಳಲ್ಲೂ ಈ ಪೂರ್ವಪಕ್ಷವನ್ನೇ ತಲೆದೂಗಿಸುವಷ್ಟು ಚಾಣಾಕ್ಷತೆಯಿಂದ ತರ್ಕಬದ್ಧವಾಗಿ ಯುಕ್ತಿಸಂಗತವಾಗಿ ಪ್ರತಿಪಾದಿಸಿರುತ್ತಾರೆ) 4. ಪೂರ್ವಪಕ್ಷದಲ್ಲಿ ಹೇಳಿದ ಯುಕ್ತಿಗಳನ್ನು ನಿರಾಕರಣೆ ಮಾಡಿ, ಶ್ರುತಿಯಲ್ಲಿ ಹೇಳಿದಂತೆ ಶ್ರವಣಮನನ ಧ್ಯಾನರೂಪವಾದ ಜಿಜ್ಞಾಸೆಯಿಂದ ಅನಂತ ಗುಣಪರಿಪೂರ್ಣನಾದ ಆದ್ದರಿಂದಲೇ ಬ್ರಹ್ಮಶಬ್ದವಾಚ್ಯನಾದ ವಿಷ್ಣುವನ್ನು ಮೋಕ್ಷವೆಂಬ

ಫಲಪ್ರಾಪ್ತಿಗಾಗಿ ಪ್ರಸನ್ನೀಕರಿಸಿಕೊಳ್ಳಬೇಕೆಂಬುದೇ ಸಿದ್ಧಾಂತ. 5. ಆದ್ದರಿಂದ ಈ ಮೀಮಾಂಸಾ ಶಾಸ್ತ್ರವು ಆರಂಭಣೀಯ ಎಂಬುದೇ ಪ್ರಯೋಜನ. ಇದಲ್ಲದೆ ಈ ಅಧಿಕರಣಕ್ಕೆ ಈ ಅಧ್ಯಾಯ ದಲ್ಲಿ ಈ ಪಾದದಲ್ಲಿ ಹೇಗೆ ಸಂಬಂಧ? ಮುಂದಿನ ಅಧಿಕರಣಕ್ಕೂ ಈ ಅಧಿಕರಣಕ್ಕೂ ಏನು ಸಂಬಂಧ? ಇತ್ಯಾದಿ ಸಂಗತಿಗಳನ್ನು ತಿಳಿಸುತ್ತಾ ಹೋಗುತ್ತಾರೆ. ಆದರೆ ನಮ್ಮ ಮಟ್ಟಿಗೆ ಅವೆಲ್ಲ ಹೆಚ್ಚಿನ ವಿಚಾರಗಳು.

35. **ತತ್ವಮಂಜರಿಯಲ್ಲಿ ಹೇಳಿದ ಪೂರ್ವಪಕ್ಷ ಸಿದ್ಧಾಂತಗಳು :** ಬ್ರಹ್ಮಜಿಜ್ಞಾಸೆ ಮಾಡ ಬೇಕೆಂಬುದನ್ನೇ ಪೂರ್ವಪಕ್ಷಿ ಈ ಕಾರಣಗಳಿಂದ ನಿರಾಕರಿಸುತ್ತಾನೆ—ಜೀವನಿಗಿಂತ ಭಿನ್ನನಾದ ಬ್ರಹ್ಮನಿರುವನೆಂಬ ವಿಷಯದಲ್ಲಿ ಯಾವ ಪ್ರಮಾಣವೂ ಇಲ್ಲವಾದ್ದರಿಂದ ಬ್ರಹ್ಮನೇ ಇಲ್ಲ. ಇನ್ನು ಜೀವನೇ ಬ್ರಹ್ಮನೆಂದು ಭಾವಿಸಿದರೆ ಅವನು ನಾನೇ ಎಂಬುದು ಗೊತ್ತಾಗುವುದರಿಂದ ಅವನ ಬಗ್ಗೆ ಜಿಜ್ಞಾಸೆಯೇ ಅನಾವಶ್ಯಕ. ಅಂತೂ ಒಟ್ಟಿನಲ್ಲಿ ಜಿಜ್ಞಾಸೆಗೆ ವಿಷಯವೇ ಇಲ್ಲ. ಒಂದು ವೇಳೆ ಜಿಜ್ಞಾಸೆ ಮಾಡಿದರೂ ಫಲವೇನು? ಏನೂ ಇಲ್ಲ. ಫಲವಿಲ್ಲವಾದ್ದರಿಂದ ಅಧಿಕಾರಿ ಸಂಬಂಧಗಳೂ ಇಲ್ಲ. ಹೀಗೆ ಒಟ್ಟಿನಲ್ಲಿ ಬ್ರಹ್ಮಜಿಜ್ಞಾಸೆ ಮಾಡಬೇಕೆಂದು ಹೇಳಿದ್ದು ವ್ಯರ್ಥ ಎಂಬುದು ಪೂರ್ವಪಕ್ಷ.

ಇದಕ್ಕೆ ಸಮಾಧಾನ(ಸಿದ್ಧಾಂತ)ವನ್ನೂ ಹೇಳುತ್ತಾರೆ. ಅಥ ಶಬ್ದದಿಂದ ಅಧ್ಯಯನ ಶಮ ದಮಾದಿ ಅಧಿಕಾರ ಬೋಧಿತವಾಗುತ್ತದೆ. ಅತಃ ಶಬ್ದದಿಂದ ಮೋಕ್ಷಾಖ್ಯ ಫಲವುಂಟೆಂದೂ, ಅದು ಭಗವಂತನ ಅತ್ಯರ್ಥ ಪ್ರಸಾದದಿಂದ ದೊರಕುವುದೆಂದೂ ಗೊತ್ತಾಗುತ್ತದೆ. ಮತ್ತು ಬ್ರಹ್ಮಶಬ್ದವು ದೇಶಕಾಲ ಗುಣಗಳ ಪರಿಮಿತಿಯಿಲ್ಲದ ವಿಷ್ಣುವನ್ನೇ ಹೇಳುತ್ತದೆ, ಜೀವನನ್ನಲ್ಲ. ಆದಕಾರಣ ಮೋಕ್ಷಪ್ರಾಪ್ತಿಗಾಗಿ ಆ ವಿಷ್ಣುವಿನ ಪ್ರಸಾದವು ದೊರಕುವುದಕ್ಕಾಗಿ, ಆ ವಿಷ್ಣು ದೇಶಕಾಲ ಗುಣಗಳ ಪರಿಮಿತಿಯಿಲ್ಲದ ವ್ಯಾಪ್ತಿಯುಳ್ಳವನೆಂಬ ಶ್ರವಣಮನನನಿದಿಧ್ಯಾಸನ ರೂಪವಾದ ಜಿಜ್ಞಾಸೆಯನ್ನು ಮಾಡಬೇಕೆಂಬುದೇ ಜಿಜ್ಞಾಸಾಧಿಕರಣದ ಮುಖ್ಯ ಸಿದ್ಧಾಂತ. ಇದನ್ನೇ ಶ್ರೀಮದಾಚಾರ್ಯರು ವಿಷ್ಣುರೇವ ವಿಜಿಜ್ಞಾಸ್ಯಃ ಎಂಬುದರಿಂದ ಸೂಚಿಸಿದರು.

36. **ಮೂಲದಲ್ಲಿ ವಿಷ್ಣು ಶಬ್ದ :** 'ತದ್ ವಿಜಿಜ್ಞಾಸಸ್ವ | ತದ್ಬ್ರಹ್ಮೇತಿ' ಮೊದಲಾದ ಶ್ರುತಿರೂಪ ವಿಷಯವಾಕ್ಯಗಳಲ್ಲಿ ಹೇಳಿದ ಬ್ರಹ್ಮಶಬ್ದವನ್ನು ಸೂಚಿಸುವುದಕ್ಕಾಗಿಯೇ ಸೂತ್ರ ದಲ್ಲಿ ಬ್ರಹ್ಮ ಶಬ್ದವನ್ನೇ ಗ್ರಹಣ ಮಾಡಿದ್ದಾರೆ. 'ವಿಷಲ್ಪವ್ಯಾಪ್ತಿ' ವ್ಯಾಪಿಸು ಎಂಬ (ಋಹೋ ಉಭ) ಧಾತುವಿನಿಂದ ನಿಷ್ಪನ್ನವಾದ ವಿಷ್ಣು ಶಬ್ದವು ದೇಶಕಾಲ ಗುಣಗಳಿಂದ ಪರಿಚ್ಛೇದರಹಿತ ವಾದ (ಎಂದರೆ ಇವುಗಳ ಅಳತೆಗೆ ಸಿಗದ) ವ್ಯಾಪ್ತಿರೂಪವಾದ ಯಾವ ಗುಣಪೂರ್ಣತ್ವವನ್ನು ಹೇಳುತ್ತದೋ 'ಬೃಹವೃದ್ಧೌ' ಎಂಬ (ಭ್ವಾದಿ ಪರ) ಧಾತುವಿನಿಂದ ನಿಷ್ಪನ್ನವಾದ ಬ್ರಹ್ಮ ಶಬ್ದವೂ ಆ ಗುಣಪೂರ್ಣತ್ವವನ್ನೇ ಹೇಳುವುದು. ಹೀಗೆ ಸೂತ್ರೋಕ್ತ ಹಾಗೂ ಶ್ರುತ್ಯುಕ್ತ ಬ್ರಹ್ಮಶಬ್ದಕ್ಕೆ ವಿಷ್ಣುವೆಂದೇ ಅರ್ಥವೆಂಬುದನ್ನು ಸೂಚಿಸುವುದಕ್ಕಾಗಿಯೇ ಅಣುಭಾಷ್ಯದಲ್ಲಿ ವಿಷ್ಣುಃ ಎಂದೇ ಹೇಳಿದ್ದಾರೆ. ಕೇವಲ ಅರ್ಥದಿಂದಲೇ ಅಲ್ಲ; ದೈವೀ ಮೀಮಾಂಸಾಶಾಸ್ತ್ರದ ಕಡೆಯ ಎರಡು ಸೂತ್ರಗಳ ಅನುವೃತ್ತಿಯಿಂದಲೂ (ಖಂಡ 30, i ನೋಡಿ) ಬ್ರಹ್ಮಶಬ್ದ ವಿಷ್ಣುವನ್ನೇ ಹೇಳುತ್ತದೆ ಎಂದೂ ಇದರಿಂದ ಸೂಚಿಸಿದ್ದಾರೆ. ಅಲ್ಲದೆ ವಿಷ್ಣು ಶಬ್ದಪ್ರಯೋಗ

ದಿಂದಲೇ ಬ್ರಹ್ಮಶಬ್ದವು ಜೀವಪರವೆಂಬ ಪಕ್ಷವೂ ನಿರಸ್ತವಾಗಿಹೋಯಿತು. ತತ್ಫಲವಾಗಿ ಪೂರ್ವಪಕ್ಷಿಯ ವಾದಗಳೆಲ್ಲ ಕುಸಿದು ಬೀಳುತ್ತವೆ ಎಂಬುದನ್ನು ತತ್ತ್ವಮಂಜರಿಯಲ್ಲಿ ತೋರಿಸಿ ಕೊಟ್ಟಿದ್ದಾರೆ. ಮಂಗಳವನ್ನು ಸೂಚಿಸುವುದಕ್ಕಾಗಿಯೂ ವಿಷ್ಣು ಶಬ್ದವನ್ನು ಪ್ರಾರಂಭದಲ್ಲೇ ಹೇಳಿದ್ದಾರೆ. ಹೀಗೆ ಇದು ಸೂತ್ರದ 'ಓಂ ಅಥ' ಶಬ್ದಗಳ ಅದೃಷ್ಟಾರ್ಥ ಜ್ಞಾಪಕವೂ ಆಗಿದೆ.

37. ಏವ ಶಬ್ದದ ಪದಕೃತ್ಯ : 'ವಿಷ್ಣುಃ ವಿಜಿಜ್ಞಾಸ್ಯಃ' ಎಂದು ಹೇಳಿದ್ದರೇ ಸಾಕಾಗಿತ್ತು. ವಿಷ್ಣುಃ+ಏವ=ವಿಷ್ಣುರೇವ ಎಂದು ಹೇಳಿದ್ದಕ್ಕೂ ಸಾರ್ಥಕತೆ ಇದೆ. ಅಥರ್ವಣ ಶ್ರುತಿಯು (ಆ ಉಪು ೨/೨/೫) 'ತಮೇವೈಕಂ ಜಾನಥ ಆತ್ಮಾನಂ ಅನ್ಯಾವಾಚೋ ವಿಮುಂಚಥ' 'ಗುಣಪೂರ್ಣನಾದ ಆ ವಿಷ್ಣುವೊಬ್ಬನನ್ನೇ ಮುಖ್ಯನನ್ನಾಗಿ (ಏಕಂ =1 ಒಬ್ಬನನ್ನೇ, 2. ಮುಖ್ಯನನ್ನಾಗಿ) ತಿಳಿಯಿರಿ. ಬೇರೆ ಸಕಲ ಮಾತುಗಳನ್ನು ಬಿಟ್ಟುಬಿಡಿ' ಎಂದು ಬೋಧಿಸುತ್ತದೆ. ಅದರಂತೆ ವಿಷ್ಣು ಒಬ್ಬನೇ ಪ್ರಧಾನ, ಬೇರೆ ಯಾರೂ ಪ್ರಧಾನರಲ್ಲ; ರಮಾಬ್ರಹ್ಮಾದಿಗಳೆಲ್ಲ ಅವನ ಪರಿವಾರಕ್ಕೆ ಸೇರಿದವರೇ ಹೊರತು ಪ್ರಧಾನರಲ್ಲ ಎಂದು ತಿಳಿದು ವಿಷ್ಣುವನ್ನು ಪ್ರಧಾನನೆಂದೂ ರಮಾಬ್ರಹ್ಮಾದಿ ಸಕಲರೂ ಅವನ ಪರಿವಾರಕ್ಕೆ ಸೇರಿದವರೆಂದೂ ಜಿಜ್ಞಾಸೆ ಮಾಡಬೇಕೆಂಬುದನ್ನು ಈ ಏವಕಾರ ತಿಳಿಸುತ್ತದೆ. ಹೀಗೆ ಮುಂದೆ ೩/೩/೫೭ನೇ ಸೂತ್ರದಲ್ಲಿ ಹೇಳುವ ಪ್ರಮೇಯವನ್ನು ಈ ಏವಕಾರ ಸಂಗ್ರಹಿಸಿ ರಮಾಬ್ರಹ್ಮಾದಿಗಳ ಜಿಜ್ಞಾಸೆಯನ್ನೂ ಮಾಡಬೇಕು. ಆದರೆ ಪ್ರಾಧಾನ್ಯೇನ ಅಲ್ಲ, ವಿಷ್ಣುಪರಿವಾರತ್ವೇನ ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸುತ್ತದೆ.

38. ವಿ-ಉಪಸರ್ಗ ಏಕೆ ಸೇರಿಸಿದರು : ಸೂತ್ರಕ್ಕೆ ವಿಷಯವಾಕ್ಯಗಳಾದ 'ತದ್‌ವಿಜಿಜ್ಞಾಸಸ್ವ' (ಖಂಡ 34) 'ಸ ವಿಜಿಜ್ಞಾಸಿತವ್ಯಃ' (ಛಾಂ. ೮/೩/೧೦) = (ಅವನನ್ನು ವಿಚಾರಮಾಡಿ ತಿಳಿದುಕೊಳ್ಳಬೇಕು) ಮೊದಲಾದ ಶ್ರುತಿಗಳಲ್ಲಿ 'ವಿ' ಉಪಸರ್ಗ ಸೇರಿಸಿದರೂ ಸೂತ್ರಕಾರರು ಆ 'ವಿ' ಉಪಸರ್ಗ ಬಿಟ್ಟು, ಕೇವಲ ಜಿಜ್ಞಾಸಾ ಎಂದು ಹೇಳಿದ್ದು ನ್ಯೂನತೆ (ಕೊರತೆ) ಎಂದು ಆಕ್ಷೇಪ ಬಂದರೆ ಅದಕ್ಕೆ ಪರಿಹಾರವನ್ನು 'ವಿ' ಉಪಸರ್ಗವೇ ಹೇಳುತ್ತದೆ. ಸಂಸ್ಕೃತದಲ್ಲಿ 'ವಿ' ಉಪಸರ್ಗಕ್ಕೆ ವಿರೋಧ (ವಿಕಾರ, ವಿಯೋಗ) ವಿಶೇಷ (ವಿಜಯ, ವಿಚಾರ) ಮೊದಲಾದ ಅನೇಕ ಅರ್ಥಗಳಿವೆ. ಇಲ್ಲಿ 'ವಿಶಿಷ್ಟ' (ಕೂಡಿದ, ಸೇರಿದ) ಎಂಬ ಅರ್ಥದಲ್ಲಿ ಬಂದಿದೆ. ಸೂತ್ರದಲ್ಲಿರುವ ಅಥ ಶಬ್ದವು ಅಧ್ಯಯನ ಶಮದಮಾದಿ ರೂಪವಾದ ಅಧಿಕಾರ ದ್ಯೋತಕವಾಗಿದೆ. ಅದೇ ರೀತಿ ಅತಶ್ಶಬ್ದವು ಜಿಜ್ಞಾಸೆಯಿಂದ ದೊರಕುವ ಭಗವತ್ಪ್ರಸಾದದಿಂದ ಲಭ್ಯವಾದ ಮೋಕ್ಷರೂಪ ಫಲಸೂಚಕವಾಗಿದೆ. ಹೀಗೆ ಜಿಜ್ಞಾಸೆಯು ಅಥಾತಃ ಶಬ್ದಗಳಿಂದ ಸೂಚಿತವಾದ ಅಧಿಕಾರ ಮತ್ತು ಫಲಗಳಿಂದ ವಿಶಿಷ್ಟವಾಗಿಯೇ ಇದೆಯೆಂಬುದನ್ನು ಈ ವಿ ಉಪಸರ್ಗ ತಿಳಿಸಿಕೊಡುತ್ತದೆ. ಹೀಗೆ ಹೇಳಿದ್ದರಿಂದ ಮೋಕ್ಷವು ಕರ್ಮದಿಂದಲೂ ಲಭ್ಯವಾಗುತ್ತದೆ. ಅಧ್ಯಯನಾದಿಗಳಿಗೆ ಎಲ್ಲರೂ (ಶೂದ್ರಾದಿಗಳು) ಅಧಿಕಾರಿಗಳು ಎಂಬ ವಾದಗಳು ನಿರಾಕೃತವಾಗುತ್ತವೆ. ಸೂತ್ರಕಾರರ ಮೇಲೆ ಮಾಡಿದ ಆಕ್ಷೇಪವೂ ನಿರಸ್ತವಾಗುತ್ತದೆ.

39. ಜಿಜ್ಞಾಸ್ಯಃ ಎಂಬಲ್ಲಿ ಏನು ಸ್ವಾರಸ್ಯ : 'ಬ್ರಹ್ಮಜಿಜ್ಞಾಸಾ' ಎಂಬ ಸೂತ್ರಾಕ್ಷರಗಳಿಗೆ ಅರ್ಥ ಹೇಳುವಾಗ ಸೂತ್ರವನ್ನು ಅನುಸರಿಸಿ 'ಜಿಜ್ಞಾಸಾ' ಎಂದು ಹೇಳದೆ ಜಿಜ್ಞಾಸ್ಯಃ (ಜಿಜ್ಞಾಸೆ

ಮಾಡಬೇಕಾದವನು) ಎಂದು ವಿಧ್ಯರ್ಥಕ ಕೃದಂತ ರೂಪವನ್ನೇ ಪ್ರಯೋಗ ಮಾಡಿದ್ದರಿಂದ, ಸೂತ್ರದಲ್ಲಿ ಕರ್ತವ್ಯಾ ಎಂಬ ಶಬ್ದವನ್ನೂ ಅಧ್ಯಾಹಾರ ಮಾಡಿಕೊಂಡು 'ಬ್ರಹ್ಮಜಿಜ್ಞಾಸಾ ಕರ್ತವ್ಯಾ' ಎಂದೇ ಅರ್ಥ ಹೇಳಬೇಕೆಂದು ಸೂತ್ರಭಾಷ್ಯದಲ್ಲಿ ಹೇಳಿದ್ದನ್ನು ಸೂಚಿಸಿದರು. ಇದು ಒಂದು ಸಮಾಧಾನ.

(ii) 'ತದ್ ವಿಜಿಜ್ಞಾಸಸ್ವ' (ಖಂಡ 34), ಆತ್ಮಾನಂ ಪಶ್ಯೇತ್ (ಬೃ.೪/೪/೨೩)= ಗುಣಪರಿಪೂರ್ಣನಾದ ಭಗವಂತನನ್ನು ಅರಿಯಬೇಕು (ಅರಿತು ನೋಡಬೇಕು), ಇತ್ಯಾದಿ ಆಜ್ಞಾರ್ಥಕ ಕ್ರಿಯೆಗಳು ಹೇಗೆ ಜಿಜ್ಞಾಸೆಗೆ ವಿಷಯವಾಗಿವೆಯೋ ಹಾಗೆಯೇ 'ಸ ವಿಜಿಜ್ಞಾಸಿತವ್ಯಃ' (ಛಾಂ. ೮/೭/೭) ಉಪಕ್ರಮಾದಿ ಲಿಂಗಗಳಿಂದ ಪರಮಾತ್ಮನ ಜಿಜ್ಞಾಸಾ ಮಾಡಿ ಅರಿತುಕೊಳ್ಳಬೇಕು. 'ಆತ್ಮಾವಾ ಅರೇದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ' (ಬೃ.೬/೫/೬) ಎಲೌ ಮೈತ್ರೇಯಿ, ಆ ಭಗವಂತನನ್ನು ಶ್ರವಣ ಮನನ ನಿಧಿದ್ಯಾಸಾದಿ ಸಾಧನಗಳಿಂದ ಪ್ರತ್ಯಕ್ಷೀಕರಿಸಿಕೊಳ್ಳಬೇಕು ಇವೇ ಮೊದಲಾದ ವಿಧ್ಯರ್ಥಕ ಕೃದಂತಗಳು ಹೇಳುವ ವಿಧಿಯೂ ಜಿಜ್ಞಾಸೆಗೆ ವಿಷಯವೆಂಬುದನ್ನು 'ವಿಜಿಜ್ಞಾಸ್ಯಃ' ಎಂಬಲ್ಲಿರುವ ಕೃತ್ ಪ್ರತ್ಯಯ ತೋರಿಸುತ್ತದೆ.

(iii) ಬ್ರಹ್ಮಜಿಜ್ಞಾಸಾ ಎಂದು ಸೂತ್ರದಲ್ಲಿ ಹೇಳಿದಂತೆಯೇ ಹೇಳಿದ್ದರೆ ಜಿಜ್ಞಾಸೆಗೇ ಪ್ರಾಧಾನ್ಯ ಬರುತ್ತಿತ್ತು.* ಬ್ರಹ್ಮನಿಗೆ ಬರುತ್ತಿರಲಿಲ್ಲ. ಇದನ್ನು ತಪ್ಪಿಸಿ ವಿಷ್ಣುವಿಗೇ ಪ್ರಾಧಾನ್ಯತೆ ಬರುವುದಕ್ಕಾಗಿ 'ವಿಷ್ಣುರೇವ ವಿಜಿಜ್ಞಾಸ್ಯಃ'—ವಿಷ್ಣುವೇ ಜಿಜ್ಞಾಸೆಗೆ ವಿಷಯನಾಗಬೇಕು ಎಂದು ಹೇಳಿದರು.

(iv) ಈ ಜಿಜ್ಞಾಸಾಧಿಕರಣದಲ್ಲಿ ಮಾತ್ರವಲ್ಲ, ಮುಂದಿನ ಎಲ್ಲಾ ಅಧಿಕರಣಗಳಲ್ಲೂ ಅನ್ವಯಿಸಿಕೊಳ್ಳುವದಕ್ಕೆ ಅನುಕೂಲವಾಗಲೆಂದೂ 'ವಿಷ್ಣು' ಎಂದು ಪ್ರಥಮಾ ವಿಭಕ್ತ್ಯಂತವಾಗಿ ಹೇಳಿದ್ದಾರೆ. ಇದರಿಂದ 'ವಿಷ್ಣುರೇವ ಸರ್ವಕರ್ತಾ' 'ವಿಷ್ಣುರೇವ ಆಗಮೋದಿತಃ' ಎಂದು ಮುಂತಾಗಿ ಅನ್ವಯಿಸಿಕೊಳ್ಳಲು ಅನುಕೂಲವಾಗಿದೆ.

40. ಶಬ್ದಗಳ ಕ್ರಮವೇ ಅಧ್ಯಾಯಕ್ರಮ ಸೂಚಕ : ಬ್ರಹ್ಮಸೂತ್ರಗಳಲ್ಲಿ ಮೊದಲಿನ ಎರಡು ಅಧ್ಯಾಯಗಳಿಗೆ ವಿಷ್ಣುವೇ ವಿಷಯನಾಗಿದ್ದಾನೆ ಎಂಬುದನ್ನು ಸೂಚಿಸುವುದಕ್ಕಾಗಿ 'ವಿಷ್ಣುರೇವ' ಎಂದು ಪ್ರಾರಂಭದಲ್ಲೇ ಹೇಳಿದ್ದಾರೆ. ಮುಂದಿನ ಎರಡು ಅಧ್ಯಾಯಗಳ ವಿಷಯ ಜಿಜ್ಞಾಸೆಯೇ ಆದ್ದರಿಂದ 'ವಿಜಿಜ್ಞಾಸ್ಯ' ಎಂದು ಕೊನೆಯಲ್ಲಿ ಹೇಳಿದರು. ಈ ಎರಡು (ಮೂರು -ನಾಲ್ಕು) ಅಧ್ಯಾಯಗಳಲ್ಲೂ ಮೂರನೆಯ ಅಧ್ಯಾಯದ ಮೊದಲನೆಯ ಎರಡು ಪಾದಗಳಲ್ಲಿ ನಿರೂಪಿತವಾದ ವೈರಾಗ್ಯ ಮತ್ತು ಭಕ್ತಿಗಳೆಂಬ ಅಧಿಕಾರವನ್ನು 'ವಿ' ಉಪಸರ್ಗದಿಂದ ಸೂಚಿಸಿದ್ದಾರೆ. ಹೀಗೆ ಪದಗಳ ಕ್ರಮದಿಂದಲೇ ಶ್ರೀಮಧ್ವಾಚಾರ್ಯರು ಅಧ್ಯಾಯಗಳ ಕ್ರಮವನ್ನು ಸೂಚಿಸಿದ್ದಾರೆ. 'ವಿಜಿಜ್ಞಾಸ್ಯಃ' ಎಂದರೆ ಜಿಜ್ಞಾಸೆ ಮಾಡಲ್ಪಡಬೇಕಾದವನು ಎಂಬುದು ಒಂದು

---

* ವ್ಯಾಕರಣರೀತ್ಯಾ ತತ್ಪುರುಷಸಮಾಸವು ಉತ್ತರಪದಾರ್ಥಪ್ರಧಾನ. ರಾಮದೂತ ಹನುಮಂತ ಎಂದಾಗ ಹನುಮಂತ ದೂತನೇ ಹೊರತು ರಾಮನಲ್ಲ. ಹೀಗೆಯೇ ಬ್ರಹ್ಮಜಿಜ್ಞಾಸಾ ಎಂದಾಗ ಜಿಜ್ಞಾಸಾ ಪದ ಉತ್ತರಪಾದ್ದರಿಂದ ಅದಕ್ಕೇ ಪ್ರಾಧಾನ್ಯತೆ ಬರುತ್ತದೆ.

ಧರ್ಮ (ಗುಣ ಅಥವಾ ಲಕ್ಷಣ). ಆ ಧರ್ಮವು ವಿಷ್ಣುವಿನಲ್ಲಿರುವುದರಿಂದ ವಿಷ್ಣು 'ಧರ್ಮಿ' (ಗುಣವುಳ್ಳವನು) ಆಗುತ್ತಾನೆ. ಧರ್ಮಿಯೇ ಇಲ್ಲದಿದ್ದರೆ ಧರ್ಮದ ಪ್ರಸಕ್ತಿ ಬರುವದಿಲ್ಲ ಎಂಬುದು ಶಾಸ್ತ್ರೀಯ (ಮಹಾಭಾಷ್ಯದ) ವಿಚಾರ. ಅದನ್ನು ಲಕ್ಷಿಸಿ ಧರ್ಮಿಯಾದ ವಿಷ್ಣುವನ್ನು ಮೊದಲು ಹೇಳಿ ಅನಂತರ 'ವಿಜಿಜ್ಞಾಸ್ಯಃ' ಎಂಬ ಧರ್ಮವನ್ನು ಹೇಳಿದ್ದಾರೆ ಎಂಬುದೂ ಒಂದು ರೀತಿಯ ಶಾಸ್ತ್ರೀಯ ಸಮಾಧಾನ. ಅಂತೂ ಒಟ್ಟಿನಲ್ಲಿ ಶ್ರೀಮದಾಚಾರ್ಯರು ವಿಷ್ಣುರೇವ ವಿಜಿಜ್ಞಾಸ್ಯಃ ಎಂಬ ಎಂಟು ಅಕ್ಷರಗಳಲ್ಲೇ ಎಷ್ಟು ಭಾವಗಳನ್ನು ಅಡಗಿಸಿಟ್ಟಿದ್ದಾರೆ ಎಂಬುದನ್ನು ನಾವು ನಮ್ಮ ಜ್ಞಾನದ ಮಟ್ಟಕ್ಕೆ ತಕ್ಕಂತೆ ನಿರೂಪಣೆ ಮಾಡಿದ್ದೇವೆ. ಇವುಗಳನ್ನು ಪ್ರತಿಯೊಬ್ಬರೂ ಓದಿ ಯಥಾಮತಿ ಅರ್ಥಮಾಡಿಕೊಳ್ಳತಕ್ಕದ್ದು.

ಇಲ್ಲಿಗೆ ಜಿಜ್ಞಾಸಾಧಿಕರಣ ನಿರೂಪಣೆ ಮುಗಿಯಿತು.

2. ಜನ್ಮಾಧಿಕರಣ

41. ಪ್ರಥಮ ಸೂತ್ರದೊಡನೆ ಮುಂದಕ್ಕೆ ಸಂಗತಿ : ಎರಡನೆಯ ಸೂತ್ರವನ್ನು ಆರಂಭಿಸಿ ಕೊಟ್ಟಕೊನೆಯ ಸೂತ್ರದವರೆಗೂ ಪ್ರಥಮ ಸೂತ್ರದಲ್ಲಿ ಹೇಳಿದ ಜಿಜ್ಞಾಸೆಯನ್ನೇ ಮುಂದು ವರಿಸಿದ್ದಾರೆ. ಇನ್ನು ಸನ್ಯಾಯರತ್ನಾವಳಿಕಾರರಾದ ಶ್ರೀಮತ್ಪದ್ಮನಾಭತೀರ್ಥರು ತೋರಿಸಿರು ವಂತೆ, ಜಿಜ್ಞಾಸೆಯೆಂದರೆ ಲಕ್ಷಣ ಪ್ರಮಾಣ ಸಾಧನ ಮತ್ತು ಫಲಗಳ ವಿವರಣೆಯೇ ಆಗಿದೆ. ಅದಕ್ಕೆ ಅನುಗುಣವಾಗಿ ದ್ವಿತೀಯ (ಸೂತ್ರ) ಅಧಿಕರಣದಲ್ಲಿ ಲಕ್ಷಣವನ್ನು ಮೂರನೆಯ ಸೂತ್ರದಿಂದ ಮುಂದಿನ ಸ್ವಲ್ಪ ಭಾಗದಲ್ಲಿ ಪ್ರಮಾಣವನ್ನೂ ಹೇಳಿದ್ದಾರೆ; ಸಾಧನ-ಫಲಗಳನ್ನು ಕಡೆಯ ಎರಡು ಅಧ್ಯಾಯಗಳಲ್ಲಿ ಹೇಳಿದ್ದಾರೆಂದು ಹಿಂದೆಯೇ ಹೇಳಿದ್ದೇವಷ್ಟೆ (ಖಂ. 40) ಆ ಪೈಕಿ ಲಕ್ಷಣವೆಂಬ ಸ್ವರೂಪವು ಸಿದ್ಧವಾದ ನಂತರವೇ ಪ್ರಮಾಣಾಕಾಂಕ್ಷೆ ಹುಟ್ಟುವುದಾದ್ದ ರಿಂದ ಮೊದಲು ಎರಡನೇ ಅಧಿಕರಣ(ಸೂತ್ರ)ದಲ್ಲಿ ಪ್ರಥಮ ಸೂಕ್ತ ಪ್ರಸಕ್ತನಾದ ಬ್ರಹ್ಮನ ಲಕ್ಷಣವನ್ನೇ ಹೇಳುತ್ತಾರೆ.

42. ಸೂತ್ರದ ಅರ್ಥ : ಓಂ ಜನ್ಮಾದ್ಯಸ್ಯ ಯತಃ ಓಂ ಎಂಬುದೇ ಎರಡನೇ ಸೂತ್ರ. ಇದರಲ್ಲಿ ಓಂ ಎಂಬುದು ಸೂತ್ರಕ್ಕೆ ಸಂಪುಟೀಕರಣ (ಖಂಡ 23) ಜನ್ಮ+ಆದಿ=ಜನ್ಮಾದಿ, ಅಸ್ಯ, ಯತಃ ಎಂದು ಪದಚ್ಛೇದ. ಯತಃ ಎಂಬ ಪದದ ಬಲದಿಂದ ತತ್ ಪದ ಅಧ್ಯಾಹಾರ ಮಾಡಿಕೊಳ್ಳಬೇಕು. ಪ್ರಥಮ ಸೂತ್ರದಿಂದ ಬ್ರಹ್ಮ ಎಂಬುದನ್ನು ಅನುವೃತ್ತಿ ಮಾಡಿಕೊಳ್ಳ ಬೇಕು. ಅಸ್ಯ=ಇದರ ಎಂದರೆ ಪ್ರತ್ಯಕ್ಷಾದಿ ಪ್ರಮಾಣಸಿದ್ಧವಾದ ಮತ್ತು ಚೇತನಾಚೇತನಾತ್ಮಕ ವಾದ ಜಗತ್ತಿನ ಎಂದರ್ಥ. ಜನ್ಮ+ಆದಿ (ಇದು ನಪುಂಸಕ ಲಿಂಗರೂಪ)=ಜನ್ಮವೇ (ಸೃಷ್ಟಿಯೇ) ಮೊದಲಾದುದು, ಯತಃ=ಯಾರ ದೆಸೆಯಿಂದ ಆಗುತ್ತದೋ, ತತ್=ಅದೇ, ಬ್ರಹ್ಮ=ಬ್ರಹ್ಮವು. ಜನಸಾಮಾನ್ಯದಲ್ಲಿ ಸೃಷ್ಟಿ ಸ್ಥಿತಿ ಲಯಗಳೆಂಬ ಮೂರಕ್ಕೆ ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳೇ ಕಾರಣರೆಂದು ಪ್ರಸಿದ್ಧಿಯಿರುವುದರಿಂದ ಅದನ್ನು ನಿಷೇಧಿಸಿ ಸ್ಕಾಂದ ಪುರಾಣವು ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷವೆಂಬ ಎಂಟು (ಅಷ್ಟಕವು) ಶ್ರೀಹರಿಯಿಂದಲೇ ಆಗುತ್ತವೆಯೆಂದು ಸ್ಪಷ್ಟವಾಗಿ ಹೇಳು

ತ್ತದೆ. ಅದರಂತೆ ಸೂತ್ರದಲ್ಲಿಯ ಆದಿ ಶಬ್ದವು ಈ ಎಂಟನ್ನೂ ಹೇಳುತ್ತದೆ. ಅನೇಕ ಶ್ರುತಿಗಳು ಈ ಎಂಟರ ಪೈಕಿ ಒಂದೊಂದನ್ನೋ ಅಥವಾ ಎರಡು ಮೂರು ಅಥವಾ ಹೆಚ್ಚು ಲಕ್ಷಣ ಗಳನ್ನೋ ಹೇಳುವುದರಿಂದ ಎಂಟೂ ಬೇರೆ ಬೇರೆ ಲಕ್ಷಣಗಳೆಂದು ಗ್ರಹಿಸಬೇಕೇ ವಿನಾ ಎಂಟನ್ನೂ ಸೇರಿಸಿ ಒಂದು ಲಕ್ಷಣವೆಂದು ಹೇಳುವ ಹಾಗಿಲ್ಲ ಎಂಬ ಅಂಶವು ಸುಧಾದಲ್ಲೂ ಚಂದ್ರಿಕಾದಲ್ಲೂ ಸ್ಪಷ್ಟಪಡಿಸಲ್ಪಟ್ಟಿದೆ.

43. ಅಣುಭಾಷ್ಯದಲ್ಲಿ ಜನ್ಮಾಧಿಕರಣ : ಜನ್ಮಾಧಿಕರಣದ ಪ್ರಮೇಯವನ್ನು ಅಣುಭಾಷ್ಯ ದಲ್ಲಿ ಸರ್ವಕರ್ತಾ ಎಂಬ ನಾಲ್ಕು ಅಕ್ಷರಗಳಲ್ಲಿ ಸಂಗ್ರಹಿಸಿ ಹೇಳಿದ್ದಾರೆ. ಸರ್ವ ಶಬ್ದವನ್ನು ತಂತ್ರದಿಂದ* ಎರಡು ಸರಿ ಅನ್ವಯಿಸಿಕೊಳ್ಳಬೇಕು. ವಿಷ್ಣುರೇವ ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಸರ್ವಕರ್ತಾ ಎಂಬುದಕ್ಕೆ ಎರಡು ಬೇರೆ ಬೇರೆ ವ್ಯಾಕರಣ ಪ್ರಕ್ರಿಯೆಗೆ ಅನುಗುಣವಾಗಿ ಸರ್ವಸ್ಯ ಕರ್ತಾ ಅಥವಾ ಸರ್ವಂ ಕರ್ತಾ ಎಂದು ವಿಗ್ರಹ ಮಾಡಬೇಕೆಂದು ತತ್ವಮಂಜರಿಯಲ್ಲಿ ತೋರಿಸಿದ್ದಾರೆ. ವಿಗ್ರಹ ಹೇಗೆ ಮಾಡಿದರೂ ಅರ್ಥ ಮಾತ್ರ ಒಂದೇ.

44. ಮೂಲದ ವಾಕ್ಯಕ್ಕೆ ಅರ್ಥ : ಸರ್ವ=ಚೇತನಾಚೇತನಾತ್ಮಕವಾದ ಸಕಲ ಜಗತ್ತಿನ, ಸರ್ವ ಸೃಷ್ಟಿ ಸ್ಥಿತಿ ಲಯಾದಿ ಎಂಟನ್ನೂ, ಕರ್ತಾ=ನಡೆಸುವವನು, ವಿಷ್ಣುರೇವ=ವಿಷ್ಣುವೇ ಹೊರತು ಬೇರೆ ಯಾರೂ ಅಲ್ಲ ಎಂದರ್ಥ. ವಿಷ್ಣುವೇ ಬ್ರಹ್ಮನಲ್ಲಿ ನಿಂತು ಸೃಷ್ಟಿಕಾರ್ಯ ನಡೆಸುತ್ತಾನೆಂದೂ ಈಶ್ವರನಲ್ಲಿ ನಿಂತು ಲಯಕಾರ್ಯ ನಡೆಸುತ್ತಾನೆಂದೂ ಅನೇಕ ಪ್ರಮಾಣ ಗಳಿಂದ ಸ್ಪಷ್ಟವಾಗುತ್ತದೆ. ಅದೂ ಅಲ್ಲದೆ ಬ್ರಹ್ಮರುದ್ರಾದಿಗಳೆಲ್ಲ ಕಾಲತಃ ಅನಿತ್ಯರಾದ್ದರಿಂದ ಸೃಷ್ಟ್ಯಾದಿಗಳು ವಿಷ್ಣುವಿನಲ್ಲಿ ಮಾತ್ರವೇ ಮುಖ್ಯವಾಗಿ ಕೂಡುತ್ತವೆ ಎಂಬುದನ್ನು ಏವಕಾರ ತೋರಿಸುತ್ತದೆ.

ಈ ಪ್ರಕಾರ ಜೀವಜಡಾತ್ಮಕವಾದ ಸಕಲ ಜಗತ್ತಿಗೂ ಸೃಷ್ಟಿ ಸ್ಥಿತಿ ಸಂಹಾರ ನಿಯಮನ ಜ್ಞಾನಾಜ್ಞಾನ ಬಂಧಮೋಕ್ಷಗಳೆಂಬ ಎಂಟನ್ನೂ ಸ್ವತಂತ್ರವಾಗಿ ಯಥೋಚಿತವಾಗಿ ಕೊಡು ವವನು ಶ್ರೀ ವಿಷ್ಣುವೇ ಎಂಬ ಪ್ರಮೇಯವೇ ಸಕಲ ಶ್ರುತಿಸ್ಮೃತಿಸಿದ್ಧವಾದ ಸಂಗತಿ. ಅದನ್ನು ವಿಮರ್ಶೆ ಮಾಡಿ ವಿಷ್ಣುವಿನಲ್ಲಿ ಆ ಗುಣಗಳಿರುವುದರಿಂದಲೇ ಅವನು ಗುಣಪರಿಪೂರ್ಣನೆಂಬ ವಿಚಾರವನ್ನು ಮಥನ ಮಾಡಿ ತಿಳಿದುಕೊಳ್ಳಬೇಕೆಂಬುದೇ ಜನ್ಮಾಧಿಕರಣದ ಮುಖ್ಯ ಸಾರಾಂಶ.

3. ಶಾಸ್ತ್ರಯೋನಿತ್ವಾಧಿಕರಣ

45. ಈ ಅಧಿಕರಣದ ಪ್ರಸಕ್ತಿ : ಎರಡನೇ ಸೂತ್ರದಲ್ಲಿ ಸೃಷ್ಟ್ಯಾದಿ ಕರ್ತೃತ್ವವೇ ಬ್ರಹ್ಮನ ಲಕ್ಷಣವೆಂದು ಪ್ರತಿಪಾದಿಸಿದ್ದನ್ನು ಕೇಳಿ ಪೂರ್ವಪಕ್ಷಿ ಹೀಗೆ ವಾದ ಮಾಡುತ್ತಾನೆ—ವೇದ ಗಳಲ್ಲಿ ವಿಷ್ಣುವು ಸೃಷ್ಟ್ಯಾದಿಗಳನ್ನು ನಡೆಸುತ್ತಾನೆಂದು ಹೇಳಿದರೆ ಶೈವಾದ್ಯಾಗಮಗಳಲ್ಲಿ ಶಿವಾದಿಗಳೂ ಸೃಷ್ಟ್ಯಾದಿಗಳನ್ನು ಮಾಡುತ್ತಾರೆಂದು ಹೇಳಿದೆ. ಆ ಆಗಮಗಳನ್ನು ಸರ್ವಜ್ಞರಾದ ಶಿವಾದಿಗಳೇ ರಚಿಸಿದರಾದ್ದರಿಂದ ವೇದವಾಕ್ಯಗಳಂತೆ ಇವೂ ಪ್ರಮಾಣವೇ ಆಗಿವೆ. ಆದಕಾರಣ

* ಒಂದು ಶಬ್ದವನ್ನು ಅದೇ ಸೂತ್ರದಲ್ಲಿ ಅಥವಾ ವಾಕ್ಯದಲ್ಲಿ ಮತ್ತೆ ಮತ್ತೆ ಅನ್ವಯಿಸಿಕೊಳ್ಳುವುದಕ್ಕೆ ತಂತ್ರವೆಂದು ಹೆಸರು. ಬೇರೆ ಸೂತ್ರದಿಂದ ಅನ್ವಯಿಸಿಕೊಂಡರೆ ಅದಕ್ಕೆ ಅನುವೃತ್ತಿಯೆಂದು ಹೆಸರು.

ಆ ಆಗಮದ ಪ್ರಮಾಣದಿಂದಲೂ ತರ್ಕದ (ಅನುಮಾನದ) ಬಲದಿಂದಲೂ ಶೈವಾದಿಗಳೂ ಜಗತ್ತಿನ ಸೃಷ್ಟಿಸ್ಥಿತ್ಯಾದಿಗಳಿಗೆ ಕಾರಣರೆಂಬುದು ಸಿದ್ಧವಾಗುವುದರಿಂದ ವಿಷ್ಣುರೇವ ಸರ್ವಕರ್ತಾ ಎಂದು ಹೇಳಿದ್ದು ಸರಿಯಲ್ಲ. ಹೀಗೆ ಪೂರ್ವಪಕ್ಷ ಬಂದರೆ ಮೂರನೆಯ ಸೂತ್ರವು ಈ ಪೂರ್ವಪಕ್ಷವನ್ನು ನಿರಾಕರಿಸುತ್ತಾ ಜಿಜ್ಞಾಸೆಗೆ ಬೇಕಾದ ಪ್ರಮಾಣವನ್ನು (ಸಾಧನ ಸಾಮಗ್ರಿಯನ್ನು) ತೋರಿಸಿಕೊಡುತ್ತದೆ. ಈ ಪ್ರಕಾರ ಹಿಂದಿನ ಸೂತ್ರಕ್ಕೂ ಈ ಸೂತ್ರಕ್ಕೂ ಅನಂತರ ಸಂಗತಿ. (ಚಂದ್ರಿಕಾ)

46. ಸೂತ್ರಾರ್ಥ : ಓಂ ಶಾಸ್ತ್ರಯೋನಿತ್ವಾತ್ ಓಂ ಎಂಬುದೇ ಸೂತ್ರ. ಇದು ಭಾವ ಪ್ರಧಾನ ನಿರ್ದೇಶ ಎಂದರೆ ಈ ಹೇಳಿಕೆಯಲ್ಲಿ ಭಾವವನ್ನೇ ಮುಂದುಮಾಡಿಕೊಂಡು ವಿಚಾರವನ್ನು ನಿರೂಪಣೆ ಮಾಡಿದ್ದಾರೆ ಎಂದರ್ಥ. ಇಡೀ ಸೂತ್ರವು ಒಂದೇ ಸಮಾಸಪದವಾದರೂ ಅದರಲ್ಲಿ ಶಾಸ್ತ್ರ ಮತ್ತು ಯೋನಿ ಎಂಬ ಎರಡು ಪದಗಳ ಜೋಡಣೆ ಇದೆ. ಎರಡು ಪದಗಳೂ ಸಾಮಾನ್ಯಾರ್ಥದಲ್ಲಿ ಪ್ರಯುಕ್ತವಾಗಿರದೆ ವಿಶಿಷ್ಟಾರ್ಥದಲ್ಲೇ ಬಳಸಲ್ಪಟ್ಟಿವೆ. ಶಾಸ್ತ್ರ ಶಬ್ದವು ಇಲ್ಲಿ ನಿರ್ವಿವಾದ ಪ್ರಾವೀಣ್ಯತೆಯುಳ್ಳ ಋಗ್ವೇದಾದಿ ನಾಲ್ಕು ವೇದಗಳನ್ನೂ ಅವುಗಳಿಗೆ ಅನುಕೂಲವಾದ ಮಹಾಭಾರತ, ಮೂಲರಾಮಾಯಣ, ಪಂಚರಾತ್ರ ಮತ್ತು ಪುರಾಣಾದಿ ಸ್ಮೃತಿಗಳನ್ನೂ ಮಾತ್ರ ಸೂಚಿಸುತ್ತದೆ. ಯೋನಿ ಶಬ್ದಕ್ಕೆ ಸಾಮಾನ್ಯವಾಗಿ ತಾರಣ ಎಂದು ಅರ್ಥವಾಗುತ್ತಿದ್ದರೂ ಇಲ್ಲಿ ಜ್ಞಪ್ತಿ ಕಾರಣ* (ಎಂದರೆ ವಿಚಾರವನ್ನು ತಿಳಿದುಕೊಳ್ಳಲು ಉಪಯುಕ್ತ ಸಾಧನ) ಅರ್ಥಾತ್ ಪ್ರಮಾಣ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ. ಶಾಸ್ತ್ರಂ ಯೋನಿ–ಪ್ರಮಾಣಂ ಯಸ್ಯೇತಿ ಶಾಸ್ತ್ರಯೋನಿ ಎಂದು ಬಹುವ್ರೀಹಿ ಸಮಾಸ. ಯಸ್ಯ=ಯಾರಿಗೆ (ಬ್ರಹ್ಮನಿಗೆ), ಶಾಸ್ತ್ರಂ=ಋಗ್ವೇದಾದಿ ಶ್ರುತಿಗಳೂ ಭಾರತಪಂಚರಾತ್ರಾದಿ ಸ್ಮೃತಿಗಳೂ, ಯೋನಿಃ=ತಿಳಿದುಕೊಳ್ಳಲು ಸಾಧನವಾಗಿವೆಯೋ ಅದು ಶಾಸ್ತ್ರಯೋನಿ (ಬ್ರಹ್ಮಶಬ್ದ ನಪುಂಸಕ ಲಿಂಗವಾದ್ದರಿಂದ ಇದೂ ನಪುಂಸಕಲಿಂಗದಲ್ಲಿದೆ) ತಸ್ಯ ಭಾವಃ - ಶಾಸ್ತ್ರಯೋನಿತ್ವಂ; + ತಸ್ಮಾತ್=ಶಾಸ್ತ್ರಯೋನಿತ್ವಾತ್ ಎಂದು ವಿಗ್ರಹ. ಇದಕ್ಕೆ ಅರ್ಥವೇನಾಯಿತೆಂದರೆ - ಆ ಪರಬ್ರಹ್ಮನು ಜಗತ್ಸೃಷ್ಟ್ಯಾದಿಕಾರಣನೆಂಬುದನ್ನು ತಿಳಿದುಕೊಳ್ಳುವುದಕ್ಕೆ ಋಗ್ವೇದಾದಿ ಶ್ರುತಿಗಳೂ ಭಾರತಾದಿ ಸ್ಮೃತಿಗಳು ಮಾತ್ರವೇ ಸಾಧನ(ಅಥವಾ ಪ್ರಮಾಣ)ವಾಗಿರುವುದರಿಂದ ಎಂಬುದೇ ಸೂತ್ರಾರ್ಥ. ಮುಂದಿನ ಭಾಗವನ್ನು ಹೀಗೆ ಸೇರಿಸಿಕೊಂಡು ವಾಕ್ಯವನ್ನು ಪೂರ್ಣ ಮಾಡಬೇಕು. ದುಶ್ಶಾಸ್ತ್ರಗಳಾದ್ದರಿಂದ ಶೈವಾದಿ ಆಗಮಗಳಾಗಲಿ, ಮನಸ್ಸಿಗೆ ಬಂದಂತೆ ಹೇಳುವುದಕ್ಕೆ ಬರುವುದರಿಂದ ಕೇವಲ ತರ್ಕ(ಅನುಮಾನ)ವಾಗಲಿ, ಪ್ರಮಾಣಗಳಲ್ಲ. ಆದ್ದರಿಂದ ಆ ಆಗಮಗಳಾಗಲಿ ಕೇವಲ ತರ್ಕವಾಗಲಿ ವಿಷ್ಣುವೇ ಜಗತ್‌ಸೃಷ್ಟ್ಯಾದಿ ಕರ್ತನೆಂಬುದನ್ನು ವಿರೋಧಿಸಲಾರವು. ಇದರಿಂದ ಆ ವಿಷ್ಣು ಸೃಷ್ಟ್ಯಾದ್ಯಷ್ಟಕರ್ತನಾದ್ದರಿಂದ ಅನಂತ ಗುಣಪೂರ್ಣನೆಂಬುದು ಸಿದ್ಧಿಸುತ್ತದೆ. ಈ ಅಂಶವನ್ನೇ ಅಣುಭಾಷ್ಯದ 'ಆಗಮೋದಿತಃ' ಎಂಬ ವಾಕ್ಯ ತಿಳಿಸುತ್ತದೆ.

47. ಆಗಮೋದಿತಃ : ಆ = ಸಮ್ಯಗ್ ಗಮ್ಯಂತೇ ಅರ್ಥಾ ಏಭಿರಿತಿ ಆಗಮಾಃ ಎಂಬ

---

* ಉದಾ : ಶಬ್ದಗಳ ಅರ್ಥವನ್ನು ತಿಳಿದುಕೊಳ್ಳಲು ಕೋಶವು (ಡಿಕ್ಶನರಿ) ಜ್ಞಪ್ತಿಸಾಧನ. ರೈಲು ಹೊರಡುವ ವೇಳೆ ತಿಳಿಯಲು ವೇಳಾಪತ್ರಿಕೆ ಜ್ಞಪ್ತಿಸಾಧನ ಇತ್ಯಾದಿ.

ವ್ಯುತ್ಪತ್ತಿಯಿಂದ ಧರ್ಮ ಅಧರ್ಮ ಸ್ವರ್ಗ ಮೋಕ್ಷಾದಿ ಅತೀಂದ್ರಿಯವಾದ ಸಕಲ ವಸ್ತುಗಳನ್ನು ಯಾವ ಋಗ್ವೇದಾದಿಗಳೂ ಭಾರತಾದಿ ಸ್ಮೃತಿಗಳೂ ತಿಳಿಸಿಕೊಡುತ್ತವೋ ಅವಕ್ಕೇ ಆಗಮ ಗಳೆಂದು ಹೆಸರು. ಆಗಮೈಃ ಉದಿತಃ = ಆಗಮೋದಿತಃ | ವದ್-ಹೇಳು ಮಾತಾಡು (ಭ್ವಾದಿ. ಪರಸ್ಮೈ) ಎಂಬ ಧಾತುವಿನ ಭೂತ ಕೃದಂತ ರೂಪವೇ ಉದಿತಃ. ಇದಕ್ಕೆ ಹೇಳಲ್ಪಟ್ಟ ಅಥವಾ ಉಕ್ತನಾದ ಎಂದರ್ಥ. ಋಗಾದಿ ಸಚ್ಛಾಸ್ತ್ರಗಳಿಂದ (ಸರ್ವಕರ್ತನೆಂದು) ಹೇಳಲ್ಪಟ್ಟವನು ಎಂದರ್ಥ. ಇದನ್ನು ಸರ್ವಕರ್ತಾವಿಷ್ಣುರೇವ ಎಂಬುದರೊಡನೆ ಸೇರಿಸಿಕೊಂಡರೆ ಈ ಪೂರ್ಣ ವಾಕ್ಯದ ಅರ್ಥ ಹೀಗಾಗುತ್ತದೆ—ಋಗ್ವೇದಾದ್ಯಾಗಮಗಳಿಂದ ಸೃಷ್ಟ್ಯಾದ್ಯಷ್ಟಕರ್ತನು ಇವನೇ ಎಂದು ಹೇಳಲ್ಪಡುವದರಿಂದ ಸ್ಥಾವರಜಂಗಮಾತ್ಮಕ ಸಕಲ ಜಗತ್ತಿಗೂ ಸೃಷ್ಟಿಸ್ಥಿತ್ಯಾದಿ ಎಂಟು ಕಾರ್ಯಗಳನ್ನು ನಡೆಸುವವನು ವಿಷ್ಣುವೇ ಹೊರತು ಶಿವಾದಿಗಳು ಬೇರೆ ಯಾರೂ ಅಲ್ಲ.

48. ಮೂರನೇ ಅಧಿಕರಣದ ಪ್ರಮೇಯಾಂಶಗಳು : ಋಗಾದಿ ಚತುರ್ವೇದಗಳೂ ಅವು ಗಳಿಗೆ ಅನುಕೂಲವಾದ ಮಹಾಭಾರತ ಮೂಲರಾಮಾಯಣ ಪಂಚರಾತ್ರ ಭಾಗವತಾದಿ ಪುರಾಣಗಳು ಇವುಗಳು ಮಾತ್ರವೇ ಶಾಸ್ತ್ರವೆನ್ನಿಸಿಕೊಳ್ಳುತ್ತವೆ. ಇವುಗಳೇ ಪ್ರಮಾಣ. ಇವಕ್ಕೆ ವಿರುದ್ಧವಾದುವೆಲ್ಲವೂ ಶಾಸ್ತ್ರವೂ ಅಲ್ಲ, ಪ್ರಮಾಣವೂ ಅಲ್ಲ. (2) ಭಗವಂತ ವಿಷ್ಣುವಿನ ಸ್ವರೂಪವನ್ನು ವೇದಗಳಲ್ಲದೆ ಬೇರೆ ಯಾವ ಗ್ರಂಥಗಳೂ ತಿಳಿಸಲಾರವು. ಆದ್ದರಿಂದ ಅವನನ್ನು ವೇದೈಕ ಸಮಧಿಗಮ್ಯ (ಕೇವಲ ವೇದಗಳಿಂದ ತಿಳಿಯಲ್ಪಡುವವನು) ಎನ್ನುತ್ತಾರೆ. (3) ತರ್ಕವು (ಅನುಮಾನವು) ಪ್ರಮಾಣವಾದರೂ ಶ್ರುತಿಸ್ಮೃತಿಗಳ ಸಹಾಯವಿಲ್ಲದ ಶುಷ್ಕ ತರ್ಕವು ಭಗವಂತನ ವಿಷಯದಲ್ಲಿ ನಿಷ್ಪ್ರಯೋಜಕ; ಇದನ್ನೇ 'ನೈಷಾ ತರ್ಕೇಣ ಮತಿರಾಪನೇಯಾ' ಎಂಬ ಕಠಶ್ರುತಿ (ಕ.ಉ.೧/೨/೯) ತಿಳಿಸುತ್ತದೆ. ತರ್ಕವನ್ನು ಹೇಗೆ ಬೇಕಾದರೂ ಮಾಡಲು ಸಾಧ್ಯವಿರುವುದರಿಂದ ಅದಕ್ಕೆ ನಿಯತ ಪ್ರಾಮಾಣ್ಯವಿಲ್ಲ. ಈ ವಿಚಾರವನ್ನು ಸುಧಾದಲ್ಲಿ ವಿಸ್ತಾರವಾಗಿ ಅನೇಕ ರೀತಿ ತರ್ಕ-ವಿತರ್ಕಗಳಿಂದ ಸ್ಥಾಪಿಸಿದ್ದಾರೆ.

4. ಸಮನ್ವಯಾಧಿಕರಣ

49. ಸಮನ್ವಯಕ್ಕೆ ಪ್ರಸಕ್ತಿ : ವಿಷ್ಣು ಸೃಷ್ಟ್ಯಾದ್ಯಷ್ಟಕರ್ತನೆಂಬುದನ್ನು ಶೈವಾದ್ಯಾಗಮಗಳಾ ಗಲಿ ಅನುಮಾನವಾಗಲಿ, ಪ್ರಮಾಣಗಳಲ್ಲವಾದ್ದರಿಂದ ವಿರೋಧಿಸಲಾರವು, ಒಪ್ಪಿಕೊಳ್ಳೋಣ. ಆದರೆ ವೇದಗಳಲ್ಲೇ ಅನೇಕ ಕಡೆ ಬ್ರಹ್ಮ ಶಿವಾದಿಗಳಿರಲಿ, ಇತರ ದೇವತೆಗಳೂ ಸೃಷ್ಟ್ಯಾದಿಕರ್ತ ರೆಂದು ಹೇಳಿದೆಯಲ್ಲಾ! ಆದಕಾರಣ 'ವಿಷ್ಣುರೇವ ಸರ್ವಕರ್ತಾ' ಎಂದು ಅವಧಾರಣ ಪೂರ್ವಕ ಹೇಳಿದ್ದು ಸರಿಯಲ್ಲ ಎಂದು ಆಶಂಕೆ (ಸಂದೇಹ) ಬಂದರೆ ಅದನ್ನು ಸೂತ್ರಕಾರರು ನಾಲ್ಕನೇ ಸೂತ್ರದಿಂದ ನಿವಾರಣೆ ಮಾಡುತ್ತಾರೆ. ಹೀಗೆ ಇಲ್ಲಿಯೂ ಹಿಂದಿನ ಅಧಿಕರಣಕ್ಕೆ, ಚಂದ್ರಿಕಾಚಾರ್ಯರು ತೋರಿಸುವಂತೆ, ಅನಂತರ ಸಂಗತಿ ಈ ಅಧಿಕರಣದ ಸಾರಾರ್ಥವನ್ನು ಅಣುಭಾಷ್ಯದಲ್ಲಿ ಸಮನ್ವಯಾತ್ ಎಂಬ ಒಂದೇ ಪದದಿಂದ ತೋರಿಸಿದ್ದಾರೆ. ಅದರಲ್ಲಿ ಸಂ+ಅನ್ವಯಾತ್ ಎಂದು ಪದಚ್ಛೇದ ಮಾಡಿಕೊಳ್ಳಬೇಕು. ಸಂ ಎಂಬುದನ್ನು ತಂತ್ರದಿಂದ ಆವೃತ್ತಿ ಮಾಡಿಕೊಂಡು ಅನ್ವಯ ಪದದೊಡನೆಯೂ ಅನುವೃತ್ತಿಯ ಇತರ ಪದಗಳೊಡ

ನೆಯೂ ಸೇರಿಸಿಕೊಳ್ಳಬೇಕು. ಆದರೆ ಅನ್ವಯ ಶಬ್ದದ ಅರ್ಥವೇ ಕ್ಲಿಷ್ಟವಾದ್ದರಿಂದ ಅದನ್ನೇ ಮೊದಲು ವಿವರಿಸುತ್ತೇನೆ.

50. ಅನ್ವಯ ಶಬ್ದಾರ್ಥ : ಅನ್ವಯ ಶಬ್ದವನ್ನು ಬಿಡಿಸಿದರೆ ಅನು (ಉಪಸರ್ಗ)+ ಅಯ ಎಂದಾಗುತ್ತದೆ. ಈ ಅಯ ಶಬ್ದವು (ಪರಿಮಳದಲ್ಲಿ ತೋರಿಸಿರುವಂತೆ) ಇಣ್ ಗತೌ (ಅದಾದಿ ಪರಸ್ಮೈ) ಹೋಗು ಎಂಬ ಅರ್ಥವುಳ್ಳ ಧಾತುವಿನ ಮೇಲೆ ಕರಣಾರ್ಥದಲ್ಲಿ 'ಏರಚ್' (ಪಾ. ೩/೩/೫೬) ಎಂಬ ಸೂತ್ರದಂತೆ ಅಚ್‌ಪ್ರತ್ಯಯ ಸೇರಿ ಆಗಿದೆ. ಏವಂಚ ಅನ್ವೀಯಂತೇ =ಶಕ್ತಿ ತಾತ್ಪರ್ಯಗೋಚರೇಣ ಸಂಬಧ್ಯಂತೇ ವಾಕ್ಯಾನ್ಯೇತೈರಿತಿ ಅನ್ವಯಾಃ ಎಂಬ ವ್ಯುತ್ಪತ್ತಿ ಯಿಂದ ಶಕ್ತಿ ತಾತ್ಪರ್ಯಗಳ ಮೂಲಕ ಯಾವ ಯುಕ್ತಿಗಳ (ಉಪಾಯಗಳ) ಸಹಾಯದಿಂದ ವೇದಗಳ ಅಥವಾ ಶಾಸ್ತ್ರದ ವಾಕ್ಯಗಳು ವಿರೋಧವಾಗದಂತೆ ಹೊಂದಿಸಲ್ಪಡುತ್ತವೋ ಅಂಥಾ ಯುಕ್ತಿಗಳಿಗೇ ಅನ್ವಯಗಳೆಂದು ಹೆಸರು. ಅರ್ಥಾತ್ ಒಂದು ವೇದವಾಕ್ಯಕ್ಕೆ ಅಥವಾ ಶಾಸ್ತ್ರ ವಾಕ್ಯಕ್ಕೆ ಪೂರ್ವಾಪರ ವಿರೋಧ ಬರದಂತೆ ಯಾವ ರೀತಿ ಅರ್ಥ ಹೇಳಬೇಕೆಂಬುದನ್ನು ತೋರಿಸಿಕೊಡುವ ಅಥವಾ ಈ ಸಂದರ್ಭದಲ್ಲಿ ಈ ಅರ್ಥವನ್ನೇ ಏಕೆ ಹೇಳಬೇಕು? ಬೇರೆ ಅರ್ಥ ಹೇಳಿದರೆ ಏನು ದೋಷ ಬರುತ್ತದೆ? ಎಂದು ತೋರಿಸಿಕೊಡುವ ಯುಕ್ತಿಗಳಿಗೆ ಅನ್ವಯ ಗಳೆಂದು ಹೆಸರು. ಆ ಯುಕ್ತಿಗಳಿಗೇ 'ಲಿಂಗ' ಎಂಬ ಇನ್ನೊಂದು ಹೆಸರೂ ಇದೆ. ಈ ಲಿಂಗಗಳು ಆರು-ಆರರ ಎರಡು ಗುಂಪಾಗಿದೆ. ಮೊದಲನೆಯ ಗುಂಪು 'ಉಪಕ್ರಮ'ದಿಂದ ಆರಂಭವಾಗು ವುದರಿಂದ ಅದನ್ನು ಉಪಕ್ರಮಾದಿ ಲಿಂಗಗಳೆನ್ನುತ್ತಾರೆ. ಎರಡನೆಯ ಗುಂಪು ಶ್ರುತಿಯಿಂದ ಆರಂಭವಾಗುವುದರಿಂದ ಅದನ್ನು ಶ್ರುತ್ಯಾದಿ ಲಿಂಗಗಳೆನ್ನುತ್ತಾರೆ.

51. ಉಪಕ್ರಮಾದಿ ಲಿಂಗಗಳು : 1. ಉಪಕ್ರಮ (ಪ್ರಾರಂಭ) ಉಪಸಂಹಾರ (ಸಮಾಪ್ತಿ). ಕೆಲವರ ಮತದಂತೆ ಇವೆರಡೂ ಬೇರೆ ಬೇರೆಯೇ; ಮತ್ತೆ ಕೆಲವರ ಅಭಿಪ್ರಾಯದಂತೆ ಒಂದೇ ಎಂದು ತೋರಿಸಲು ಇವೆರಡನ್ನೂ ಒಟ್ಟಿಗೆ ಹೇಳಿದೆ. 2. ಅಭ್ಯಾಸ (ಆವೃತ್ತಿ, ಹೇಳಿದ್ದೇ ಹೇಳುವುದು). 3. ಅಪೂರ್ವತಾ (ವಿಶೇಷೋಕ್ತಿ). 4. ಫಲ. 5. ಅರ್ಥವಾದ (ಸ್ತುತಿನಿಂದಾದಿ ಗಳು). 6. ಉಪಪತ್ತಿ (ಯುಕ್ತಿ). ಇವೇ ಮೊದಲನೆಯ ಆರು. ಇವುಗಳಲ್ಲಿ ಹಿಂದು ಹಿಂದಿನ ದಕ್ಕಿಂತ ಮುಂದು ಮುಂದಿನವು ಹೆಚ್ಚು ಹೆಚ್ಚು ಬಲಿಷ್ಠವೆಂದು ಬ್ರಹ್ಮತರ್ಕದಲ್ಲಿ ಹೇಳಿದೆ ಯೆಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ—ಉಪಕ್ರಮಾದಿ ಲಿಂಗಾನಾಂ ಬಲೀಯೋ ಹ್ಯುತ್ತರೋತ್ತರಮ್–ತತ್ತ್ವಪ್ರಕಾಶದಲ್ಲಿ ಈ ಬಲತ್ವವನ್ನು ಸಂಕ್ಷೇಪವಾಗಿ ತೋರಿಸಿದ್ದರಿಂದ ಚಂದ್ರಿಕಾದಲ್ಲಿ ಬಹಳ ವಿಸ್ತಾರವಾಗಿ ತೋರಿಸಿದ್ದಾರೆ.

52. ಶ್ರುತ್ಯಾದಿ ಲಿಂಗಗಳು : 1. ಶ್ರುತಿ (ಕಂಠತಃ ಉಕ್ತಿ) 2. ಲಿಂಗ (ಯುಕ್ತಿ) 3. ಸಮಾಖ್ಯಾ (ಒಂದೇ ರೀತಿ ಹೇಳುವಿಕೆ). ಉದಾಹರಣೆಗೆ ಹಿಂದೆ ಖಂಡ 30ರ iiiರಲ್ಲಿ ತೋರಿಸಿ ದಂತೆ ಒಂದು ಶ್ರುತಿ 'ಅಂಭಸ್ಯ ಪಾರೇ' ಎಂದು ಹೇಳಿದರೆ 'ಆಪೋ ನಾರಾ' ಎಂಬ ಸ್ಮೃತಿಯೂ ಅದೇ ವಿಚಾರವನ್ನೇ ಹೇಳುವುದು ಸಮಾಖ್ಯೆ. ಅಲ್ಲೇ ivರಲ್ಲಿ ತೋರಿಸಿದಂತೆ 'ಅಂಭಸ್ಯ ಪಾರೇ' ಎಂಬುದನ್ನೇ ಋಗ್ವೇದದ 'ಅಪ್ಸ್ವಂತಃ' ಹೇಳುತ್ತದೆ. ಇದೂ ಸಮಾಖ್ಯೆ. ಈ ಎರಡು ನಿದರ್ಶನಗಳಲ್ಲೂ ಅರ್ಥ ಒಂದೇ ಆದರೂ ಶಬ್ದಗಳು ಬೇರೆ ಬೇರೆ ಇವೆ; ಆದ್ದರಿಂದ

ಇದನ್ನು 'ಅರ್ಥತಃ ಸಮಾಖ್ಯೆ' ಎನ್ನುತ್ತಾರೆ. ಕೆಲವು ಸಂದರ್ಭಗಳಲ್ಲಿ ಶಬ್ದಗಳೂ ಒಂದೇ ಆಗಿರುವುದುಂಟು; ಅದನ್ನು 'ಶಬ್ದತಃ ಸಮಾಖ್ಯೆ' ಎನ್ನುತ್ತಾರೆ. ಉದಾಹರಣೆಗೆ ಅಂಭ್ರಣೀ ಸೂಕ್ತದಲ್ಲಿ (ಋ.೧೦/೧೨೫/೮) 'ಪರೋ ದಿವಾ ಪರ ಏನಾ ಪೃಥಿವ್ಯಾ' ಎಂದಿದ್ದಾರೆ. ವಿಶ್ವಕರ್ಮಸೂಕ್ತದಲ್ಲೂ (ಋ.೧೦/೮೨/೫) 'ಪರೋ ದಿವಾ ಪರ ಏನಾ ಪೃಥಿವ್ಯಾ' ಎಂದೇ ಇದೆ. ಇದು ಶಬ್ದತಃ ಸಮಾಖ್ಯೆಗೆ ಒಳ್ಳೆಯ ಉದಾಹರಣೆ.

4. ವಾಕ್ಯ (ನಿರಪೇಕ್ಷವಾದ ಕಥನ) 5. ಪ್ರಕರಣ 6. ಸ್ಥಾನ (ಅನೇಕ ಪ್ರಮೇಯಗಳನ್ನು ಕ್ರೋಢೀಕರಿಸಿ ಹೇಳುವುದು). ಇವು ಆರೂ ಇನ್ನೊಂದು ಗುಂಪು. ಇವುಗಳಲ್ಲಿ ಮುಂದು ಮುಂದಿನದಕ್ಕಿಂತ ಹಿಂದು ಹಿಂದಿನದು ಹೆಚ್ಚುಹೆಚ್ಚು ಪ್ರಬಲ. (ಅಥವಾ ಚಂದ್ರಿಕಾದಲ್ಲಿ ಹೇಳಿದಂತೆ 'ಉಪಕ್ರಮಾದೌ ಪರ ಬಲೀಯಸ್ತ್ವಂ, ಶ್ರುತ್ಯಾದೌ ತು ಪೂರ್ವ ಬಲೀಯಸ್ತ್ವಂ') ಏಕೆಂದರೆ ಅನುವ್ಯಾಖ್ಯಾನದಲ್ಲಿ ಹೇಳಿರುವಂತೆ 'ಶ್ರುತ್ಯಾದೌ ಪೂರ್ವಪೂರ್ವಂ ಚ (ಬಲೀಯಃ) ಬ್ರಹ್ಮತರ್ಕ ವಿನಿರ್ಣಯಾತ್'. ಈ ವಿಚಾರವು ಸುಧಾದಲ್ಲಿ ಮೂರನೇ ಅಧ್ಯಾಯದ ನಾಲ್ಕನೇ ಪಾದದಲ್ಲೂ, ಚಂದ್ರಿಕಾದಲ್ಲಿ ಒಂದನೇ ಅಧ್ಯಾಯದ ಮೂರನೇ ಪಾದದಲ್ಲಿ ವಾಮನಾಧಿಕರಣದಲ್ಲೂ (7 ಅಧಿ 24ನೇ ಸೂ.) ವಿಸ್ತಾರವಾಗಿ ಚರ್ಚಿಸಿದ್ದಾರೆ.

ಈ ಉಪಕ್ರಮಾದಿಗಳ ಲಕ್ಷಣ ಮೊದಲಾದ ವಿಚಾರಗಳು ಈ ಚಿಕ್ಕ ಪುಸ್ತಕಕ್ಕೆ ಬಹಳ ಹೆಚ್ಚಿನ ಮಟ್ಟದ ವಿಚಾರಗಳಾದ್ದರಿಂದ ಅವನ್ನೆಲ್ಲಾ ಹೇಳಿಲ್ಲ. ಆದರೆ ಬ್ರಹ್ಮಸೂತ್ರಗಳ ಉದ್ದಕ್ಕೂ ಭಾಷ್ಯದಲ್ಲೂ ಟೀಕಾಟಿಪ್ಪಣಿಗಳಲ್ಲೂ ಈ ವಿಚಾರಗಳೇ ತುಂಬಿಹೋಗಿರುವುದರಿಂದ ಈ ಹೆಸರುಗಳಾದರೂ ತಿಳಿದಿರಲಿ ಎಂಬ ಉದ್ದೇಶದಿಂದ ಹೇಳಿದ್ದೇವಾದರೂ ವಸ್ತುತಃ ಅವನ್ನೂ ತಿಳಿಸಬೇಕಾಗಿರಲಿಲ್ಲ.

53. ಅನ್ವಯಾತ್ ಎಂದೇ ಏಕೆ ಹೇಳಿದರು : ಅನ್ವಯಾತ್ ಎಂಬ ಹೇಳಿಕೆಯಲ್ಲಿ ಎರಡು ವಿಶೇಷಗಳಿವೆ. ಮೊದಲನೆಯದಾಗಿ ಉಪಕ್ರಮಾದಿಗಳು ಎಂದೇ ಹೇಳಬಹುದಾಗಿತ್ತು; ಎರಡನೆಯದಾಗಿ ಉಪಕ್ರಮಾದಿಗಳು ಅನೇಕವಿದ್ದರೂ ಅವನ್ನು ಸೂಚಿಸಲು ಏಕವಚನ ಪ್ರಯೋಗ ಮಾಡಿರುವುದು. ಈ ಎರಡು ವಿಚಾರಗಳ ಬಗ್ಗೆಯೂ ಟೀಕಾದಿ ಗ್ರಂಥಗಳಲ್ಲಿ ಯಥೇಷ್ಟ ವಿವರಣೆ ಕೊಟ್ಟಿದ್ದಾರೆ. ಮೊದಲನೆಯದಾಗಿ ಅನ್ವಯ ಎಂಬುದು ಮೇಲೆ (ಖಂಡ 50) ತೋರಿಸಿದಂತೆ ಯೌಗಿಕ ಪದ (ವ್ಯುತ್ಪತ್ತಿಗೆ ಅನುಗುಣವಾಗಿ ಬಳಸಿರುವ ಶಬ್ದ) ಅದಕ್ಕೆ 'ಉಪಕ್ರಮಾದಿ ಲಿಂಗಗಳು' ಎಂದರ್ಥ. ಹೀಗೆ ಯೌಗಿಕ ಪದ ಹೇಳಿ ಅದಕ್ಕೆ ಈ ಅರ್ಥ ಎಂದು ಹೇಳುವುದಕ್ಕೆ ಬದಲಾಗಿ ನೇರವಾಗಿ 'ಉಪಕ್ರಮಾದೇಃ' ಎಂದೇ ಹೇಳಬಹುದಾಗಿತ್ತಲ್ಲವೇ ಎಂದರೆ (ಸುಧಾಕಾರರು ಸಮಾಧಾನ ಹೇಳುತ್ತಾರೆ). ಶಾಸ್ತ್ರದ ವಾಕ್ಯಗಳಿಗೆ ಏನರ್ಥವೆಂಬುದನ್ನು ತಿಳಿಸಲು ಮೇಲೆ ತೋರುವ ಅರ್ಥವಾಗಲಿ (ಆಪಾತ ಪ್ರತೀತಿಯಾಗಲಿ) ವ್ಯಾಖ್ಯಾನಕಾರರ ಮಾತುಗಳೇ ಆಗಲಿ ಸಾಧಕ(ಲಿಂಗ)ವಾಗಲಾರವು. ಏಕೆಂದರೆ ಅವು ವ್ಯಭಿಚಾರಿಗಳಾಗುತ್ತವೆ. (ತಪ್ಪು ಆಗಿರುತ್ತವೆ). ಅರ್ಥ ನಿರ್ಧಾರ ಮಾಡಲು ಉಪಕ್ರಮಾದಿ ಲಿಂಗಗಳೇ ಹೊಂದಿಕೆಯಾಗುವುವೆಂದು ಸೂಚಿಸಲು ಹೀಗೆ ಯೌಗಿಕ ಪದವನ್ನೇ ಹಾಕಿದ್ದಾರೆ. ಎರಡನೆಯದು ಏಕವಚನ ಪ್ರಯೋಗವಲ್ಲವೇ, ಅದಕ್ಕೆ ಕಾರಣವನ್ನು 'ಉಪಕ್ರಮಾದಿ ನಾಮ

ವಿರೋಧ ಸೂಚನಾರ್ಥ' ಎಂದು ರಾಯರು 'ತಂತ್ರ ದೀಪಿಕಾ'ದಲ್ಲಿ ತೋರಿಸಿಕೊಟ್ಟಿದ್ದಾರೆ ಎಂದರೆ ಉಪಕ್ರಮಾದಿಗಳೆಲ್ಲ ಒಟ್ಟಿಗೆ ಸೇರಿ ಅಭಿಪ್ರೇತಾರ್ಥವನ್ನು ನಿರ್ಣಯಿಸಲು 'ಏಕಕಂಠ ದಂತೆ' ಸಹಾಯವಾಗಿವೆ ಎಂದು ತೋರಿಸುವುದಕ್ಕೆ ಹಾಗೆ ಹೇಳಿದರು. ತತ್ವಮಂಜರಿಯಲ್ಲಂತೂ ಇನ್ನೂ ಸ್ಪಷ್ಟವಾಗಿ 'ಉಪಕ್ರಮಾದೇರ್ಬಹುತ್ವೇವ ವಿಷ್ಣುಪರತ್ವೇ ಐಕ್ಯಮತ್ಯ ದ್ಯೋತನಾಯ ಏಕವಚನಮ್' ಎಂದು ವಿವರಿಸಿದ್ದಾರೆ. ಎಂದರೆ ಉಪಕ್ರಮಾದಿ ಲಿಂಗಗಳು ಅನೇಕವಿದ್ದರೂ ವಿಷ್ಣುಪರತ್ವವನ್ನುಬೋಧಿಸುವುದರಲ್ಲಿ ಅವೆಲ್ಲ ಒಮ್ಮತವಾಗಿವೆಯೆಂಬುದನ್ನು ಪ್ರಕಟಿಸುವುದ ಕ್ಕಾಗಿ ಏಕವಚನ ಪ್ರಯೋಗ ಮಾಡಿದ್ದಾರೆ.

54. ಸಮನ್ವಯಾತ್ : ಅರ್ಥಕ್ಕೆ ಹೇಗೆ ಹೊಂದಿಸಬೇಕು—ಸಮನ್ವಯಾತ್ ಎಂಬಲ್ಲಿ ಕೇವಲ ನಾಲ್ಕೇ ಅಕ್ಷರಗಳಿದ್ದರೂ ಅದರ ವಿವರಣೆಗೆ ಈಗಾಗಲೇ ಹಲವಾರು ಪುಟಗಳಾದುವು. ಅದಕ್ಕೆ ಅರ್ಥ ಹೇಳುವುದೂ ಪ್ರಯಾಸದ ಕೆಲಸ. ಸರಿಯಾಗಿ ಹೊಂದಿಸಿಕೊಳ್ಳದಿದ್ದರೆ ಅನರ್ಥವೇ ಆಗುತ್ತದೆ, ಇರಲಿ. ಈ ವಾಕ್ಯಕ್ಕೆ (ನಾಲ್ಕು ಅಕ್ಷರಗಳಿಗೆ) ಅರ್ಥ ಹೇಳುವಾಗ ಈ ವಾಕ್ಯವನ್ನೇ (ಅಥವಾ) ಪದವನ್ನೇ ಆವೃತ್ತಿ ಮಾಡಿಕೊಂಡು ಎರಡು ಸಾರಿ ಅನ್ವಯಿಸಿಕೊಳ್ಳ ಬೇಕಲ್ಲದೆ ಹಿಂದಿನಿಂದ ವಿಷ್ಣುರೇವ ಸರ್ವಕರ್ತಾ ಆಗಮೋದಿತಃ ಎಂಬ ಪದಗಳನ್ನು ಅನುವೃತ್ತಿ ಯಿಂದ ಸೇರಿಸಿಕೊಳ್ಳಬೇಕು. ಸಮನ್ವಯಾತ್ ಎಂಬುದನ್ನು ಎರಡು ಸಾರಿ ಅನ್ವಯಿಸಿಕೊಳ್ಳು ವಾಗ ಒಂದು ಸಾರಿ ಬಿಡಿಸಿ ಸಂ, ಅನ್ವಯಾತ್ ಎಂದು ಬೇರೆ ಬೇರೆಯಾಗಿಯೂ ಇನ್ನೊಂದು ಸಲ ಒಟ್ಟಿಗೆ ಸೇರಿಸಿಯೂ ಅರ್ಥ ಹೇಳಬೇಕು. ಬಿಡಿಸಿದಾಗ ಸಂ ಎಂಬ ಉಪಪದ ಆಗಮೋ ದಿತಃ ಎಂಬಲ್ಲಿರುವ ಆಗಮದೊಡನೆ ಸೇರಿಕೊಳ್ಳುತ್ತದೆ, ಆಗ ಸಂ ಎಂದರೆ ಸಮಗ್ರವಾಗಿ ಎಂದೂ, ಮುಖ್ಯವಾಗಿ (ಮುಖ್ಯವೃತ್ತಿಯಿಂದ) ಎಂದರ್ಥ. ಬಿಡಿಯಾಗಿ ಉಳಿದ ಅನ್ವಯ ಶಬ್ದವು ಮೇಲೆ (ಖಂಡ 50-51) ತೋರಿಸಿದಂತೆ ಉಪಕ್ರಮಾದಿ ಲಿಂಗಗಳಿಗೆ ದ್ಯೋತಕ ವಾಗಿದೆ. ಇನ್ನು ಸಮನ್ವಯಾತ್ ಎಂಬುದನ್ನು ಒಟ್ಟಿಗೆ ಗ್ರಹಣ ಮಾಡಿದಾಗ ಸಂ ಎಂಬ ಉಪಸರ್ಗವು ಅನ್ವಯಕ್ಕೆ ವಿಶೇಷಣವಾಗಿ ಸಂ-ಸಮ್ಯಕ್-ಚೆನ್ನಾಗಿ ಎಂದರೆ ಬಲಾಬಲಗಳನ್ನು ಸಾವಕಾಶ ನಿರವಕಾಶಾದಿ ವಿಚಾರಗಳನ್ನು ಚೆನ್ನಾಗಿ ಪರೀಕ್ಷಿಸಿ ನಿರ್ಣಯ ಮಾಡಿ ಎಂಬ ಅರ್ಥವನ್ನು ಕೊಡುತ್ತದೆ. ಅನ್ವಯ ಶಬ್ದವು ಅನ್ವೀಯಂತೆ ವಾಕ್ಯಾನ್ಯೇತೇನೇತ್ಯನ್ವಯಃ ಎಂಬ ವ್ಯುತ್ಪತ್ತ್ಯನ್ವತ್ತಿಯಿಂದ ಶಕ್ತಿ ತಾತ್ಪರ್ಯಗಳಿಗೆ ಅನುಸಾರವಾಗಿ ವಿಷ್ಣು ಪರವೆಂದು ಹೊಂದಿಸುವಿಕೆ (ಅಥವಾ ಅನ್ವಯಿಸುವಿಕೆ) ಎಂಬ ಅರ್ಥದಲ್ಲಿ ಬಂದಿದೆ.

ಹೀಗೆ ಒಟ್ಟಿನಲ್ಲಿ ಈ ವಾಕ್ಯದ ಅನ್ವಯಕ್ರಮ ಹೀಗಾಗುತ್ತದೆ—ಅನ್ವಯಾತ್ ಸಮನ್ವ ಯಾತ್ ಸಂ-ಆಗಮೋದಿತಃ ಸರ್ವಕರ್ತಾ ವಿಷ್ಣುರೇವ. ಈಗ ಈ ವಾಕ್ಯಕ್ಕೆ ಪದಶಃ ಏನರ್ಥವಾಗುತ್ತದೆ, ಮೊದಲು ನೋಡೋಣ.

55. ವಾಕ್ಯಕ್ಕೆ ಪದಶಃ ಅರ್ಥ : ಅನ್ವಯಾತ್=ಉಪಕ್ರಮಾದಿ ಲಿಂಗಗಳ ಸಹಾಯದಿಂದ, ಸಮನ್ವಯಾತ್-ಸಂ=ಚೆನ್ನಾಗಿ ಎಂದರೆ ಬಲಾಬಲಗಳನ್ನು ಸಾವಕಾಶ ನಿರವಕಾಶ ಮೊದಲಾದ ಎಲ್ಲ ಅಂಶಗಳ ಪರೀಕ್ಷಾಪೂರ್ವಕವಾಗಿ, ಅನ್ವಯಾತ್=ಶಕ್ತಿತಾತ್ಪರ್ಯಗಳಿಗೆ ಹೊಂದಿಕೆ ಯಾಗುವಂತೆ ಅರ್ಥವನ್ನು ನಿರ್ಣಯಿಸಿದ ಪಕ್ಷದಲ್ಲಿ, ಸಂ-ಆಗಮೋದಿತಃ=ಸಕಲ ವೇದಾದಿ

ಸಚ್ಛಾಸ್ತ್ರದಲ್ಲೂ ಆದಿ-ಮಧ್ಯ-ಅಂತ್ಯ ಎಲ್ಲ ಭಾಗದಲ್ಲೂ ಮುಖ್ಯವೃತ್ತಿಯಿಂದ ಪ್ರತಿಪಾದ್ಯನಾದ; ಸರ್ವಕರ್ತಾ=ಸಕಲ ಜಗತ್ತಿನ ಸೃಷ್ಟ್ಯಾದ್ಯಷ್ಟಕರ್ತನು, ವಿಷ್ಣುರೇವ=ಶ್ರೀ ವಿಷ್ಣುವೊಬ್ಬನೆಂದೇ ಸಿದ್ಧವಾಗುತ್ತದೆ; ಅಷ್ಟೇ ಹೊರತು ತಿಳಿವಳಿಕೆಯಿಲ್ಲದವರು ಪಾಶುಪತಾದಿ ಆಗಮಗಳ ಆಧಾರದ ಮೇಲಾಗಲಿ ಆಪಾತ ಪ್ರತೀತಿಯಿಂದ ವೇದಗಳಿಗೆ ಅರ್ಥ ಹೇಳಿದಾರಾಗಲಿ ರುದ್ರಾದಿಗಳು ವೇದಾದಿ ಆಗಮ ಪ್ರತಿಪಾದ್ಯರಾಗಲಾರರು—ಎಂದು ಸೇರಿಸಿಕೊಂಡು ವಾಕ್ಯಾರ್ಥವನ್ನು ಪೂರ್ಣ ಮಾಡಬೇಕು.

(ಸೂಚನೆ : ಹೀಗೆ ಅಣುಭಾಷ್ಯದ ವಾಕ್ಯಕ್ಕೆ ಅರ್ಥವಾಗುವುದೇ ಕ್ಲಿಷ್ಟವಾಗಿರುವುದರಿಂದ ಈ ಸೂತ್ರದ ಅರ್ಥವನ್ನು ವಿವರಿಸುವ ಗೋಜಿಗೆ ಹೋಗಿಲ್ಲ. ಸೂತ್ರಾರ್ಥ ಹೇಳುವುದೇ ನಮ್ಮ ಗುರಿಯಲ್ಲವಷ್ಟೆ.)

56. ಅಧಿಕರಣದ ಒಟ್ಟು ಭಾವಾರ್ಥ : ಅಜ್ಞರು ವೇದಾದ್ಯಾಗಮಗಳಲ್ಲಿ ಬ್ರಹ್ಮರುದ್ರಾದಿಗಳೂ ಸೃಷ್ಟ್ಯಾದಿಕರ್ತರೆಂದು ಹೇಳಿದೆಯೆಂದು ಸರಿಯಾಗಿ ವಿಮರ್ಶೆ ಮಾಡದೆ ಹೇಳಿದರೂ ಸಹ ವಿಷ್ಣುವಲ್ಲದೆ ಬೇರೆ ಯಾರಿಗೂ ಮುಖ್ಯವೃತ್ತಿಯಿಂದ ಋಗಾದಿ ವೇದಪ್ರತಿಪಾದ್ಯತ್ವವು ಕೂಡುವುದಿಲ್ಲ. ಏಕೆಂದರೆ ವೇದಾದಿ ಸದಾಗಮಗಳ ವಾಕ್ಯಗಳಿಗೆ ಮೇಲೆ ಮೇಲೆ ತೋರಿದಂತಾಗಲಿ ಮನಸ್ಸಿಗೆ ಬಂದಂತಾಗಲಿ ಅರ್ಥ ಹೇಳುವ ಹಾಗಿಲ್ಲ. ಬಹಳ ವಿಮರ್ಶೆ ಮಾಡಿ ಎಚ್ಚರಿಕೆಯಿಂದಲೇ ಅರ್ಥ ಹೇಳಬೇಕು. ಮೊದಲನೆಯದಾಗಿ ಹೇಳಿದ ಅರ್ಥವು ಉಪಕ್ರಮಾದಿಲಿಂಗಗಳ ಬಲಾಬಲಗಳ ಆಧಾರದ ಮೇಲೆ ನಿಂತಿರಬೇಕು. ಎರಡನೆಯದಾಗಿ ಆ ಲಿಂಗಗಳಲ್ಲೇ ವಿರೋಧ ಬರುವ ಹಾಗಿದ್ದರೆ ಅವುಗಳ ಪ್ರಾಬಲ್ಯ ದೌರ್ಬಲ್ಯ, ಸಾವಕಾಶತ್ವ-ನಿರವಕಾಶತ್ವಾದಿ ವಿಶೇಷ ಯುಕ್ತಿಗಳನ್ನು ತೂಕ ಮಾಡಿ ಪರೀಕ್ಷಿಸಿ ಹೆಚ್ಚು ಪ್ರಬಲವಾದ ಅಥವಾ ಮುಖ್ಯವಾದ ಅರ್ಥವನ್ನೇ ಗ್ರಹಣ ಮಾಡಬೇಕು. ಅದಕ್ಕೂ ಹೆಚ್ಚಾಗಿ ಹೇಳಿದ ಅರ್ಥವು ವಾಕ್ಯದ ಶಕ್ತಿ ತಾತ್ಪರ್ಯಗಳಿಗೆ ವಿರೋಧವಾಗಿರದೆ ಹೊಂದಿಕೆಯಾಗಿರಬೇಕು. ಈ ಪ್ರಕಾರ ಉಪಕ್ರಮಾದಿ ಲಿಂಗಗಳಿಗೆ ವಿರೋಧ ಬರದಂತೆ ಚೆನ್ನಾಗಿ ಪರೀಕ್ಷೆ ಮಾಡಿ ಶಕ್ತಿ ತಾತ್ಪರ್ಯಗಳಿಗೆ ಹೊಂದಿಕೆಯಾಗಿರುವಂತೆ ಜೋಡಿಸಿ ಅರ್ಥ ಹೇಳುವದಕ್ಕೆ ಸಮನ್ವಯವೆಂದು ಹೆಸರು.

ಈ ಪ್ರಕಾರ ವೇದಾದ್ಯಾಗಮಗಳಿಗೆ ಸಮನ್ವಯ ಮಾಡಿ ಅರ್ಥ ಹೇಳುತ್ತಾ ಹೋದರೆ ವೇದಾದಿಗಳಿಂದ ಮುಖ್ಯಪ್ರತಿಪಾದ್ಯತ್ವವಾಗಲಿ ಸೃಷ್ಟ್ಯಾದಿ ಸ್ವತಂತ್ರ ಕರ್ತೃತ್ವವಾಗಲಿ ಬ್ರಹ್ಮರುದ್ರಾದಿ ಬೇರೆ ಯಾರಿಗೂ ಸುತರಾಂ ಹೊಂದುವುದಿಲ್ಲ. ಅದಕ್ಕೆ ಪ್ರತಿಯಾಗಿ ಸಮಗ್ರ ಚತುರ್ವೇದಗಳ, ಸಕಲ ಸಚ್ಛಾಸ್ತ್ರಗಳ, ಸಮಸ್ತ ವಾಕ್ಯಗಳೂ ಅವುಗಳಲ್ಲಿರುವ ಒಂದೊಂದು ಪದವೂ ಒಂದೊಂದು ವರ್ಣವೂ (ಅಕ್ಷರವೂ) ಸ್ವರವೂ ಸಹ—ಕ್ರಿಯಾವಾಚಕವಾಗಿರಲಿ, ಅವ್ಯಯವಾಗಿರಲಿ, ಹೆಸರೇ ಆಗಿರಲಿ—ಪ್ರತಿಯೊಂದು ಕೂಡ ಮುಖ್ಯವೃತ್ತಿಯಿಂದ ಕೇವಲ ಆ ವಿಷ್ಣುವನ್ನೇ ಹೇಳುತ್ತಾ ಅವನೇ ಸೃಷ್ಟ್ಯಾದ್ಯಷ್ಟಕರ್ತನೆಂದು ತಿಳಿಸುತ್ತಾ ಅವನ ಅನಂತ ಗುಣಗಳನ್ನು ತೋರಿಸಿಕೊಡುತ್ತಾ ಆ ವಿಷ್ಣುವೊಬ್ಬನೇ ಸರ್ವೋತ್ತಮನೆಂಬುದನ್ನು ಸಾರಿ ಹೇಳುತ್ತವೆ ಎಂಬುದೇ ಈ ಸಮನ್ವಯಾಧಿಕರಣದ ಸಾರಾಂಶ.

ಶ್ರೀ ಗುರುಭ್ಯೋ ನಮಃ
ಹರಿಃ ಓಂ
ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀ ಹಯಗ್ರೀವಾಯ ನಮಃ

ಅಥ ಶ್ರೀಮತ್ಕೃಷ್ಣದ್ವೈಪಾಯನಕೃತ

ಬ್ರಹ್ಮಸೂತ್ರಾಣಾಂ

ಶ್ರೀಮದ್ವಾದಿರಾಜಪೂಜ್ಯಚರಣವಿರಚಿತ ಅಧ್ಯಾಯ ಪಾದ ಅಧಿಕರಣ ನಾಮಾವಳಿಃ

(ಸಂಕ್ಷೇಪತೋ ಬ್ರಹ್ಮಸೂತ್ರಭಾಷ್ಯಾದಿಕರಣಾಧವತ್ತಯಾ ಪರಮಾತ್ಮನೋ ನಮ್ಯಕ್ಕ್ತೋಕ್ತಿಃ ಕ್ರಿಯತೇ)

ಸಮನ್ವಯಾಧ್ಯಾಯ

ಅನುಕ್ರಮ	ಪಾ.	ಅಧಿ.		
			ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ (ಸಮನ್ವಯಾಧ್ಯಾಯ)	
			ಓಂ ಅನ್ಯತ್ರ ಪ್ರಸಿದ್ಧನಾಮಾತ್ಮಕಾಶೇಷಶಬ್ದಸಮನ್ವಯ ಪ್ರತಿಪಾದಕ ಪಾದಪ್ರತಿಪಾದ್ಯಾಯ ನಮಃ	ಓಂ
1	1	1	ಓಂ ವಿಶಿಷ್ಟಾಧಿಕಾರಿಕ ಮೋಕ್ಷಫಲಕ ಜಿಜ್ಞಾಸಾಗೋಚರಾಯ ನಮಃ	ಓಂ
2	1	2	ಓಂ ಜನ್ಮಾದ್ಯಷ್ಟಕರ್ತ್ರೇ ನಮಃ	ಓಂ
3	1	3	ಓಂ ವೇದಾದಿಸಕಲಶಾಸ್ತ್ರಜನಿತ ನಿಖಿಲಜಗಜ್ಜನ್ಮಾದಿಕಾರಣತ್ವಪ್ರಮಾಗೋಚರಾಯ ನಮಃ	ಓಂ
4	1	4	ಓಂ ಉಪಕ್ರಮಾದಿಲಿಂಗಕ ನಿಖಿಲಶಾಸ್ತ್ರತಾತ್ಪರ್ಯಗೋಚರಾಯ ನಮಃ	ಓಂ
5	1	5	ಓಂ ಸರ್ವಶಬ್ದಮುಖ್ಯವಾಚ್ಯಾಯ ನಮಃ	ಓಂ
6	1	6	ಓಂ ಆನಂದಮಯಾದಿ ಗುಣಸಾಮಾನ್ಯ ವಾಚ್ಯಾನಂದಾದಿ ಗುಣವಾಚೀಶಬ್ದ ಸಮನ್ವಯ ಗೋಚರಾಯ ನಮಃ	ಓಂ
7	1	7	ಓಂ ಸರ್ವಾಂತಸ್ಥೇಂದ್ರಾದ್ಯಶೇಷಾಧಿದೈವಗತಶಬ್ದವಾಚ್ಯಾಯ ನಮಃ	ಓಂ
8	1	8	ಓಂ ಆಕಾಶಾದ್ಯಾಧಿಭೌತಿಕ ಸರ್ವಶಬ್ದವಾಚ್ಯಾಯ ನಮಃ	ಓಂ
9	1	9	ಓಂ ಪ್ರಾಣಾದ್ಯಶೇಷಾಧ್ಯಾತ್ಮಿಕ ಸರ್ವಶಬ್ದವಾಚ್ಯಾಯ ನಮಃ	ಓಂ
10	1	10	ಓಂ ಕರ್ಣಾದ್ಯಗೋಚರಜ್ಯೋತಿಷೇ ನಮಃ	ಓಂ
11	1	11	ಓಂ ಗಾಯತ್ರೀಶಬ್ದವಾಚ್ಯಾಯ ನಮಃ	ಓಂ
12	1	12	ಓಂ ತ್ರಿವಿಧೋಪಾಸನಾಗೋಚರ ಪ್ರಾಣಶಬ್ದವಾಚ್ಯಾಯ ನಮಃ	ಓಂ
			ಓಂ ಅನ್ಯತ್ರ ಪ್ರಸಿದ್ಧನಾಮಾತ್ಮಕಾಶೇಷಶಬ್ದಸಮನ್ವಯ ಪ್ರತಿಪಾದಕ ಪಾದಪ್ರತಿಪಾದ್ಯಾಯ ನಮಃ	ಓಂ
			॥ ಇತಿ ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ ॥	
			ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ	
13	2	1	ಓಂ ಸರ್ವಗತಾಯ ನಮಃ	ಓಂ
14	2	2	ಓಂ ಚರಾಚರಾತ್ತ್ರೇ ನಮಃ	ಓಂ

ಅನು ಕ್ರಮ	ಪಾ.	ಅಧಿ		
15	2	3	ಓಂ ಗುಹಾಂಪ್ರವಿಷ್ಟತ್ವಪ್ರಯುಕ್ತ ಸುಕೃತ ಫಲಭೋಕ್ತ್ರೇ ನಮಃ	ಓಂ
16	2	4	ಓಂ ಅಕ್ಷ್ಯಾದಿತ್ಯಾದ್ಯಂತಸ್ಥಾಯ ದಿವ್ಯದೃಷ್ಟಿಗೋಚರಾಯ ನಮಃ	ಓಂ
17	2	5	ಓಂ ಸರ್ವಾಂತರ್ಯಾಮಿಣೇ ನಮಃ	ಓಂ
18	2	6	ಓಂ ಅದೃಶ್ಯತ್ವಾದಿಗುಣಕಾಯ ನಮಃ	ಓಂ
19	2	7	ಓಂ ಪಾಚಕತ್ವಾದಿಮದ್ವೈಶ್ವಾನರಾಯ ನಮಃ	ಓಂ
			ಓಂ ಅನ್ಯತ್ರಪಸಿದ್ಧಲಿಂಗಾತ್ಮಕಾಶೇಷಶಬ್ದವಾಚ್ಯಾಯ ನಮಃ	ಓಂ
			‖ ಇತಿ ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ ‖	
			ಪ್ರಥಮಾಧ್ಯಾಯಸ್ಯ ತೃತೀಯಃ ಪಾದಃ	
20	3	1	ಓಂ ದ್ಯುಭ್ವಾದ್ಯಾಯತನಾಯ ನಮಃ	ಓಂ
21	3	2	ಓಂ ಭೂಮ್ನೇ ನಮಃ	ಓಂ
22	3	3	ಓಂ ಅಕ್ಷರಾಯ ನಮಃ	ಓಂ
23	3	4	ಓಂ ಸತೇ ನಮಃ	ಓಂ
24	3	5	ಓಂ ಹೃತ್ಪದ್ಮಸ್ಥಾಯ ನಮಃ	ಓಂ
25	3	6	ಓಂ ಆನುಕೂಲ್ಯೇನ ಗೃಹ್ಯಮಾಣಾಯ ನಮಃ	ಓಂ
26	3	7	ಓಂ ಈಶಾನಾಯ ನಮಃ	ಓಂ
27	3	8	ಓಂ ಬ್ರಹ್ಮವಿದ್ಯಾಧಿಕಾರಿದೇವೋಪಾಸ್ಯಾಯ ನಮಃ	ಓಂ
28	3	9	ಓಂ ಶೂದ್ರಾದ್ಯೈರ್ವೇದವಿದ್ಯಾವಿಜ್ಞೇಯಾಯ ನಮಃ	ಓಂ
29	3	10	ಓಂ ವಜ್ರಾಯ ನಮಃ	ಓಂ
30	3	11	ಓಂ ಜ್ಯೋತಿಷೇ ನಮಃ	ಓಂ
31	3	12	ಓಂ ಆಕಾಶಾಯ ನಮಃ	ಓಂ
32	3	13	ಓಂ ಸ್ವಪ್ನಾದಿದ್ರಷ್ಟ್ರೇ ಅಸಂಗಾಯ ನಮಃ	ಓಂ
33	3	14	ಓಂ ನಿತ್ಯಮಹಿಮ್ನೇ ಬ್ರಾಹ್ಮಣಾಯ ನಮಃ	ಓಂ
			ಓಂ ಉಭಯತ್ರ ಪ್ರಸಿದ್ಧನಾಮಲಿಂಗಾತ್ಮಕಾಶೇಷ ಶಬ್ದವಾಚ್ಯಾಯ ನಮಃ	ಓಂ
			‖ ಇತಿ ಪ್ರಥಮಾಧ್ಯಾಯಸ್ಯ ತೃತೀಯಃ ಪಾದಃ ‖	
			ಪ್ರಥಮಾಧ್ಯಾಯಸ್ಯ ಚತುರ್ಥಃ ಪಾದಃ	
34	4	1	ಓಂ ಅವ್ಯಕ್ತಾಯ ನಮಃ	ಓಂ
35	4	2	ಓಂ ಕರ್ಮತದಂಗವಾಚಿ ಜ್ಯೋತಿಷ್ಟೋಮವಸಂತಾದಿ ಶಬ್ದವಾಚ್ಯಾಯ ನಮಃ	ಓಂ
36	4	3	ಓಂ ಬಹುತ್ವಸಂಖ್ಯಾವಿಶಿಷ್ಟವಾಚಿ ಪಂಚಜನಾದಿ ಶಬ್ದವಾಚ್ಯಾಯ ನಮಃ	ಓಂ
37	4	4	ಓಂ ಅವಾಂತರ ಕಾರಣವಾಚ್ಯಾಕಾಶಾದಿ ಶಬ್ದವಾಚ್ಯಾಯ ನಮಃ	ಓಂ
38	4	5	ಓಂ ಸಕಲಲೌಕಿಕ ವೈದಿಕಶಬ್ದ ಪರಮಮುಖ್ಯಾರ್ಥಾಯ ನಮಃ	ಓಂ
39	4	6	ಓಂ ಪ್ರಕೃತ್ಯಾದ್ಯಶೇಷಸ್ತ್ರೀಲಿಂಗ ಶಬ್ದವಾಚ್ಯಾಯ ನಮಃ	ಓಂ
40	4	7	ಓಂ ನಿಷೇಧಮುಖವೇದ್ಯಶಬ್ದವಾಚ್ಯಸದಾದಿಶಬ್ದವಾಚ್ಯಾಯ ಅಶೇಷಸ್ವರವರ್ಣ	

ಅನುಕ್ರಮ	ಪಾ.	ಅಧಿ.		
			ಪದವಾಕ್ಯಾತ್ಮಕಾಶೇಷಶಾಸ್ತ್ರಯೋನಯೇ ಜಗಜ್ಜನ್ಮಾದಿಕರ್ತೃತ್ವಮುಖಾನಂತಗುಣಾಯ ನಮಃ	ಓಂ
			ಓಂ ಅನ್ಯತ್ರೈವ ಪ್ರಸಿದ್ಧಾಶೇಷಶಬ್ದವಾಚ್ಯಾಯ ನಮಃ	ಓಂ
			‖ ಇತಿ ಪ್ರಥಮಾಧ್ಯಾಯ(ಸಮನ್ವಯಾಧ್ಯಾಯ)ಸ್ಯ ಚತುರ್ಥಃ ಪಾದಃ ‖	
			ದ್ವಿತೀಯಾಧ್ಯಾಯಸ್ಯ ಪ್ರಥಮಃ ಪಾದಃ (ಅವಿರೋಧಾಧ್ಯಾಯ)	
			ಓಂ ಸಕಲ ವಿರೋಧಶೂನ್ಯಸಮನ್ವಯಗೋಚರಾಯ ನಮಃ	ಓಂ
			ಓಂ ಚೇತನತ್ವಯುಕ್ತ್ಯವಿರುದ್ಧಸರ್ವಗುಣಪೂರ್ಣತ್ವವತೇ ನಮಃ	ಓಂ
41	1	1	ಓಂ ಅಪ್ರಮಾಣಾವೈದಿಕ ಸ್ಮೃತ್ಯವಿರುದ್ಧಕಾರಣತ್ವವತೇ ನಮಃ ಓಂ	
42	1	2	ಓಂ ಫಲವಿಸಂವಾದ್ಯನಿತ್ಯವಿಲಕ್ಷಣವೇದಗೋಚರಾಯ ನಮಃ ಓಂ	
43	1	3	ಓಂ ಜಡತ್ವಯುಕ್ತ್ಯವಿರುದ್ಧಮೃದಾದ್ಯಭಿಮಾನಿವಕ್ತೃತ್ವಪರವೇದಗೋಚರಾಯ ನಮಃ	ಓಂ
44	1	4	ಓಂ ವಿಶ್ವಪ್ರಾಗಭಾವಕರ್ತೃತ್ವಸಾಧಕಯುಕ್ತ್ಯವಿರುದ್ಧಕರ್ತೃತ್ವವತೇ ನಮಃ	ಓಂ
45	1	5	ಓಂ ಜೀವಾಭಿನ್ನತ್ವಯುಕ್ತ್ಯವಿರುದ್ಧ ಸರ್ವಕರ್ತೃತ್ವವತೇ ನಮಃ	ಓಂ
46	1	6	ಓಂ ಸ್ವತಂತ್ರಸಾಧನಾಂತರಸಾಪೇಕ್ಷತ್ವಯುಕ್ತ್ಯವಿರುದ್ಧಸ್ವತಂತ್ರಕರ್ತೃತ್ವವತೇ ನಮಃ	ಓಂ
47	1	7	ಓಂ ಜೀವಕರ್ತೃತ್ವಯುಕ್ತ್ಯವಿರುದ್ಧಕಾರಣತ್ವವತೇ ನಮಃ	ಓಂ
48	1	8	ಓಂ ಸರ್ವಶಕ್ತಿಪ್ರಸಕ್ತ್ಯಾದಿಯುಕ್ತ್ಯವಿರುದ್ಧಕರ್ತೃತ್ವವತೇ ನಮಃ	ಓಂ
49	1	9	ಓಂ ನಿಷ್ಫಲತ್ವಾದಿಯುಕ್ತ್ಯವಿರುದ್ಧಕರ್ತೃತ್ವವತೇ ನಮಃ	ಓಂ
50	1	10	ಓಂ ವೈಷಮ್ಯಾದಿದೋಷಪ್ರಾಪ್ತಿರೂಪಯುಕ್ತ್ಯವಿರುದ್ಧಸರ್ವಕರ್ತೃತ್ವವತೇನಮಃ	ಓಂ
51	1	11	ಓಂ ಚೇತನತ್ವಯುಕ್ತ್ಯವಿರುದ್ಧಗುಣಪೂರ್ಣತ್ವವತೇ ನಮಃ	ಓಂ
			ಓಂ ಸರ್ವಯುಕ್ತ್ಯವಿರುದ್ಧಗುಣಪೂರ್ಣತ್ವವತೇ ನಮಃ	ಓಂ
			‖ ಇತಿ ದ್ವಿತೀಯಾ(ಅವಿರೋಧ)ಧ್ಯಾಯಸ್ಯ ಪ್ರಥಮ(ಯುಕ್ತಿ) ಪಾದಃ ‖	
			ದ್ವಿತೀಯಾಧ್ಯಾಯಸ್ಯ ದ್ವಿತೀಯಃ ಪಾದಃ	
52	2	1	ಓಂ ನಿರೀಶ್ವರಸಾಂಖ್ಯಸಮಯಾವಿರುದ್ಧಕಾರಣತ್ವವತೇ ನಮಃ	ಓಂ
53	2	2	ಓಂ ಸೇಶ್ವರಸಾಂಖ್ಯಸಮಯಾವಿರುದ್ಧ ಸ್ವತಃಕರ್ತೃತ್ವವತೇನಮಃ	ಓಂ
54	2	3	ಓಂ ಚಾರ್ವಾಕಸಮಯಾವಿರುದ್ಧಜಗತ್ಕಾರಣತ್ವವತೇ ನಮಃ	ಓಂ
55	2	4	ಓಂ ಪುರುಷೋಪಸರ್ಜನಪ್ರಕೃತಿ ಕರ್ತೃತ್ವ ಸಮಯಾವಿರುದ್ಧಕಾರಣತ್ವವತೇ ನಮಃ	ಓಂ
56	2	5	ಓಂ ಪ್ರಕೃತ್ಯುಪಸರ್ಜನಪುರುಷಕರ್ತೃತ್ವಸಮಯಾವಿರುದ್ಧ ಜಗತ್ಕರ್ತೃತ್ವವತೇ ನಮಃ	ಓಂ
57	2	6	ಓಂ ವೈಶೇಷಿಕಾದಿಸಮಯಾವಿರುದ್ಧ ಸರ್ವಗುಣಪೂರ್ಣತ್ವವತೇ ನಮಃ	ಓಂ
58	2	7	ಓಂ ವೈಭಾಷಿಕ ಸೌತ್ರಾಂತಿಕ ಸಮಯಾವಿರುದ್ಧ ಜಗತ್ಕರ್ತೃತ್ವವತೇ ನಮಃ	ಓಂ
59	2	8	ಓಂ ಶೂನ್ಯಸಮಯಾವಿರುದ್ಧಜಗತ್ಕಾರಣತ್ವವತೇ ನಮಃ	ಓಂ
60	2	9	ಓಂ ವಿಜ್ಞಾನವಾದಿಸಮಯಾವಿರುದ್ಧ ಜಗತ್ಕಾರಣತ್ವವತೇ ನಮಃ	ಓಂ
61	2	10	ಓಂ ಜೈನಸಮಯಾವಿರುದ್ಧ ಜಗತ್ಕಾರಣತ್ವವತೇ ನಮಃ	ಓಂ
62	2	11	ಓಂ ಪಾಶುಪತಮತಾವಿರುದ್ಧಕಾರಣತ್ವವತೇ ನಮಃ.	ಓಂ

ಅನುಕ್ರಮ	ಪಾ.	ಅಧಿ		
63	2	12	ಓಂ ಶಕ್ತಿಮತಾವಿರುದ್ಧಜಗತ್ಕಾರಣತ್ವವತೇ ನಮಃ	ಓಂ
			ಓಂ ಸರ್ವಕುಸಮಯಾವಿರುದ್ಧಜಗತ್ಕರ್ತೃತ್ವವತೇ ನಮಃ	ಓಂ
			|| ಇತಿ ದ್ವಿತೀಯಾ(ಅವಿರೋಧ)ಧ್ಯಾಯಸ್ಯ ದ್ವಿತೀಯ(ಸಮಯ) ಪಾದಃ ||	
			ದ್ವಿತೀಯಾಧ್ಯಾಯಸ್ಯ ತೃತೀಯಃ ಪಾದಃ	
64	3	1	ಓಂ ಆಕಾಶೋತ್ಪತ್ತಿ ಶ್ರುತ್ಯವಿರೋಧ ಪ್ರಯೋಜ್ಯ ಸಮನ್ವಯ ಗೋಚರಾಯ ನಮಃ	ಓಂ
65	3	2	ಓಂ ಮುಖ್ಯವಾಯೂತ್ಪತ್ತಿಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
66	3	3	ಓಂ ಸ್ವೋತ್ಪತ್ತಿ ಶ್ರುತ್ಯವಿರೋಧ ಪ್ರಯೋಜ್ಯಸಮನ್ವಯ ಗೋಚರಾಯ ನಮಃ	ಓಂ
67	3	4	ಓಂ ತೇಜೋ ಜನ್ಮಶ್ರುತ್ಯವಿರೋಧ ಪ್ರಯೋಜ್ಯ ಸಮನ್ವಯ ಗೋಚರಾಯ ನಮಃ	ಓಂ
68	3	5	ಓಂ ಅಬ್ಜನ್ಮಶ್ರುತ್ಯವಿರೋಧ ಪ್ರಯೋಜ್ಯಸಮನ್ವಯ ಗೋಚರಾಯ ನಮಃ	ಓಂ
69	3	6	ಓಂ ದ್ವಾರವಿಷಯಶ್ರುತ್ಯವಿರೋಧ ಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
70	3	7	ಓಂ ಸ್ವಾಕರ್ತೃಕಜಗತ್ಸಂಹಾರಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
71	3	8	ಓಂ ಅಧಿಭೂತಾದಿಸಂಹಾರಕಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
72	3	9	ಓಂ ಅಧಿಭೂತಾದಿಲಯಕ್ರಮಶ್ರುತ್ಯವಿರೋಧಪ್ರಯೋಜ್ಯಸಮನ್ವಯ ಗೋಚರಾಯ ನಮಃ	ಓಂ
73	3	10	ಓಂ ಸ್ವಲಯಶ್ರುತ್ಯವಿರೋಧ ಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
74	3	11	ಓಂ ಜೀವಜನ್ಮಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
75	3	12	ಓಂ ಜೀವಪರಿಮಾಣಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
76	3	13	ಓಂ ಜೀವಸ್ವಾಂಶತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
77	3	14	ಓಂ ಜೀವೈಕ್ಯಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
78	3	15	ಓಂ ಜೀವನಿತ್ಯತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
79	3	16	ಓಂ ಜೀವಸ್ವರೂಪಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
80	3	17	ಓಂ ಜೀವಕರ್ತೃತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
81	3	18	ಓಂ ಜೀವೇಶಾಂಶತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
82	3	19	ಓಂ ಜೀವಪ್ರತಿಬಿಂಬತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
			ಓಂ ಇತಿ ಶ್ರುತಿಪರಸ್ಪರವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
			|| ಇತಿ ದ್ವಿತೀಯಾ(ಅವಿರೋಧ)ಧ್ಯಾಯಸ್ಯ ತೃತೀಯ(ಪರಸ್ಪರಶ್ರುತ್ಯವಿರೋಧ) ಪಾದಃ ||	
			ದ್ವಿತೀಯಾಧ್ಯಾಯಸ್ಯ ಚತುರ್ಥಃ ಪಾದಃ	
83	4	1	ಓಂ ಇಂದ್ರಿಯೋತ್ಪತ್ತಿಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
84	4	2	ಓಂ ಮನೋಜನ್ಮಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
85	4	3	ಓಂ ವಾಗುತ್ಪತ್ತಿಶ್ರುತ್ಯವಿರೋಧ ಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ

ಅನು ಕ್ರಮ	ಪಾ.	ಅಧಿ.		
86	4	4	ಓಂ ಪ್ರಾಣಸಂಖ್ಯಾಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
87	4	5	ಓಂ ಪ್ರಾಣಪರಿಮಾಣಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
88	4	6	ಓಂ ಮುಖ್ಯಪ್ರಾಣಜನ್ಮಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
89	4	7	ಓಂ ಮುಖ್ಯಪ್ರಾಣಪಾರತಂತ್ರ್ಯಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
90	4	8	ಓಂ ದಾಸಪ್ರಾಣಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
91	4	9	ಓಂ ಪ್ರಾಣಾಣುತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
92	4	10	ಓಂ ಜೀವಕರಣತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
93	4	11	ಓಂ ಮುಖ್ಯಪ್ರಾಣಸ್ಯೇಂದ್ರಿಯತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
94	4	12	ಓಂ ಪ್ರಪಂಚಸ್ರಷ್ಟೃತ್ವಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
95	4	13	ಓಂ ಶರೀರಕಾರಣವಿಷಯಶ್ರುತ್ಯವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
			ಓಂ ಇತಿ ನ್ಯಾಯೋಪೇತಶ್ರುತಿಪರಸ್ಪರವಿರೋಧಪ್ರಯೋಜ್ಯಸಮನ್ವಯಗೋಚರಾಯ ನಮಃ	ಓಂ
			‖ ಇತಿ ದ್ವಿತೀಯಾ(ಅವಿರೋಧ)ಧ್ಯಾಯಸ್ಯ ಚತುರ್ಥ(ನ್ಯಾಯೋಪೇತಶ್ರುತ್ಯವಿರೋಧ) ಪಾದಃ ‖	
			ತೃತೀಯಾಧ್ಯಾಯಸ್ಯ ಪ್ರಥಮಃ ಪಾದಃ (ಸಾಧನಾಧ್ಯಾಯ)	
			ಓಂ ವೈರಾಗ್ಯಾದಿ ಪ್ರಸಾದಾಂತಸಾಧನ ಪ್ರಾಪ್ಯಾಯ ನಮಃ	ಓಂ
			ಓಂ ಭಕ್ತಿದಾರ್ಢ್ಯ ಪ್ರಯೋಜಕ ವೈರಾಗ್ಯಗಮ್ಯಾಯ ನಮಃ	ಓಂ
96	1	1	ಓಂ ಭೂತಾವಿಯೋಗಪ್ರಯೋಜ್ಯಸಾರ್ಥಕ್ಯವತ್ಸಾಧನಗಮ್ಯಾಯ ನಮಃ	ಓಂ
97	1	2	ಓಂ ಸಮಸ್ತಭೂತಾವಿಯೋಗಪ್ರಯೋಜ್ಯಸಾರ್ಥಕ್ಯವತ್ಸಾಧನಗಮ್ಯಾಯ ನಮಃ	ಓಂ
98	1	3	ಓಂ ಪ್ರಾಣಗತ್ಯವಿನಾಭೂತಾವಿಯೋಗಪ್ರಯೋಜ್ಯಸಾರ್ಥಕ್ಯವತ್ಸಾಧನ ಗಮ್ಯಾಯ ನಮಃ	ಓಂ
99	1	4	ಓಂ ವಿಶೇಷಪ್ರಮಾಣೋಕ್ತಭೂತಾವಿಯೋಗಪ್ರಯೋಜ್ಯಸಾರ್ಥಕ್ಯವತ್ಸಾಧನ ಗಮ್ಯಾಯ ನಮಃ	ಓಂ
100	1	5	ಓಂ ಶ್ರದ್ಧಾಶಬ್ದೋಪಲಕ್ಷಿತಭೂತಾವಿಯೋಗಪ್ರಯೋಜ್ಯಸಾರ್ಥಕ್ಯವತ್ಸಾಧನ ಗಮ್ಯಾಯ ನಮಃ	ಓಂ
101	1	6	ಓಂ ಅಥ ಹೈನಮಿತಿ ಶ್ರುತ್ಯಕ್ತ ಭೂತಾವಿಯೋಗ ಪ್ರಯೋಜ್ಯ ಸಾರ್ಥಕ್ಯವತ್ಸಾಧನಗಮ್ಯಾಯ ನಮಃ	ಓಂ
102	1	7	ಓಂ ವೈರಾಗ್ಯಾದಿ ವ್ಯತಿರಿಕ್ತ ಕರ್ಮಾಗಮ್ಯಾಯ ನಮಃ	ಓಂ
103	1	8	ಓಂ ಅವಶ್ಯಾನುಷ್ಠೇಯ ವೈರಾಗ್ಯಾದಿ ಸಾಧನಗಮ್ಯಾಯ ನಮಃ	ಓಂ
104	1	9	ಓಂ ಸ್ವರ್ಗಾಗತಿಕ್ಲೇಶಿತಾಜ್ಞಾನಪ್ರಯೋಜ್ಯ ವೈರಾಗ್ಯಗಮ್ಯಾಯ ನಮಃ	ಓಂ
105	1	10	ಓಂ ಗತಾಗತಕ್ಲೇಶಿತಾಜ್ಞಾನಪ್ರಯೋಜ್ಯ ಕಾಮ್ಯಕರ್ಮ ವೈರಾಗ್ಯಗಮ್ಯಾಯ ನಮಃ	ಓಂ

ಅನುಕ್ರಮ	ಪಾ.	ಅಧಿ.		
106	1	11	ಓಂ ಅಜ್ಞಾನಿಮಾತ್ರಸಾಧಾರಣಗತಾಗತದುಃಖಜ್ಞಾನಪ್ರಯೋಜ್ಯವೈರಾಗ್ಯಗಮ್ಯಾಯ ನಮಃ	ಓಂ
107	1	12	ಓಂ ಭಗವದ್ದ್ವೇಷಾದಿಗತಿನಿತ್ಯನಿರಯಸಾಧನತಾಜ್ಞಾನಪ್ರಯೋಜ್ಯವೈರಾಗ್ಯಗಮ್ಯಾಯ ನಮಃ	ಓಂ
108	1	13	ಓಂ ನರಕಗತಸದುಃಖತಾಜ್ಞಾನಪ್ರಯೋಜ್ಯವೈರಾಗ್ಯಗಮ್ಯಾಯ ನಮಃ	ಓಂ
109	1	14	ಓಂ ಗತ್ಯಸ್ವಾತಂತ್ರ್ಯಪ್ರಯೋಜ್ಯವೈರಾಗ್ಯಗಮ್ಯಾಯ ನಮಃ	ಓಂ
110	1	15	ಓಂ ಅಂಧೇತಮಸಿ ದುಃಖವಿಶಿಷ್ಟತ್ವ ಜ್ಞಾನಪ್ರಯೋಜ್ಯಾತಿ ವೈರಾಗ್ಯಗಮ್ಯಾಯ ನಮಃ	ಓಂ
111	1	16	ಓಂ ಕರ್ಮಿಗತ ಧೂಮಾದಿ ದೇವತಾಭಾವಾಪ್ರಯೋಜ್ಯಕತಾಜ್ಞಾನ ಪ್ರಯೋಜ್ಯ ವೈರಾಗ್ಯಗಮ್ಯಾಯ ನಮಃ	ಓಂ
112	1	17	ಓಂ ಸ್ವರ್ಗಾವರೋಹೋತ್ತರಾಚಿರಗರ್ಭವಾಸಪ್ರಾಪ್ತಿಜ್ಞಾನಪ್ರಯೋಜ್ಯ ವೈರಾಗ್ಯಗಮ್ಯಾಯ ನಮಃ	ಓಂ
113	1	18	ಓಂ ವ್ರೀಹ್ಯಾದಿಭಾವನಿರಾಸಪ್ರಯೋಜ್ಯಪ್ರಾಮಾಣ್ಯವದ್ವೇದವಿಹಿತ ವೈರಾಗ್ಯಗಮ್ಯಾಯ ನಮಃ	ಓಂ
114	1	19	ಓಂ ಸ್ವರ್ಗಾವರೋಹೋತ್ತರಪಿತೃಪ್ರವೇಶಜ್ಞಾನಪ್ರಯೋಜ್ಯವೈರಾಗ್ಯಗಮ್ಯಾಯ ನಮಃ	ಓಂ
115	1	20	ಓಂ ಪಿತೃದ್ವಾರಾ ಮಾತೃಯೋನಿಪ್ರವೇಶ ಜ್ಞಾನಸಾಧ್ಯಾತಿ ವೈರಾಗ್ಯಗಮ್ಯಾಯ ನಮಃ	ಓಂ

|| ಇತಿ ತೃತೀಯಾ(ಸಾಧನಾ)ಧ್ಯಾಯಸ್ಯ ಪ್ರಥಮ(ವೈರಾಗ್ಯ) ಪಾದಃ ||

ತೃತೀಯಾಧ್ಯಾಯಸ್ಯ ದ್ವಿತೀಯಃ ಪಾದಃ

			ಓಂ ಭಕ್ತಿಲಕ್ಷಣಸಾಧನಗಮ್ಯಾಯ ನಮಃ	ಓಂ
116	2	1	ಓಂ ಭಕ್ತಿಪ್ರಯೋಜಕಸ್ವಪ್ನನಿಯಾಮಕತ್ವಮಹಿಮ್ನೇ ನಮಃ	ಓಂ
117	2	2	ಓಂ ಭಕ್ತಿಪ್ರಯೋಜಕಸ್ವಪ್ನತಿರೋಧಾನನಿಯಾಮಕತ್ವಮಹಿಮ್ನೇ ನಮಃ	ಓಂ
118	2	3	ಓಂ ಭಕ್ತಿಪ್ರಯೋಜಕಜಾಗ್ರತ್ಪ್ರವರ್ತಕತ್ವಮಹಿಮ್ನೇ ನಮಃ	ಓಂ
119	2	4	ಓಂ ಭಕ್ತಿಪ್ರಯೋಜಕಸುಪ್ತಿಪ್ರಾಪ್ಯತ್ವಮಹಿಮ್ನೇ ನಮಃ	ಓಂ
120	2	5	ಓಂ ಭಕ್ತಿಪ್ರಯೋಜಕಸುಪ್ತಪ್ರಬೋಧಕತ್ವಮಹಿಮ್ನೇ ನಮಃ	ಓಂ
121	2	6	ಓಂ ಭಕ್ತಿಪ್ರಯೋಜಕಸರ್ವಜೀವಸಂಬಂಧಿಸಾರ್ವಕಾಲಿಕಸರ್ವಾವಸ್ಥಾನಿಯಾಮಕತ್ವ ಮಹಿಮ್ನೇ ನಮಃ	ಓಂ
122	2	7	ಓಂ ಭಕ್ತಿಪ್ರಯೋಜಕಅವಾಂತರಾವಸ್ಥಾಸಂಸ್ಥಿತಜೀವಪ್ರಾಪ್ಯತ್ವಮಹಿಮ್ನೇ ನಮಃ	ಓಂ
123	2	8	ಓಂ ಭಕ್ತಿಪ್ರಯೋಜಕಸ್ವಗತಭೇದಶೂನ್ಯತ್ವಾಪಾದಕನಿರ್ದೋಷತ್ವಾಶೇಷ ಗುಣಪೂರ್ಣತ್ವಮಹಿಮ್ನೇ ನಮಃ	ಓಂ
124	2	9	ಓಂ ಭಕ್ತಿಪ್ರಯೋಜಕಾಪ್ರಾಕೃತರೂಪತ್ವಮಹಿಮ್ನೇ ನಮಃ	ಓಂ
125	2	10	ಓಂ ಭಕ್ತಿಪ್ರಯೋಜಕಜೀವಾಭೇದಶೂನ್ಯತ್ವವತೇ ನಮಃ	ಓಂ
126	2	11	ಓಂ ಜೀವಗತಸ್ವಸಾದೃಶ್ಯಾಭಿವ್ಯಂಜನಾತ್ಮಕಫಲವದ್ಭಕ್ತಿಗಮ್ಯಾಯ ನಮಃ	ಓಂ
127	2	12	ಓಂ ಭಕ್ತಿಕರ್ತವ್ಯತಾಪ್ರಯೋಜಕಭಕ್ತ್ಯನುಸಾರಫಲದಾತೃತ್ವವತೇ ನಮಃ	ಓಂ

ಅನುಕ್ರಮ	ಪಾ.	ಅಧಿ.		
128	2	13	ಓಂ ಭಕ್ತಿಪ್ರಯೋಜಕಪಾಲಕತ್ವರೂಪಮಹಿಮ್ನೇ ನಮಃ	ಓಂ
129	2	14	ಓಂ ಭಕ್ತಿಪ್ರಯೋಜಕಸ್ವತೋಽವ್ಯಕ್ತತ್ವ ಮಹಿಮ್ನೇ ನಮಃ	ಓಂ
130	2	15	ಓಂ ಭಕ್ತಿಪ್ರಯೋಜಕಗುಣಿತ್ವವತೇ ನಮಃ	ಓಂ
131	2	16	ಓಂ ಭಕ್ತಿಪ್ರಯೋಜಕಾಲೌಕಿಕಗುಣವತ್ವಮಹಿಮ್ನೇ ನಮಃ	ಓಂ
132	2	17	ಓಂ ಭಕ್ತಿಪ್ರಯೋಜಕಬ್ರಹ್ಮಾದ್ಯಾನಂದಾದಿಬಿಂಬಾನಂದಾದಿತ್ವವತೇ ನಮಃ	ಓಂ
133	2	18	ಓಂ ಭಕ್ತಿಪ್ರಯೋಜಕಪುರುಷಪ್ರಯತ್ನಜನ್ಯಧ್ಯಾನಗೋಚರವಿಲಕ್ಷಣತ್ವಪ್ರಯುಕ್ತಾವ್ಯಕ್ತತ್ವಮಹಿಮ್ನೇ ನಮಃ	ಓಂ
134	2	19	ಓಂ ಭಕ್ತಿಪ್ರಯೋಜಕಸಾರ್ವದೇಶಿಕಸಾರ್ವಕಾಲಿಕಸೃಷ್ಟ್ಯಾದಿಕರ್ತೃತ್ವವತೇ ನಮಃ	ಓಂ
135	2	20	ಓಂ ಭಕ್ತಿಪ್ರಯೋಜಕಕರ್ಮಫಲದಾತೃತ್ವಮಹಿಮ್ನೇ ನಮಃ	ಓಂ
			|| ಇತಿ ತೃತೀಯಾ(ಸಾಧನಾ)ಧ್ಯಾಯಸ್ಯ ದ್ವಿತೀಯ(ಭಕ್ತಿ) ಪಾದಃ ||	
			ತೃತೀಯಾಧ್ಯಾಯಸ್ಯ ತೃತೀಯಃ ಪಾದಃ	
			ಓಂ ಉಪಾಸನಾಲಕ್ಷಣಸಾಧನಗಮ್ಯಾಯ ನಮಃ	ಓಂ
136	3	1	ಓಂ ಸರ್ವವೇದ ನಿರ್ಣಯೋತ್ಪಾದ್ಯಜ್ಞಾನವಿಷಯಾಯ ನಮಃ	ಓಂ
137	3	2	ಓಂ ಸರ್ವಗುಣೋಪಸಂಹಾರಾತ್ಮಕೋಪಾಸನಾಗೋಚರಾಯ ನಮಃ	ಓಂ
138	3	3	ಓಂ ಪುರುಷಯೋಗ್ಯತಾಭೇದವ್ಯವಸ್ಥಿತೋಪಸಂಹಾರಾನುಪಸಂಹಾರಯೋಗ್ಯಗುಣವತೇ ನಮಃ	ಓಂ
139	3	4	ಓಂ ಮಹಾಫಲಪ್ರದಬಹುಗುಣೋಪಸಂಹಾರರೂಪೋಪಾಸನಾಗೋಚರಾಯ ನಮಃ	ಓಂ
140	3	5	ಓಂ ಸರ್ವಮುಮುಕ್ಷುಸಾಧಾರಣಚತುರ್ಗುಣೋಪಾಸನಾಜನ್ಯಾಪರೋಕ್ಷಜ್ಞಾನಗೋಚರಾಯ ನಮಃ	ಓಂ
141	3	6	ಓಂ ಪ್ರಿಯಶಿರಸ್ತ್ವಾದಿಗುಣವಿಷಯಕಸರ್ವಮುಮುಕ್ಷುಸಾಧಾರಣೋಪಾಸನಾಗಮ್ಯಾಯ ನಮಃ	ಓಂ
142	3	7	ಓಂ ಚತುರ್ಗುಣಸರ್ವಗುಣೇತರದೇವಕರ್ತೃಕೋಪಸಂಹಾರಯೋಗ್ಯಮಧ್ಯಮಗುಣಾಶ್ರಯಾಯ ನಮಃ	ಓಂ
143	3	8	ಓಂ ಸ್ವನಾಮರೂಪಸರ್ವವಿದ್ಯಾಪ್ರತಿಪಾದ್ಯೋಪಸಂಹರ್ತವ್ಯಾನುಪಸಂಹರ್ತವ್ಯಸರ್ವಗುಣವತೇ ನಮಃ	ಓಂ
144	3	9	ಓಂ ಆತ್ಮಶಬ್ದೋದಿತಚತುರ್ಗುಣೋಪಾಸನಾಧೀನಾಪರೋಕ್ಷಜ್ಞಾನಗೋಚರಾಯ ನಮಃ	ಓಂ
145	3	10	ಓಂ ಚತುರ್ಮುಖತದಿತರಾಧಿಕಾರಿಸಾಪೇಕ್ಷಾತ್ಮಶಬ್ದಕಾರಣಕಾಭಿಧಾನಯೋಗ್ಯಸರ್ವಗುಣಾಲ್ಪಗುಣವತೇ ನಮಃ	ಓಂ
146	3	11	ಓಂ ಧ್ಯಾತವ್ಯಾಲೌಕಿಕಗುಣವತೇ ನಮಃ	ಓಂ
147	3	12	ಓಂ ಸ್ವಸದೃಶಫಲದೋಪಾಸನಾಜನ್ಯದರ್ಶನವಿಷಯಾಯ ನಮಃ	ಓಂ
148	3	13	ಓಂ ಯುಗಪದಾತ್ಮಶಬ್ದೋದಿತ ಸರ್ವಗುಣೋಪಾಸನಾಗಮ್ಯಾಯ ನಮಃ	ಓಂ

ಅನು ಕ್ರಮ	ಪಾ.	ಅಧಿ.		
149	3	14	ಓಂ ದೇವಾದಿಮಾತ್ರೋಪಾಸ್ಯಸಂಭೃತಿದ್ಯುವ್ಯಾಪ್ತಿಮತೇ ನಮಃ	ಓಂ
150	3	15	ಓಂ ಸರ್ವಶಾಖಾವಿಪ್ರಕೀರ್ಣಾಪೇಕ್ಷಿತಸರ್ವಗುಣೋಪಾಸನಜಾಪರೋಕ್ಷ ಗೋಚರಾಯ ನಮಃ	ಓಂ
151	3	16	ಓಂ ಯತ್ಯಾದ್ಯಯೋಗ್ಯಹಿಂಸಾದಿಫಲಕಸರ್ವಾನಧಿಕಾರಿಕಭೇದನಾದ್ಯುಪಾಸನಾ ಯೋಗ್ಯಾಯ ನಮಃ	ಓಂ
152	3	17	ಓಂ ಮುಕ್ತಾವಪ್ಯನುವರ್ತಮಾನೋಪಾಸನಾಗೋಚರಾಯ ನಮಃ	ಓಂ
153	3	18	ಓಂ ಅನಿಯತಮುಕ್ತಕರ್ತೃಕಕರ್ಮೇಜ್ಯಾಯ ನಮಃ	ಓಂ
154	3	19	ಓಂ ಜ್ಞಾನೋತ್ತರಮೋಕ್ಷನಿಯಮಪ್ರಯೋಜ್ಯನಿಃಶಂಕೋಪಾಸನಾವಿಷಯಾಯ ನಮಃ	ಓಂ
155	3	20	ಓಂ ಮೌಕ್ತಾನಂದತಾರತಮ್ಯಪ್ರಯೋಜಕೋಪಾಸನಾಧಿಕಾರಿನಿಯತಿಮದುಪಾಸ್ಯಾಯ ನಮಃ	ಓಂ
156	3	21	ಓಂ ಅಧಿಕಾರ್ಯಗ್ರೇಸರಪ್ರಾಣೋಪಾಸ್ಯಸರ್ವಗುಣೋಪಾಶ್ರಯಾಯ ನಮಃ	ಓಂ
157	3	22	ಓಂ ಸರ್ವಾಧಿಕಾರ್ಯುತ್ತಮಪ್ರಾಣೋತ್ತಮಾಯ ನಮಃ	ಓಂ
158	3	23	ಓಂ ಸತ್ಯೋಪರ್ಯುಪದಿಷ್ಟವಿಜ್ಞಾನಮತಿಶ್ರದ್ಧಾನಿಷ್ಠಾಕೃತಿಸುಖಭೂಮಾ ಹಂಕಾರಾತ್ಮಸ್ವರೂಪಾಯ ನಮಃ	ಓಂ
159	3	24	ಓಂ ಭಗವದ್ದರ್ಶನಸಾಧನೋಪಾಸನಾನಧಿಕಾರಿತಮೋಪಾಸ್ಯಾಯ ನಮಃ	ಓಂ
160	3	25	ಓಂ ಶ್ರವಣಮನನಧ್ಯಾನಾತ್ಮಕಸಮಸ್ತೋಪಾಸನಾಸಾಧ್ಯಾಪರೋಕ್ಷ ಗೋಚರಾಯ ನಮಃ	ಓಂ
161	3	26	ಓಂ ಪ್ರಸಾದಪೂರ್ವಕಗುರುಪ್ರದಾನಪೂರ್ವಕಶ್ರವಣಾದಿರೂಪೋಪಾಸನಾ ಗೋಚರಾಯ ನಮಃ	ಓಂ
162	3	27	ಓಂ ಬಲೀಯಸ್ತಮಗುರುಪ್ರಸಾದರೂಪೇತಿಕರ್ತವ್ಯತಾಯುಕ್ತಶ್ರವಣಾದ್ಯುಪಾಸನಾ ಗೋಚರಾಯ ನಮಃ	ಓಂ
163	3	28	ಓಂ ಪೂರ್ವಪ್ರಾಪ್ತಾನಧಿಕಾವರತ್ವವದ್ಭಿನ್ನಸಮಗ್ರಾನುಗ್ರಹಕರ್ತೃಗುರುಪ್ರಸಾದಾ ಯುತೋಪಾಸಾಗೋಚರಾಯ ನಮಃ	ಓಂ
164	3	29	ಓಂ ಕರ್ಮಾದ್ಯಸಾಧ್ಯಜ್ಞಾನಸಾಧ್ಯಪ್ರಾಪ್ತಿಕರ್ಮಣೇ ನಮಃ	ಓಂ
165	3	30	ಓಂ ಬಲವಚ್ಛ್ರುತಿಲಿಂಗೋಪಪತ್ತಿವಚನಬೋಧಿತಮೋಕ್ಷಸಾಧನತ್ವವಜ್ಜ್ಞಾನ ವಿಷಯಾಯ ನಮಃ	ಓಂ
166	3	31	ಓಂ ಹರಿಗುರುಭಕ್ತಿಶಮದಮಾದ್ಯುಪೇತಗುರುಪ್ರಸಾದಯುತೋಪಾಸಾಗೋಚರಾಯ ನಮಃ	ಓಂ
167	3	32	ಓಂ ವಿವಿಧೋಪಾಸನಾಸಾಧ್ಯವಿವಿಧಜ್ಞಾನವಿಷಯಾಯ ನಮಃ	ಓಂ
168	3	33	ಓಂ ಮಹದಾದಿಮಾತ್ರಪ್ರಾಪಕಸಾಮಾನ್ಯದರ್ಶನಾತಿರಿಕ್ತಬಿಂಬದರ್ಶನ ಪ್ರಾಪ್ಯಾಯ ನಮಃ	ಓಂ
169	3	34	ಓಂ ಭಕ್ತಿಸಾಮರ್ಥ್ಯಾಪ್ರಯೋಜ್ಯಸ್ವಪ್ರಸಾದೈಕಸಾಧ್ಯಾಪರೋಕ್ಷಗೋಚರಾಯ ನಮಃ	ಓಂ

ಅನುಕ್ರಮ	ಪಾ.	ಅಧಿ.		
170	3	35	ಓಂ ಇಂದ್ರಾರ್ಜುನಾದ್ಯಂಶಾಂಶ್ಯಭೇದಪ್ರಯೋಜ್ಯಾನಾದಿಯೋಗ್ಯತಾಸಾಪೇಕ್ಷೋಪಾಸಾಗೋಚರಾಯ ನಮಃ	ಓಂ
171	3	36	ಓಂ ಯಥಾಯೋಗ್ಯಾಂಗದೇವತೋಪಾಸನಾಯುಕ್ತೋಪಾಸನಾಗಮ್ಯಾಯ ನಮಃ	ಓಂ
172	3	37	ಓಂ ಭೂಮತ್ವೇನಸರ್ವಮುಮುಕ್ಷೂಪಾಸ್ಯಾನಂದಾದಿಮತೇ ನಮಃ	ಓಂ
173	3	38	ಓಂ ಅಧಿಕಾರಿತಾರತಮ್ಯಾನುಸಾರಪ್ರತೀತಿಮದ್ಭೂಮತ್ವೋಪಾಸನಾಗೋಚರಾಯ ನಮಃ	ಓಂ
174	3	39	ಓಂ ದುರಿತಾದಿನಿವೃತ್ತಿಫಲಕವೈಕಲ್ಪಿಕನೃಸಿಂಹಾದ್ಯುಪಸನಾಹಿತಬಿಂಬೋಪಾಸನಾಪ್ರಾಪ್ಯಾಯ ನಮಃ	ಓಂ
175	3	40	ಓಂ ಅರ್ಥಾದಿಕಾಮಸಾಧನವೈಕಲ್ಪಿತೋಪಾಸನಾಯೋಗ್ಯಗುಣವದ್ರೂಪವಿಶೇಷಾಯ ನಮಃ	ಓಂ
176	3	41	ಓಂ ದೇವತಾಧಿಕಾರಿಕತತ್ತದಂಗಪ್ರಾಪ್ತಿಫಲಕತತ್ತದಂಗಾಶ್ರಿತತತ್ವೋಪಾಸಾಗೋಚರಾಯ ನಮಃ	ಓಂ
177	3	42	ಓಂ ಸರ್ವಶಾಖಾಸ್ವನುಕ್ತತ್ವಪ್ರಯುಕ್ತಸರ್ವೋಪಾಸ್ಯತಾಹೀನಾಂಗಾಶ್ರಿತತ್ವೋಪಾಸಾಗೋಚರಾಯ ನಮಃ	ಓಂ

|| ಇತಿ ತೃತೀಯಾ(ಸಾಧನಾ)ಧ್ಯಾಯಸ್ಯ ತೃತೀಯ(ಉಪಾಸನಾ) ಪಾದಃ ||

ತೃತೀಯಾಧ್ಯಾಯಸ್ಯ ಚತುರ್ಥಃ ಪಾದಃ

ಅನುಕ್ರಮ	ಪಾ.	ಅಧಿ.		
			ಓಂ ಅಪರೋಕ್ಷಜ್ಞಾನಾಖ್ಯಸಾಧನಗಮ್ಯಾಯ ನಮಃ	ಓಂ
178	4	1	ಓಂ ಸರ್ವಪುರುಷಾರ್ಥಸಾಧನತ್ವಮಹಿಮೋಪೇತಜ್ಞಾನವಿಷಯಾಯ ನಮಃ	ಓಂ
179	4	2	ಓಂ ಸರ್ವಾನಧಿಕಾರಿಕತ್ವಮಹಿಮೋಪೇತಜ್ಞಾನಗೋಚರಾಯ ನಮಃ	ಓಂ
180	4	3	ಓಂ ದೌರ್ಲಭ್ಯವತ್ಸಂಪೂರ್ಣಾಧಿಕಾರವಿಷಯಜ್ಞಾನಪ್ರಾಪ್ಯಾಯ ನಮಃ	ಓಂ
181	4	4	ಓಂ ಅಸತ್ಪ್ರವೃತ್ತಾವಪಿಮೋಕ್ಷಸಾಧನತ್ವನಿಯಮಲಕ್ಷಣಮಹಿಮೋಪೇತ ಜ್ಞಾನಸಾಧ್ಯಪ್ರಾಪ್ತಿಕರ್ಮಣೇ ನಮಃ	ಓಂ
182	4	5	ಓಂ ಯೋಗ್ಯೈಕಸಾಧ್ಯತ್ವಮಹಿಮೋಪೇತಜ್ಞಾನಸಾಧ್ಯಪ್ರಾಪ್ತಿಕರ್ಮಣೇ ನಮಃ	ಓಂ
183	4	6	ಓಂ ದೇವಾದಿಪದಾಕಾಂಕ್ಷಾಶೂನ್ಯೈರೇವಪ್ರಾಪ್ಯತ್ವಮಹಿಮೋಪೇತ ಜ್ಞಾನಪ್ರಾಪ್ಯಸ್ಯಾಯೆ ನಮಃ	ಓಂ
184	4	7	ಓಂ ಅಸ್ವಾಮಿನೋಽಪಿಸನ್ನಿಧಾನಮಾತ್ರೇಣಫಲದಾನರೂಪಮಹಿಮೋಪೇತಜ್ಞಾನಪ್ರಾಪ್ಯಾಯ ನಮಃ	ಓಂ
185	4	8	ಓಂ ಯತೀನಾಮೇವಜ್ಞಾನಾಧಿಕಾರಾತಿಶಯಪ್ರಯುಕ್ತಕರ್ಮಾಧಿಕಾರಾತಿಶಯೋಪೇತ ಜ್ಞಾನಪ್ರಾಪ್ಯಾಯ ನಮಃ	ಓಂ
186	4	9	ಓಂ ಅತಿಗೋಪ್ಯತ್ವಮಹಿಮೋಪೇತಜ್ಞಾನಸಾಧ್ಯಪ್ರಾಪ್ತಿಮತೇ ನಮಃ	ಓಂ
187	4	10	ಓಂ ಪ್ರತಿಬಂಧಾಭಾವೇಸಾಧನಸಂಪತ್ತಿಜನ್ಮನ್ಯೇವೋದಯವದ್ಜ್ಞಾನಸಾಧ್ಯಪ್ರಾಪ್ತಿಮತೇ ನಮಃ	ಓಂ

ಅನುಕ್ರಮ	ಪಾ.	ಅಧಿ.		
188	4	11	ಓಂ ಸ್ವೋತ್ಪತ್ತಿಜನ್ಮಾಂತರಮೇವಪ್ರತಿಬಂಧಾಭಾವೇಮುಕ್ತಿಸಾಧನತ್ವಮಹಿಮೋಪೇತ ಜ್ಞಾನವಿಷಯಾಯ ನಮಃ	ಓಂ
			‖ ಇತಿ ತೃತೀಯಾ(ಸಾಧನಾ)ಧ್ಯಾಯಸ್ಯ ಚತುರ್ಥ(ಜ್ಞಾನ) ಪಾದಃ ‖	
			ಚತುರ್ಥಾಧ್ಯಾಯಸ್ಯ ಪ್ರಥಮಃ ಪಾದಃ (ಫಲಾಧ್ಯಾಯ)	
			ಓಂ ಸ್ವದರ್ಶನಸಾಧ್ಯಸ್ವಪ್ರಸಾದಕದ್ವಾರಕಸ್ವಪ್ರಾಪ್ತಿಮತೇ ನಮಃ	ಓಂ
			ಓಂ ಕರ್ಮಕ್ಷಯಸಾಧನಾಪರೋಕ್ಷಜ್ಞಾನವಿಷಯಾಯ ನಮಃ	ಓಂ
189	1	1	ಓಂ ಅವಶ್ಯಂಭಾವಿನಿತ್ಯಶಃಕಾರ್ಯಶ್ರವಣಾದ್ಯಾವೃತ್ತಿಸಾಧ್ಯಜ್ಞಾನಗೋಚರಾಯ ನಮಃ	ಓಂ
190	1	2	ಓಂ ನಿತ್ಯಶಃಕರ್ತವ್ಯಸ್ವನಿಷ್ಠಾತ್ಮತ್ವೋಪಾಸನಾಸಾಧ್ಯಜ್ಞಾನಗೋಚರಾಯ ನಮಃ	ಓಂ
191	1	3	ಓಂ ಆವಶ್ಯಕವಿಷ್ಣುಪ್ರತೀಕೈಕ್ಯೋಪಾಸನಾವರ್ಜನಪ್ರಯೋಜ್ಯಸರ್ವಸ್ವಾಮಿತ್ವೋಪಾಸನಾಸಾಧ್ಯಜ್ಞಾನಗೋಚರಾಯ ನಮಃ	ಓಂ
192	1	4	ಓಂ ಅವಶ್ಯಕರ್ತವ್ಯಬ್ರಹ್ಮತ್ವೋಪಾಸನಾಸಾಧ್ಯದರ್ಶನವಿಷಯಾಯ ನಮಃ	ಓಂ
193	1	5	ಓಂ ತತ್ತದಂಗಾಶ್ರಿತತ್ವೇನ ದೇವತೋಪಾಸನಾಸಾಧ್ಯಾಪರೋಕ್ಷವಿಷಯಾಯ ನಮಃ	ಓಂ
194	1	6	ಓಂ ಆಸನಾದಿನಿಯಮಪೂರ್ವಕಧ್ಯಾನಸಾಧ್ಯಜ್ಞಾನವಿಷಯಾಯ ನಮಃ	ಓಂ
195	1	7	ಓಂ ಪ್ರಾಯಣಾಖ್ಯಮೋಕ್ಷಪರ್ಯಂತಂಧ್ಯಾನಸಾಧ್ಯಜ್ಞಾನವಿಷಯಾಯ ನಮಃ	ಓಂ
196	1	8	ಓಂ ಕರ್ಮಕ್ಷಯಲಕ್ಷಣಫಲಸಿದ್ಧಿಸಂಪಾದಕಜ್ಞಾನವಿಷಯಾಯ ನಮಃ	ಓಂ
			‖ ಇತಿ ಚತುರ್ಥಾ(ಫಲಾ)ಧ್ಯಾಯಸ್ಯ ಪ್ರಥಮ(ಕರ್ಮಕ್ಷಯ) ಪಾದಃ ‖	
			ಚತುರ್ಥಾಧ್ಯಾಯಸ್ಯ ದ್ವಿತೀಯಃ ಪಾದಃ	
			ಓಂ ದೇವತಾಸಬಂಧಿಸ್ವೋತ್ತಮದೇಹಲಯತದನ್ಯಸಂಬಂಧಿಬ್ರಹ್ಮನಾಡ್ಯುತ್ಕ್ರಮಣ್ಯೈತದುಭಯಸಾಧನಜ್ಞಾನವಿಷಯಾಯ ನಮಃ	ಓಂ
197	2	1	ಓಂ ವಾಚೋ ಮನಸಿ ಲಯಪ್ರಯೋಜ್ಯಸ್ವಪ್ರಾಪ್ತಿಮತೇ ನಮಃ	ಓಂ
198	2	2	ಓಂ ಮನಸಃ ಪ್ರಾಣೇ ಲಯಪ್ರಯೋಜ್ಯಸ್ವಪ್ರಾಪ್ತಿಮತೇ ನಮಃ	ಓಂ
199	2	3	ಓಂ ಸ್ವಸ್ಮಿನ್ ಪ್ರಾಣಲಯ ಪ್ರಯೋಜ್ಯ ಸ್ವಪ್ರಾಪ್ತಿಮತೇ ನಮಃ	ಓಂ
200	2	4	ಓಂ ಸಮಸ್ತ ಭೂತೇಷು ದೇವತಾಲಯ ಪ್ರಯೋಜ್ಯ ಸ್ವಪ್ರಾಪ್ತಿಮತೇ ನಮಃ	ಓಂ
201	2	5	ಓಂ ಅಗ್ನಾವೇವಸರ್ವದೇವತಾಲಯಾಸಂಭವಪ್ರಯುಕ್ತಸರ್ವಭೂತಾಧಿಕರಣಕ ಲಯಪ್ರಯೋಜ್ಯಪ್ರಾಪ್ತಿಮತೇ ನಮಃ	ಓಂ
202	2	6	ಓಂ ನಿತ್ಯಮುಕ್ತಪ್ರಕೃತಿಲಯಾಧಿಕರಣಾಯ ನಮಃ	ಓಂ
203	2	7	ಓಂ ಮೋಕ್ಷೇ ಚತುರ್ಮುಖೇತರದೇವೈರಪಿ ಪ್ರಾಪ್ಯಾಯ ನಮಃ	ಓಂ
204	2	8	ಓಂ ಮುಕ್ತಾವಪಿ ಸ್ವಾಧೀನದೇವತಾಕಾಯ ನಮಃ	ಓಂ
205	2	9	ಓಂ ಅಜ್ಞಮರಣವಿಲಕ್ಷಣಜ್ಞಾನಿಮನುಷ್ಯಸಂಬಂಧಿ ದೇಹೋತ್ಕ್ರಮಣಪ್ರಯೋಜ್ಯ ಮುಕ್ತಿದಾತ್ರೇ ನಮಃ	ಓಂ
206	2	10	ಓಂ ಅವಶ್ಯಕರ್ತವ್ಯಗತ್ಯನುಸ್ಮರಣಸಾಧ್ಯಸ್ವಪ್ರಾಪ್ತಿಮತೇ ನಮಃ	ಓಂ
			‖ ಇತಿ ಚತುರ್ಥಾ(ಫಲಾ)ಧ್ಯಾಯಸ್ಯ ದ್ವಿತೀಯ(ಉತ್ಕ್ರಾಂತಿ) ಪಾದಃ ‖	

ಅನುಕ್ರಮ	ಪಾ.	ಅಧಿ.		
			ಚತುರ್ಥಾಧ್ಯಾಯಸ್ಯ ತೃತೀಯಃ ಪಾದಃ	
			ಓಂ ಬ್ರಹ್ಮನಾಡ್ಯುತ್ಕ್ರಾಂತಜ್ಞಾನಿಸಂಬಂಧ್ಯರ್ಚಿರಾದಿಮಾರ್ಗಪ್ರಾಪ್ಯಾಯ ನಮಃ	ಓಂ
207	3	1	ಓಂ ಅರ್ಚಿಃಪ್ರಾಥಮ್ಯಕಮಾರ್ಗಗಮ್ಯಾಯ ನಮಃ	ಓಂ
208	3	2	ಓಂ ದ್ವಿತೀಯ ಪ್ರಾಪ್ಯವಾಯುಕಮಾರ್ಗಗಮ್ಯಾಯ ನಮಃ	ಓಂ
209	3	3	ಓಂ ಸಂವತ್ಸರಾನಂತರ ಪ್ರಾಪ್ಯತಟಿತ್ಕಮಾರ್ಗಗಮ್ಯಾಯ ನಮಃ	ಓಂ
210	3	4	ಓಂ ದ್ವಿತೀಯಪ್ರಾಪ್ಯಾತಿವಾಹಿಕವಾಯುಮನ್ಮಾರ್ಗಗಮ್ಯಾಯ ನಮಃ	ಓಂ
211	3	5	ಓಂ ಅಂತಿಮಪ್ರಾಪ್ಯಮುಖ್ಯವಾಯುಮನ್ಮಾರ್ಗಗಮ್ಯಾಯ ನಮಃ	ಓಂ
212	3	6	ಓಂ ಜ್ಞಾನ್ಯನುಸ್ಮರಣೀಯಗಮ್ಯರೂಪಪರಬ್ರಹ್ಮಣೇ ನಮಃ	ಓಂ
			|| ಇತಿ ಚತುರ್ಥಾ(ಫಲಾ)ಧ್ಯಾಯಸ್ಯ ತೃತೀಯ(ಮಾರ್ಗ) ಪಾದಃ ||	
			ಚತುರ್ಥಾಧ್ಯಾಯಸ್ಯ ಚತುರ್ಥಃ ಪಾದಃ	
			ಓಂ ಚತುರ್ಮುಖೇನ ಸಹ ಸ್ವಪ್ರಾಪ್ತಿಮತಾಂ ಭೋಗಪ್ರದಾಯ ನಮಃ	ಓಂ
213	4	1	ಓಂ ಮುಕ್ತಾನಾಂಸ್ಥಾನತಿಕ್ರಮೇಣಸ್ವಸಮೀಪಏವಭೋಗದಾಯ ನಮಃ	ಓಂ
214	4	2	ಓಂ ಸುಷುಪ್ತಿಕಾಹರಹಃಪ್ರಾಪ್ತಿವಿಲಕ್ಷಣಮುಕ್ತಿಕಾಲೀನಪ್ರಾಪ್ತಿಮತಾಮೇವಸಮ್ಯಕ್ ಸ್ವರೂಪಾನಂದಾಭಿವ್ಯಕ್ತಿಪ್ರದಾಯ ನಮಃ	ಓಂ
215	4	3	ಓಂ ಮುಕ್ತಪ್ರಾಪ್ಯಪರಂಜ್ಯೋತಿಸ್ಸ್ವರೂಪಪರಬ್ರಹ್ಮಣೇ ನಮಃ	ಓಂ
216	4	4	ಓಂ ಸಾಯುಜ್ಯಭಾಜಾಮಪಿಸ್ವಭುಕ್ತಭೋಗಭೋಕ್ತೃತ್ವಪ್ರಯುಕ್ತಸರ್ವಭೋಕ್ತೃತ್ವವತೇ ನಮಃ	ಓಂ
217	4	5	ಓಂ ಮುಕ್ತಾನಾಂಚಿದ್ದೇಹೇನಭೋಗಭೋಕ್ತೃತ್ವಸಾಮರ್ಥ್ಯಪ್ರದಾಯ ನಮಃ	ಓಂ
218	4	6	ಓಂ ಸಂಕಲ್ಪಮಾತ್ರಸಾಧ್ಯಭೋಗಭೋಕ್ತೃಮುಕ್ತಸಂಘಪರಿವೃತಾಯ ನಮಃ	ಓಂ
219	4	7	ಓಂ ಸ್ವಾಧಮನಿಯಾಮಕರಾಹಿತ್ಯೇನಭೋಗವನ್ಮುಕ್ತಸಂಘಪರಿವೃತಾಯ ನಮಃ	ಓಂ
220	4	8	ಓಂ ಬಾಹ್ಯದೇಹರಾಹಿತ್ಯಪ್ರಯುಕ್ತನಿರ್ದುಃಖಭೋಗಾನುಭವವನ್ಮುಕ್ತಸಂಘ ಪರಿವೃತಾಯ ನಮಃ	ಓಂ
221	4	9	ಓಂ ಜಗತ್ಸೃಷ್ಟ್ಯಾದೀತರಸರ್ವಕಾಮಾವಾಪ್ತಿಮನ್ಮುಕ್ತಸಂಘಪರಿವೃತಾಯ ನಮಃ	ಓಂ
222	4	10	ಓಂ ವೃದ್ಧಿಹ್ರಾಸರಹಿತೈಕಪ್ರಕಾರಾನಂದಾನುಭವಿತೃಮುಕ್ತಗಣನಿಷೇವಿತಾಯ ನಮಃ	ಓಂ
223	4	11	ಓಂ ಪುನರಾವೃತ್ತಿಶೂನ್ಯಸ್ವಪ್ರಾಪ್ತಿಮನ್ಮುಕ್ತೌಘವೃತಾಯ ನಮಃ	ಓಂ

ಇತಿ ಶ್ರೀಮತ್ಕೃಷ್ಣದ್ವೈಪಾಯನಕೃತ ಬ್ರಹ್ಮಸೂತ್ರಾಣಾಂವಾದಿರಾಜಪೂಜ್ಯಚರಣವಿರಚಿತ
ಅಧ್ಯಾಯಪಾದ ಅಧಿಕರಣ ನಾಮಾವಳಿಃ ಸಮಾಪ್ತಾ
ಶ್ರೀಕೃಷ್ಣಾರ್ಪಣಮಸ್ತು |

ಕರೋತು ಮಮಕಲ್ಯಾಣಂ ಹರಿರ್ಹಯಮುಖಾಭಿದಃ |
ಗುರುಶ್ಚ ಮಧ್ವನಾಮಾ ಮೇ ವರದೋಽಸ್ತು ನಿರಂತರಮ್ ||



ಶ್ರೀಮದ್ವ್ಯಾಸರಾಜರ ವೃಂದಾವನದ ಸಾನ್ನಿಧ್ಯದಲ್ಲಿ ವಿಷ್ಣುತೀರ್ಥರು